ಕುವೆಂಪು ವಿರಚಿತ

ಚಿತ್ರಾಂಗದಾ

ಸರಳಗನ್ನಡ



ಜಿ.ಕೃಷ್ಣಪ್ಪ

ಕುವೆಂಪು

ಚಿತ್ರಾಂಗದಾ

ಸರಳಗನ್ನಡ ರೂಪ

ಡಾ. ಜಿ. ಕೃಷ್ಣಪ್ಪ

ಪ್ರಕಾಶಕರು

ಅನ್ನಪೂರ್ಣ ಪಬ್ಲಿಷಿಂಗ್ ಹೌಸ್

#176, 12ನೇ ಮುಖ್ಯರಸ್ತೆ, ಅಗ್ರಹಾರದಾಸರಹಳ್ಳಿ
ಮಾಗಡಿ ಮುಖ್ಯರಸ್ತೆ, ಬೆಂಗಳೂರು – 560079

KUVEMPU CHITRANGADA
Saralagannada Roopa
Written by
Dr.G.Krishnappa
No.22, Sri Gurudatta Nilaya,
1st Cross, Netaji Nagara
Mathikere, Bangalore-560054
Mob: 99721 09209
Published by
Annapoorna Publishing House
#176, 12th Main, Agraharadasarahalli,
Magadi Main Road
Bangalore - 560079

First Print	:	2023
©	:	Author
Pages	:	iv + x + 116
Price	:	150/-
Book Size	:	1/8demmy, 70Gsm
Copies	:	1000
Coverpage Design	:	Sri H.S. Monappa
D.T.P	:	Annashree Graphics, Bangalore
Printed at	:	Sri Annapoorna Publishers and Distributors Bangalore Rural Dist - 562111

ಅರ್ಪಣೆ

ನನ್ನ ಕುವೆಂಪು ಸಾಹಿತ್ಯ ಅಧ್ಯಯನಕ್ಕೆ
ತುಂಬು ಪ್ರೋತ್ಸಾಹ ನೀಡುತ್ತಿರುವ
ಆದರಣೀಯ
ಶ್ರೀಮತಿ ಕೆ.ಪಿ. ತಾರಿಣಿ
ಮತ್ತು ಅವರ ಪತಿ
ಪ್ರೊ. ಕೆ. ಚಿದಾನಂದಗೌಡ
ಅವರಿಗೆ

ಡಾ. ಜಿ. ಕೃಷ್ಣಪ್ಪ

ಬೇಂದ್ರೆ ಕೃಷ್ಣಪ್ಪ ಎಂದೇ ಜನಪ್ರಿಯರಾಗಿರುವ ಡಾ.ಜಿ.ಕೃಷ್ಣಪ್ಪ (1948) ಅವರು ಸೃಜನಶೀಲ ಲೇಖಕರು, ಬೇಂದ್ರೆ ಸಾಹಿತ್ಯ ಪರಿಚಾರಕರು, ಬೇಂದ್ರೆ ಕಾವ್ಯದ ಓದಿಗೆ ಹೊಸ ಆಯಾಮ ಕೊಟ್ಟವರು. ಬೆಂಗಳೂರು ಕೃಷ್ಣಪ್ಪನವರ ಹುಟ್ಟೂರು. ಆಟೋಮೊಬೈಲ್ ಇಂಜಿನೀಯರ್, ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಯಾಗಿ ನಿವೃತ್ತಿ. ಉದ್ಯೋಗದ ನಡುವೆ ಬಿ.ಎ., ಎಲ್.ಎಲ್.ಬಿ., ಕನ್ನಡದಲ್ಲಿ ಸ್ನಾತಕೋತ್ತರ ಪದವಿ, 'ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ : ಒಂದು ಅಧ್ಯಯನ' ಕುರಿತು ಪಿಎಚ್.ಡಿ.

ಸತತ ಮೂರು ದಶಕಗಳಿಂದ ಶಾಲಾ–ಕಾಲೇಜುಗಳಲ್ಲಿ 650ಕ್ಕೂ ಅಧಿಕ ಬೇಂದ್ರೆ ಕಾವ್ಯ ಗಾಯನ ಸ್ಪರ್ಧೆ ಆಯೋಜನೆ. ಬಹುಮಾನವಾಗಿ ಬೇಂದ್ರೆ ಕೃತಿಗಳ ನೀಡಿಕೆ, ನಾಡಿನಾದ್ಯಂತ ಸಂಚಾರ, ಬೇಂದ್ರೆ ಕಾವ್ಯಾನುಭವವನ್ನು ಅಕ್ಷರಕ್ಕೆ ಅಕ್ಷರಶಃ ಇಳಿಸಿದ ಭಗೀರಥರು. ಬೇಂದ್ರೆ ಕಾವ್ಯಕೂಟ ಸ್ಥಾಪನೆ. ಸ್ನಾತಕೋತ್ತರ ಹಾಗೂ ಪಿಎಚ್.ಡಿ., ವಿದ್ಯಾರ್ಥಿಗಳಿಗೆ ಕಾವ್ಯ ವಿಮರ್ಶಾ ಸ್ಪರ್ಧೆ ಆಯೋಜಿಸಿ ಬಹುಮಾನ ವಿತರಣೆ. 'ನಾಕುತಂತಿ – ಒಂದು ಟಿಪ್ಪಣಿ', 'ಬೇಂದ್ರೆಕಾವ್ಯ : ಪದನಿರುಕ್ತ' ಮುಂತಾದ ಹನ್ನೆರಡು ಬೇಂದ್ರೆ ಕಾವ್ಯ ವಿಮರ್ಶಾ ಕೃತಿಗಳ ರಚನೆ.

ಸರಳ ಕನ್ನಡದಲ್ಲಿ ಲಕ್ಷ್ಮೀಶನ ವಚನ ಜೈಮಿನಿ ಭಾರತ, ಹರಿಹರನ ವಚನ ಗಿರಿಜಾಕಲ್ಯಾಣ, ರಾಘವಾಂಕನ ವಚನ ಹರಿಶ್ಚಂದ್ರ ಚಾರಿತ್ರ ಹಾಗೂ ಕನಕದಾಸರ ನಳದಮಯಂತಿ ಪ್ರೇಮಕಥೆಯ ರಚನೆ.

ಕೃಷ್ಣಪ್ಪನವರು 'ಬೇಂದ್ರೆ ವ್ರತ'ದಿಂದ 'ಕುವೆಂಪು ಧ್ಯಾನ'ಕ್ಕೆ ಹೊರಳಿ 'ಶ್ರೀ ರಾಮಾಯಣದರ್ಶನಂ ವಚನ ದೀಪಿಕೆ', 'ಕುವೆಂಪು ಹನುಮದ್ದರ್ಶನ', 'ಶ್ರೀ ರಾಮಾಯಣದರ್ಶನಂ ಪಾತ್ರಗಳ ಕಥಾವಳಿ' ಕೃತಿಗಳನ್ನು ಸಹೃದಯರಿಗೆ ನೀಡಿದ್ದಾರೆ. ಸತತ ಸಾಹಿತ್ಯ ಸೇವೆಗೆ ಡಾ.ಜಿ.ಪಿ.ರಾಜರತ್ನಂ ಕನ್ನಡ ಸಾಹಿತ್ಯ ಪರಿಚಾರಕ ಪ್ರಶಸ್ತಿ, ಅಂಬಿಕಾತನಯದತ್ತ ರಾಷ್ಟ್ರೀಯ ಪ್ರಶಸ್ತಿ, ಕೆಂಪೇಗೌಡ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಾಹಿತ್ಯ ಶ್ರೀ ಪ್ರಶಸ್ತಿ, ಮತ್ತಿತರ ಗೌರವಗಳಿಗೆ ಪಾತ್ರರಾಗಿದ್ದಾರೆ. ಅವರ ಈಚಿನ ಕೃತಿ 'ಚಿತ್ರಾಂಗದಾ' ಗದ್ಯಾನುವಾದ.

ಲೇಖಕರ ನುಡಿ

ಕುವೆಂಪು ಅವರ 'ಚಿತ್ರಾಂಗದಾ' (1936) ಸರಳ ರಗಳೆಯಲ್ಲಿ ರಚಿತವಾದ ಖಂಡಕಾವ್ಯ. ಇದು ಅವರ ಮಹಾ ಛಂದಸ್ಸಿನ ಪೂರ್ವ ಪ್ರಯೋಗವಾಗಿದ್ದು ಮಹೋಪಮೆಗಳನ್ನು ಪ್ರಯೋಗಿಸಿರುವ ಮೊದಲಕಾವ್ಯ. ಹಾಗಾಗಿ ಇದು ಕನ್ನಡ ಸಾಹಿತ್ಯದಲ್ಲಿ ಹೊಸ ಸಾಹಸದ ಐತಿಹಾಸಿಕ ಕಾವ್ಯ ಪ್ರಯೋಗ ಕೃತಿ. ಈ ಖಂಡಕಾವ್ಯವು ಶೃಂಗಾರರಸದ ವಿವಿಧ ಮನೋಹರ ಭಾವಲಹರಿಗಳಿಂದ ಚಿತ್ತಾಕರ್ಷಕವಾಗಿದೆ. ಇದರ ಆಂತರ್ಯದಲ್ಲಿ ಚಿತ್ರಾಂಗದೆಯ ಪ್ರಣಯ ಪಾವಿತ್ರ್ಯ ಪ್ರತಿಷ್ಠಾಪಿತವಾಗಿದೆ.

ಕುವೆಂಪು ಅವರ 'ಚಿತ್ರಾಂಗದಾ' ಅತಿಮಾನುಷ ಪೌರಾಣಿಕ ಚಿತ್ರಣವಲ್ಲ. ಅದು ಗಂಡು ಹೆಣ್ಣಿನ ಮನುಷ್ಯ ಸಹಜ ಆಕರ್ಷಣೆ, ದ್ವೇಷ, ಅಹಂಭಾವಗಳು ನಿರಸನಗೊಂಡ ಭಾರತೀಯ ತಾತ್ವಿಕ ನೆಲೆಯಲ್ಲಿ ಮಾಗಿದ ತಪಸ್ವಿ ಚಿತ್ರಾಂಗದೆಯ ಹೊಸಸೃಷ್ಟಿ. ಅವರ ನವ ಕಲ್ಪನೆಯಲ್ಲಿ – ಯುದ್ಧರಂಗದ ಮಧ್ಯದಲ್ಲಿ ಚಿತ್ರಾಂಗದೆ ನುಗ್ಗಿ ಪ್ರೀತಿಯ ಪತಿ, ವಾತ್ಸಲ್ಯದ ಮಗನ ಮಧ್ಯೆ ಬಿದ್ದು, ಅವರಿಬ್ಬರನ್ನು ಭೇಟಿಮಾಡಿಸಿ ಜೀವನ್ಮುಕ್ತಳಾಗುತ್ತಾಳೆ!

ಕುವೆಂಪು ಅವರು 'ಅರಿಕೆ'ಯಲ್ಲಿ ತಿಳಿಸಿರುವಂತೆ 'ಪೂರ್ವ ಚಿತ್ರಾಂಗದೆಯನ್ನು ಚಿತ್ರಿಸುವ ಕೆಲವು ಸನ್ನಿವೇಶಗಳಿಗೆ ಈ ಕಾವ್ಯ ಠಾಕೂರರಿಗೆ ಋಣಿಯಾಗಿದೆ.'

'ರವೀಂದ್ರನಾಥ ಠಾಕೂರರು ಅರ್ಜುನ ಚಿತ್ರಾಂಗದೆಯರ ಪ್ರಣಯವನ್ನು ಮಾತ್ರ ಚಿತ್ರಿಸುವ ಗೀತನಾಟಕವನ್ನು ರಚಿಸಿದ್ದಾರೆ.'[1] ಅದರಲ್ಲಿ ಚಿತ್ರಾಂಗದೆಯು ತಾಪಸಿ ವೇಷಧಾರಿ ಅರ್ಜುನನಲ್ಲಿ ಮೋಹಗೊಳ್ಳುತ್ತಾಳೆ. ಅವನು ತಿರಸ್ಕರಿಸಲು ಅತೃಪ್ತಳಾಗುತ್ತಾಳೆ. ಅವನನ್ನು ಒಲಿಸಿಕೊಳ್ಳಲು ಮನ್ಮಥನ ಮೊರೆ ಹೋಗುತ್ತಾಳೆ. ಅರ್ಜುನನನ್ನು ಸೋಲಿಸಲು ತನಗೆ ಒಂದು ದಿನದ ಸೌಂದರ್ಯ ದಯಪಾಲಿಸೆಂದು ಬೇಡಿಕೊಳ್ಳುತ್ತಾಳೆ. ಮದನನು ಅವಳಿಗೆ ಒಂದು ವರ್ಷಕಾಲ ಸೌಂದರ್ಯವು ಅವಳನ್ನು ಮುತ್ತಿರುವಂತೆ ವರವನ್ನು ನೀಡುತ್ತಾನೆ.

---

1. ಉ.ಕಾ. ಸುಬ್ಬರಾಯಾಚಾರ್, ಚಿತ್ರಾಂಗದಾ, ಪ್ರಸಾರಾಂಗ, ಮೈಸೂರು, 1981–ಪು 06.

ಅವಧಿ ಮುಗಿಯುತ್ತಿದ್ದಂತೆ ಠಾಕೂರರ 'ಚಿತ್ರಾ' ನಾಟಕ ಮುಗಿಯುತ್ತದೆ.

ಕುವೆಂಪು ಅವರು ಒಂದು ವರ್ಷದ ದೀರ್ಘಾವಧಿಯಲ್ಲಿ ಚಿತ್ರಾಂಗದೆ ತನ್ನ ತಂದೆ ತಾಯಿಯಿಂದ ದೂರವಿರುವುದು ಕಥಾತಂತ್ರದ ದೃಷ್ಟಿಯಿಂದ ಅಷ್ಟು ಸಮಂಜಸವಲ್ಲ ಎಂದು ಭಾವಿಸುತ್ತಾರೆ. ಕಥೆಯ ಚಲನಾತೀವ್ರತೆ, ಕುತೂಹಲಭರಿತ ಮನಕ್ಕೆ ಸೂಕ್ತವಾಗುವಂತೆ ಅದನ್ನು ಒಂದು ತಿಂಗಳ ಕಾಲ ಮಿತಿಗೆ ಬದಲಾಯಿಸಿಕೊಳ್ಳುತ್ತಾರೆ. ಅವಳ ಪ್ರೇಮಾಲಾಪ, ಮದನ ವಿಲಾಸ ವಿಭ್ರಮವನ್ನು ಕಾವ್ಯಲಹರಿಯಲ್ಲಿ ಲಾಸ್ಯವಾಡಿಸಿದ್ದಾರೆ.

ಈ ಖಂಡಕಾವ್ಯವನ್ನು ನಾನು ಹಲವು ಬಾರಿ ಓದಿ ಸಂತೋಷಪಟ್ಟಿರುವೆನು. ಒಮ್ಮೆ ಮಾತನಾಡುತ್ತ ಸ್ನೇಹಿತ ಶ್ರೀ ಎಂ.ಎಲ್. ಶಾಂತಕುಮಾರ್ ಅವರು 'ಅದನ್ನು ಓದಿ ತಿಳಿಯಲು ಕಷ್ಟವಾಗುತ್ತಿದೆ. ಸರಳ ಗದ್ಯದಲ್ಲಿ ನೀಡಿದರೆ ಉತ್ತಮ' ಎಂದು ಹೇಳಿದರು. ಈ ಮಾತನ್ನು ಪ್ರೊ. ಎಂ.ಜಿ ಚಂದ್ರಶೇಖರಯ್ಯ ಅವರಿಗೆ ತಿಳಿಸಿದೆ. ಅವರು 'ಇಂತಹದು ಅವಶ್ಯಕವಾಗಿದೆ, ಮಾಡಿ' ಎಂದು ಪ್ರೋತ್ಸಾಹಕರ ನುಡಿಗಳನ್ನು ಆಡಿದರು.

'ಚಿತ್ರಾಂಗದಾ' ಖಂಡಕಾವ್ಯವನ್ನು ಸರಳಗನ್ನಡ ರೂಪದಲ್ಲಿ ಬರೆಯಲು ಅನುಮತಿ ನೀಡಿ ಎಂದು ಶ್ರೀಮತಿ ಕೆ.ಪಿ ತಾರಿಣಿ ಚಿದಾನಂದಗೌಡರನ್ನು ಕೇಳಿಕೊಂಡೆನು. ಅವರು ಪ್ರೀತಿಯಿಂದ ಅನುಮತಿ ನೀಡಿದರು. ಅವರು ಈ ಬಗೆಯಲ್ಲಿ ನನಗೆ ಸದಾ ಪ್ರೋತ್ಸಾಹ ನೀಡುತ್ತಿರುವುದಕ್ಕೆ ನಾನು ಅವರಿಗೆ ಋಣಿಯಾಗಿರುವೆನು. ಅದನ್ನು ಸರಳಗದ್ಯದಲ್ಲಿ ರಚಿಸಿ 'ಸುಧಾ' ವಾರಪತ್ರಿಕೆಗೆ ನೀಡಿದೆನು. ನಿರ್ದೇಶಕರಾದ ಶ್ರೀ ಕೆ.ಎನ್. ಶಾಂತಕುಮಾರ್ ಮತ್ತು ಕಾರ್ಯನಿರ್ವಾಹಕ ಸಂಪಾದಕರಾದ ಶ್ರೀ ಚ.ಹ. ರಘುನಾಥ್ ಅವರು 'ಸುಧಾ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ದಿನಾಂಕ 24.03.2022ರಿಂದ 28.04.2022 ರವರೆಗೆ ಆರು ಕಂತುಗಳಲ್ಲಿ ಪ್ರಕಟಿಸಿ ಪ್ರೋತ್ಸಾಹಿಸಿದರು. ಅದಕ್ಕೆ ಖ್ಯಾತ ಚಿತ್ರಕಾರ ಶ್ರೀ ಎಚ್. ಎಸ್. ಮೋನಪ್ಪ ಅವರು ಅತ್ಯುತ್ತಮ ಭಾವೋಜ್ವಲ ಚಿತ್ರಗಳನ್ನು ರಚಿಸಿ, ರಸಿಕ ಸಹೃದಯರಿಗೆ ಕಥೆಯ ಹೂರಣ ಸವಿಯುವಂತೆ ಮಾಡಿದರು. ಅದನ್ನು ನಾಡಿನ ಜನ ಪ್ರೀತಿಯಿಂದ ಓದಿ ಮೆಚ್ಚಿಕೊಂಡರು. ಈ ಎಲ್ಲಾ ಮಹನೀಯರ ಪ್ರೀತಿಗೆ ಪಾತ್ರನಾದದ್ದು ನನ್ನ ಜೀವನದ ಆನಂದ.

ಈಗಾಗಲೇ ನನ್ನ ಶ್ರೀರಾಮಾಯಣ ದರ್ಶನಂ ವಚನ ದೀಪಿಕೆ ಮತ್ತು 'ಕರ್ಣ ಚೈತ್ರನ ಪರ್ಣ ಶಾಲೆ' ಕೃತಿಗಳನ್ನು ಪ್ರಕಟಿಸಿರುವ ಶ್ರೀ ಸುರೇಶ್ ಬಿ.ಕೆ. ಅವರು 'ಕುವೆಂಪು ಚಿತ್ರಾಂಗದಾ'ವನ್ನು ತಮ್ಮ ಅನ್ನಪೂರ್ಣ ಪಬ್ಲಿಷಿಂಗ್ ಹೌಸ್‌ನಿಂದ ಪ್ರಕಟಿಸುತ್ತಿರುವುದು ಸಂತೋಷವನ್ನುಂಟು ಮಾಡಿದೆ.

ಕವಿ ಪುತ್ರಿ ಶ್ರೀಮತಿ ಕೆ.ಪಿ. ತಾರಿಣಿ ಮತ್ತು ಅವರ ಪತಿ ಪ್ರೊ. ಕೆ. ಚಿದಾನಂದಗೌಡ ಅವರಿಗೆ ಈ ಕೃತಿಯನ್ನು ಅರ್ಪಿಸಿದ್ದೇನೆ. ಇದನ್ನವರು ಪ್ರೀತಿಯಿಂದ ಸ್ವೀಕರಿಸಬೇಕೆಂದು ಪ್ರಾರ್ಥಿಸುತ್ತೇನೆ.

ನನ್ನ ಸಾಹಿತ್ಯ ಅಧ್ಯಯನಕ್ಕೆ ಸದಾ ಪ್ರೋತ್ಸಾಹ ನೀಡುತ್ತಿರುವ ಗುರು ಡಾ. ಕೆ. ಅನಂತರಾಮು, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಡಾ. ವಿ. ಚಂದ್ರಶೇಖರ ನಂಗಲಿ, ಡಾ. ಭೈರಮಂಗಲ ರಾಮೇಗೌಡ, ಶ್ರೀ ಎಂ. ನರಸಿಂಹ, ಪ್ರೊ. ಕೆ.ಎಸ್. ನರಸಿಂಗರಾವ್, ಪ್ರೊ. ಓ. ಸುಬ್ರಮಣ್ಯಂ, ಡಾ. ಟಿ.ಎನ್. ವಾಸುದೇವಮೂರ್ತಿ, ಶ್ರೀ ಡಿ.ಎಚ್. ಪುಟ್ಟರಾಮು, ಶ್ರೀ ಬಿ.ಎಸ್. ಜಯಪ್ರಕಾಶ ನಾರಾಯಣ, ಡಾ. ರವಿಶಂಕರ್ ಎ.ಕೆ ಮುಂತಾದವರಿಗೆ ಮತ್ತು ನಮ್ಮ ದ.ರಾ. ಬೇಂದ್ರೆ ಕಾವ್ಯಕೂಟದ ಎಲ್ಲಾ ಸದಸ್ಯರಿಗೆ ನನ್ನ ನಮನಗಳು.

ನನ್ನ ಸಾಹಿತ್ಯ ಅಧ್ಯಯನಕ್ಕೆ ತುಂಬು ಉತ್ತೇಜನ ನೀಡುತ್ತಿರುವ ನನ್ನ ಪತ್ನಿ, ಮಕ್ಕಳು, ಅಳಿಯಂದಿರು ಮತ್ತು ಸೊಸೆಯನ್ನು ನೆನೆಯುವುದು, ಪ್ರೀತಿಯ ಮೊಮ್ಮಕ್ಕಳಾದ ಚಿ॥ ಎಂ. ಉಜ್ವಲ್, ಚಿ॥ ಜೆ. ಸುಜನ, ಕು॥ ಜೆ. ಸುಗ್ಗಿ, ಚಿ॥ ಬಿ. ಎಸ್. ಸಂವಿತ್ ಕೃಷ್ಣ, ಚಿ॥ ಬಿ.ಎಸ್. ಸುಮೇರು ಕೃಷ್ಣ ಅವರ ಮುಗ್ಧ ಆನಂದಕ್ಕೆ ನಲಿಯುವುದು ನನ್ನ ಕುಟುಂಬ ಸಾಹಿತ್ಯ ಪೋಷಕ ವಾತಾವರಣದ ಆಹ್ಲಾದ.

ನಾನು ಈ ಮೊದಲು ರಚಿಸಿರುವ ಕೃತಿಗಳನ್ನು ಓದಿ ಸವಿದ ಕನ್ನಡ ಸಾಹಿತ್ಯಾಸಕ್ತರು ಮತ್ತು ವಿದ್ವನ್ಮಣಿಗಳು ಈ ಕೃತಿಯನ್ನು ಪ್ರೀತಿಯಿಂದ ಸ್ವೀಕರಿಸಿ ಆಶೀರ್ವದಿಸಬೇಕೆಂದು ಪ್ರಾರ್ಥಿಸುತ್ತೇನೆ.

11.06.2022 **ಡಾ. ಜಿ. ಕೃಷ್ಣಪ್ಪ**

ಪರಿವಿಡಿ

* * *



ಶಾರದಾ ದೇವಿಯ ಪ್ರಾರ್ಥನೆ

ಶಾರದೆಯೆ, ನೀನು ಬ್ರಹ್ಮನ ಮಹತ್ ಗರ್ಭದಿಂದ ಜನಿಸಿದ ವಿರಾಟ್ ಸೃಷ್ಟಿಯ, ಭವ್ಯಾನಂದ ಸಿರಿಯ ಬೇಡಿದುದನ್ನು ಅನುಗ್ರಹಿಸುವ ಮಾತೆ. ನವಿಲು ವಾಹನೆಯಾದ ನುಡಿಯ ಅಧಿದೇವತೆ ಸರಸ್ವತಿಯೆ, ಭಾವಚಿಂತಾಗಣಿಯೆ, ಭುವನವನ್ನು ಮೋಹಿಸುವ ಮಧುರ ವೀಣೆಯನ್ನು ಕೈಯಲ್ಲಿ ಹಿಡಿದಿರುವ ವಾಗ್ದೇವಿಯೆ, ನೀನು ಸರಸ ಕವಿತಾ ಕಲ್ಯಾಣಿ. ಓ ತಾಯಿ ನಿನ್ನ ಪವಿತ್ರ ಪಾದಕಮಲಗಳಿಗೆ ನನ್ನ ತಲೆಯಿಟ್ಟು ನಮಿಸುತ್ತ ಮುಂಗುರುಳ ದುಂಬಿಗಳನ್ನು ತುಂಬುತ್ತೇನೆ. ಕೃಪೆದೋರಿ ಈ ಕಂದನನ್ನು ಕರುಣೆಯಿಂದ ಕಂಡು, ಜಡಮತಿಗೆ ದಿವ್ಯ ವಿದ್ಯುತ್ ಚೇತನವನ್ನು ನೀಡಿ, ನನ್ನ ನಾಲಗೆಯಲ್ಲಿ ನಲಿದು ಒಲಿದು ನರ್ತನವನ್ನು ಮಾಡು.

ಹೇ ಕಾವ್ಯ ಕಾಮಿನಿಯೆ, ನಿನ್ನಿಂದಲೆ ಭುವನ ಸ್ವರ ಮೇಳೈಸಿ ನಿಯಮ ಸಂಯಮ ಪೂರ್ಣ ಮಾಧುರ್ಯವು ಸ್ವಚ್ಛಂದ ಆನಂದಶೀಲವು ಉಕ್ಕುತ್ತಿದೆ! ಆ ಸ್ಫೂರ್ತಿಯನ್ನು ನಾನು ಹಾಡಲಿರುವ ಗಾನದಲ್ಲಿ ನನಗೆ ದಯಪಾಲಿಸು. ಅದು ಸ್ವಾತಂತ್ರ್ಯ, ಮಾಧುರ್ಯ, ಸಂಯಮಗಳಿಂದ ಹೊಮ್ಮಿ, ನನ್ನ ಕನ್ನಡನಾಡಿನ ಜನರ ಎದೆಯ ಹೂ ಅರಳುವಂತೆ ಆಶೀರ್ವಾದ ಮಾಡು.

ಓ ಕಲ್ಪನಾ ಸುಂದರಿಯೆ, ನಿನ್ನ ಮಹಿಮೆಯಿಂದ ವ್ಯಾಧ ಪ್ರಥಮ ಕವಿಯಾದನು. ತಾಯೆ, ಮಲಿನಗೊಂಡ ಕನ್ನಡಿಯು ಮಹಾ ಸೂರ್ಯನನ್ನು ಕನ್ನಡಿಸಿ (ಪ್ರತಿಫಲಿಸಿ) ಈ ಭೂಮಿಗೆ ಪ್ರಕಾಶವನ್ನು ನೀಡಲು ಪ್ರಯತ್ನಿಸಿ ಹಿಗ್ಗುತ್ತದೆ. ಹಾಗೆ ತಾಯೆ, ಹಸುಳೆಯಾದ ನನ್ನನ್ನು ಒಮ್ಮೆ ನೀನು ಚುಂಬಿಸಿದರೆ ಈ ನನ್ನ ತೊದಲುವ ತುಟಿ ಬೃಹತ್ ಕಾವ್ಯ ಸಂಗೀತವನ್ನು ಗಾನಗೈಯುವುದಿಲ್ಲವೆ ಹೇಳು?

ಶಿಶುವು ತಾನು ಆ ದೂರದಲ್ಲಿರುವ ನಕ್ಷತ್ರವನ್ನು ಹಿಡಿದು ತನ್ನ ಕೈದೀವಿಗೆಯಾಗಿಸಿಕೊಳ್ಳಲು ಅಪೇಕ್ಷಿಸುವುದು. ಉನ್ಮತ್ತ ಸಾಹಸಿಯು ದಿಗಂತವನ್ನು ಬೆನ್ನಟ್ಟಲು ತೊಡಗುವನು. ಹಾಗೆ ನಾನು ವಾಲ್ಮೀಕಿ ವ್ಯಾಸ, ಪಂಪ ರನ್ನರ ದಿವ್ಯ ಕೀರ್ತಿ ಕಾಮಿನಿಯ ಪಾದಗಳ ಪವಿತ್ರ ಧೂಳನ್ನು ನನ್ನ ತಲೆಯಲ್ಲಿ ಧರಿಸುವ ಪುಣ್ಯವನ್ನು ಬಯಸಿ ಹೇ ದೇವಿ, ನಿನ್ನನ್ನು ಎದೆ ತುಂಬಿ ಪ್ರಾರ್ಥಿಸುವೆನು. ತಾಯೆ ಕೃಪೆದೋರಿ ನಿನ್ನ ವೀಣಾ ವಾಣಿಯನ್ನು ನೀಡು.

* * *

1. ಮೃಗಯಾ ವಿನೋದ ತರುಣಿ ಚಿತ್ರಾಂಗಿ

ಏಳು, ವೀಣೆಯೆ, ಏಳು! ಹೇ ಅಮೃತ ಭಾಷಿಣಿಯೆ, ಮುಂದಿನ ಕಥೆಯನ್ನು ಹೇಳು! ಸಂಧ್ಯಾ ನಭಾಂಗಣದಲ್ಲಿ ಪೂರ್ಣ ಕೆಂಪಾದ ಮುಗಿಲಿನ ಪರಿವಾರದಿಂದ ಆವರಿಸಿದ ದಿವಸಮಣಿ ಸೂರ್ಯನು ಪಶ್ಚಿಮಾಂಬುಧಿಗೆ ಇಳಿದನು. ಧರೆಯಲ್ಲಿ ಕತ್ತಲೆಯ ದಂಡು ಬೀಡು ಬಿಟ್ಟಿತು. ರಾತ್ರಿಯ ವಸ್ತ್ರದ ಕಾಂತಿ ಕುಸುಮಗಳಾದ ತಾರೆಗಳು ಮೈದೋರಿದವು. ಪ್ರಾಣಿಗಳನ್ನು ಬೇಟೆಯಾಡುವ ವಿನೋದ (ಮೃಗಯಾ ವಿನೋದ) ದಿಂದ ತುಂಬಾ ಬಳಲಿದ ತರುಣಿ ಚಿತ್ರಾಂಗಿಯು ಬನದ ದೇಗುಲಕ್ಕೆ ಬಂದಳು. ಹತ್ತಿರದ ಕೊಳದಲ್ಲಿ ಮಿಂದು, ಹಣ್ಣು ಹಂಪಲುಗಳನ್ನು ತಿಂದಳು. ನಂತರ ಆ ಕೋಮಲೆಯು ಶಿವಾಲಯದ ಕಲ್ಲು ನೆಲದ ಕಠಿಣ ಹಾಸಿನ ಮೇಲೆ ಮಲಗಿದಳು. ಹೇ ಅಮೃತ ಭಾಷಿಣಿಯೆ, ಮುಂದಿನ ಕಥೆಯನ್ನು ಹೇಳು! ಏಳು, ವೀಣೆಯೆ, ಏಳು!

ತರುಣಿ ಚಿತ್ರಾಂಗಿಯನ್ನು ನಿದ್ರೆಯಲ್ಲಿ ತಬ್ಬಿ ಆಡಿಸಿದ ಸ್ವಪ್ನ ದೇವತೆ

ನಿದ್ರಾಂಗನೆಯ ಪರಮಸಖಿ ಸ್ವಪ್ನಸುಂದರಿ, ಅವಳು ಇರುಳಿನ ನಕ್ಷತ್ರ ಖಚಿತ ಅರಿವೆಯನ್ನು ಉಟ್ಟು, ಸೊಂಟದಲ್ಲಿ ಮನ್ಮಥನ ಬಿಲ್ಲಿನ ಸೂತ್ರವನ್ನು ತೊಟ್ಟುಕೊಂಡು ಭೂಯಾತ್ರೆ ಮಾಡುತ್ತಿದ್ದಳು. (ಅವಳು ಮೋಹನ ವಸಂತದಲ್ಲಿ ಹೂವಿಂದ ಹೂವಿಗೆ ಪರಿಮಳವನ್ನು ಅರಸುತ್ತ ತುಂಬಿಯು ಗಾಳಿಯಲ್ಲಿ ಅಲೆಯುವಂತೆ ಸಾಗುತ್ತಿದ್ದಳು.) ಆಗ ಅವಳು ಬನದ ಗುಡಿಯಲ್ಲಿ ಕಲ್ಲಿನ ನೆಲದ ಮೇಲೆ ಈಶ್ವರಾರ್ಪಿತ ಕುಸುಮ ಸದೃಶವಾದ ಚಿತ್ರಾಂಗಿಯನ್ನು ಕಂಡಳು. ದೇವಿಯು ಮೆಚ್ಚಿ ನಿಂತಳು. ಸ್ವಪ್ನ ಸಾಮ್ರಾಜ್ಯದ ಆ ಚಕ್ರವರ್ತಿನಿಯು ಚಿತ್ರಾಂಗದಾ ರಮಣಿಯ ಮನಸ್ಸಿಗೆ ಸ್ವಪ್ನಮಧು ಮಾಯೆಯನ್ನು ಬೀಸಿದಳು.

ರಾತ್ರಿಯ ಪ್ರಿಯ ಸಖಿಯೆ, ಹೇ ಸ್ವಪ್ನ ಕಾಮಿನಿಯೆ, ಲಲನೆಯ ಆತ್ಮದಲ್ಲಿ ಯಾವ ಮನೋಹರ ಸ್ವರ್ಗವನ್ನು ಕಟ್ಟುತ್ತಿರುವೆ ತೋರಿಸು.

ದಟ್ಟವಾದ ನಿಶ್ಯಬ್ದವಾದ ಕಾಡಿನ ಒಳಗಡೆ ನಡುಹಗಲ ಮಾರ್ತಾಂಡ ಸೂರ್ಯನ ತೀಕ್ಷ್ಣ ಪ್ರಭಾವವನ್ನು ತಂಪು ಬನಗತ್ತಲೆ ಅಡಗಿಸಿತ್ತು. ಅದು ಭಯಂಕರವಾದ

ಸಮ್ಮೋಹನದಿಂದ ಮರೆಯುತ್ತ ಚಿತ್ರದಂತೆ ನಿಶ್ಚಲವಾಗಿತ್ತು. ಆ ಬನಗತ್ತಲೆಯಲ್ಲಿ ವೃಕ್ಷ ಕುಲ ಕೀರ್ತಿಯಾಗಿ ಲಕ್ಷೋಪ ಲಕ್ಷ ಸಂಖ್ಯೆಯಲ್ಲಿ ಮರಗಳು ಸ್ವಚ್ಛಂದವಾಗಿ ಬೆಳೆದಿದ್ದವು. ಅವು ಬಲದಿಂದ ಉನ್ಮತ್ತವಾದ ದೈತ್ಯ ಬಾಹುಗಳಂತೆ ಸುತ್ತಲೂ ಅಂಜಿಕೆಯನ್ನುಂಟು ಮಾಡುವ ದಾರುಣವಾದ ಕುಟಿಲ ಜಟಿಲ ವಿನ್ಯಾಸದಿಂದ ಕೂಡಿದ ತಮ್ಮ ಮಹಾಶಾಖೆಗಳನ್ನು ಬೀಸಿದ್ದವು.

ಅಲ್ಲಿ ಬಳ್ಳಿ ದಿಂಡುಗಳು ಜೋಲಾಡುವ ಹೆಬ್ಬಾವುಗಳಂತೆ ದೀರ್ಘ ವಕ್ರಾಕಾರದಲ್ಲಿ ಜೋಲಾಡುತ್ತಿದ್ದವು. ದಿನಮಣಿಯ ಬೆದರಿಕೆಗೆ ಕಾಡನ್ನೇ ಮರೆಯಾಗಿಸಿಕೊಂಡ ಕತ್ತಲೆಯ ಕುಲದಂತೆ, ನೆರಳ ವಿರೂಪಗಳು ಕೂಡಿಕೊಂಡು ಅಲ್ಲಲ್ಲಿ ಅವಿತುಕೊಂಡಿದ್ದವು.

ಚಿಮ್ಮಿದುದು ಜಿಂಕೆಮರಿಯೊಂದು–ಕರಿಮುಗಿಲ್ಗಬ್ಬದಿಂದೊಗೆವ ಮರಿಮಿಂಚೆನಲ್

ಚಿತ್ರಾಂಗಿಯು ಕೈಯಲ್ಲಿ ಬಿಲ್ಲನ್ನು ಹಿಡಿದು, ಮಲ್ಲಗಚ್ಚೆಯನ್ನು ಹಾಕಿದ ಹಳದಿ ವಸ್ತ್ರವನ್ನುಟ್ಟು ತಾನೇ ಕಾಡಿನ ರಾಣಿ ಎನ್ನುವಂತೆ ತಿರುಗಾಡುತ್ತಿದ್ದಳು. ಆಗ ಬನಗತ್ತಲೆಯ ಕಪ್ಪಾದ ಮುಗಿಲಿಗೆ ಕಣ್ಮಿಂಚು ಸುಳಿಸಿ ಒಂದು ಜಿಂಕೆ ಮರಿಯು ಪೊದೆಯ ಒಡಲಿನಿಂದ ಚಿಮ್ಮಿತು. ಅದು ಕರಿಮುಗಿಲ ಗರ್ಭದಿಂದ ನೆಗೆಯುವ ಮರಿ ಮಿಂಚಿನಂತಿದ್ದು, ತಿರುಗುವ ಕವಣೆಯಿಂದ ಸಿಡಿದು ಚಿಮ್ಮುವ ರತ್ನ ಶಿಲೆಯಂತಿತ್ತು.

ಕನ್ಯೆಯು ತಕ್ಷಣ ಅದರ ಬೆನ್ನಟ್ಟಿ ಹೋದಳು. ದೃಷ್ಟಿಯನ್ನೇ ಅತಿಕ್ರಮಿಸಿ ಮೀರುತ್ತ ವೇಗದಿಂದ ಓಡುತ್ತ, ನೆಲವನ್ನು ಮುಟ್ಟಿಯೂ ಮುಟ್ಟದಂತೆ ಮುಂದುವರಿಯುವ ಹರಿಣ ಶಿಶುವಿನ ಸೌಂದರ್ಯಕ್ಕೆ ಮನಸೋತಳು. ಎದೆ ತುಂಬಿ ಪ್ರೀತಿಸಿದ ಆ ಮುದ್ದಿನ ಮುದ್ದೆಯನ್ನು ಒಂದಿಷ್ಟೂ ನೋಯಿಸದೆ ಹಿಡಿಯುವೆ ಎನ್ನುವ ಆತುರದಲ್ಲಿ ಕನ್ಯೆಯು ಕಾಡಿನ ಮುಳ್ಳು, ಹಳ್ಳಕೊಳ್ಳ ಯಾವುದನ್ನೂ ಲೆಕ್ಕಿಸದೆ ಕೂಡಲೆ ಬೆಂಬತ್ತಿದಳು.

ಚೈತ್ರಮಾಸದ ಒಂದು ಬೆಳಗಿನಲ್ಲಿ ಪೂರ್ವದಿಕ್ಕಿನಲ್ಲಿ ಉದಯನದಿಯ ಬಿಳಿ ಹೊನಲು ಜಗತ್ತಿಗೆ ಹರಿಯುತ್ತಿತ್ತು. ಕಿರಣಗಳ ಜೀರ್ಕೊಳವಿಯಿಂದ ಹೊನ್ನೀರನ್ನು ಎರಚುತ್ತಿತ್ತು. ಮಲೆಯ ಹೂದೋಟದಲ್ಲಿ ತಣ್ಣನೆಯ ಗಾಳಿ ತೀಡುವುದಕ್ಕೆ ತಲೆದೂಗುತ್ತ ನಲಿದು, ತೆರೆ ತೆರೆಯಾಗಿ ನಗೆ ಬೀರಿ ಬಣ್ಣ ಬಣ್ಣದ ಕುಸುಮ ಪರಿಷತ್ತು ನೆರೆದಿತ್ತು. ಬಣ್ಣದ ಚಿಟ್ಟೆಯೊಂದು ರೆಕ್ಕೆ ಬಂದಿರುವ ಹೂವಿನಂತೆ ಪುಷ್ಪದಿಂದ ಪುಷ್ಪಕ್ಕೆ ಹಾರಿ ಮಧುವನ್ನು ಹೀರಿ ಕಂಗೊಳಿಸುತ್ತಿತ್ತು. ಓರ್ವ ಬಾಲೆಯು ಅದನ್ನು ನೋಡಿ ಮನ ಸೋತಳು.

ಅದನ್ನು ಹಿಡಿಯಲು ಪ್ರಯತ್ನಿಸಿದಳು. ಆ ಸುಂದರ ಪತಂಗವು ರಾಮನನ್ನು ಮೋಹಿಸಿದ ಮಾರೀಚನಂತೆ, ಒಮ್ಮೆ ಸಿಕ್ಕಿದಂತೆ ಮತ್ತೊಮ್ಮೆ ಸಿಕ್ಕದಂತೆ ಚಿಮ್ಮುತ್ತ ಅವಳನ್ನು ಪೀಡಿಸುತ್ತ ಕೊನೆಗೆ ಮಂಗಳ ಮಾಯವಾಗಿ ಹೋಯಿತು. ಆ ಬಾಲೆ

ಬಯಕೆ ಕೈಗೂಡದಂತಾಗಲು ಹನಿಗಣ್ಣಾದಳು. ಕಂಬನಿಯಲ್ಲಿ ಇನ್ನೊಂದು ಹೊಂಗನಸು ಕಾಣುವಳು ಎನ್ನುವಂತೆ ನಿಟ್ಟುಸಿರು ಬಿಡುತ್ತ ನಿಂತಳು.

ಅದೇ ರೀತಿ ಚಿತ್ರಾಂಗಿಯು ಕಾಂಚನಮೃಗ ಮರಿಯ ಹಿಂದೆ ಬೆನ್ನಟ್ಟಿ ಹೋದಳು. ಕಂದರವನ್ನು ಇಳಿಯುತ್ತ ಬೆಟ್ಟದ ಶಿಖರವನ್ನು ಏರಿದಳು. ಹಳ್ಳವನ್ನು ನೆಗೆದು ದಾಟಿ, ಕೊಳ್ಳ ಕೊಳ್ಳವನ್ನು ಧುಮುಕಿ, ಮುಳ್ಳು ಹೊದರಿನಲ್ಲಿ ನುಸುಳಿದಳು. ಮೈ ಬಟ್ಟೆ ಗೀರಿ ಹರಿಯಿತು. ದಟ್ಟ ಕಾಡಿನಲ್ಲಿ ನುಸಿದು ನುಗ್ಗಿ, ಬಿದಿರ ಮೆಳೆಯಲ್ಲಿ ಜುಣುಗಿದಳು. ಬಯಲಿನಲ್ಲಿ ಬೆಳೆದಿರುವ ಒಣಹುಲ್ಲಿನಲ್ಲಿ, ಕಿಬ್ಬಿಯಲ್ಲಿ, ಕೆಸರಿನಲ್ಲಿ ಹಾದು ಹೋಗುತ್ತ ಏದುಸಿರು ಬಿಟ್ಟಳು. ಆ ಜಿಂಕೆ ಮರಿಯು ಹೋದ ದಾರಿಯನ್ನೆ ಹಿಡಿದು ಚಲದಿಂದ ಧಾವಿಸಿದ ಅಂಗನೆ ತೊಳಲಿ ಬಳಲಿದಳು. ಬೇಟೆಯ ಆಯಾಸದಿಂದ ಬೆವರಿದಳು. ಚಿತ್ತದ ಉದ್ವೇಗದಿಂದ ಆ ರಾಜಕುವರಿಯು ಕನಸಿನಲ್ಲಿಯೇ ಕಾದು ಕುದಿದು ಹೋದಳು.

ಎಷ್ಟು ಬೆನ್ನಟ್ಟಿದರೇನು? ಎಷ್ಟು ಬಳಲಿದರೇನು? ಯುಕ್ತಿಯಿಂದ ಬ್ರಹ್ಮವನ್ನು ದೊರಕಿಸಿಕೊಳ್ಳಲು ಪ್ರಯತ್ನಿಸುವ ತರ್ಕದ ಬಯಕೆಯಂತೆ, ಕೊನೆಗೆ ಎಲ್ಲವೂ ವ್ಯರ್ಥವಾಯಿತು!

ರಮಣಿ ಸೋತು ನಿಂತಳು. ನಿಟ್ಟುಸಿರಿನಿಂದ ಆಕೆಯ ತುಂಬು ಎದೆಗಳು ಏಳು ಬೀಳುತ್ತಿರಲು, ದೂರಕ್ಕೆ ದೃಷ್ಟಿ ಹರಿಸಿ ನೋಡಿದಳು. ಜಿಂಕೆ ಮರಿಯು ಗಿರಿಯ ಕಂದರ ಸುಂದರಾಭೋಗದಲ್ಲಿ, ಹಸಿರು ಹಿನ್ನೆಲೆಯಲ್ಲಿ ಹೊನ್ನ ಹನಿಯಂತಿತ್ತು. ರಾಜವಂಶದ ಅಂಗನೆಯಲ್ಲವೆ? ರೋಷಗೊಂಡಳು. ಹತಾಶೆಯಿಂದ ಹುಟ್ಟಿದ ದರ್ಪದಿಂದ ಕೋಪಗೊಂಡಳು. ಬಾಣವನ್ನು ಬತ್ತಳಿಕೆಯಿಂದ ಸೆಳೆದುಕೊಂಡಳು. ಬಿಲ್ಲಿಗೆ ಹೂಡುತ್ತ, ನಾನು ಕೊಲ್ಲುವೆ, ಅದನ್ನು ಕೊಲ್ಲುವೆ ಎಂದುಕೊಂಡಳು. ಗುರಿ ನೋಡಿದುದೆ ತಡ– ಅದ್ಭುತ ಪವಾಡವನ್ನು ಕಂಡ ವೀರವಿಜ್ಞಾನಿಯಂತೆ ದಿಗ್ಭ್ರಾಂತಿಗೊಳಗಾಗಿ–ಕನ್ಯೆ ಬೆಚ್ಚಿ ಬಿದ್ದಳು!

ಮತ್ತಾವ ಮಾಯೆಯಂ ಮಥಿಸಿದೌ ನಿದ್ರಾಸಮುದ್ರದಲಿ

ಓ ಸ್ವಪ್ನ ಸುಂದರಿಯೆ, ನಿದ್ರಾ ಸಮುದ್ರದಲ್ಲಿ ಮತ್ತೆ ಯಾವ ಮಾಯೆಯನ್ನು ಮಥಿಸಿದೆ ? ಸೃಷ್ಟಿಸಲು ತೊಡಗಿದರೆ ನಿನ್ನ ಮಾಯಾ ಕುಂಚಕ್ಕೆ ಎದುರು ಯಾವುದು? ಸರಿಸಾಟಿ ಎಲ್ಲಿದೆ? ದೇವಾಲಯದ ಕಲ್ಲು ನೆಲದಲ್ಲಿ ಮಲಗಿರುವ ಸುಂದರ ಸ್ತ್ರೀಯು ಅದೇಕೆ ಹೀಗೆ ನಡುಗುತ್ತಿದ್ದಾಳೆ? ಅವಳು ಏನನ್ನು ನೋಡುತ್ತಿದ್ದಾಳೆ? ತೋರಿಸು.

ಕನಕಮೃಗದ ಮರಿಯೆಲ್ಲಿ? ಗಿರಿ ಗುಹೆಗಳೆಲ್ಲಿ? ಕಾಡೆಲ್ಲಿ? ಪೊದೆಗಳೆಲ್ಲಿ? ಅವಳ ಮುಂದೆ ಸ್ವರ್ಗ, ವೈಕುಂಠ, ಕೈಲಾಸ ಲೋಕಗಳ ತಲೆಮೆಟ್ಟಿ ಗಹಗಹಿಸಿ ನಗುವ ಒಂದು ಆಹ್ಲಾದಕರ ದೃಶ್ಯ ಕಂಗೊಳಿಸುತ್ತಿದೆ! ಮೇಘಗಳಿಂದ ಆವರಿಸಿದ ಸುನೀಲ

ಜಲದ ದೊಡ್ಡ ಅಲೆಗಳಿಂದ ಮಥಿಸಿ ಹೊಮ್ಮಿ ಬಂದ ಮುತ್ತಿನ ನೊರೆಗಳ ತಾಂಡವ ತರಂಗ ಅಟ್ಟಹಾಸ ಸಂಭ್ರಮದಿಂದ ಮತ್ತೇರಿದ ಸಮುದ್ರವು ಅನಂತ ವಿಸ್ತಾರದಲ್ಲಿ ಭವ್ಯವಾಗಿ ಗೋಚರಿಸುತ್ತಿದೆ!

ಗಗನದರ್ಪಣ ಒಡೆದು ಮುರಿದ ಒಂದು ಭಾಗ ಭೂಮಿಗೆ ಇಳಿಯುತ್ತ ದ್ರವವಾಯಿತೊ? ಭೂದೇವಿಯ ಮಂದಹಾಸವೇ ನೀರಾಯಿತೊ? ಸಾಗರವೆ ಸಂಕ್ಷಿಪ್ತ ವೇಷದಲ್ಲಿ ಮೆರೆಯುತ್ತಿದೆಯೊ? ಎಂದು ಶೋಭಿಸುವ ಆ ಸ್ಫಟಿಕ ಸಲಿಲ ವಿಸ್ತೀರ್ಣದಲ್ಲಿ ಜಲದೇವಿಯ ಎದೆಯಲ್ಲಿ ಹೊಳೆಯುವ ಹಸಿರು ಮಣಿಯಂತೆ, ನೀಲ ಮಧ್ಯದಲ್ಲಿ ಕೆತ್ತಿದ ಒಂದು ಪಚ್ಚೆಯ ರೀತಿ–ನಗೆಯ ಮುಗುಳನ್ನು ಆಲಿಂಗಿಸಿರುವ ಹೃದಯವನ್ನು ಹೋಲುವ ದ್ವೀಪವೊಂದು ಕಂಡಿತು. ಅದು ದೃಷ್ಟಿಗೆ ಮನೋಹರವಾಗಿ ಉದ್ಯಾನ ನೌಕೆಯಂತೆ ತೇಲಿತು.

ಆ ದ್ವೀಪನಾವೆಯನ್ನು ಬಳಸಿ ಅದರ ಸುತ್ತಲೂ ದೊಡ್ಡ ಆಕಾರದ, ದೊಡ್ಡ ಎಸಳುಗಳ ಹೊನ್ನತಾವರೆಗಳ ಸಮೂಹವೂ ಅದನ್ನು ಸೇವಿಸುವ ಪರಿವಾರದಂತೆ ಕಣ್ಣಿಗೆ ಕಂಗೊಳಿಸಿತು.

ಶರತ್ಕಾಲದ ಆಗಸರಂಗದಿಂದ ಇಳಿದು ಬಂದು ಭುವನ ಜೀವನ ಸುಖಕ್ಕೆ ಮನಸ್ಸು ಸೋತ ಬಿಳಿಯ ಮೋಡಗಳ ತುಂಡುಗಳೊ ಎಂಬಂತೆ ಕಾಣುತ್ತಿರುವ ಹಂಸಗಳು ಜಲಕ್ರೀಡೆಯ ಆಸಕ್ತಿಯಿಂದ ಅಲ್ಲಲ್ಲಿ ತೇಲಿ ರಂಜಿಸಿದವು!

ಅದು ದ್ವೀಪವೊ, ತೇಲುತ್ತಿರುವ ನಂದನವೊ ಎನ್ನುವಂತೆ ಪುಷ್ಪಗಳ ಸಮೂಹವು ಕೋಟಿ ವರ್ಣಗಳಿಂದ, ವಿವಿಧ ಪರಿಮಳಗಳಿಂದ–ಕಾಮನ ಬಿಲ್ಲನ್ನು ಬಿತ್ತಿ ಬೆಳೆ ತೆಗೆದಂತೆ ರಮಣೀಯವಾಗಿತ್ತು. ಅದು ತಂಗಾಳಿಗೆ ಅಲ್ಲೋಲ ಕಲ್ಲೋಲವಾಗಿ ಬಾಗಿ ತಲೆದೂಗುತ್ತಿತ್ತು.

ಆ ಎಲ್ಲ ಸೊಬಗಿಗೆ ಸಿರಿಮುಡಿಯಂತೆ ದೂರ ದಿಗಂತದ ಗಿರಿಯ ಶಿರದಲ್ಲಿ, ಆಹಾ! ಹೊಂಬಿಸಿಲಿನ ಎಳ ನೇಸರನು ಮೈದೋರಿದನು. ನೋಟ ಸ್ವರ್ಗಮಯವಾಯಿತು! ಮರಿಜಿಂಕೆ ಬಿರಿದು ಹೊಂಬೆಳಕಾಯಿತೆ? ಮದ್ದು ಇಡದ ಮಣ್ಣು ಕುಡಿಕೆ ಕಿಡಿ ತಗುಲಿ ಸಿಡಿಯಲು ರಾತ್ರಿಯ ಗಗನ ಮಂಡಲದಲ್ಲಿ ವರ್ಣಮಯ ನಕ್ಷತ್ರ ಮಳೆಗರೆಯಿತೆ? ಎಂದು ತರುಣಿಯು ಅಚ್ಚರಿಯ ಕಣ್ಣುಗಳಿಂದ, ಎವೆ ಬಡಿಯದೆ ನೋಡುತ್ತಿದ್ದಳು. ಹಾಗೆ ನೋಡುವಾಗ ಇನ್ನೊಂದು ಅದ್ಭುತವನ್ನು ಅಲ್ಲಿ ಕಂಡಳು.

ಪುಷ್ಪರಂಗದಲ್ಲಿ ಮೋಹನಾಕೃತಿಯ ಮಾನವಮೂರ್ತಿ

ತೇಲುವ ಆ ದ್ವೀಪ ಮಧ್ಯದ ಪುಷ್ಪರಂಗದಲ್ಲಿ ದೇವವಂದಿತ ಮೋಹನಾಕೃತಿಯ ಬಂಗಾರ ಬಣ್ಣದಲ್ಲಿ ಮಿಂದ ಮಾನವಮೂರ್ತಿಯನ್ನು ಕಂಡಳು. ಅವನಾರು?

ಕನ್ಯೆ ಅವನನ್ನು ಕಾಣುತ್ತ ಎರಕ ಹೊಯ್ದು ಮೂಡಿಸಿದಂತೆ, ಕುಂಚದ ವರ್ಣ ಕಲಾಕರ್ಮ ಚಿತ್ರಸ್ಥವಾದಂತೆ ನಿಶ್ಚಲವಾಗಿ ನಿಂತಳು. ಬಾಣ ಸಹಿತವಾಗಿ ಕೈ ಬಿಲ್ಲು ಜಾರಿ ನೆಲಕ್ಕೆ ಉರುಳಿತು. ಆ ಗಂಡೆದೆಯ ಹೃದಯದಲ್ಲಿ ತಾನು ಹೆಣ್ಣು ಎಂಬ ಲಜ್ಜೆಯ ಲಹರಿ ಮೊತ್ತ ಮೊದಲಿಗೆ ಸ್ಫುರಿಸಿತು. ಒಡನೊಡನೆ ಸೌಂದರ್ಯದ ಬಾಯಾರಿಕೆಯಿಂದ ಕೋಮಲತೆ ಕುಡಿಯೊಡೆಯಿತು.

ತಾನು ತಿಳಿಯದ ಯಾವುದನ್ನೊ ಬಯಸಿ, ಅವಳ ಪ್ರೇಮಲತೆ ಬಾಯಾರಿ ಕಾತರಿಸಿತು. ಲಲನೆಯು ಕನಸಿನಲ್ಲಿಯ ತನ್ನ ಅವಸ್ಥೆಗೆ ತಾನೇ ನಾಚಿದಳು. ಮತ್ತೊಮ್ಮೆ ತನ್ನ ವ್ಯರ್ಥ ಪೌರುಷವನ್ನು ನೋಡುತ್ತ ಕೋಪಗೊಂಡಳು! ಹೀಗೆ ಹೋರಾಡುತ್ತಿರಲು ಬೇರೊಂದು ಆಯಿತು:

ಪೂರ್ವದಿಕ್ಕಿನ ಬೆಟ್ಟದ ಮುಡಿಯ ಸುವರ್ಣ ಮಣಿಯಂತೆ ತಳತಳಿಸುತ್ತಿದ್ದ ಉದಯ ಸೂರ್ಯನ ಬಿಂಬದಿಂದ ಮೂಡಿ, ಉತ್ತಮ ಎಳೆ ಬಿಸಿಲಿನ ಸೊಬಗಿನಿಂದ ಹೊರ ಬಂದು, ಗಾಳಿಯ ಮಾರ್ಗದಲ್ಲಿ ಮೃದು ಮಧುರವಾಗಿ ಉಲ್ಲಾಸ ಸಂಭ್ರಮಗಳಿಂದ ಮಧು ಮದನರು (ವಸಂತ ಋತು ಮತ್ತು ಮನ್ಮಥ) ಅಮರ ತೇಜಸ್ಸಿನಿಂದ ತೇಲಿ ಬಂದರು!

ಆ ಪವಾಡದ ಮೇಲಿನ ಪವಾಡಕ್ಕೆ ಎದೆ ಬೆಚ್ಚಿ ಅಂಗನೆಯು ನಿದ್ದೆಯಿಂದ ಎಚ್ಚತ್ತು, ಕಣ್ಣು ತೆರೆದಳು. ಬಿಗಿದ ಹೊಂಗನಸಿನ ಆಲಿಂಗನದ ಬಂಧನವು ಒಡೆಯಿತು. ಅವಳು ವಿಸ್ಮಯದ ಮಂದಸ್ಮಿತದಲ್ಲಿ ಶಿವನನ್ನು ನೆನೆದಳು. ಗುಡಿಯ ವಿಗ್ರಹಕ್ಕೆ ದೃಢ ಭಕ್ತಿಯಿಂದ ಶಿರಬಾಗಿ ಕೈ ಮುಗಿದಳು. ಆಲಯದ ಎದುರಿನಲ್ಲಿ, ಉಷೆಯ ನಗೆ ನಸುಕಿನಲ್ಲಿ ಮನೋಹರವಾಗಿ ಕಂಗೊಳಿಸುತ್ತಿರುವ ಕೊಳದ ತೀರಕ್ಕೆ ನಡೆದಳು.

ಆ ದಿನ ಮೂಡಲ ಪ್ರದೇಶದಲ್ಲಿ ಪೂರ್ವವಧು ಕೊಂಚ ಕಣ್ಣು ತೆರೆದಂತೆ ಕೆಂಗಾಂತಿ ಚಿಗುರಿತು. ಅವಳ ಹಣೆಯಲ್ಲಿ ತಾರೆಯೊಂದು ವಜ್ರದ ಕಿಡಿಯಂತೆ ಕಂಗೊಳಿಸುತ್ತಿತ್ತು. ರಾತ್ರಿ ರತಿಯು ತನ್ನ ಆಯುಸ್ಸು ಕಳೆದು ಹೋಗುತ್ತಿರುವುದನ್ನು ನೆನೆದು ನಡುಗಿದಳು. ಇರುಳಿನ ನಿದ್ದೆಯಿಂದ ಜಗತ್ತು ಎಚ್ಚರಗೊಳ್ಳುವ ಆ ಸಮಯ ಶಾಂತಿಯಿಂದ, ಶೈತ್ಯದಿಂದ, ನಾದಗರ್ಭಿತವಾದ ತುಂಬು ಮೌನದಿಂದ, ಧ್ಯಾನಮಯ ಗಾಂಭೀರ್ಯದಿಂದ ಶೋಭಿಸಿತು.

ಕಾಂತಿಯನ್ನು ಬೀರುವಾಗ ಆಗಸದಲ್ಲಿ ತಿಳಿಕೆಂಪು, ನಸುಗೆಂಪು, ಹೂಗೆಂಪು, ಕಡುಗೆಂಪು, ಹಳದಿ, ಕುಂಕುಮ, ಪೀತಕನಕ, ಚಂದನನೀಲ ವರ್ಣೋಪ ವರ್ಣಗಳು ಮೂಡಿ ಬಂದವು. ಅವು ನೊರೆಗುಳ್ಳೆಗಳಂತಹ ಜ್ವಾಲೆಯಂತೆ ಕೆಂಪಾದ ಮೇಘ ಮಾಲೆಗಳಾಗಿ ವಿವಿಧ ವಿನ್ಯಾಸದಲ್ಲಿ ಸಾಲು ಸಾಲುಗಳಾಗಿ ಹೊರಹೊಮ್ಮಿದವು. ಅದು

ವಿಶಾಲವಾದ ರಾತ್ರಿಯ ಪಾತ್ರೆಯಂಚಿನಲ್ಲಿ ಹಗಲೆಂಬುವುದು ತಕಪಕನೆ ಕುದಿದೆದ್ದಿತೊ ಎನ್ನುವಂತಿತ್ತು! ಆ ಸುಂದರವಾದ ದಿನೋದಯನ ದಿವ್ಯ ಪ್ರಭಾತ ಕಾವ್ಯವು ಕಣ್ಣಿಗೆ ರಂಜಿಸಿತು!

ಚಿತ್ರಾಂಗದೆಯ ಮನಕ್ಕೆ ಹಸುರು ಕಡಲಿನ ಹಿರಿದಾದ ತೆರೆಗಳಂತೆ ಸ್ಪರ್ಧೆಯಲ್ಲಿ ಎದ್ದು ಅಲೆ ಅಲೆಗಳಾಗಿ ಪೂರ್ವ ದಿಗಂತವನ್ನು ತಬ್ಬಿ ನಾನಾ ದಿಕ್ಕಿಗೆ ಹಬ್ಬಿದ ವನ ಶ್ರೇಣಿಯು ಚೆಲುವಾಯಿತು. ಅವಳಿಗೆ ಅದು ತನ್ನೆದೆಯಲ್ಲಿ ಆಗ ತಾನೆ ಅರಳಿದ ನವ ಯೌವನ ಪ್ರಸಾದದಂತೆ ವಿಸ್ತಾರವಾಗಿ ಆಹ್ಲಾದಕರವಾಗಿತ್ತು.

ರಮ್ಯ ಅರುಣಜ್ಯೋತಿಯು ಕೊಳದ ಜಲದಲ್ಲಿ ಪ್ರತಿಬಿಂಬಿಸಿ ನೀರು ಉರಿಯುವ ರೀತಿ ಹೊಳೆಯುತ್ತಿರಲು ನೈದಿಲೆ ಬಳ್ಳಿ ಕುಮುದಿನಿಯ ಮುಖ ಬಾಡಿತು. ಕಮಲ ಪುಷ್ಪದಲ್ಲಿ ನಗೆ ಮೂಡಿತು. ಪಕ್ಷಿಗಳನ್ನು ಎಚ್ಚರಿಸುವಂತೆ ಗಾಳಿ ತೀಡಿತು. ಆಗ ಮಡಿವಾಳದ ಮಧುರವಾದ ಸಿಳ್ಳು, ಕಾಜಾಣದ ಇಂಚರ, ಕೋಗಿಲೆಯ ನಿಡುಸರ (ದೀರ್ಘಧ್ವನಿ), ಗಿಳಿವಿಂಡುಗಳ ಗಳಹು, ತರತರಹದ ಪಕ್ಷಿಗಳ ವಿವಿಧ ಕುಕಿಲುಗಳ ಗಡಿಬಿಡಿಯ ತುಮುಲವು ಸುಮಧುರವಾಗಿ ಚೈತ್ರ ಪ್ರಭಾತವನ್ನು ದಟ್ಟ ಧ್ವನಿಯಾಗಿಸಿದವು.

ವನವನಿತೆಯು ತನ್ನ ಸ್ನೇಹದ ವಸಂತೋದಯದ ಆನಂದದಿಂದ ಹರ್ಷದ ಕಣ್ಣೀರನ್ನು ಸುರಿಸುವಂತೆ, ಮರಗಳ ಕುರುಚಲು ಗಿಡ (ಗುಲ್ಮ)ಗಳ ಎಲೆಗಳಿಂದ ಹನಿಗಳು ಉದುರಿದವು. ಹೂ ಸಮೂಹವು ದಳಗಳನ್ನು ಅರಳಿಸಿ ನರುಗಂಪಿನಿಂದ ನಲಿದವು. ತುಂಬಿ ಭ್ರಮರಗಳು ಹಿಂಡು ಹಿಂಡಾಗಿ ಬಂದು ಹೂವಿನ ಒಡಲ ಹೂದೂಳಿಯಲ್ಲಿ ಹೊಂಬಣ್ಣಗೊಂಡವು. ಹೂವಿಂದ ಹೂವಿಗೆ ಹಾರಿ ಮಕರಂದ ಭಿಕ್ಷೆಯನ್ನು ಬೇಡಿದವು. ಅವು ಕುಟಜ (ಬೆಟ್ಟ ಮಲ್ಲಿಗೆ)ಗಳಲ್ಲಿ ನಿತ್ಯ ಯಾತ್ರೆಯ ಓಂಕಾರವನ್ನು ಝೇಂಕರಿಸಿದವು.

ನಾರಿಯ ಆಕೃತಿಯಂತೆ ಕಾಣುವ ಉಷಾ ಶ್ರೀಕಾಂತೆಯು ವೈವಿಧ್ಯಮಯ ಮನುಜ ಜೀವನ ರಸದ ಬಯಕೆಯಿಂದ ಭೂಮಿಯ ವಿಹಾರಕ್ಕೆ ಬಂದಳೊ ಎನ್ನಿಸುವಂತೆ- ಮಣಿಪುರ ಅರಸ ಚಿತ್ರವಾಹನನ ಮಗಳು ಚಿತ್ರಾಂಗಿಯು ನಡೆಯುತ್ತಿದ್ದಳು. ಅವಳು ಕೆರೆಯ ಅಂಚಿನಲ್ಲಿ ನಳನಳಿಸಿ ಬೆಳೆದ ಎಳೆ ಹಸುರು ಹುಲ್ಲಿನ ಮೇಲೆ ಮೆಲ್ಲನೆ ನಡೆದಳು. ಅದು ಎಳೆ ಬಿಸಿಲಿನಲ್ಲಿ ಮುತ್ತು ಚೆಲ್ಲಿದ ರೀತಿ ಮೂಡಿದ ಮಿರುಗುವ ಇಬ್ಬನಿಗಳನ್ನು ಹೂವಿನಂತಹ ಪಾದಗಳಿಂದ ಸವರಿ, ಭೂಮಿಯ ಹೃದಯ ನಲಿದು ಹಿಗ್ಗುವ ರೀತಿ ಮುತ್ತಿಟ್ಟಂತಿತ್ತು!

ಆ ಷೋಡಶ ಕಳಾಪೂರ್ಣಳಾದ ಹದಿನಾರು ವಯಸ್ಸಿನ ಯುವತಿ ಕಾಡಿನ ಮಾರ್ಗದಲ್ಲಿ ವೀರ ವಯ್ಯಾರದಲ್ಲಿ ಸಾಗುತ್ತಿದ್ದಳು. ಅವಳಿಗೆ ಆ ಹಾದಿಯ ಗಿಡಮರಗಳು

ಹೂವಿನ ಮಳೆಗರೆದವು. ಹೂಬಳ್ಳಿಗಳು ಉದ್ದಕ್ಕೆ ಚಾಚಿಕೊಂಡಿರುವ ಕುಡಿಗಳಿಂದ ಕೋಮಲೆಯ ನುಣುಪಾದ ಕೆನ್ನೆಯ ಮೇಲೆ ಪ್ರೀತಿಯಿಂದ ಕೈಯಾಡಿಸಿದವು. ಪಕ್ಷಿಗಳು ಏಕ ಕಂಠದಿಂದ ಜಯದನಿ ಮಾಡುತ್ತ, ರೆಕ್ಕೆ ಗರಿಗೆದರಿ ಉತ್ಸಾಹದಿಂದ ಹಾರಾಡಿದವು!

ಪದ್ಮಾಸನ ಸ್ತಿಮಿತ ಧ್ಯಾನಸ್ಥ ಮಾನವ ಪ್ರತಿಚ್ಛಾಯೆ

ಹೀಗೆ ಉದಯ ಸಮಯದ ಸಂಪತ್ತನ್ನು ಸವಿಯುತ್ತಿರುವ ಅಂಗನೆ ಆಶ್ಚರ್ಯಕ್ಕೊಳಗಾದ ದೃಷ್ಟಿಯನ್ನು ದೂರಕ್ಕೆ ಹರಿಸುತ್ತ, ತಟ್ಟನೆ ನಿಂತಳು. ಅವಳಿಗೆ ಅಭಿಮುಖವಾಗಿ ಎದುರು ದಡದ ಒಂದು ಬಂಡೆಯ ಮೇಲೆ, ನೆರಳಿನ ಮುಂಭಾಗದಲ್ಲಿ ಪ್ರತಿಫಲಿಸುವ ಅಂಬರಕ್ಕೆ ಎದುರಾಗಿ–ಪದ್ಮಾಸನದಲ್ಲಿ ಧ್ಯಾನಸ್ಥವಾಗಿ ಕುಳಿತ ಮಾನವ ಪ್ರತಿಚ್ಛಾಯೆಯು ಕಡೆದು ಮೂಡಿಸಿದಂತೆ ಕಂಡಿತು!

ಯುವತಿ ಮರಮರಳಿ ನೋಡುತ್ತಿದ್ದಳು. ಅವಳ ಹೃದಯ ಅರಳಿ ಅದೇನನ್ನೊ ಬೇಡುತ್ತಿತ್ತು. ಉದ್ವೇಗಕ್ಕೆ ಒಳಗಾದ ಅವಳು ತನ್ನ ಚಿತ್ತವನ್ನು ಏಕೊ ಕಾಡುತ್ತಿದ್ದಳು. ನೆನಪು ಹೊಳೆಯಿತು: ಕನಸು ದೇವಿಯ ಪುರುಷ ಹರುಷ ಮೂರ್ತಿಯಿವನೆ?

ಕಾಷಾಯ ಧಾರಿಯೂ, ಪಾವನ ಜಟಾಧಾರಿಯೂ ಆಗಿ ಮನ್ಮಥನಿಗೆ ಸಮನಾಗಿ, ಫಾಲಾಕ್ಷ ಸದೃಶನಾಗಿದ್ದಾನೆ. ದೇವ ವಂದಿತ ಮೋಹನಾಕೃತಿಯ ನರನಿವನೆ? ಹೊಳೆವ ಕೆಂಬಣ್ಣದಲ್ಲಿ ಮಿಂದಿರುವ ಇವನು ಅವನೆಯೆ?

ತಪಸ್ಸಿನಲ್ಲಿ ಇರುವವನಾಗಿ, ತಾಪಸನ ತೇಜಸ್ಸೆ ಸೌಂದರ್ಯ ಶರೀರವನ್ನು ತಾಳಿ ಇಳೆಗೆ ಬಂದು ಆ ಮೋಹನಾಂಗಿಯನ್ನು ಮೋಹಿಸಿ ಅಳುಕಿಸಿತ್ತು. ಕನ್ಯೆ ಚಿತ್ರಾಂಗಿಯ ಎಳೆ ಹೃದಯದಲ್ಲಿ ಪ್ರಣಯದ ಮೊದಲ ಆಕರ್ಷಣೆ ಮೊಳೆಯಿತು!

ಪಡಿನೆಳಲಿನಿಂದೆ ನಿರುತಕ್ಕೆ ದಿಟ್ಟಿಯಟ್ಟಲ್

ಚಿತ್ರಾಂಗಿಯು ಪ್ರತಿಬಿಂಬದಿಂದ ಸತ್ಯವಾದುದಕ್ಕೆ ದೃಷ್ಟಿ ಹರಿಸಿದಳು. ಆಗ ಅಲ್ಲಿ ಬನವೇ ಹಿನ್ನೆಲೆಯಾಗಿರಲು, ಅರ್ಧ ಮುಳುಗಿ ಮಗ್ಗುಲಿಕ್ಕಿದ ಆನೆಯ ರೀತಿಯಲ್ಲಿ ಕೆರೆಯ ದಡದಲ್ಲಿ ನೀರಿನಿಂದೆದ್ದ ಆನೆಯ ಶಿರದಂತೆ–ತಪೋವ್ಯಕ್ತಿಯ ಪವಿತ್ರ ಆಕೃತಿ ಸ್ಪಷ್ಟವಾಗಿ ಕಾಣಿಸಿತು!

ಚಿಗುರಿದ ಪ್ರಣಯಾನುರಾಗವು ಕುಡಿಯೊಡೆದು ಹಬ್ಬುವಂತೆ, ಯೌವನ ನವೀನ ಮಾವಿನ ಪುರದ ಪವಿತ್ರ ಸನ್ನಿಧಿಗೆ ಲಲನೆಯು ನಿಧಾನವಾಗಿ ನಡೆದಳು. ವೈರಾಗಿಯಿದ್ದ ದಡದ ಎಡೆಗೆ ಕುತೂಹಲ ಭರಿತಳಾಗಿ ಸಾಗಿದಳು. ವ್ಯಾಮೋಹದಿಂದ ಅವನ ಬಳಿಗೆ ಹೋಗಲು, ಅವಳ ಚಲನೆ ಚಂಚಲಗೊಂಡಿತು. ನಡಿಗೆ ತಡವರಿಸಿತು. ಕಣ್ಣು ಎವೆಯಿಕ್ಕದಂತಾಯಿತು. ಎದೆ ಗದಗದಿಸಿ, ಮೈ ರೋಮಾಂಚನಗೊಂಡಿತು.

ಮಣಿಪುರದ ರಾಜನ ಮಗಳು ತನ್ನ ವೇಷದ ಆವೇಷದಲ್ಲಿ, ವಿದ್ಯೆಯಲ್ಲಿ, ಬಿಲ್ಲ ಪ್ರಾವೀಣ್ಯದಲ್ಲಿ, ವೀರತನದಲ್ಲಿ, ಕೆಚ್ಚೆದೆಯ ಕಾರ್ಯದಲ್ಲಿ, ಧೀರ ನಡೆ ನುಡಿಯಲ್ಲಿ ಲಜ್ಜೆ ಅರಿಯದವಳಾಗಿದ್ದಳು. ಅಂತಹವಳು ಮೊಟ್ಟ ಮೊದಲಿಗೆ ಅಬಲತಾ ಭಾವದಿಂದ, ಹಾ! ಹೆಣ್ತನದ ತಿಳಿವಳಿಕೆಯನ್ನು ಅನುಭವಿಸಿ ನಿಂತಳು!

ಓ ಮಾಯೆ, ರತಿಯೆ, ಓ ಕಲಾಸುಂದರಿಯೆ ನೀನು ನಿರ್ಲಿಪ್ತ ನಿಶ್ಚಿಂತ ನಿರ್ಗುಣ ಬ್ರಹ್ಮದಲ್ಲಿ ಶಕ್ತಿಯನ್ನು ಸೃಷ್ಟಿಯ ಆಸಕ್ತಿಯನ್ನು ಕೆರಳಿಸಿದ ಮೋಹಿನಿ. ನೀನು ಪ್ರೇಮ ಸೌಂದರ್ಯ ರೂಪದಿಂದ ಸುಳಿದು ವಿಶ್ವವನ್ನು ಶುಷ್ಕತಾ ಶೂನ್ಯಕ್ಕೆ ಬಿಡದಂತೆ ಕಾಪಾಡುವ ರಸ ಚೇತನೆ. ನಿನ್ನ ಚೆಲುವಾದ ಬಂಧನಾಲಿಂಗನಕ್ಕೆ ಸಿಕ್ಕಿ ಶಶಿ ಸೂರ್ಯ ಗ್ರಹಗೋಷ್ಠಿ ತಾರೆಗಳು ನಡೆಯುತ್ತಿವೆ. ಹಾಗಿರಲು ಹೆಣ್ಣೋರ್ವಳು ಅದರಂತೆಯೇ ಆಗುವುದು ಸೋಜಿಗವೆ ಹೇಳು?

ಚೈತ್ರ ಮಧುಮಾಸದ ಬೆಳಗಿನ ಹೊಳೆಯು ಕಾಡಿನ ಹೃದಯದಲ್ಲಿ ಜೀವ ಲಕ್ಷಣವಾಗಿ ಬೇರು ಬೇರುಗಳಲ್ಲಿ, ಕೊಂಬೆಯಲ್ಲಿ, ಎಲೆ ಎಲೆಗಳ ಅಂತರಂಗದಲ್ಲಿ, ಮುದ್ದು ಮೊಗ್ಗಿನಲ್ಲಿ, ಹೂವಿನಲ್ಲಿ, ಬಳ್ಳಿಯಲ್ಲಿ ತರು ಶರೀರದ ನಾಡಿ ನಾಡಿಯಲ್ಲಿ ಹರಿಯುವುದು. ಅದು ಪ್ರಾಣಿ ಪಕ್ಷಿಗಳ ಪ್ರಾಣ ಪಾತ್ರದಲ್ಲಿ, ತೃಣ ತೃಣಗಳ ಜೀವನ ಪಾತಿಗಳಲ್ಲಿ ತುಂಬಿ ಹರಿಯುವ ಸ್ಫೂರ್ತಿ ಮಾಧುರ್ಯ ಝರಿಣಿ. ಅದರಂತೆ ಚಿತ್ರಾಂಗದೆಯ ಜೀವ ಪರ್ವತದ ನೆತ್ತಿಯಿಂದ ಧುಮುಕಿ ಹೃದಯದ ಗವಿಯಲ್ಲಿ ಪ್ರಣಯ ಪ್ರಪಂಚವನ್ನು ಮಥಿಸಿತು! ಲಲನೆಯು ಚಿತ್ರ ಬರೆದಂತೆ ಸೋತು ನಿಂತಳು!

ಹಕ್ಕಿಗಳು ಹಾಡಿದವು; ತುಂಬಿಗಳು ಝೇಂಕರಿಸಿದವು; ತಂಗಾಳಿ ಬೀಸಿತು. ಹೂವುಗಳು ಕಂಪನ್ನು ಹರಡಿದುವು. ಕಾಡು ಕಳಕಳಿಸಿ ನಗುತ್ತಲಿತ್ತು. ಸರೋವರವು ಕನ್ನಡಿಯಂತೆ ವಿಸ್ತಾರವಾಗಿ ಹಬ್ಬಿತ್ತು. ಮುಗಿಲು ತಿಳಿಯಾದ ಆಗಸದಿಂದ ಮೆಲ್ಲನೆ ನಿಧಾನವಾಗಿ ಚಲಿಸುತ್ತ, ಸರೋವರದ ಎದೆಯಲ್ಲಿ ನೆರಳನ್ನು ಚೆಲ್ಲಿತ್ತು. ಇಳೆಯ ಎದೆಯ ಮೇಲೆ ಹೊಂಬಿಸಿಲು ವಿಸ್ತಾರವಾಗಿ ಹರಡಿಕೊಂಡಿತ್ತು.

ಕಣ್ತೆರೆದನೊಯ್ಯನೆಯೆ ಧ್ಯಾನದಿಂದಿಳಿತಂದು ದಿವ್ಯ ತೇಜಸ್ವಿ

ಅಲ್ಲಿ ಪ್ರತಿಯೊಂದು ಕ್ಷಣವು ಯುಗವಾಗಿ ಕಳೆಯುತ್ತಿತ್ತು. ಹೊತ್ತೇರಿದಂತೆ ಬಿಸಿಲು ಬೆಳೆಯುತ್ತಿತ್ತು. ಹೀಗಿರಲು ದಿವ್ಯ ತೇಜಸ್ವಿಯು ಧ್ಯಾನದಿಂದ ಇಳಿದು ಬಂದಂತೆ ನಿಧಾನವಾಗಿ ಕಣ್ಣು ತೆರೆದನು. ಮುಂದೆ ನಿಂತಿದ್ದ ತರುಣ ವೇಷದ ತರುಣಿಯನ್ನು ಕಂಡು ತುಸು ಆಶ್ಚರ್ಯಕ್ಕೊಳಗಾದನು.

ಅವನ ಎರಡು ಕಣ್ಣುಗಳು ಎರಡು ಸರೋವರಗಳಂತೆ ಶೋಭಿಸುತ್ತಿರಲು, ಹೆಣ್ಣು ಅಲ್ಲಿ ತೇಲಿ ಮುಳುಗಿ, ಮುಳುಗೇಳುತ್ತ ಉಸಿರು ಕಟ್ಟಿದಂತೆ ತೇಲಾಡಿದಳು.

ತಪಸ್ವಿಯ ಮುಖದಲ್ಲಿ ನಗೆಯ ಮೊಗ್ಗು ಮೂಡಿ ಮೆಲ್ಲನೆ ಅರಳಿತು. ಅವನು ಮಧುರ ಗಂಭೀರ ವಚನದಿಂದ ಹೀಗೆ ನುಡಿದನು:

'ಎಲೆ ತರುಣ ವೀರನೇ, ನೀನು ಯಾರು? ಈ ಕಾಡಿನ ಮಧ್ಯದಲ್ಲಿ ಇಷ್ಟು ಮುಂಬೆಳಗಿನಲ್ಲಿ ಯಾವ ಕೆಲಸದ ನಿಮಿತ್ತ ತಿರುಗುತ್ತಿರುವೆ? ಈ ಚೈತ್ರ ಪ್ರಭಾತ ರಮ್ಯತೆಯ ಆಸ್ವಾದನೆಯೊ? ಮೃಗಗಳ ಬೇಟೆಯ ವಿನೋದವೊ? ನಿನಗೆ ಯಾವುದರಲ್ಲಿ ಆಸಕ್ತಿಯೆಂದು ಹೇಳು? ನುಡಿ, ಅಂಜದಿರು; ನಾವು ಮುನಿಯುವ ಮುನಿ ಶ್ರೇಷ್ಠರಲ್ಲ!'

'ಅಂಜದಿರು' ಎನ್ನುವ ನುಡಿ ಸೂಸಲು, ವೀರನಾರಿಯ ಮನಸ್ಸಿನಲ್ಲಿ ಬಿಂಕದ ಉರಿ ಭುಗಿಲ್ಲೆಂದು ಉಕ್ಕೇರಿತು. ಎದೆಯ ಹುತ್ತದಲ್ಲಿ ಅದುವರೆಗೆ ಮೋಹ ಮಂತ್ರದಿಂದ ಮುಗ್ಧವಾಗಿದ್ದ ಅವಳಲ್ಲಿಯ ಪುರುಷತೆ ತಕ್ಷಣ ಹೆಡೆಯೆತ್ತಿತು. ಪ್ರತಿ ಹಿಂಸೆಗೆ ತಯಾರಾಗಿ ಉದ್ಧಟತನದಿಂದ ಕೋಪಗೊಂಡು ನಿಂತಿತು.

ಅವಳು ನಮಸ್ಕಾರವನ್ನು, ಪೂಜ್ಯ ಬುದ್ಧಿಯನ್ನು, ತಾನು ಹೇಳಬೇಕೆಂದಿದ್ದ ಸವಿ ನುಡಿಗಳನ್ನು ಮರೆತಳು. ನಯ ವಿನಯ ವಿಧೇಯ ಭಾವವನ್ನು ತೊರೆದಳು. ಪ್ರತಿ ಸ್ಪರ್ಧಿಯು ವೀರಲಾಪ ಮಾಡುವಂತೆ, ಕಾಡಿನ ಹೆಂಗಸಿನಂತೆ ಒರಟಾಗಿ ಹೀಗೆ ಹೇಳಿದಳು :

'ನಾವು ಅಂಜುವವರಲ್ಲ! ಭಯವೆಂಬುದನ್ನು ನಾವು ಕಂಡಿಲ್ಲ, ಕೇಳಿಲ್ಲ! ಅಂಜುಬುರುಕರ ರಕ್ಷಣೆಯೇ ನಮ್ಮ ಕುಲಕರ್ಮ. ವಿಷದಂತಹ ಲೋಕ ಕಂಟಕರ ಸಂಹಾರವೇ ನಾವು ಒಲಿದ ಕರ್ತವ್ಯ! ಅಂಜದಿರು! ಅಂಜದಿರು ಎಂದು ಹೇಳಲು, ಎಲೆ ತಪಸ್ವಿ, ನೀನು ಯಾರು?'

ಅದನ್ನು ಕೇಳಿದ ಋಷಿ ಮುನಿಯು, ದಂತಪಂಕ್ತಿಯ ಕಾಂತಿಯೊಡನೆ ಕಿರುನಗೆ ಬೀರಿದನು. ಕಣ್ಣು ಮಿಟುಕಿಸದ ನೇರ ದೃಷ್ಟಿಯನ್ನು ಬಿಂಕದ ಅಂಗನೆಯ ಕಡೆ ಹರಿಸುತ್ತ, ಕೊಂಕುನುಡಿಯ ಬಾಣವನ್ನು ಪ್ರಯೋಗಿಸಿದನು :

'ವೀರಕ್ಕೆ ವಿನಯವೆನ್ನುವುದು ಮುಡಿಯ ಮಾಣಿಕ್ಯ; ವಿನಯವಿಲ್ಲದಿರುವುದೇ ಕುಸಂಸ್ಕೃತಿ! ಬೇಡರ ರೀತಿ ಮಾತು ಮಾತಿಗೆ ಬೀಗುತ್ತ, ಅಹಂಭಾವದಿಂದ ಕೆರಳಿದರೆ ಅದು ಕ್ಷಾತ್ರವಲ್ಲ, ಧೂರ್ತ ಲಕ್ಷಣ! ತರುಣ ವೀರನೆ, 'ಎಲೆ ತಪಸ್ವಿ, ನೀನು ಯಾರು?' ಎಂದು ನನ್ನನ್ನು ಮೊದಲಿಸಿ ಪ್ರಶ್ನಿಸಿದೆಯಲ್ಲವೆ? ಅದನ್ನು ಹೇಳುತ್ತೇನೆ ಕೇಳಿಸಿಕೊ :

'ಅಲೆದಾಡುವ ಬಡ ಜೋಗಿಗಳಾದ ನಾವು ಸಾಮಾನ್ಯ ಮನುಷ್ಯರೆಂಬುದು ನಿಜ! ನಾವು ನೆಲೆಯಿಲ್ಲದೆ ಅಲೆದಲೆದು ಗೆಡ್ಡೆಗೆಣಸುಗಳನ್ನು ತಿಂದು, ಮರಗಳ ಆಸರೆಯೆ ನಿವಾಸವಾಗಿರುವವರು. ಬರಿನೆಲದ ಹಾಸಿನಲ್ಲಿ ಬಿದ್ದೆದ್ದು ಬೆಳೆಯುವ ನಾವು

ಲೋಗರೆಂಬುದು ದಿಟ! ನಿಮ್ಮಂತೆ ಯೋಗ್ಯತೆ, ನಯ, ನುಣ್ಪು, ಸಿರಿ, ಪೆಂಪು ಇಲ್ಲದ ನಾವು ಸಾಮಾನ್ಯರೆಂಬುದು ದಿಟ!

'ನೀವು ಯೋಗ್ಯರೆಂಬುದು ಸತ್ಯ! –ಸಾತ್ವಿಕನೆ, ಮುನಿಯದಿರು, ತಾಳ್ಮೆಯಲ್ಲಿಯೆ ಬಾಳ್ಮೆಯಿದೆ. (ನಿನ್ನ ಮುಖದಲ್ಲಿ ಕೆಂಪು ಸುಳಿಯಲು, ಅದು ಚೆಲುವಾಗಿ ಹೊಮ್ಮುತ್ತಿದೆ!) ನಾನಾರೆ?

'ಕುರುವಂಶದ ಹೆಸರಿನ ಒಂದು ಅರಸು ಮನೆತನವಿದೆ. ತಿಳಿದಿರುವೆ ಏನು? – ಸುಪ್ರಸಿದ್ಧ ನೀನು. ನಿನಗೆ ಆ ಅಪ್ರಸಿದ್ಧರ ಅರಿವೆಲ್ಲಿ? ಆ ವಂಶದ ಪಾಂಡು ರಾಜನಿಗೆ ಪಂಚ ಪಾಂಡವರು ಜನಿಸಿದರು. ಈ ನೀರಸ ಕಥಾಲಾಪ ನಿನಗೆ ಬೇಸರ! ಯುಧಿಷ್ಠಿರ ಭೀಮರೆಂಬುವರನ್ನು ಕೇಳಿ ತಿಳಿದಿರುವೆಯ? ನಕುಲ ಸಹದೇವರು? ಪಾರ್ಥ ಎಂಬಾತನನ್ನು? ಶ್ರೀಕೃಷ್ಣ ಎಂಬ ಓರ್ವ ಗೊಲ್ಲನನ್ನು? ಆ ಅಖ್ಯಾತರು, ಅಲ್ಪರು, ಅಜ್ಞಾತರು ಆದ ಅವರನ್ನು ನೀನು ತಿಳಿಯೆ!

'ನೀನು ಜಗದ್ವಿಖ್ಯಾತ ವನಚರ! ನಿನಗೆ ಹೇಗೆ ಅಜ್ಞಾತರ ಇತಿಹಾಸ ತಿಳಿಯುತ್ತದೆ? ಇರಲಿ; ನಾನು ಯುಧಿಷ್ಠಿರನಲ್ಲ, ಮತ್ತು ಭಿಮನೂ ಅಲ್ಲ; ನಕುಲ ಸಹದೇವರೊಳಗೆ ಒಬ್ಬಾತನೂ ಅಲ್ಲ; ಹಾಗೂ ಕೃಷ್ಣನೆಂಬ ಗೋಪಾಲಕನೂ ಅಲ್ಲ. ಆದರೂ ನಾನು ಧರ್ಮರಾಯನ ಕೃಪಾ ಪೋಷಿತನಾಗಿದ್ದು, ಭೀಮನ ಪ್ರೀತಿಗೆ ಪಾತ್ರನಾಗಿರುವ ಕೃಷ್ಣ ಪದಕಮಲ ಕಿಂಕರ. ಪಾಂಡವರ ಮಧ್ಯಮ. ಅಲ್ಲದೆ ಧನಂಜಯ ಎನ್ನುವ ದುರ್ಯಶಕ್ಕೆ ಈಡಾಗಿ ತೊಳಲುತ್ತಿರುವ ಅರ್ಜುನ!' ಎಂದು ನುಡಿ ಬಾಣಗಳ ಬಿರುಮಳೆಯನ್ನು ಸುರಿದು ತಪಸ್ವಿಯು ಸಿಂಹ ಗಾಂಭೀರ್ಯದಿಂದ ಎದ್ದನು. ಸಿಂಹದಂತೆ ದೂರದಲ್ಲಿ ನಿಂತು ಹಿಂದಕ್ಕೆ ತಿರುಗಿ ನೋಡದೆ ಕಾಡಿನಲ್ಲಿ ನಡೆಯುತ್ತ ಒಮ್ಮೆಗೆ ಮರೆಯಾದನು.

ನಾರಿ ಕಂಬದಂತೆ ಅಲ್ಲಿ ನಿಂತಳು. ದುಃಖಿತಳಾಗಿ ಮಾತಾಡಲಾಗದ ಮೌನದಲ್ಲಿ ನಿಟ್ಟುಸಿರು ಬಿಟ್ಟಳು. ತನ್ನ ಕಣ್ಣನ್ನು ತಾನೆ ನಂಬಲಾರದೆ ಬೆಪ್ಪು ಬೆರಗಾದಳು. ಲಜ್ಜೆ ಭಯ ವಿಸ್ಮಯದ ಭಾರದಿಂದ ಕುಸಿದು ಕುಗ್ಗಿದಳು!

ಕೆಚ್ಚೆದೆಯ ಬೇಟೆಯ ಶಬರ ವೀರನು ಪಶ್ಚಿಮ ಘಟ್ಟದ ಭಯವನ್ನು ಹುಟ್ಟಿಸುವ ದಟ್ಟ ಹಾಗೂ ಭಯಂಕರ ವಿಸ್ತಾರದ ಘೋರ ಅರಣ್ಯದಲ್ಲಿ ಎತ್ತರ ಮತ್ತು ಕಡಿದಾದ ಎಡೆಗಳಲ್ಲಿ ಬೆಳಗಿನಿಂದ ಸಂಜೆಯವರೆಗೆ ಬೇಟೆಗಾಗಿ ಅಲೆದಾಡುವನು. ಆದರೆ ಯಾವುದೇ ಬೇಟೆ ಸಿಗದೆ ಬೇಸರದಿಂದ ಹಾಗೂ ಶರೀರದ ಆಯಾಸದಿಂದ ಕೋಪಗೊಂಡು ವಿಧಿಯನ್ನು ಬಾಯಿಗೆ ಬಂದಂತೆ ಬಯ್ಯುವನು. ಹೊತ್ತು ಇಳಿಯುತ್ತಿದ್ದಂತೆ ಹಸಿವು ಹೆಚ್ಚಿ ಬಾಣವನ್ನು ಬತ್ತಳಿಕೆಗೆ ಇಳಿಬಿಡುವನು. ಹತಾಶೆಯಿಂದ ಬಿಲ್ಲನ್ನು ಒಂದು ಕಡೆಗೆ ಎಸೆದು ಹಚ್ಚನೆಯ ಹಸುರಿನ ಮೇಲೆ ಕಾಡಿನ ತಣ್ಣೆಳಲಿನಲ್ಲಿ ಮಲಗುವನು.

ಅವನು ಹಾಗೆ ನಿದ್ರಾ ಸಮುದ್ರದಲ್ಲಿ ಲೀನವಾಗಿರಲು, ಹೊಟ್ಟೆ ತುಂಬಿ ತೃಪ್ತವಾದ ಭೀಮ ಭಯಂಕರ ಕರಡಿಯೊಂದು ಸುತ್ತಾಡುತ್ತ ಅಲ್ಲಿಗೆ ಬರುವುದು. ಅದು ಆ ಮನುಷ್ಯನ ಶರೀರವನ್ನು ಕಂಡು ಕುತೂಹಲದಿಂದ ಫೂತ್ಕರಿಸುತ್ತ ಆಘ್ರಾಣಿಸುವುದು! ಕ್ರೂರ ಮೃಗದ ಸಿನುಗು ವಾಸನೆ, ಕೆಟ್ಟನಾತದ ಬಿಸಿಯುಸಿರು ಮುಖಕ್ಕೆ ತೀಡುತ್ತಿರಲು ಕರಿಯ ಬಣ್ಣದ ಕಿರಾತ ಎಚ್ಚೆತ್ತು ಕಣ್ತೆರೆವನು. ಹಾ, ಮುಖದ ಮೇಲಿದೆ ಹಿರಿದಾದ ಕರ್‍ರನೆ ಕರಡಿಯ ಮೋರೆ! ನರನು ಕಣ್ಣು ತೆರೆದ ತಕ್ಷಣ ಆ ಕಾಡು ಮೃಗ ಬೆಚ್ಚಿ ಹೂಂಕರಿಸುತ್ತ ಕಾಡಿನ ಕಡೆಗೆ ಓಡಿ, ನುಣುಚಿಕೊಂಡು ಪಕ್ಕನೆ ಅಡಗಿಕೊಂಡಿತು.

ಬೇಡನಾದರೊ ತೆರೆದ ಕಣ್ಣುಗಳನ್ನು ಮುಚ್ಚಲಾರದೆ, ಕೂಗಲಾರದೆ ಚಲಿಸಲಾರದೆ ಅತಿ ಆಶ್ಚರ್ಯದಿಂದ ಕಂಗೆಡುವನು. ಬಲವಾದ ಗ್ರಹ ಬಡಿದಂತೆ ಮರಗಟ್ಟಿ ಹೋಗುವನು. ಕರಡಿ ಹೋದ ಕಡೆಗೆ ಮಂಕು ಮರುಳಾಗಿ ಮಿಳ್ಮಿಳನೆ ನೋಡುವನು!

ಹಾ! ಹಾಗೆಯೆ ತರುಣಿ ನಿಂತಳು. ತನ್ನ ಬಯಕೆಯ ಆರಾಧನೆಯ ಮೂರ್ತಿ, ತನ್ನಿಷ್ಟ ದೇವತೆ, ತನ್ನ ಒಲುಮೆಯ ಅರ್ಜುನನೆ ತನ್ನ ಎದುರಿನಲ್ಲಿ ಮೂಡಿದ್ದನು. ತಾನು ತಿಳಿಯದೆ ಮಾತಾಡಿದ ತನ್ನ ತಿಳಿಗೇಡಿತನಕ್ಕೆ ಅವನು ಬಳಲಿ ಬೇಸತ್ತು ವನ ಮಧ್ಯದಲ್ಲಿ ಮರೆಯಾಗುತ್ತಿದ್ದನು!

ಹಾಗಿರುವಾಗ ಆಶ್ಚರ್ಯವು ಶೋಕಕ್ಕೆ ಎಡೆಗೊಟ್ಟು ಹೆಣ್ಣಿನ ಕಣ್ಣಿನಲ್ಲಿ ಬಿಸುಗಂಬನಿಯ ಹೊನಲು ಚಿಮ್ಮಿತು! ಸುತ್ತಲೂ ಚೈತ್ರೋದಯದ ವಿಪುಲ ಸಂಪತ್ತು ಹೊಳೆಯುತ್ತಿತ್ತು. ಆದರೇನು ಆ ಕನ್ಯೆಯ ಆತ್ಮವನ್ನು ಅನಂತ ದಾರಿದ್ರ್ಯ ಆವರಿಸಿತ್ತು!

❑

2. ಒಂದು ತಿಂಗಳ ಮೈಸಿರಿ ಪಡೆದ ಚಿತ್ರಾಂಗದೆ

ಅತನುದೇವ ನಿನ್ನಿಂದೆ ಬದುಕಿ ಬಾಳ್ವುದು ಜಗಜ್ಜೀವನಂ

ಹೇ ಮಧುರ ರಸಮಯ ಕಬ್ಬಿನ ಬಿಲ್ಲಿನಿಂದ ಶೋಭಿಸುತ್ತಿರುವ ದೇಹವಿಲ್ಲದ ಮನ್ಮಥ ದೇವನೆ, ರತಿಪತಿಯೆ, ನಿನ್ನದು ಮಾವು ತಾವರೆ ಅಶೋಕಪುಷ್ಪ ನೀಲ ನೈದಿಲೆ ಮಲ್ಲಿಗೆಯ ಹೂ ಬಾಣ. ಅದಕ್ಕೆ ಹೆಣ್ಣು ತುಂಬಿಗಳನ್ನು ಪೋಣಿಸಿ ಸಿಂಗರಿಸಿರುವೆ. ಆ ನಿನ್ನ ಬಿಲ್ಲಿನ ಹೆದೆ ಮಿಡಿವ ಇಂಪಾದ ಸವಿ ದನಿಗೆ ಈ ಬೃಹದ್ಬ್ರಹ್ಮ ಸೃಷ್ಟಿಯಲ್ಲಿ ಎದೆ ಸೋಲದಿರುವವರು ಇರುವರೆ?

ಆದಿಯಲ್ಲಿ ತಪಸ್ವಿಗಳ ಪ್ರಭು, ಕಂದು ಬಣ್ಣದ ಜಡೆಮುಡಿಯ, ಹಣೆಗಣ್ಣಿನ ಶಿವನು ಭೀಷಣ ತಪಸ್ಸಾಧನಾಸಕ್ತಿಯಿಂದ ನಿರ್ವಿಕಲ್ಪ ಸಮಾಧಿಯಲ್ಲಿ ಮಗ್ನನಾಗಿದ್ದನು. ಆಗ ಸ್ವಾಮಿಯ ವಿರಾಗದಿಂದ ಸೃಷ್ಟಿ ರಸ ಆರಿ, ಜೀವರಾಶಿಗಳೆಲ್ಲರಿಗೆ ಉರಿ ಹೊತ್ತಿ ಬರುತ್ತಿತ್ತು. ರಾಕ್ಷಸರು ಕಾರಣದಿಂದ ಕ್ಷೇಮ ಕ್ಷಯಿಸುತ್ತಿತ್ತು. ಅಕಾಲದಲ್ಲಿಯೇ ಪ್ರಳಯ ಸಮೀಪಿಸಿದಂತೆ ಜಗತ್ತು ಕುದಿಗೊಂಡು ತಲ್ಲಣಿಸುತ್ತಿತ್ತು.

ಓ ರತಿಪತಿಯೆ, ನೀನು ಆಗ ಶಿವನ ಎದೆಗೆ ಕೆಚ್ಚಿನಿಂದ ಕುಸುಮ ಬಾಣವನ್ನು ಬಿಟ್ಟೆ, ಮುಕ್ಕಣ್ಣನ ಉರಿಗಣ್ಣಿಗೆ ಒಳಗಾದೆ! ನಿನ್ನಿಂದ ಜಗಜ್ಜೀವನವು ಬದುಕಿ ಬಾಳಿತು. ನಿನ್ನಿಂದ ಕಪರ್ದಿ ಶಂಕರನಾಗಿ, ಸುಕುಮಾರಿ ಗಿರಿಜೆಗೆ ಅರ್ಧ ದೇಹವನ್ನು ಕೊಟ್ಟು ಸೃಷ್ಟಿಯನ್ನು ಸದಾ ಪೊರೆಯುತ್ತಿರುವನು!

ಹೇ ಅನಂಗನೆ, ನಿನಗೆ ದೇಹವಿಲ್ಲದಿರುವುದರಿಂದ ಸರ್ವರ ದೇಹ ನೀನೇ ಆಗಿ ಜಗವನ್ನು ಆಳುತ್ತಿರುವೆ. ನಿನ್ನ ಅಧಿಕಾರಕ್ಕೆ ಅಡ್ಡಿ ಇಲ್ಲ. ಪ್ರಕೃತಿ ದೇವಿಯು ಸಾಗರ ತರಂಗಿಣಿಗಳಿಂದ ಅಭಿಷೇಕ ಮಾಡಿ, ಕಾನನದ ಉದ್ಯಾನಗಳ ನವ ಕುಸುಮಗಳನ್ನು ನಿನ್ನ ಮೇಲೆ ಚೆಲ್ಲಾಡುವಳು. ಗಿಳಿ ಕೋಗಿಲೆ ಮುಂತಾದ ಪಕ್ಷಿಗಳಿಂದ ಗೀತಾಂಜಲಿಯನ್ನು ಅರ್ಪಿಸುವಳು. ಬಂಗಾರದಂತೆ ಉಜ್ವಲವಾದ ಉದಯದ ಮಂಗಳಾರತಿಯನ್ನು ಎತ್ತಿ ರತಿಯ ರೂಪದಿಂದ ನಿನ್ನನ್ನು ಪ್ರತಿದಿನ ಪೂಜಿಸುವಳು!

ಹೇ ಮನ್ಮಥ ನಿನ್ನ ಮಹಿಮೆಯೆ ಹೀಗಿರಲು, ನೀನೇ ಹೇಳು ನಿನ್ನ ಭುವನ ಸಮ್ಮೋಹನ ಮಧುರ ಮೋಹನಾಸ್ತ್ರವನ್ನು ಅಬಲೆ ಚಿತ್ರಾಂಗಿಯು ಹೇಗೆ ತಾನೆ ತಾಳಲು ಸಾಧ್ಯ?

ಅವಳು ಲಜ್ಜಾ ವಿಷಾದದಿಂದ ಕೊರಗಿ, ಪ್ರಣಯದ ಸೆಳೆತದಲ್ಲಿ ಕುಗ್ಗಿ ನಿಧಾನವಾಗಿ ಹೆಜ್ಜೆಯಿಡುತ್ತ ಶಿವಾಲಯಕ್ಕೆ ಬಂದಳು. ಪ್ರಾಂಗಣದಲ್ಲಿ ಒಡತಿಯನ್ನು ಕಂಡು ಉಲ್ಲಾಸದಿಂದ ಕೆನೆದು ನೆಗೆದಾಡುತ್ತಿದ್ದ ತನ್ನ ಕುದುರೆಯನ್ನು ಏರಿದಳು. ದೂರದಲ್ಲಿದ್ದ ಶಿಬಿರದ ಕಡೆಗೆ ನಡೆದಳು.

ತನ್ನ ಗಂಡಸುತನಕ್ಕೆ ಪೇಸಿದಳ್ ತಾನೆ ಚಿತ್ರಾಂಗದೆ

ಬಿಳಿ ಬಣ್ಣದ ಆ ಯುದ್ಧ ಕುದುರೆಯು ಹಸುರು ಬನದಲ್ಲಿ ಸಾಗುತ್ತಿರುವಾಗ ಬಿಂಕಕ್ಕೆ ಕೊರಲು ಕೊಂಕಿಸಿತು. ತನ್ನ ಬೆನ್ನಿನಲ್ಲಿ ತನ್ನ ಪ್ರೀತಿಯ ಒಡತಿಯನ್ನು ಹೊತ್ತಿರುವ ಹೆಮ್ಮೆಗೆ ಖುರಪುಟ ಧ್ವನಿ ಗೈಯುತ್ತ ಕಾಡೇ ಕೆನೆಯುವ ರೀತಿಯಲ್ಲಿ ಹೇಷಾರವವನ್ನು ಮಾಡಿತು. ಚಿತ್ರಾಂಗದೆ ಅದನ್ನು ಕಂಡು ತನ್ನ ಗಂಡಸುತನಕ್ಕೆ ಹೇಸಿದಳು. ಪರಾಕ್ರಮ ಅಚ್ಚೊತ್ತಿದ್ದ ಹಾಗಿರುವ ತನ್ನ ಮೈಕಟ್ಟನ್ನು ಜುಗುಪ್ಸೆಯಿಂದ ನೋಡಿದಳು. ಆ ಹಸುರು ಬನದಲ್ಲಿ ನಿರಾಯುಧ ಲತಾಂಗಿಯರ ಲಾವಣ್ಯ ಪರಾಕ್ರಮವನ್ನು, ಅಬಲೆಯರ ಮಹಾಬಲವನ್ನು ಅತಿಶಯವಾಗಿ ನಿರೀಕ್ಷಿಸುತ್ತ ಚಿತ್ರಾಂಗದೆಯು ಚೈತ್ರವಾಹಿನಿಯಾಗಿ ಹರಿದು ಬರುತ್ತಿದ್ದಳು.

ಅವಳಿಗೆ ಮುಂದೆ ಕಣಿವೆಯ ಅಗಲಕ್ಕೆ ಹಬ್ಬಿ ನಿಂತಿದ್ದ ಸೈನ್ಯದ ಶಿಬಿರ ಕಾಣಿಸಿತು. ಅಲ್ಲಿ ತರತರಹದ ಬಣ್ಣಗಳಿಂದ ಡೇರೆಗಳು ಸಾಲುಸಾಲಾಗಿದ್ದವು. ಒಣಗಿದ ಹುಲ್ಲು ಎಲೆಗಳಿಂದ ಕಟ್ಟಿದ ಕುಟೀರಗಳಿದ್ದವು. ಅವು ಹಸಿರು ತಳಿರಿನ ಮಂಗಳದ ತೋರಣಗಳಿಂದ ಅಲಂಕರಣಗೊಂಡಿದ್ದವು. ಅವುಗಳ ಮೇಲೆ ವಿಜಯ ಪತಾಕೆಗಳು ಹಾರಾಡುತ್ತಿದ್ದವು. ಅಲ್ಲಲ್ಲಿ ಪಾಕಶಾಲೆಯಿಂದ ಹೊಮ್ಮಿಬಂದ ಹೊಗೆಯು ವಿವಿಧ ವಿನ್ಯಾಸಗಳಿಂದ ಆಗಸಕ್ಕೆ ಏರುತ್ತಿತ್ತು.

ಸಮರ ವಿಶ್ರಾಂತ ಸೈನಿಕರ ಹಟ್ಟಿಯಿಂದ ಹರ್ಷ ಪ್ರದರ್ಶನ ಘೋಷ, ಜಯಗಾನ, ಹಾಸ್ಯ ಪರಿಹಾಸ್ಯದ ಶಬ್ದಗಳು ಹೊಮ್ಮಿ ಬರುತ್ತಿದ್ದವು. ಯುದ್ಧದ ಕುದುರೆಗಳ ಹೇಷಾರವ, ಆನೆಗಳ ಘೀಳು ಮತ್ತು ಜಯವನ್ನು ಸಾರುವ ಡಿಂಡಿಮ ಶಬ್ದಗಳಿಂದ ಆ ರಣ ಶಿಬಿರ ಕಳೆಗಟ್ಟಿತ್ತು. ಅದು ಚಲನಮಯವಾಗಿ, ನಾದಮಯವಾಗಿ, ಜೀವಮಯವಾಗಿ ಅಚ್ಚರಿಯ ಪಟ್ಟಣದ ವಿಸ್ತಾರ ವಿಲಾಸದಿಂದ ಶೋಭಿಸುತ್ತಿತ್ತು!

ಚಿತ್ರಾಂಗದೆಯು ಸೇನಾ ಶಿಬಿರದ ಬಾಗಿಲಲ್ಲಿ ತನ್ನನ್ನು ಇದಿರುಗೊಂಡು ಸಂತೋಷದಿಂದ ಸ್ವಾಗತವನ್ನಿತ್ತು ವಂದಿಸಿದ ಸಾಮಂತರನ್ನು, ಸೇನಾನಿಗಳನ್ನು ಮತ್ತು ಗೌರವಕ್ಕೆ ಪಾತ್ರರಾದ (ಮನ್ನೆಯ)ವರನ್ನು ಆದರದಿಂದ ಕಂಡು ಉಚಿತ ನುಡಿಗಳಿಂದ ಮಾತಾಡಿಸಿದಳು. ಕಳೆದ ರಾತ್ರಿ ತಾನು ಬಾರದಿರುವುದಕ್ಕೆ ಆತಂಕ ಪಡುತ್ತಿದ್ದವರಿಗೆ ನೆಪವನ್ನು ಮಿತಭಾಷೆಯಲ್ಲಿ ಹೇಳುತ್ತ ಉದಾಸೀನದಿಂದ ಬೀಳ್ಕೊಂಡಳು.

ಆ ಅತಿಶಯ ಕಸುವಿನ ಕುದುರೆಯಿಂದ ನೆಲಕ್ಕೆ ಇಳಿದಳು. ಚಿನ್ನದ ಕೈ ಬಳೆ ಹೊಂದಿದ ಕಡಿವಾಣವನ್ನು ಕಿಂಕರನ ಕೈಗೆ ಕೊಟ್ಟಳು. ಆ ರಾಣಿಯು ಕನ್ಯೆಯರ ಸೇವೆಯನ್ನು ಸ್ವೀಕರಿಸುತ್ತ, ಬಂಗಾರ ಕುಶಲತೆಯ ರಮ್ಯ ಧ್ವಜ ಹಾರಾಡುತ್ತಿದ್ದ ಸೌಧವನ್ನು ಪ್ರವೇಶಿಸಿದಳು.

ವರುಣ (ಪಶ್ಚಿಮ) ದಿಕ್ಕಿನ ನಗರದಿಂದ ಹೊರಟ ನೆಳಲು ಎಂಬ ದಿವಸ ಯಾತ್ರಿಕನು ಪ್ರಾತಃ ಕಾಲದಿಂದ ನಡೆದು ಮಧ್ಯಾಹ್ನದಲ್ಲಿ ಬಿಸಿಲ ಬೇಗೆಗೆ ಕುಗ್ಗಿ ಕುಸಿದನು. ಅವನು ಮರಗಿಡಗಳ ಬುಡವನ್ನು ಆಶ್ರಯಿಸಿಕೊಂಡನು. ಅನಂತರ ಎದ್ದು ಇಂದ್ರ (ಪೂರ್ವ) ದಿಕ್ಕಿಗೆ ಎದುರಾಗಿ ಮುನ್ನಡೆಯಲು ಚಲಿಸುತ್ತಿದ್ದನು.

ಚೆಲ್ವರಳುವಂತೆನ್ನ ಪಸದನಂಗೈ

ಆಗ ಮಣಲೂರಿನ ರಾಜನಂದಿನಿ ಚಿತ್ರಾಂಗದೆಯು ತನ್ನ ನೆಚ್ಚಿನ ಪಸಾಯಿತೆ (ರಾಣಿಯ ಕೃಪೆಗೆ ಪಾತ್ರಳಾದವಳು)ಯನ್ನು ಪ್ರತ್ಯೇಕವಾಗಿ ಕರೆದು ಹೇಳಿದಳು : 'ಹೆಣ್ಣುತನಕ್ಕೆ ಒಪ್ಪುವಂತೆ ಮತ್ತು ಚೆಲುವು ಅರಳುವಂತೆ ನನ್ನನ್ನು ಅಲಂಕರಿಸು.' ಆ ಸಖಿಯು ತನ್ನ ಒಡತಿಯ ವಿಶೇಷ ಆಕಾಂಕ್ಷೆಗೆ ಆಶ್ಚರ್ಯ ಪಡುತ್ತ ಶೃಂಗರಿಸಿದಳು.

ಕುಮಾರಿಯು ವೀರತನ ಸೂಚಕ ಗಂಡುಡುಗೆಯನ್ನು ತೆಗೆದು ಹಾಕಿದಳು. ನೀರಿನ ಮೇಲೆ ಬೆಳೆಯುವ ಪಾಚಿಯು ಆವರಿಸಿದ ಎಳೆಯ ತಾವರೆಯಂತೆ ಸುಂದರವಾಗಿ ಆಹ್ಲಾದವನ್ನು ಬೀರುತ್ತ ಮೆರೆಯುವ ರೇಷ್ಮೆ ಬಟ್ಟೆಯನ್ನು ತೊಟ್ಟುಕೊಂಡಳು. ಕೈಗೆ ಚಿನ್ನದ ಬಳೆಗಳನ್ನು, ಕಾಲಿಗೆ ಕಿಂಕಿಣಿ ಗಾನವನ್ನುಂಟು ಮಾಡುವ ಮಣಿನೂಪುರಗಳನ್ನು ಧರಿಸಿಕೊಂಡಳು.

ಮೋಡಗಳಿಂದ ತುಂಬಿ ಶೋಭಿಸುವ ಅಂತರಿಕ್ಷದ ಲಕ್ಷ್ಮಿಯ ಸೊಂಟದ ನಡುಪಟ್ಟಿ ಕಾಮನ ಬಿಲ್ಲಿನಿಂದ ಹೇಗೆ ಹೊಳೆಯುತ್ತದೆಯೊ ಹಾಗೆ ಅವಳು ಸೊಂಟಕ್ಕೆ ಮನೋಹರವಾದ ರತ್ನಮಯ ಬಂಗಾರದ ಡಾಬನ್ನು ತೊಟ್ಟುಕೊಂಡಳು. ಕೊರಳಿಗೆ ಮುತ್ತಿನ ಸರವನ್ನು ಹಾಕಿಕೊಂಡಳು. ಶರತ್ಕಾಲದ ರವಿಯು ಬಂಗಾರ ಕಿರಣಗಳಿಂದ ಕಮಲಪತ್ರದ ತುದಿಯ ನೀರಿನ ಹನಿಯನ್ನು ಹೊಳೆಯಿಸುವಂತೆ, ಅವಳು ಕಿವಿಗೆ ತೊಟ್ಟಿದ್ದ ಸೊಗಸಾದ ಮುತ್ತುಗಳು ಶೋಭಿಸುತ್ತಿದ್ದವು.

ಕಗ್ಗತ್ತಲೆಯ ರಾತ್ರಿ ನಕ್ಷತ್ರಮಾಲೆಯಿಂದ ಮೆರೆಯುವಂತೆ ಮತ್ತು ಉಷೆಯ ಹಣೆಯಲ್ಲಿ ಬೆಳ್ಳಿ ಚುಕ್ಕೆಯೊಂದೇ ಮಿನುಗುವ ರೀತಿಯಲ್ಲಿ ಸಖಿಯು ಅವಳ ತಲೆಗೂದಲನ್ನು ಹೂವುಗಳಿಂದ ಅಲಂಕರಿಸಿದಳು. ಶಿಶಿರವನ್ನು ಕಳೆದ ಬನದ ಸಿರಿಯು ಸುಂದರ ವಸಂತವನ್ನು ಹೊಂದಿ ರಾರಾಜಿಸುವಂತೆ ಆ ರಾಜಕುಮಾರಿಯು ಹಣೆಯಲ್ಲಿ ಚಂದ್ರ ಕುಂಕುಮ ಬಿಂದುವನ್ನಿಟ್ಟುಕೊಂಡು ಶೋಭಿಸುತ್ತಿದ್ದಳು.

ಚೆಲುವಿನಲಗು

ಸಿರಿವೆಣ್ಣಿಗಿನಿಯನ ಜಯಿಸೆ ಚೆಲುವಿನಲಗೊಂದಿರಲ್ ಬೇರೆ ಕೂರಂಬೇಕೆ?

ರತ್ನ ಖಚಿತವಾದ ಕನ್ನಡಿಯಲ್ಲಿ ತನ್ನ ಪ್ರತಿಬಿಂಬವು ಕಾಣಿಸುತ್ತಿರಲು ಕನ್ನೆಯ ಮೊಗದಲ್ಲಿ ನಗೆಯ ಮೊಗ್ಗು ಅರಳಿ ಹೂವಾಯಿತು. ಚೆನ್ನೆ ಚಿತ್ರಾಂಗದೆಯು ತನ್ನ ಚೆಲುವಿಗೆ ತಾನೆ ಸೋಜಿಗಗೊಂಡಳು. ಕಣ್ಣುಗಳನ್ನು ನೆಟ್ಟು ಅಚ್ಚರಿಯನ್ನು ಆಲಿಸಿದಳು!

ತನ್ನ ಬಳಿ ಸಖಿಯಿರುವುದನ್ನು ಮರೆತಳು. ಮತ್ತೆ ಬೇರೆಯವರ ಎದುರು ಪ್ರಶಂಸೆಯು ಸರಿಯಲ್ಲವೆಂದು ತಿಳಿದಿದ್ದರೂ, ಲೆಕ್ಕಿಸದೆ ಕನ್ನೆಯು ತನ್ನನ್ನು ತಾನು ತನಗೆ ಅನ್ಯಳು ಎನ್ನುವಂತೆ ನೋಡುತ್ತಿದ್ದಳು! ಮುಖ, ಕೆನ್ನೆ, ಕಿವಿ, ಕಣ್ಣು, ಹುಬ್ಬು, ಚೆಂದುಟಿ, ಬಾಯಿ, ಎಸಳು, ಮೂಗು, ಹಣೆ, ತಲೆಗೂದಲು, ಹೆದೆಯೇರಿದ ಮನ್ಮಥನ ಬಿಲ್ಲು ಕೊಂಕಿನಂತಹ ಎದೆ ಒಂದೊಂದನ್ನು ನೋಡಿ ನೋಡುತ್ತ ಹಿಗ್ಗಿದಳು! ಕನ್ನಡಿಯನ್ನು ಆಲಂಗಿಸಿಕೊಂಡು ಚುಂಬಿಸುವಂತಾದ ಮನಸ್ಸನ್ನು ಬಿಗಿಹಿಡಿದು ತಡೆದುಕೊಂಡಳು!

ಶ್ರೀಮಂತ ಹೆಣ್ಣಿಗೆ ಇನಿಯನನ್ನು ಜಯಿಸಲು ಚೆಲುವೆಂಬ ಕತ್ತಿಯೊಂದಿರಲು ಬೇರೆ ಚೂಪಾದ ಬಾಣವೇಕೆ? ಚೆಲುವಿಗೆ ಎಲ್ಲೆಡೆಯೂ ಗೆಲುವು! ಹೇಳು, ಸೋಲುಂಟೆ ಹೇಳು? ಚೈತ್ರ ವಾಹಿನಿಯಾದ ತಾನು ಇಂದು ಆಯುಧವಿಲ್ಲದ ಕದನ ಕಲೆಯಿಂದ ಯತಿವೇಷಿ ಪಾರ್ಥ ದೇವನನ್ನು ಗೆಲ್ಲುವೆನು ಎಂಬ ಹೆಮ್ಮೆಗೆ ಒಳಗಾದಳು. ತನ್ನನ್ನು ಯಾರೂ ಅನುಸರಿಸಿ ಬರದಂತೆ ಕಟ್ಟಾಜ್ಞೆಯನ್ನು ಮಾಡಿದಳು. ಸೇನಾ ಶಿಬಿರದಿಂದ ಕಾಡಿನ ಗುಡಿಯ ಕಡೆಗೆ ಏಕಾಂಗಿಯಾಗಿ ಹೊರಟಳು.

ಹೊನ್ನಿನ ಕಿರಣದ ಜೀರ್ಕೊಳವಿಯಿಂದ ಸಂಜೆ ಜಿರ್ರೆಂದು ಬಣ್ಣವನ್ನೆರಚಿತ್ತು. ಆ ಕೆಂಬಿಸಿಲು ಕಾಡಿನ ಛಾಯಾಂಧತೆಯಲ್ಲಿ ಅಲ್ಲಲ್ಲಿ ಕೋಲು ಕೋಲಾಗಿ ಮರ ಮರಗಳ ಮಧ್ಯೆ ತೂರಿ ಬಂದು ಪ್ರಕಾಶಿಸುತ್ತಿತ್ತು. ಅದು ಆ ಹೊಸ ನೆರಳ ಹುಲ್ಲುಗಾವಲಿನಲ್ಲಿ ಹೊನ್ನೀರ ಮಳೆ ಹೊಯ್ಯಲು ಅಲ್ಲಲ್ಲಿ ನೀರು ಸಣ್ಣ ಸಣ್ಣಗೆ ತಂಗಿ ಮಿರುಗುವಂತೆ ಶೋಭಿಸುತ್ತಿತ್ತು. ಮೃದು ಗಾಳಿಯು ತೀಡುತ್ತ ಮರ ಮರಗಳಲ್ಲಿ ಮರ್ಮರ ಧ್ವನಿ ಮೂಡಿತ್ತು. ಗೂಡು ಸೇರಲು ಹೋಗುವ ಪಿಕಳಾರಿ, ಕಾಮಳ್ಳಿ, ಗಿಳಿಗಳ ಉಲಿತವು ಆ ಕಾಡಿನ ನಿರ್ಜನ ನೀರವದಲ್ಲಿ ಇಂಪಾಗಿ ಕೇಳಿಸುತ್ತಿತ್ತು.

ರಾಜಕುಮಾರಿಯು ಬನದಲ್ಲಿ ಅಲ್ಲಲ್ಲಿ ಅಲೆದು ನಿಂತು ಆಲಿಸುತ್ತ, ಮತ್ತೆ ಮುಂದುವರೆಯುತ್ತ ಶುಭವನ್ನು ಹಾರೈಸಿಕೊಂಡು ನಿಡುನೋಟದಲ್ಲಿ ಸಾಗುತ್ತಿದ್ದಳು. ಹಾಗೆ ಒಮ್ಮೆ ಬಳ್ಳಿಯ ಹೊದರನ್ನೆ ಕುಟೀರವೆಂದು ಭಾವಿಸಿ ತಲ್ಲಣಿಸಿ ಮುನ್ನಡೆದಳು. ಅದು ತಪ್ಪೆಂದು ತಿಳಿದು ನಾಚಿದಳು. ಹೀಗೆ ಸವ್ಯಸಾಚಿ ಅರ್ಜುನನನ್ನು ಹುಡುಕುತ್ತಿರಲು ಕತ್ತಲೆಯ ಪ್ರವಾಹ ರಯ್ಯನೊಯ್ಯನೆ ಹರಿದು ಬಂದು ಇಳೆಯನ್ನು ಆವರಿಸಿತು.

ತಕ್ಷಣ ಪೂರ್ವದ ಸಾಕಷ್ಟು ದೂರದಲ್ಲಿ ದಿಗಂತದೆಡೆಯಲ್ಲಿ ಕತ್ತಲೆಯ ಕಾಡಿನಂಚಿಗೆ ಬೆಂಕಿ ಹೊತ್ತಿತೇನೊ ಎನ್ನುವಂತೆ ಹೊನ್ನಿನ ಉರಿ ಹೊಮ್ಮಿ ತಣ್ಣಗೆ ಹಬ್ಬಿತು. ಹುಣ್ಣಿಮೆಯ ಉಣ್ಣೆ ಮುಗಿಲಿನ ಹಾಸು ಹೊಕ್ಕಿನಲ್ಲಿ ಜೊನ್ನಸಿರಿ ಹರಿಯಿತು.

ಓಹ್, ನೋಡ ನೋಡುತ್ತಿದ್ದಂತೆ ಕಣ್ಣ ನೋಟಕ್ಕೆ ಅಮೃತ ಕಿರಣನ ಕನಕ ಮಂಡಲ ಗೋಚರಿಸಿತು. ಅದು ಚಿನ್ನದಲ್ಲಿ ತೇದ ಹಾಲಿನ ಮಳೆಯನ್ನು ದಿಕ್ಕು ದಿಕ್ಕಿಗೆ ಚೆಲ್ಲಿದಂತಿತ್ತು. ಜಗತ್ತು ಬೆಳುದಿಂಗಳ ಸುಧಾ ಸ್ವಪ್ನದಲ್ಲಿ–ತಂಪಾದ ಕಿರಣಗಳ ಚಂದ್ರ ಸಮುದ್ರದ ಅಲೆಗಳ ಮೇಲೆ ತೇಲಿದಂತಿತ್ತು.

ಪ್ರೇಮಕಾತರಳಾದ ಚಿತ್ರಾಂಗದೆಯ ಪೂರ್ಣ ಚಂದ್ರನಿರುವ ಹುಣ್ಣಿಮೆಯ ದಿನದಂತಹ ಹೃದಯ ನೌಕೆಯು ಹಲವು ಭಾವಗಳಲ್ಲಿ ತೂಗಾಡುತ್ತಿತ್ತು. ಅದು ಒಮ್ಮೆ ಬೆಳುದಿಂಗಳಿನ ಹಾಲ್ಗಡಲಿನ ಹೊನ್ನ ಅಲೆಗಳೆಡೆಯಲ್ಲಿ ಆಸೆಯ ನವಿಲಿನಂತೆ ಎತ್ತರದಲ್ಲಿದ್ದರೆ, ಮತ್ತೊಮ್ಮೆ ನಿರಾಶೆಯ ಕಂದರದ ಆಳಕ್ಕೆ ಇಳಿದಂತೆ ಉಯ್ಯಲಾಡುತ್ತಿತ್ತು! ಕಾಮಿನಿ ಚಿತ್ರಾಂಗದೆಯು ಈ ರೀತಿ ಕಿರೀಟಿ ಅರ್ಜುನನನ್ನು ಹುಡುಕುತ್ತ ಅಲೆಯುತ್ತಿದ್ದಳು. ಆಗ ದೂರದಲ್ಲಿ ಮರಗತ್ತಲೆಯ ರಕ್ಕಸಿಯ ಉರಿವ ಕಣ್ಣು ಎನ್ನುವಂತೆ ಒಂದು ಕೆಂಪಾದ ಬೆಂಕಿಯು ಉರಿನಾಲಗೆಯ ನಾಟ್ಯದಿಂದ ನಲಿಯುತ್ತಿರುವುದು ಹೊಳೆದು ಕಂಡಿತು.

ಓರ್ವ ಸಾಹಸದ ನಾವಿಕನು ತನ್ನ ಹಡಗಿನ ಪಡೆಯೊಡನೆ ಸಮುದ್ರ ಯಾತ್ರೆ ಕೈಗೊಳ್ಳುವನು. ಅವನು ಸಾಗರದಿಂದ ಆವೃತವಾದ ಈ ಧರಾಮಂಡಲವನ್ನು ಸುತ್ತಿ ಹೊಸ ದೇಶಗಳನ್ನು ಕಂಡು ಹಿಡಿಯುವೆನು ಎಂಬ ಉತ್ಸಾಹ ಉಲ್ಲಾಸದಿಂದ ಹೊರಡುವನು. ಬೀಸಿ ಬರುತ್ತಿರುವ ಅನುಕೂಲಗಳಿಗೆ ಅತಿಯಾಗಿ ಉಬ್ಬಿ ಆ ತೆಪ್ಪದ ಪಟಗೆದರಿಕೊಂಡು ಹಾರಾಡುವುದು. ಆ ಗಂಭೀರ ವಿಸ್ತಾರದ ಅಲೆಗಳಿಲ್ಲದ ನೀಲ ಜಲದಲ್ಲಿ ಹಡಗು ತೇಲುತ್ತ ಪಯಣ ಮಾಡಿ ಮುಂದುವರಿದು ದಿನ ದಿನಕ್ಕೆ ದೂರ ದೂರಕ್ಕೆ ಸಾಗುವುದು.

ಹಡಗಿನ ಚುಕ್ಕಾಣಿ ಹಿಡಿದವನು ಪ್ರತಿದಿನ ಹಡಗಿನ ಧ್ವಜಸ್ತಂಭದ ತುದಿಗೆ ಏರಿ, ಹೊಸನಾಡು ಕಣ್ಣಿಗೆ ಬೀಳುವುದೆಂಬ ಹಾರೈಕೆಯಿಂದ ನೋಡುವನು. ದೃಷ್ಟಿ ಹರಿಸಿ ನೋಡಿ ಬಳಲುವನು. ಅವನು ಕೆಳಗಿಳಿದು ಬರಲು ನೌಕಾ ಪಡೆಯ ಜನರು ಅವನ ಸುತ್ತು ಮುತ್ತಿ 'ಏನಾದರೂ ಕಂಡಿತೆ?' ಎಂದು ಕೇಳುವರು. ಅವನು ಎಂದಿನಂತೆ 'ಮೇಲೆ ನಿಲಾಕಾಶ, ಕೆಳಗೆ ನೀಲಾಂಬುಧಿ, ನೆಲದ ಚಿಹ್ನೆ ಕಾಣುತ್ತಿಲ್ಲ' ಎಂದು ಹೇಳುವನು!

ಹೀಗೆ ದಿನಗಳು ಕಳೆದು, ಪಕ್ಷ ಪಕ್ಷಗಳು ಉರುಳಿ, ಮಾಸ ಮಾಸಗಳಾಗಿ ಹೋಗುತ್ತಿರಲು ಆಹಾರ ಸಾಮಗ್ರಿ ಕರಗಿ ಇಲ್ಲವಾಗುವ ಸ್ಥಿತಿಗೆ ಬರುವುದು. ಆಗ

ಪಡೆಯವರು ಆತಂಕದಿಂದ ಬೇಸರಗೊಳ್ಳುವರು. ಬಳಲಿ ಸಾಯುತ್ತೇವೆ ಎಂಬ ಭಯದಿಂದ ಹಡಗಿನ ಒಡೆಯನ ಮೇಲೆ ಕೋಪಗೊಳ್ಳುವರು. ಹಾಗೂ ಅವನು ಹಿಂತಿರುಗಲು ಒಪ್ಪದಿರುವಾಗ ಕ್ರಾಂತಿಗೆ ಸಿದ್ಧರಾಗುವರು!

ಅದರಿಂದ ಭಯಗೊಂಡ ನೌಕೆಯ ಒಡೆಯನು ಭಗವಂತನನ್ನು ಬೇಡುತ್ತ, ಪರ್ವತದ ಸಾನುಗಳ ದಿಕ್ಕಿನೆಡೆ ನೋಡುತ್ತಿದ್ದನು. ಆಗ ತಕ್ಷಣ, ಅತಿ ದೂರದಲ್ಲಿ ಮಂಜು ಮಸುಕಾಗಿ, ಗಗನಾಂಬುಧಿಯ ತೀರದಲ್ಲಿ ಒಂದು ಭೂ ಭಾಗವು ಕಣ್ಣಿಗೆ ಕಾಣಿಸಿತು. ಅದು ಸ್ವರ್ಗದ ತುಟಿ ಮತ್ತು ಮರ್ತ್ಯದ ತುಟಿ ಚುಂಬಿಸುವ ಎಡೆಯಲ್ಲಿತ್ತು! ಅವನು ಆನಂದದಿಂದ ಮೈ ಮರೆತನು. ತನ್ನ ಪಡೆಯ ಜನರನ್ನು ಕೂಗಿ ಕರೆದನು. ಹರ್ಷದ ಕೃತಜ್ಞತೆಯಿಂದ ಕಣ್ಣೀರು ಹರಿಯುತ್ತಿರಲು ಮಾತಾಡದೆ ತಾನು ಕಂಡ ಕಾಣ್ಕೆಯನ್ನು ಎಲ್ಲರಿಗೂ ತೋರಿಸಿದನು!

ಹಡಗಿನ ಪಡೆಯವರು ಸಂತೋಷದಿಂದ ಹುಚ್ಚೆದ್ದು ಕಡಲ ಮೊರೆತದ ಜೊತೆಗೆ ತಮ್ಮ ಗೆಲುವಿನ ದನಿ ಕೂಡಿಸಿದರು. ಆಗ ಅವನು ನಾವೆಯನ್ನು ಬೇಗ ಬೇಗನೆ ತಾನು ನೋಡಿದ ಸಮುದ್ರದ ಕಾಡಿನ ಕಡೆಗೆ ನೂಕಿದನು!

ಅನಲ ಪರಿವೇಷ ವಲಯದೊಳ್ ಕಂಡುದರ್ಜುನನ ಯತಿಮೂರ್ತಿ

ಅದೇ ರೀತಿ ಚಿತ್ರಾಂಗದೆಯು ಆಶೆಯಿಂದ ಉಬ್ಬುತ್ತ ಆತಂಕದಿಂದ ಕಳವಳಿಸುತ್ತ ಕತ್ತಲೆಯ ರಕ್ತ ನಾಲಗೆಯಂತೆ ನರ್ತಿಸುವ ಉರಿಯ ಕಡೆಗೆ ನಡೆದಳು. ಹತ್ತಿರ ಹತ್ತಿರಕ್ಕೆ ಸಾಗುತ್ತಿರಲು ಅಗ್ನಿ ಸುತ್ತುವರಿದಿರುವ ವಲಯದಲ್ಲಿ ಅರ್ಜುನನ ಯತಿಮೂರ್ತಿ ಕಂಡಿತು. ಅದು ಮಾಗಿಯ ಮಂಜು ಕವಿದ ಪ್ರಾತಃಕಾಲದ ಸೂರ್ಯನ ಬಿಂಬದಂತಿದ್ದು ರಾತ್ರಿಯ ಕಗ್ಗತ್ತಲೆಯಿಂದ ಕಾಂತಿಹೀನವಾಗಿತ್ತು.

ಆ ಸಮಯದ ಆಸುಪಾಸಿನಲ್ಲಿ ಪೌರುಷದ ಕಠಿಣವಾದ ಧನುರ್ವಿದ್ಯೆಯನ್ನು ಹೊರತುಪಡಿಸಿ, ಸ್ತ್ರೀ ಸಹಜ ರತಿ ಕಲಾಭ್ಯಾಸ ಒಂದಿನಿತೂ ಇಲ್ಲದ ಚೈತ್ರವಾಹಿನಿ ಕಿರೀಟಿಯ ಬಳಿಗೆ ಬಂದಳು. ಅವಳು ಹೋದ ರೀತಿ ವರನೆಡೆಗೆ ವೈಯ್ಯಾರದಿಂದ ಸಾಗುವ ಅಂಗನೆಯ ರೀತಿಯಲ್ಲಿರಲಿಲ್ಲ. ಅದು ವಿದ್ವೇಷಿಯನ್ನು ಸಂಹರಿಸುವ ದೃಢ ನಿಶ್ಚಯದ ಬಿಂಕದಿಂದ ಮುಂದುವರಿಯುವ ಶೂರನ ವಿಕ್ರಮ ಗಮನ ವಿನ್ಯಾಸವನ್ನು ಪ್ರದರ್ಶಿಸುವಂತಿತ್ತು. ಅವಳು ವೈರಿಯನ್ನು ಬಲದಿಂದ ಆಕ್ರಮಿಸಿ ಗೆಲ್ಲುವಂತೆ ಪುರುಷನ ಪ್ರೀತಿಯನ್ನು ಗೆಲ್ಲುವೆನೆಂಬ ಅಜ್ಞಾನದಿಂದಿದ್ದಳು.

ನಾರಿಯು ಹತ್ತಿರಕ್ಕೆ ಬರುತ್ತಿರಲು, ಯತಿವೀರನು ಒಣಗಿದ ಎಲೆಯ ಮರ್ಮರ ಧ್ವನಿಯನ್ನು ಕೇಳುತ್ತ ಕುತೂಹಲದಿಂದ ಕೊರಲೆತ್ತಿ ನೋಡಿದನು. 'ನಮಸ್ಕಾರ' ವೆಂದು ಹೇಳಿ ಬರುತ್ತಿದ್ದ ಸ್ತ್ರೀ ಆಕೃತಿ ಹತ್ತಿರದಲ್ಲಿ ಕಾಣಿಸಿತು. ಅದು ಸುಳ್ಳೊ, ಕಪಟವೊ,

ನಿಜವೊ, ಮಾನವಿಯೊ, ಮೋಹಿನಿಯೊ, ರಕ್ಕಸಿಯೊ ಎನ್ನುವ ಸಂಶಯಕ್ಕೀಡಾಗಿ ಬೇಗನೆ ಎಚ್ಚರಿಕೆಯಿಂದ ಹೀಗೆ ಕೇಳಿದನು :

'ಎಲೆ ತರುಣಿ, ನೀನು ಯಾರು? ಈ ರಾತ್ರಿ, ಈ ಘೋರವಾದ ಕಾಡಿನಲ್ಲಿ ರಾತ್ರಿಯಲ್ಲಿ ಸಂಚರಿಸುವ ರಾಕ್ಷಸಿಯಂತೆ ಅದೇಕೆ ಹೀಗೆ ಸುತ್ತುತ್ತಿರುವೆ? ಇದು ಕ್ರೂರ ಮೃಗಗಳು ಅಲೆದಾಡುವ ಹೊತ್ತು. ಹೆಣ್ಣಾಗಿ ನೀನು ಒಂದಿಷ್ಟು ಭಯ ಪಡದೆ ರಾತ್ರಿಯಲ್ಲೇಕೆ ಅಲೆದಾಡುತ್ತಿರುವೆ? ಮಾನವ ಸ್ತ್ರೀಯರಿಗೆ ಈ ರೀತಿಯ ಬಾಳೆಂಬುದು ಆಶ್ಚರ್ಯ! ಮತ್ತು ಸದ್ವಂಶದಲ್ಲಿ ಹುಟ್ಟಿದವರಿಗೆ ಇದು ಯೋಗ್ಯವಾದುದಲ್ಲ!'

ಅದಕ್ಕೆ ಪ್ರತ್ಯುತ್ತರವಾಗಿ ಅವಳು ಹೀಗೆ ಹೇಳಿದಳು :

ಪ್ರಣಯಾಗ್ನಿ ಎದೆಯನಾವರಿಸೆ ಕತ್ತಲೆಯಿಹುದೆ ಕಂಗಳಿಗೆ?

'ಯತಿವೀರನೆ, ನಿನ್ನಂತಹವರು ಇರಲು ಕಾಡು ತಾನೇ ನಾಡಿಗಿಂತಲೂ ಹೆಚ್ಚು ಸುಕ್ಷೇಮತರವಾಗುವುದು. ರಾತ್ರಿಯು ತಾನೇ ದಿನವಾಗುವುದು. ಭಯವೆಂಬುದು ತಾನೇ ಉಲ್ಲಾಸವಾಗುವುದು. ರಾತ್ರಿಯಲ್ಲಿ ಸಂಚರಿಸುವ ರಾಕ್ಷಸತ್ವವು ನಿರ್ಮಲ ಪ್ರೇಮ ಯಾತ್ರೆಗೆ ಸಮನಾಗುವುದು!

'ಪ್ರಣಯಾಗ್ನಿ ಎದೆಯನ್ನು ಆವರಿಸಲು ಕಣ್ಣುಗಳಿಗೆ ಕತ್ತಲೆಯಿರುವುದೆ? ಒಲುಮೆ ಕಿಚ್ಚಿನ ಕೆಚ್ಚಿನ ಎದುರಿನಲ್ಲಿ ಭೀತಿ ಯಾವುದು? ಮತ್ತು ನಿನ್ನ ಬಳಿಯಲ್ಲಿ ನಾನು ಇರಲು ಕುಲೀನತೆಗೆ ಕುಂದಾಗುವುದೆ? ಹಿರಿದಾದ ಆಸೆಯ ಉರಿ ಮನಸ್ಸಿಗೆ ತಗುಲಿರಲು ಇಲ್ಲಿಗೆ ಬಂದೆ. ಅದಕ್ಕೆ ನೀನೆ ಗುರಿ!

'ವೀರ ಯತಿಯೆ, ವಿಸ್ಮಯಕರವಾದುದಕ್ಕೆ ಬರಿದೆ ಭಯ ಪಡಬೇಡ. ನನ್ನ ಅಣ್ಣನು ಇಂದು ಬೆಳ್ಳಂಬೆಳಗ್ಗೆ ಹತ್ತಿರವಿರುವ ದೀರ್ಘವೂ ವಿಸ್ತಾರವೂ ಆದ ಕೊಳದ ದಡದಲ್ಲಿ ತಿರುಗಾಡಲು ಬಂದಿದ್ದನು. ಅವನು ನಿನ್ನ ಬಗ್ಗೆ ನನಗೆ ತಿಳಿಸಿದನು.

'ಯತಿವೇಷದಿಂದಿರುವ ನನ್ನ ಆಸೆಯ ಅರ್ಜುನನೆ, ಪ್ರೇಮದ ತಪಸ್ಸು ಸಾಕ್ಷಾತ್ಕಾರಗೊಂಡಂತೆ ನೀನು ಇಲ್ಲಿಗೆ ಬಂದಿರುವುದನ್ನು ಕೇಳಿದೆನು. ನನ್ನ ಇಚ್ಛಾಲತೆಯು ಕುಡಿ ಹಬ್ಬುತ್ತ ನಿನ್ನ ಪಾದಗಳ ಬಳಿಗೆ ಬಂದಿದೆ. ವೀರ ಅರ್ಜುನ ದೇವನೆ, ನಾನು ಅಪರಿಚಿತೆಯಾದರೂ ನಿನ್ನ ಪ್ರೇಯಸಿಯಾಗಿರುವೆ. ನಾನು ಪ್ರಣಯಭಿಕ್ಷೆ ಬೇಡಿ ಬಂದಿದ್ದೇನೆ. ಸುಂದರಾಂಗನೆ ದಯೆ ತೋರಿ ನನ್ನನ್ನು ಸ್ವೀಕರಿಸು.'

ಧೀರಾಂಗನೆಯ ಧೈರ್ಯದ ಆಲಾಪವನ್ನು ಕೇಳಿ ಕಿರೀಟಿಯ ಮುಖಕಮಲದಲ್ಲಿ ಕಿರುನಗೆ ಹೊಮ್ಮಿತು. ಸಂಕೋಚವೇನು ಎಂಬುದನ್ನೆ ತಿಳಿಯದವಳಂತೆ ನಿಂತಿದ್ದವಳ

ಪುರುಷ ಭಂಗಿಯನ್ನು ನಿಡಿದಾಗಿ ದೃಷ್ಟಿಸುತ್ತ 'ಸಾಹಸಿ ಕಿರಾತ ಕನ್ಯೆ!' ಎಂದು ಹೇಳುತ್ತಿರಲು 'ಅಲ್ಲಲ್ಲ' ಎಂದು ಲಲನೆ ಹೇಳಿದಳು. ಆಗ ಧನಂಜಯನು,

'ಅಲ್ಲದಿದ್ದರೆ ಪ್ರಣಯ ಪ್ರಸಂಗದಲ್ಲಿ ನಾಗರಿಕರು ಈ ರೀತಿ ವರ್ತಿಸುವರೆ? ಅದು ಹಾಗಿರಲಿ, ನೀನು ಬಂದ ಹಾದಿಯಲ್ಲಿಯೇ ಕ್ಷೇಮವಾಗಿ ಹಿಂತಿರುಗು. ಓ ಬನದ ಹೆಣ್ಣೆ, ಮುನಿಯ ಬೇಡ; ನಿಷ್ಕರುಣಿ ಎನ್ನಬೇಡ. ನಾನು ಅರ್ಜುನನೆಂಬುದು ನಿಜ. ನಾನು ಕಾರಣಾಂತರದಿಂದ ಬ್ರಹ್ಮಚರ್ಯ ವ್ರತವನ್ನು ಕೈಕೊಂಡು, ಯತಿವೇಷವನ್ನು ಧರಿಸಿ ಕ್ಷೇತ್ರದಿಂದ ಕ್ಷೇತ್ರಕ್ಕೆ ಭೂಯಾತ್ರೆಯನ್ನು ಮಾಡುತ್ತಿರುವೆನು.

'ನನ್ನ ವ್ರತ ಮುಗಿಯದೆ, ನಿನ್ನ ಬಯಕೆಯು ಸಿದ್ಧಿಸದು. ವ್ರತದ ಆ ಮಾತಿರಲಿ; ಬನದ ಹೆಣ್ಣೆ ನನಗೆ ಸರಿ ಸಮನಾಗಿ ನಿನ್ನಲ್ಲೇನಿದೆ? ಮತ್ತು ನನ್ನ ಎದೆಗೆ ಹೂ ಬಾಣವಾಗಲು, ನೀನು ಯಾವ ರಾಜ ಕುಲಾಂಬುಧಿಯ ಮಥನದಲ್ಲಿ ಮೂಡಿರುವ ಕೌಸ್ತುಭ? ಹಾಗೂ ನಿನ್ನಲ್ಲಿ ಅದೇನು ಸೌಂದರ್ಯ ಸಂಪದವಿದೆ? ಈ ವಿಸ್ತಾರ ಲೋಕದಲ್ಲಿ ಕೇವಲ ಕನಿಷ್ಠರೆಂದರೂ ನಿನಗಿಂತಲೂ ಉತ್ತಮರು!'

ಸೋಲ್ತೊಮ್ಮೆ ಗೆಲ್ದಳಾಕೆ!

ಆ ನುಡಿ ಕೇಳಿ ಚಿತ್ರಾಂಗದೆಯ ಮಾನಕ್ಕೆ ಕಿಡಿ ಹೊತ್ತಿ ಉರಿಯಿತು. ಕೋಪ ಪ್ರದರ್ಶನವು ಪೌರುಷದ ಗುರುತೆಂದು ಬೆದರಿದಳು. ಕಂಬನಿಗರೆಯುತ್ತ ಒಮ್ಮೆ ಸೋತು, ಗೆದ್ದಳು! ಸ್ತ್ರೀಯ ಸಹಜ ಐಶ್ವರ್ಯ ದೇಸಿ ಲಕ್ಷಣವನ್ನು ಹೊಂದಿ ತಾನಾಗಿಯೇ ಶೋಭಿಸದಿದ್ದರೆ, ತನ್ನ ವಂಶವನ್ನು ತಿಳಿಸಿ ಕುಲಕ್ಕೆ ಮತ್ತೆ ಅವಹೇಳನವನ್ನುಂಟು ಮಾಡಿ ಫಲವೇನು? ಎಂದುಕೊಂಡಳು.

ಅವಳು ಪ್ರಣಯ ಭಂಗಕ್ಕೆ, ಕಟು ತಿರಸ್ಕೃತಿಗೆ ಮನ ನೊಂದಳು. ಶೋಕ ಭಾರದಿಂದ ಕುಸಿದಳು. ಹೊಸೆದು ಎಸೆದ ಸುಗ್ಗಿ ಮೊಗ್ಗಿನ ರೀತಿ ಮುಖ ಕುಂದಿತು. ಮೌನವಾಗಿ ಬನದ ನಡುವಿನ ಶಿವನ ಗುಡಿಗೆ ಹಿಂದಿರುಗಿದಳು. ಹಠಾತ್ತಾಗಿ ಹೃದಯವನ್ನು ಶೂನ್ಯತೆ ತುಂಬಿತು. ಜಗತ್ತು ಶುಷ್ಕವೂ ನಿಷ್ಫಲವೂ ಆಗಿ ತೋರಿತು. ಹುಣ್ಣಿಮೆಯ ಬೆಳುದಿಂಗಳ ಸುಧಾಶ್ವೇತ ಅರಿವೆಯನ್ನು ಉಟ್ಟ ಮಧುರ ರಾತ್ರಿಯು ಶೂನ್ಯವಾಗಿ ಕಾಣುತ್ತಿತ್ತು.

ಅವಳು ಹೊಸತಾಗಿ ಉಟ್ಟಿದ್ದ ಉಡಿಗೆ, ತೊಟ್ಟಿದ್ದ ತೊಡಿಗೆಗಳೇ ಸೆರೆಯ ಹೊರೆಯಾಗಿ ಬಿಗಿದುಕೊಂಡವು. ಚಿತ್ರಾಂಗದೆಯ ಶರೀರವನ್ನು ಅವು ಬೇಡಿಯ ಭಾರದಂತೆ ಬಿಗಿದವು. ರಾಣಿಯು ತನ್ನ ಅವಸ್ಥೆಗೆ ತಾನೇ ಹೇಸಿದಳು. ಅವಳಿಗೆ ಫಲ್ಗುಣನನ್ನು ಮೋಹಿಸುವ ಅಂದ ಸೌಂದರ್ಯದ ಮುಂದೆ ನೆಲದ ಸಿರಿ, ಬಿಲ್ವಿದ್ಯೆ, ಮೈಬಲ್ಮೆ, ರಣಕೀರ್ತಿ ಮತ್ತು ಅರಸು ಕುವರಿಯತನವು ತೃಣವಾಗಿ ಋಣವಾಗಿ ಕಾಣಿಸಿದವು.

ಚಿತ್ರಾಂಗದೆಯು ಮೈಗೆ ಹತ್ತಿಕೊಂಡಂತಿದ್ದ ಒಡವೆಗಳನ್ನು ತೆಗೆದೊಗೆದಳು. ದೇವಾಲಯದ ಜಗುಲಿಯಲ್ಲಿ ದಿಂಡುರುಳಿದಳು. ಮದನಹರ ಶಿವನ ಎದುರಿನಲ್ಲಿ ಕೈ ಮುಗಿದು ಮೈ ಚಾಚಿ ತುಂಬೆದೆಯ ಭಕ್ತಿಯಿಂದ ಉತ್ಕಂಠಿತ ಆತ್ಮದ ಆಕಾಂಕ್ಷೆಯಿಂದ ಮದನನ ಕೃಪೆಯುಂಟು ಮಾಡುವಂತೆ ಬೇಡಿಕೊಂಡಳು.

ಯೌವನದ ಕಂಗಳಿಗೆ ಮನ್ಮಥನಪರಿಚಿತನೆ?

ಅವಳು ಮಾತುಗಳಿಂದ ಪ್ರಾರ್ಥಿಸಲಿಲ್ಲ; ಎದೆ ತುಂಬಿ ಬರಲು ನುಡಿಗಳಿಗೆ ತಾವೆಲ್ಲಿ? ವಾಕ್ ಸೀಮೆಯನ್ನು ದಾಟುತ್ತ ಆ ಮಹಾ ಆಕಾಂಕ್ಷೆಯ ಮಹತ್ತರ ಪ್ರಾರ್ಥನಾ ಬೆಳಕಿನ ಕಿರಣವು ದೀರ್ಘಭಾವ ಪ್ರವಾಹದ ಮೌನಮಾತ್ರವಾಗಿ ಪರಿಣಮಿಸಿತ್ತು!

ಚಿತ್ರಾಂಗದೆಯು ಹೀಗೆ ತಪೋನಿದ್ರೆಯಲ್ಲಿದ್ದುದು ಸ್ವಪ್ನವೊ ದರ್ಶನವೊ ಅಥವಾ ಸ್ವಪ್ನ ದರ್ಶನವೊ ಏನೆಂದು ಹೇಳಬಲ್ಲವರಾರು? ನಾರಿಯು ಕಣ್ಣ ಕತ್ತಲೆಯನ್ನು ಕೊಲೆಗೈಯ್ಯುವ ಕಾಂತಿ ಪ್ರವಾಹವನ್ನು ಕಂಡಳು. ಆ ನಡುವೆ ಆಗಸದ ಕಡೆ ಕಾಮನ ಬಿಲ್ಲು ಪ್ರಕಾಶಿಸುವಂತೆ ಮಧುರ ಮದನನ ಮೂರ್ತಿ ರಾರಾಜಿಸಿತು. ಅದು ಚೆಲುವಾದ ನಗೆ ಮುಖದಲ್ಲಿ ಮಧು ವಿಲಾಸವನ್ನು ಬಿಂಬಿಸುತ್ತ ಪುಣ್ಯ ಪ್ರಸನ್ನವಾಗಿತ್ತು.

ಯೌವನದ ಕಣ್ಣುಗಳಿಗೆ ಮನ್ಮಥನು ಅಪರಿಚಿತನೆ? ದುಂಬಿಗೆ ತಾವರೆಯ ಹೃದಯ ಕಳಶದ ಜೇನಿನ ಔತಣಕ್ಕೆ ಕರೆ ಬೇಕೆ? ನೀರಿನ ಒಡಲ ಕಪ್ಪು ಮುಗಿಲು ರಸದ ಒಜ್ಜೆಯಿಂದ ಬಸಿರ ಭಾರಕ್ಕೆ ಬಾಗಿ, ಪಶ್ಚಿಮ ದಿಗಂತದಲ್ಲಿ ಗಂಭೀರ ಗತಿಯಿಂದ ಮಿಂಚೆಸೆದು ಮೊಳಗುತ್ತದೆ. ಅದು ಮಲೆಯ ಬನಗಳ ಮೇಲೆ ಕಗ್ಗರ್ಗೆ ಉಬ್ಬುತ್ತ ಹಬ್ಬಿ ತೇಲಿ ಬರುತ್ತಿರಲು ಅದನ್ನು ಕಂಡು ಗಂಡು ನವಿಲು ಉನ್ಮಾದದಿಂದ ಗರಿಗಳನ್ನು ಕೆದರಿ ಅಟ್ಟಹಾಸದಿಂದ ಕೇಗು ಹಾಕುವುದು. ವರ್ಷಾಗಮನಕ್ಕೆ ಉಬ್ಬಿ ನರ್ತನ ಮಾಡುವುದು. ಅದರಂತೆ ಮನ್ಮಥನನ್ನು ಸಂದರ್ಶಿಸಿದ ಚಿತ್ರಾಂಗದೆಯ ಹೃದಯ ನಲಿದು ಉಲಿದು ನರ್ತಿಸಿತು. ಅವಳು ಕಾಮದೇವನೊಡನೆ ಹೀಗೆ ಸಂಭಾಷಿಸಿದಳು :

'ದೇವ ಮೂರ್ತಿಯೆ ನಮೋ! ನೀನು ಪಂಚಬಾಣನಲ್ಲವೆ? ನೀನು ರತಿರಮಣನು ಆಗಿಲ್ಲದಿದ್ದರೆ, ನನ್ನೆದೆ ಅದೇಕೆ ಹೀಗೆ ಚಿರಬಂಧುವಿನ ಸಂದರ್ಶನದಿಂದ ನಲಿಯುವಂತೆ–ಹೂವಿನ ಎಸಳಿನ ಮೇಲೆ ಕುಳಿತು ನಡುಗುವ ಬಣ್ಣದ ಚಿಟ್ಟೆಯ ರೆಕ್ಕೆಗಳ ರೀತಿ ನಡುಗುತ್ತಿದೆ?'

'ನಾನು ಸೃಷ್ಟಿ ಮೂಲದ ಪ್ರಥಮನು. ನಾನೇ ಸ್ಫೂರ್ತಿ, ನಾನೇ ಹಿರಿಯ. ನಾನು ಕಾಮನಾಗಿ ಸುಖ ದುಃಖ ಪಾಶದಿಂದ ಜೀವರನ್ನು ಬಂಧಿಸುವೆನು! ಚಿರ ಯೌವನೋಲ್ಲಾಸ ನಿಧಿಯಾದ ನಾನು ಭುವನ ಹೃದಯದಲ್ಲಿ ಪ್ರೇಮ ಸೌಂದರ್ಯದ ವಿದ್ಯುತ್ ಪ್ರವಾಹವನ್ನು

ಪ್ರಚೋದಿಸುತ್ತ, ಮೃತ್ಯು ಮುಪ್ಪು ಬೇಸರಗಳು ಆನಂದವನ್ನು ಕಡಿಮೆಯಾಗದಂತೆ ಸದಾ ಪೊರೆಯುತ್ತಿರುವೆನು.

'ಲಲನೆ, ನೀನು ಯಾವ ಬಯಕೆಯಿಂದ ಹೀಗೆ ಹೊಚ್ಚ ಹೊಸ ಯೌವನದ ಕಿರು ಹರೆಯದಲ್ಲಿಯೆ ತಪವನ್ನು ಆಚರಿಸಿ, ಕೋಮಲ ಶರೀರವನ್ನು ಕ್ಷಯಿಸುತ್ತಿರುವೆ ಹೇಳು? ಈ ಬಗೆಯ ಕ್ರೂರತರವಾದ ಯಜ್ಞ ನನಗೆ ಪ್ರಿಯವಾದುದಲ್ಲ! ಓ ಸುಂದರಿಯೆ, ಏತಕ್ಕೆ ಈ ತಪ? ನೀನು ಯಾರು? ನಿನ್ನ ಪ್ರಾರ್ಥನೆಯೇನು?'

'ಪ್ರೇಮನಿಧಿ, ಓ ರತಿಪತಿಯೆ, ಮದನದೇವನೆ ನಮೋ! ನಾನು ಒಂದೇ ದಿನದಲ್ಲಿ ಯುಗದ ತಪವನ್ನು ಆಚರಿಸಿ ಬೆಂದು ನೊಂದಿರುವೆ! ದೇವನೇ, ನಿನಗೆ ತಿಳಿಯದಿರುವುದು ಯಾವುದಿದೆ?

'ನಾನು ಮಣಿಪುರದ ರಾಜನಂದಿನಿ. ಚಿತ್ರವಾಹನನ ಮಗಳು. ನನ್ನ ಹೆಸರು ಚಿತ್ರಾಂಗದೆ. ಪುಷ್ಪಾಸ್ತ್ರನೇ, ನನ್ನ ತಂದೆಗೆ ಚಂದ್ರಚೂಡ ಶಿವನು ಕೃಪೆದೋರಿ 'ಸಂತತಿಯಲ್ಲಿ ಒಂದೇ ಒಂದು ಪುತ್ರ ಸಂತಾನವಾಗಲಿ' ಎಂದು ವರವನ್ನು ನೀಡಿದ್ದನು. ಆದರೆ ನಿರ್ಭಾಗ್ಯೆ ಕಠಿಣೆಯಾದ ನಾನು, ನನ್ನ ತಂದೆಗೆ ಬೇಡದೆ ಪುತ್ರಿಯಾಗಿ ಜನಿಸಿದೆನು. ಹೆಣ್ಣಾಗಿದ್ದರೂ, ಭಾವದಲ್ಲಿ ನಿಷ್ಠುರೆಯಾಗಿಯೇ ಹುಟ್ಟಿದೆನು! ನನ್ನ ತಂದೆಯು ನನ್ನನ್ನು ಕುಮಾರನೆಂದೇ ತಿಳಿದು ರಣಕಲಾ ಪಂಡಿತೆಯನ್ನಾಗಿಸಿದನು.

'ಓ ಇಕ್ಷುಕೋದಂಡಪಾಣಿ, ನಾನು ಕವಚಧಾರಿಗಳಾದ ವೈರಿಗಳ ಎದೆಯನ್ನು ಬಿರಿಯುವ ಚೂಪಾದ ಬಾಣವನ್ನು ಪ್ರಯೋಗಿಸುವ ಬಿಲ್ಲಿನ ಪರಿಣತಿಯನ್ನು ಪಡೆದೆನು. ಆದರೆ ನಾನು ಚೆನ್ನ ಚೆಲುವರನ್ನು ಗೆದ್ದು ಅವರನ್ನು ಸೆರೆ ಹಿಡಿಯುವ ಕನ್ನೆಯರ ಕಡೆಗಣ್ಣ ನೋಟಗಳ ಜಾಣ್ಮೆಯನ್ನು ಇನಿತೂ ತಿಳಿಯದಿರುವ ಮುಗ್ಧೆಯಾದೆನು.

'ನನ್ನ ಆಸೆಗಳ ಕಿರೀಟದ ಮಾಣಿಕ್ಯವೆಂದರೆ ಶ್ರೀಕೃಷ್ಣ ಮಿತ್ರ ಅರ್ಜುನದೇವ. ಅವನು ಯತಿವೇಷದಲ್ಲಿ ಹತ್ತಿರದ ಕಾಡಿನಲ್ಲಿರುವನು. ನಾನು ಅವನ ಬಳಿ ಹೋದೆನು. ನನ್ನ ಜೀವಪುಷ್ಪವನ್ನು ಸಿರಿಪಾದದಲ್ಲಿ ಧರಿಸಿ ಸಾರ್ಥಕವಾಗಿಸಿ ಕೃಪೆ ತೋರಬೇಕೆಂದು ಬೇಡಿಕೊಂಡೆನು. ಅವನು ಬ್ರಹ್ಮಚರ್ಯ ವ್ರತವನ್ನು ಹೇಳಿ ಜಾರಿಕೊಂಡನು.

'ಓ ಕಂದರ್ಪನೇ, ಅದನ್ನು ಮತ್ತೆ ಹೇಗೆ ಹೇಳಲಿ? ದೇವನೇ, ನನ್ನನ್ನು ಕಾಡು ಹೆಣ್ಣೆಂದು ಹೀಯಾಳಿಸಿದನು.'

ಹೀಗೆ ಹೇಳುತ್ತ ಹೇಳುತ್ತ ಮಾತನಾಡಲಾಗಲಾರದೆ, ಲಲನೆಯು ಅಭಿಮಾನ ಭಂಗದ ಅತಿ ಶೋಕದಿಂದ ರೋಧಿಸುತ್ತ ಒರಲಿದಳು. ಅವಳ ಅವಯವಗಳು ಕಂಪಿಸಿದವು. ಕಣ್ಣ ಕಮಲಗಳು ಮುಚ್ಚಿಕೊಂಡು ಕಂಬನಿಯ ಹೊನಲು ಹರಿದವು. ಕೊರಳ ಸರೆಯುಬ್ಬಿ

ಕಂಠದಲ್ಲಿ ಗದ್ಗದ ದನಿ ಮೈ ದೋರಿತು. ಅದನ್ನು ಕಂಡು ಕನಿಕರಗೊಂಡ ದೇವ ರತಿಪತಿ ಹೀಗೆ ಹೇಳಿದನು :

ಗಿರಿಜೇಶನಂ ಗೆಲ್ದೆನಗೆ ಮತ್ತಾರು ಹೊಯಿಕೈ?

'ಕಾಮಿನಿಯೆ, ಅಳಬೇಡ. ನನ್ನ ಭಕ್ತರನ್ನು ಎಂದಿಗೂ ನಾನು ಈ ಅಪ್ರಯೋಜಕವಾದ ವೈರಾಗ್ಯಕ್ಕೆ ಸೋಲಲು ಬಿಡುವುದಿಲ್ಲ. ವಿರಾಗಿಗಳ ಚಕ್ರವರ್ತಿ ಗಿರಿಜೇಶನನ್ನು ಗೆದ್ದಿರುವ ನನಗೆ ಮತ್ತ್ಯಾರು ಸಾಟಿ? ಲತಾಂಗಿಯೆ, ತ್ರಿಲೋಕವನ್ನು ಜಯಿಸಿದ ವಿಜಯನನ್ನು ಎಳೆತಂದು ನಿನ್ನ ಪಾದತಾವರೆಯ ಮಧುಮಯ ತಟಾಕತಟಿಗೆ ಕೆಡಹುವೆನು ಎಂದು ನಿನಗೆ ಅನುಗ್ರಹಿಸುತ್ತೇನೆ.

'ಇಂದುಮುಖಿಯೆ, ಲೆಕ್ಕವಿಲ್ಲದಷ್ಟು ವ್ರತಿಗಳು ನನ್ನ ಸಾಮರ್ಥ್ಯ, ಪರಾಕ್ರಮಕ್ಕೆ ಪೂರ್ಣವಾಗಿ ಸೋತಿದ್ದಾರೆ. ಅವರು ತಮ್ಮ ಜೀವಮಾನ ಸಾಧನೆಯ ಫಲಗಳನ್ನು ಅಂಗನೆಯರ ಅಂದಕ್ಕೆ ಸಮರ್ಪಿಸಿದ್ದಾರೆ. ಕಮಲನಾಭ ಕೃಷ್ಣನ ಸಖನ ತಪದ ಮಾತು ಹಾಗಿರಲಿ! ಕೇಳು, ನಾನು ಅದರ ವಿಸ್ತಾರವನ್ನು, ಆಳದ ನೆಲೆಯನ್ನು ಬಲ್ಲೆನು.

'ಅರ್ಜುನನ ವ್ರತವು ಮಕರಂದ ತುಂಬಿದ ಹೂವಿನ ಎದೆಯ ಅಂಚಿನಲ್ಲಿ ಕುಳಿತು ಬಾಯಾರಿದ ಭ್ರಮರವು ತತ್ತರಿಸುವ ಸಂಯಮದಂತಿದೆ! ಪರಾಜಯವೇ ಜಯವಾಗಿ ಅದು ನಾಳೆಯ ದಿನವೇ ಮುಕ್ತಾಯವಾಗುವುದು!'

ಮದನನ ವಾಣಿಯನ್ನು ಕೇಳುತ್ತ ತರುಣಿ ಉಬ್ಬಿ ಹೋದಳು. ಬತ್ತಿದ ಸರೋವರಕ್ಕೆ ಹೊಸ ನೀರು ಬರುವಂತೆ, ಕತ್ತಲೆಯ ಕಗ್ಗವಿಗೆ ನೇಸರನು ಉದಯಿಸಿದಂತೆ ಆಶೆ ಬಾಲೆಯ ಎದೆ ತುಂಬಲು ನಿರಾಶೆ ತೊಲಗಿ ಹೋಯಿತು. ಕೃತಜ್ಞತೆಯಿಂದ ಕಂಬನಿ ಜಿನುಗುತ್ತಿರಲು,

''ಪ್ರೇಮ ಗುರುವೆ, ನನ್ನ ಒಡಲ ಸರಳ ಸಾಧಾರಣತೆ ಮಾಯವಾಗಿ ಹೋಗಲಿ. ಒಂದು ದಿನಕ್ಕಾದರೂ ರತಿಯ ರಮಣೀಯತೆ ಬರಲಿ. ವಿರಾಗಿ ಅರ್ಜುನನ ಎದೆಯ ಕೋಟೆಯನ್ನು ಪುಡಿ ಮಾಡುವಂತಹ ಶೃಂಗಾರ ಬಂದು ಸೇರಲಿ. ಹೇ ಅತನುದೇವನೆ, ನಾನು ದುಃಖಿತೆ! ಪ್ರಣಯಾರ್ಥಿ ನಾನು; ಇದೊ ಕೈ ಮುಗಿದು ಶರಣಾಗಿರುವೆ!'

ಎಂದು ಹೇಳಿ ಬಾಗಿ ವಂದಿಸಿದ ಚಿತ್ರಾಂಗದೆಯನ್ನು ಮನ್ಮಥನು ಎತ್ತಿದ್ದನು. ವರದ ಹಸ್ತದಿಂದ ಕೃಪೆ ದೋರುತ್ತ ಸವಿದನಿಯಲ್ಲಿ ಹೀಗೆ ಹೇಳಿದನು.

ಒಂದು ಮಾಸಂಬರಂ ಮೈಸಿರಿ ತುಂಬಿ ಬರಲಿ

'ಕಮಲಮುಖಿಯೆ, ಏಳು. ನನ್ನ ರತಿಯ ಸಖಿಯೆ, ಏಳು. ನಿನ್ನ ಇಚ್ಛೆ ಗೆಲ್ಲುತ್ತದೆ. ನಿನ್ನ ಅಂಗದ ರಮ್ಯತಾ ದೀಪಜ್ವಾಲೆಯು ಪಾರ್ಥನ ವಿರಾಗ ಪತಂಗವನ್ನು–ಶೂನ್ಯತೆಯು

ಗಾಳಿಯನ್ನು ಸೆಳೆಯುವಂತೆ ಸೆಳೆ ಸೆಳೆದು ಸುಟ್ಟುರಿಸಿ ಜಾಜ್ವಲ್ಯವಾಗುವಂತೆ ಮಾಡುತ್ತೇನೆ.

'ಪ್ರಿಯ ಶಿಷ್ಯೆಯೆ, ಒಂದು ದಿನವೇತಕ್ಕೆ, ಪೂರ್ಣ ಒಂದು ತಿಂಗಳು ಚೆಲುವಿನ ವಸಂತ ಬನದ ಹೂಗಳ ಮೈಯ ಸಿರಿಯು ನಿನ್ನ ಒಡಲನ್ನು ಪೂರ್ತಿ ತುಂಬಿ ಬರಲಿ. ದುಂಬಿಗಳ ಝೇಂಕಾರ, ಪಕ್ಷಿಗಳ ಇಂಚರ, ಚಂದ್ರನ ಸೂರ್ಯನ ಉದಯ ಅಸ್ತಗಳ ಪೆಂಪು ನಿನ್ನದಾಗಲಿ. ತೆಂಕಣ ಗಾಳಿಯ ತಂಪು, ಮಾವಿನ ಚಿಗುರ ಸೊಂಪು, ನೀರವ ರಾತ್ರಿಯ ನೀಲಿಮ ಆಗಸದಂಗಣದ ತಾರೆಗಳು ತುಂಬಿದ ಸೌಂದರ್ಯ ಸಂಪದ ನಿನ್ನದಾಗಲಿ.

'ಕಾಮನ ಬಿಲ್ಲಿನ ಬೆಡಗು, ಕಲಕಂಠ ಕೋಗಿಲೆಯ ಉಲಿತ, ಮಯೂರನ ನೃತ್ಯದ ಐಶ್ವರ್ಯ ನಿನ್ನಲ್ಲಿ ಮೂಡಲಿ. ಮೊದಲ ಹೊಸ ಮಳೆಯಲ್ಲಿ ಮಿಂದ ಮಲೆಗಳ ಹಸುರು, ಮೊರೆ ಮೊರೆಯುತ್ತ ನೊರೆಗರೆದು ಮಿರುಮಿರುಗಿ ಶಿಲೆಯಿಂದ ಶಿಲೆಗೆ ಚಿಮ್ಮಿ ನೆಗೆಯುವ ತೊರೆಯ ಲೀಲೆಯ ಮನೋಹರತೆ ನಿನ್ನಲ್ಲಿ ನಲಿಯಲಿ. ಹೀಗೆ ವಸಂತನ ಸರ್ವವೂ ನಿನ್ನ ಅಂಗೋಪಾಂಗವನ್ನು ಸುತ್ತಿ ಮುತ್ತಿ ಜಗನ್ಮೋಹನ ಜಾಲವನ್ನು ನೇಯಲಿ!

'ನಾನು ನಿನ್ನ ಜೊತೆಯಲ್ಲಿಯೇ ಇರುತ್ತೇನೆ. ನಿನ್ನ ಮೈ ಮುಡಿಗಳಿಂದ ಸೂಸುವ ಸುವಾಸನೆಗೆ ಸವ್ಯಸಾಚಿ ಅರ್ಜುನನ ನೋಂಪಿಯು ತಾನೇ ಮೈ ಮರೆಯುವಂತೆ ಮಾಡುತ್ತೇನೆ! ಏಳು, ಕಮಲಮುಖಿ ನೋಡು! ನೀನೀಗ ಅಂಗಜ ಮೋಹನ ದೀಪ ಶಿಖಿ!'

ಮಧುರ ರಸ ಹರ್ಷನಾದ ಕೇಳುತ್ತಿದ್ದಂತೆ ದರ್ಶನವು ಮರೆಯಾಯಿತು! ಚಿತ್ರಾಂಗದೆಯು ನಿಧಾನವಾಗಿ ಕಣ್ಣು ತೆರೆದಳು: ಅವಳು ಪುನರ್ಜನ್ಮ ಪಡೆದಂತೆ ಮಧುರಾನುಭವ ಸ್ವಪ್ನದ ಆನಂದದಿಂದ ಉಬ್ಬಿ ಹೊರಗೆ ನೋಡಿದಳು. ಸ್ವಪ್ನದಂತಹ ಕಾಡನ್ನು ದಟ್ಟವಾಗಿ ಆವರಿಸಿದ ಬೆಳುದಿಂಗಳ ಮಾಯೆ ಕಾಣುತ್ತಿತ್ತು! ತೇನೆ ಹಕ್ಕಿ ಹಾಡುತ್ತಿತ್ತು!

❑

3. ಮಧುಮಯ ಪ್ರಣಯ ಪ್ರಸಂಗ

ಏಳು ವೀಣೆಯೆ! ಏಳು ಶೃಂಗಾರ ಸುಂದರಿಯೆ! ಅಂತರ್ಯದಲ್ಲಿರುವ ಚಿಂತನೆಯನ್ನು ಬೆಳಗಿಸುವ ಪ್ರತಿಭಾ ಮನೋಹರಿಯೆ ಏಳು! ಮುಂದಿನ ಕಥಾ ಭೋಗವನ್ನು ಮಧುಮಯ ಪ್ರಣಯ ಪ್ರಸಂಗವನ್ನು ಹೇಳು. ಕವಿಯಾದ ನಾನು ನಿರನುಭವಶಾಲಿ. ಆದುದರಿಂದ ನಿನ್ನನ್ನು ಬೇಡಿಕೊಳ್ಳುತ್ತಿರುವೆ. ಜಡಮತಿಗೆ ರಸಮಂತ್ರವನ್ನು ನೀಡು. ನಾದಮಯವಾದ ಕಾಮನ ಕಾಮನ ಬಿಲ್ಲಿನ ತಂತಿಯಿಂದ ಮಾಡಿದ ಮಹಾ ಆಕಾಶ ವೀಣೆಯನ್ನು ಮಿಡಿದು ನನ್ನ ಎದೆಯನ್ನು ನುಡಿಸು!

ಹೂವಿನ ಮೃದು ಪಾದಗಳ ಉಷೆ ಹೆಣ್ಣು ಪೂರ್ವದ ಆಕಾಶ ಮತ್ತು ಭೂಮಿ ಸೇರುವ ಎಡೆಯಲ್ಲಿ ಕೆಂದುಟಿಯ ನಗೆ ಬೀರಿದಳು. ಹೊನ್ನಿನ ಕಿರಣಗಳ ಕೈಯಿಂದ ವಿಸ್ತಾರವಾದ ಭೂಮಿತಾಯಿಯ ಸಂಪದ್ಭರಿತ ಹಸುರು ಉಡುಗೆಯ ಮೇಲೆ ಹನಿಮುತ್ತುಗಳ ಮಂಗಳಾಕ್ಷತೆಯನ್ನು ಸಿಂಪಡಿಸಿದಳು.

ಅರ್ಜುನನು ಕೊಳದ ಸೆರಗಿನ ಕೋಮಲ ಹೊಸ ಹಸುರಿನ ಮೃದು ಮೆತ್ತೆಯಲ್ಲಿ, ಮಾವಿನ ಮರದ ಕೆಳಗಿನ ಸೊಂಪಿನಲ್ಲಿ ಪದ್ಮಾಸನನಾಗಿ ಕುಳಿತಿದ್ದನು. ಅವನು ಕಣ್ಣಿನ ದೃಷ್ಟಿ ಹರಿವ ನೇರ ಎದುರಿನಲ್ಲಿಯ ದೃಶ್ಯವನ್ನು ಕಂಡು ನಿಬ್ಬೆರಗಾದನು!

ಅದೊ ಕಿವಿಗೊಟ್ಟು ಕೇಳುತ್ತಿದ್ದಾನೆ! ಅವನ ಕರ್ಣಗಳಿಗೆ ಗಂಧರ್ವ ಮಧುರ ಗಾಯನ ಧಾರೆ ಬೀಳುತ್ತಿದೆ. ಸ್ತ್ರೀ ಗಾಯನದ ಸಂಗೀತ ಹೊಳೆ ಅಲ್ಲೋಲ ಕಲ್ಲೋಲವಾಗಿ ಚಂಚಲ ತರಂಗದಂತೆ ಪ್ರವಹಿಸುತ್ತ, ಬೆಟ್ಟದಿಂದ ಕೆಳಕ್ಕೆ ಹರಿಯುವ ಪ್ರವಾಹದಂತಿದೆ. ಅದು ನಿಧಾನವಾಗಿ ಹರಿದು ಬರುತ್ತ ವನದ ಕೊಳವನ್ನು ಭೂಮಿಯನ್ನು ಆಕಾಶವನ್ನು ಪರ್ವತ ಪ್ರಾಂತವನ್ನು ಚುಂಬಿಸಿ ಆಲಂಗಿಸುತ್ತ ಮಧು ಜಗವನ್ನು ಆನಂದ ಮೂರ್ಛೆಯಿಂದ ಮಲಗಿಸಿತು!

ಪೆಣ್ದುಂಬಿಯ ಗದ್ದಲ, ಕೋಗಿಲೆಯ ಗಟ್ಟಿಯಾದ ಸ್ವರ, ಅನೇಕ ಪಕ್ಷಿಗಳ ಕುಕಿಲಿನ ತುಮುಲ, ಅವುಗಳ ಸೂಕ್ಷ್ಮವೂ ಅಸ್ಫುಟವೂ ಆದ ಮಧುರ ಧ್ವನಿ ಗೀತೆಯು–ಆ ಗಾನ ಗೌರವದೆದುರು ಮೂಕವಾದಂತಿತ್ತು. ಅರ್ಜುನನ ಆತ್ಮವು ಆ ಗಾನದ ಹರಿವಿನಲ್ಲಿ

ಮಿಂದು ರೋಮಾಂಚನಗೊಂಡಿತು. ಜನ್ಮ ಜನ್ಮಾಂತರದ ಭೋಗವನ್ನು ಮನಸ್ಸಿಗೆ ತಂದಿತು. ಮತ್ತು ಭವಿಷ್ಯದ ಸುಖದಾಶೆಯನ್ನು ಅವನ ಎದೆಯಲ್ಲಿ ಕಡೆಯಿತು. ಜಡಜಗತ್ತು ಕಾಲದೇಶ ಸಮೇತ ಆ ಇಂಪಿನ ಸಮಾಧಿಯಲ್ಲಿ ಐಕ್ಯಗೊಂಡು ಕರಗಿದಂತಾಯಿತು!

ಸಂಭ್ರಮಾನಂದಾತಿಶಯಕವಳುಡುಗೆ ಕರಗುತೇನ್ ಆಕಾಶಮಾಗಿಹುದೊ

ಅರ್ಜುನನು ಕಣ್ಣು ಮಿಟುಕಿಸದೆ ನೋಡುತ್ತ ಆಲಿಸುತ್ತಿದ್ದನು. ಆಗ ತಕ್ಷಣವೆ ಪುಷ್ಪಮಯವಾದ ಕಾನನದಿಂದ ಹೊಮ್ಮುವ ಸುಗಂಧವೆನ್ನುವ ರೀತಿ, ಕೊಳದ ಆಚೆಯ ದಡದಲ್ಲಿ ಗಾನವೇ ಹೆಪ್ಪುಗಟ್ಟಿದಂತೆ ಸರ್ವ ಸೌಂದರ್ಯನಿಧಿ ಸ್ತ್ರೀ ಕಲಾಕೃತಿಯೊಂದು ಗೋಚರಿಸಿತು!

ಜಡವಲ್ಲದ ಬಿಳಿದಂತದಿಂದ ಸಿದ್ಧಪಡಿಸಿದ ಸವಿಗನಸು ಸಂಚರಿಸಲು ಆಶಿಸಿತೊ ಎನ್ನುವಂತೆ ಮೃದುಗಮನೆ ಹರಿಣನೇತ್ರೆ ಲತಾಂಗಿ ನಳಿನಮುಖಿ ಬಂದಳು. ಅವಳು ಹೂಗಳಿಗೆ ಹೂ ಎಂಬ ಭ್ರಾಂತಿಯನ್ನು ಹುಟ್ಟಿಸುತ್ತ, ಲತೆಗಳಿಗೆ ಲತೆಯಂತೆ ಬಳುಕುತ್ತ, ಕಂಪಿಗೆ ಕಂಪಾಗಿ, ತಣ್ಣನೆ ಗಾಳಿಗೆ ಕುಳಿರ್ಗಾಳಿಯಾಗಿ ಸುಳಿಯುತ್ತಾ ಬಂದಳು. ಮೃದುನಾದ ಆಲಾಪವನ್ನು ಮಾಡುತ್ತ ನಿಧಾನವಾಗಿ ಬಂದಳು. ಕೆರೆಯ ಅಂಚಿನಲ್ಲಿ ನಿಂತು ಮುಗುಳ್ನಗೆಯ ಮಾಯೆಯನ್ನು ಬೀಸಿದಳು.

ಆ ಲಲಿತೆಯು ವಸಂತ ಋತು ಬಿರಿದು ಅರಳಿ ತಟ್ಟನೆ ಸ್ವರ್ಗದಿಂದ ಮರ್ತ್ಯಕ್ಕೆ ಅವತರಿಸಿದೆ ಎನ್ನುವಂತಿದ್ದಳು. ಅವಳನ್ನು ಕಾಣುವುದೇ ತಡ ಕಿರೀಟಿಯ ಬಾಯಾರಿದ ಹಂಬಲದ ಸರ್ವೇಂದ್ರಿಯಗಳಿಗೆ ಮಧುಪಾನವಾದಂತಾಯಿತು! ಕೆಂದಳಿರು, ಪುಷ್ಪಮೇಳ, ಕೋಗಿಲೆಯ ಧ್ವನಿ, ಮಧುವನ್ನು ಸವಿಯುವ ಭೃಂಗಗಳ ಗುಂಪು ಉಂಟುಮಾಡುವ ಗಾನ, ಗಿಣಿ ಗೊರವಂಕ ಮುಂತಾದ ಪಕ್ಷಿಗಳ ಇಂಪುದನಿ ಅದರೊಡನೆ ಬೆರೆತು ಬರುತ್ತಿತ್ತು.

ಹರಿಣ, ಚಿಗರೆಗಳು ಅಳುಕಿಲ್ಲದೆ ಲೀಲೆಯಿಂದ ಓಡಾಡುತ್ತಿದ್ದವು. ಮೆಲುಗಾಳಿಯು ಹೂಗಂಪನ್ನು ಹೊತ್ತು ಬನ ಬನದಲ್ಲಿ ಅಲೆದಾಡುತ್ತಿತ್ತು. ಆ ಕಾನನವು ತಂಪು ಬಿಸಿಲಿನ ಇಂಪಾದ ಸಂಭ್ರಮದಿಂದ ಸೊಂಪಾಗಿ ಮಧು ಮಹೋತ್ಸವವಾದ ರೀತಿ ರಾರಾಜಿಸಿತು. ಅರ್ಜುನನು ಆ ಮನೋಹರ ಸನ್ನಿವೇಶದಲ್ಲಿ ಮದನನ ವರದಿಂದ ಸ್ವರ್ಗ ಸೌಂದರ್ಯದ ಐಸಿರಿಯನ್ನು ಸೂರೆಗೊಂಡಂತೆ ಶೋಭಿಸುತ್ತಿದ್ದ ಚಿತ್ರಾಂಗಿಯನ್ನು ಕಂಡನು. ಅಂಗಜನ ಶೃಂಗಾರ ಚಾತುರ್ಯದಿಂದ ಚೆಲುವಾದ ಅವಳು, ಆ ವ್ರತಧಾರಿಯನ್ನು ರಂಜಿಸಿ ಕಾಂತಿಪ್ರಭೆಯನ್ನು ಬೀರಿದಳು.

ಸರ್ವ ರಸ ರೂಪುಗಳ, ಗಂಧವರ್ಣಗಳ, ಸ್ಪರ್ಶಾನಂದ, ಸುರಗಾಯನ ನೆರೆದು ಅವಳ ಹಿನ್ನೆಲೆಯನ್ನು ಚಿತ್ರಿಸಿದ್ದವು. ಕೆರೆಯ ಹಸುರಿಡಿದ ದಡದ ಅಂಚಿನಲ್ಲಿ ಆ ಧವಳ

ಸ್ವಪ್ನೆಯು ಚೈತ್ರ ಹೊತ್ತು ತಂದು ಹೂ ತುಂಬಿದ ಲತೆಯಂತೆ ತುಸು ಬಾಗಿದಳು. ಪ್ರಾತಃ ಸರೋವರದ ಆ ಜಲ ದರ್ಪಣದಲ್ಲಿ ತನ್ನನ್ನು ತಾನು ದರ್ಶಿಸುತ್ತ ಬೆಚ್ಚಿದಳು. ಪ್ರತಿಬಿಂಬದ ಸೊಬಗಿಗೆ ಆಶ್ಚರ್ಯ ಚಕಿತಳಾಗಿ ತನಗುಂಟಾದ ಆಹ್ಲಾದದಿಂದ ನಲಿದಳು! ನಗೆಯ ಬಿಳಿಯ ಅರೆ ಬಿರಿದ ಹೂವು-ತೊಂಡೆ ಹಣ್ಣಿನಂತಹ ತುಟಿಗಳಿಂದ ಹೊಮ್ಮಿ ನಿಂತು ಅರಳಿತು.

ಚೆನ್ನೆಯು ತನ್ನ ಕೋಮಲವಾದ ತೋಳುಗಳಿಂದ, ಚಿಗುರಿನಂತಹ ಮದನ ಕೈಯ ಕತ್ತಿಯಿಂದ ಕೊಳದ ಮಸಿಗತ್ತಲೆಯ ಕಟ್ಟನ್ನು ಒಡೆದಳು. ಅದರ ಕಪ್ಪುಗತ್ತಲ ಪ್ರವಾಹವನ್ನು ಓಡಿಸುವಂತೆ ತುರುಬು ಸಡಿಲಿಸಿ ಕೇಶಪಾಶವನ್ನು-ಧರ್ಮಾನುಜನ ವ್ರತದ ಕೊರಳಿಗೆ ಉರುಳು ಕಣ್ಣಿಯನ್ನು ಕಟ್ಟಿ ಬಿಗಿಯುವಂತೆ ಬೀಸಿದಳು. ನರನು ಮೈಯೆಲ್ಲ ಕಣ್ಣಾಗಿ, ಜೀವವೇ ದೃಷ್ಟಿಯಾದಂತೆ ನೋಡುತ್ತಿದ್ದನು!

ನಿಶ್ಚಲವಾದ ಯಮುನೆಯ ಅಲೆಯ ಕತ್ತಲ ಪ್ರವಾಹವು ಅರ್ಧ ಚಂದ್ರನಾಕಾರದ ಬೆಳದಿಂಗಳ ಬೆಟ್ಟದಿಂದ ಇಳಿದು ಬಂದಿತೊ ಎನ್ನುವಂತೆ-ಚಿತ್ರಾಂಗದೆಯ ಕರಿಕೂದಲು ತೆರೆತೆರೆಯಾಗಿ ತುಂಬು ಪ್ರವಾಹದಂತೆ ಜೋಲಾಡಿತು. ಆ ಬಿಡುಮುಡಿಯ ದೊಡ್ಡ ಪ್ರವಾಹವು ಅಮಾವಾಸ್ಯೆಯ ಕತ್ತಲನ್ನು ಮೆತ್ತಿ ರಾರಾಜಿಸಿತು.

ಅವಳು ತನ್ನ ಮೃದುವಾದ ಎದೆಯ ತೆರೆಮರೆಯ ಸೆರಗನ್ನು ನಿಧಾನವಾಗಿ ಮೆಲ್ಲನೆ ಪಕ್ಕಕ್ಕೆ ಸರಿಸಿದಳು. ನಾಚಿಕೆಯಲ್ಲಿ ತೋರುವ ಪವಿತ್ರತೆ ಶಿಥಿಲವಾಗದ, ಕುಂದಿಲ್ಲದ ಅವಯವದ ತಾವರೆ ದಿಂಡಿನಂತಹ ತನ್ನ ಕೋಮಲತೆಯನ್ನು ಈಕ್ಷಿಸಿದಳು. ಹೆಮ್ಮೆಯಿಂದ ಬಿಂಕದ ಒಯ್ಯಾರದಿಂದ ಅರ್ಜುನನು ಇದ್ದ ಕಡೆಗೆ, ಕಂಡರೂ ಕಾಣದಂತೆ ನೋಡಿದಳು.

ಅವಳ ಉಡುಗೆ ಕರಗುತ್ತ ಆಕಾಶದಂತೆ ಸರ್ವ ಗೋಚರವಾಯಿತೊ ಎನ್ನುವಂತಾಯಿತು. ಮುಚ್ಚಿದೆಯೆ ಅವಳ ಅಂಗದ ಸೊಬಗನ್ನು ಸೂಕ್ಷ್ಮತರವಾಗಿ ಆವರಿಸಿತು!

ಕೊಳವು ಅವಳ ಪ್ರತಿಬಿಂಬವನ್ನು ಹೊತ್ತು, ತಾನು ಧನ್ಯನಾದೆನೆಂದು ಜುಮ್ಮೆಂದು ಪುಳಕಿಸುವಂತೆ-ತಂಗಾಳಿಯ ಚುಂಬನ ಕ್ರೀಡೆಯಿಂದ ಕಂಪಿಸಿತು.

ಅವಳನ್ನು ಕಣ್ಣಾಗಿ ಕಾಣುತ್ತ ಅರ್ಜುನನು ಬೆರಗು ಬಡಿದು ನೋಡುತ್ತಿದ್ದನು. ಆ ಭಾಮೆ ಬಂದ ಹಾಗೆ ಹಿಂದಿರುಗಿ ನಿಬಿಡಾರಣ್ಯದಲ್ಲಿ ಮರಗಿಡ ಪೊದರುಗಳ ಎಲೆಯ ಗರ್ಭವನ್ನು ಹೊಕ್ಕಳು. ಸುರಸಂಧ್ಯೆಯು ತಾನು ಇರುಳಿನ ತೋಳಿನ ಸೆರೆಯಲ್ಲಿ ಇಳಿದು ಇಲ್ಲವಾಗುವಂತೆ ಅವಳು ಕಾಣದಂತೆ ಮರೆಯಾದಳು.

ಸೃಷ್ಟಿಯ ಹೃದಯ ಸತ್ತ್ವವು ತಾನು ಪರಮ ಸೌಂದರ್ಯದ ಆಕೃತಿ ಪಡೆದು ಇಷ್ಟು ಹೊತ್ತು ಮಿಂಚಿ ಸುಳಿದಾಡಿದಂತಾಯಿತು. ಅರ್ಜುನನು ಮೇಲೆದ್ದನು. ಕನಸಿನಿಂದ

ಎಚ್ಚರಗೊಂಡರೂ ಅದನ್ನು ಹುಡುಕುವವನಂತೆ ವ್ರತವನ್ನು ಹಳಿದನು. ನುಡಿಯ ಆಣೆಯನ್ನು ಕಡೆಗಣಿಸಿದನು.

ಅವನು ತುಂಬಿ ಭೃಂಗ ಪಕ್ಷಿಗಳ ಸಂಗೀತ ಸಂಗದಲ್ಲಿ ಮಧುರಂಗದ ಅಂತರಂಗದ ಕಾಡುಹಾದಿಯಲ್ಲಿ ಸಾಗಿದನು. ಪ್ರೇಮಾಮೃತದ ಭ್ರಮೆ ಆವರಿಸಿದೆ ಎನ್ನುವಂತೆ ಸೊಬಗಿನ ಅರಸಿಯನ್ನು ಹುಡುಕುತ್ತ ಸಾಕಷ್ಟು ಸಮಯ ತೊಳಲಾಡಿದನು. ಹೀಗೆ ಕಬ್ಬಿನ ಬಿಲ್ಲನ್ನು ಹಿಡಿದ ಮನ್ಮಥನ ಬರುವಿಕೆಯು ಅರ್ಜುನನನ್ನು ಮರುಳು ಮಾಡಿ ಚಿತ್ರಾಂಗದೆಯ ನೆಲೆಗೆ ಕೊಂಡೊಯ್ದಿತು!

ವೈರಾಗ್ಯದಾತ್ಮಹತ್ಯೆಗೆ ಮಾಯೆ ಸಾರ್ಚಿದಾ ಪ್ರಗ್ರಹಂ!

ಅರ್ಜುನನು ಶಿವನ ದೇವಾಲಯವನ್ನು ಕಂಡುದೇ ತಡ ಹೆಬ್ಬಾಗಿಲ ಬಳಿಗೆ ಹೋಗಿ ನೋಡಿದನು. ಯತಿಗೆ ಶಿವನ ಗುಡಿಯೆ ಮದನನ ಸದನವಾಯಿತು ಎನ್ನುವಂತೆ ಆ ಕಾಮಿನಿಯ ದೇಹರೂಪ ಗೋಚರಿಸಿತು. ಅದು ಅವನ ವೈರಾಗ್ಯದ ಆತ್ಮಹತ್ಯೆಗೆ ಮಾಯೆ ಬೀಸಿದ ಹಗ್ಗದಂತಿತ್ತು.

ವಿಸ್ತಾರ ಸಾಗರದಲ್ಲಿ ಬಿರುಗಾಳಿಗೆ ಉಬ್ಬೆದ್ದು ಕ್ಷೋಭೆಗೊಳಗಾದ ತರಂಗಗಳು ತಾಂಡವ ನೃತ್ಯವನ್ನು ಮಾಡುವವು. ಅದರಂತೆ ಭಾವದುದ್ರೇಕವು ಅರ್ಜುನನ ಪ್ರಾಣ ಸಾಗರದ ಹೃದಯ ತೀರವನ್ನು ಆಕ್ರಮಿಸಿದವು. ಅವನು ಒಮ್ಮೆ ಮಾತನಾಡಲು ಪ್ರಯತ್ನಿಸಿದ, ಇನ್ನೊಮ್ಮೆ ಪ್ರಯತ್ನಿಸಿದ. ನುಡಿ ಹೊಮ್ಮದೆ ಕಲ್ಲಿನ ಪ್ರತಿಮೆಯಂತೆ ಬರಿದೆ ಮಿಳ್ಮಿಳನೆ ನೋಡುತ್ತಿದ್ದ.

ಮೃಗಾಕ್ಷಿ ಚಿತ್ರಾಂಗದೆಯು ಆ ಶಾಂತಿಮಯ ದೇವ ಕುಲದ ಅಂಗಣದಲ್ಲಿ ಹೂಗಳಿಂದ ತುಂಬಿದ ಮಲ್ಲಿಗೆಯ ಹಂಬಿನ ಬಳಿ ಪಾದದ ತುದಿ ಬೆರಳ ಮೇಲೆ ಬೆಡಗಿನಿಂದ ನಿಂತು ತೋಳೆತ್ತಿ ಹೂ ಕೊಯ್ಯುತ್ತಿದ್ದಳು. ಅವಳು ಮಿರು ಮಿರುಗುವ ಪೀತ ನೀಲಕಂಠದ ಮಯೂರಿ ವರ್ತಿಸುವಂತೆ, ತನ್ನ ಶಂಖದಂತಿರುವ ಕೊರಳನ್ನು ಬಿಂಕದಿಂದ ಕೊಂಕಿಸುತ್ತ ಪರಿಚಿತ ಧನಂಜಯನನ್ನು ಅಪರಿಚಿತೆಯ ಹಾಗೆ ನೋಡಿದಳು.

ಕೆಸುವಿನ ಅಗಲ ಎಲೆಯ ಮೇಲೆ ಶೋಭಿಸುವ ಹಿಮದ ಬಿಂದು ಗಾಳಿಗೆ ಜಾರಿ ಬೀಳುವಂತೆ ಧಾವಿಸುತ್ತ ಅವನ ಹತ್ತಿರಕ್ಕೆ ಓಡಿ ಬಂದಳು. ಮುಖ ನಾಚಿಕೆಯಿಂದ ಕೆಂಪೇರಿತ್ತು. ಅವಳು ಕೈ ಜೋಡಿಸುತ್ತ ವೀಣೆ ಮಿಡಿದಂತೆ ಸವಿಗೊರಲಿನಿಂದ ಹೀಗೆ ವಿನಯದ ನುಡಿ ಆಡಿದಳು :

'ಯತಿಪತಿಯೆ, ದಯಮಾಡಿ ಬನ್ನಿ, ನೀವು ನನಗೆ ಸನ್ಮಾನ್ಯರು ಮತ್ತು ಅತಿಥಿ. ಈ ದೇಗುಲವು ನನ್ನ ಮನೆ ಹಾಗೂ ಆಶ್ರಮ. ನಾನು ಇಲ್ಲಿ ತಪಸ್ವಿನಿ, ನಿಮಗೆ ಸುಸ್ವಾಗತ.'

ಹೀಗೆ ಮಾತುಗಳ ಮುತ್ತುಮಳೆ ಪಳಪಳನೆ ಸುರಿಯುತ್ತಿರಲು ಅರ್ಜುನನು ಕಡು ಬಡವನಂತಾದನು. ನಾಚಿದನು; ತನ್ನ ವೇಷಕ್ಕೆ ತಾನೆ ಅಸಹ್ಯ ಪಟ್ಟುಕೊಂಡನು. 'ಯತಿಪತಿ' ಎಂಬ ಪದದ ಯತಿತ್ವವನ್ನು ಹಳಿಯುತ್ತ, ಪತಿತ್ವವನ್ನು ಅಪೇಕ್ಷಿಸುತ್ತ ತನ್ನ ನಿಜವನ್ನು ಅತಿ ಕಾತುರತೆಯಿಂದ ಹೀಗೆ ಹೇಳಿದನು :

'ಕುಸುಮ ಕೋಮಲೆ, ನಾನು ಯತಿಯಲ್ಲ, ಕ್ಷತ್ರಿಯ. ನೀನು ನನ್ನ ಬಗ್ಗೆ ಆ ರೀತಿಯ ಆಲೋಚನೆಗೆ ತುತ್ತಾಗ ಬೇಡ. ಯುದ್ಧಗಳಲ್ಲಿ ಬಿಲ್ಲನ್ನು ಹಿಡಿದು ವೈರಿಯ ರುಂಡ ಮುಂಡಗಳನ್ನು ಖಂಡ ಖಂಡವಾಗಿಸಿ ಚೆಂಡಾಡಿ ಮರದ ಕಾಂಡದಂತೆ ನೆಲದ ಮೇಲೆ ಉರುಳಿಸಿದ ಈ ಕೈಯ ಕಲೆಗಳನ್ನು ಇಲ್ಲಿ ನೋಡು. ಖಡ್ಗದ ಆಘಾತಗಳನ್ನು ಉಂಡು, ರಕ್ತಧಾರೆಯಲ್ಲಿ ಮುಳುಗಿ, ಮಜ್ಜೆಯೊಳಗೆ ಅದ್ದಿ ಬಿರುಸಾದ ದೇಹವಿದು. ನಾನು ರಾಜರ ಕುಲದಲ್ಲಿ ಜನಿಸಿದವನು. ಯತಿವೇಷ ನನ್ನ ಒಳಗಿನದಲ್ಲ, ಅದು ಆಗಂತುಕ.'

ಅದನ್ನು ಕೇಳುತ್ತ, ನಸು ಮುಗುಳ್ನಗೆಯನ್ನು ಅರಳಿಸುತ್ತ ನಾರಿ ಹೀಗೆ ನುಡಿದಳು :

'ವೀರವರ, ನೀನು ಹೇಳುವುದೇ ಬೇಡ. ನಿನ್ನನ್ನು ಕಂಡೊಡನೆ ನನ್ನ ಎದೆಗೆ ಅದರ ಕಪಟ ಗೋಚರವಾಯಿತು. ಹಾಗೆಯೆ, ನಾನಾದರೂ ಸಹ ಹುಟ್ಟು ಜೋಗಿನಿಯಲ್ಲ. ಮನಸ್ಸಿನ ಒಂದು ಬಯಕೆಯನ್ನು ಈಡೇರಿಸಿಕೊಳ್ಳಲು ಹೀಗೆ ವ್ರತಧಾರಿಯಾಗಿರುವೆನು.'

'ಸುಂದರಿಯೆ, ನಿನ್ನ ಎದೆಯನ್ನು ಆಲಂಗಿಸಿಕೊಳ್ಳಲು ಆ ಬಯಕೆಯು ಯಾವ ಪುಣ್ಯವನ್ನು ಮಾಡಿದೆ ಎನ್ನುವುದನ್ನು ಹೇಳು. ಲೋಕದ ಬಯಕೆ ನೀನಾಗಿರುವಾಗ, ನಿನಗೆ ಉಂಟಾಗಿರುವ ಬಯಕೆ ಯಾವುದು?

'ನಾನು ತೀರ್ಥಯಾತ್ರೆಯಲ್ಲಿ ಉದಯಾದ್ರಿ ಅಸ್ತಾದ್ರಿಗಳ ಮಧ್ಯೆ ಸಾಗರದಿಂದ ಆವೃತವಾದ ಎಲ್ಲ ದೇಶ ದೇಶಗಳನ್ನು ಸಂಚರಿಸಿ ಬಂದಿದ್ದೇನೆ. ಓ ಲಲನೆ, ನಿನ್ನ ಬಯಕೆ ಏನು ಎನ್ನುವುದನ್ನು ಮತ್ತು ನೀನು ಯಾರು ಎನ್ನುವುದನ್ನು ಹೇಳು. ನನ್ನ ತಿಳಿವು ಸಾಹಸಗಳಿಗೆ ಒಳಗಾದುದೆಲ್ಲವನ್ನು ಸಂತೋಷದಿಂದ ಅರ್ಪಿಸುತ್ತೇನೆ. ಓ ಭುವನ ಮೋಹನ ಮೂರ್ತಿಯೆ, ನಿನ್ನ ಬಯಕೆ ಏನೆಂದು ಹೇಳು!'

'ನನಗೆ ಇಷ್ಟವಾದ ಅವನು ಜಗತ್ಪ್ರಸಿದ್ಧ ವೀರ. ಸೌಂದರ್ಯದಲ್ಲಿ ಬುದ್ಧಿಯಲ್ಲಿ ಮಹಾ ಸಾಹಸದಲ್ಲಿ ಅವನಿಗೆ ಸಮಾನರಾದವರು ಮೂರು ಲೋಕಗಳಲ್ಲಿ ಯಾರೂ ಇಲ್ಲ!'

'ಹೌದೆ? ದಿಟವೆ? ದೇವಿಯ ಕೃಪಾದೃಷ್ಟಿಯ ಪಾಲನೆಗೆ ಪಾತ್ರನಾದ ಪುಣ್ಯಶಾಲಿ ಯಾರು?'

'ಸದ್ವಂಶದಲ್ಲಿ ಹುಟ್ಟಿದವನು. ರಾಜಕುಲದ ಅಗ್ರಗಣ್ಯವಂಶದಲ್ಲಿ ಜನಿಸಿದ ಶ್ರೇಷ್ಠ!'

'ಇಂದುಮುಖಿಯೆ, ಹೆಸರಿನ ಹುಸಿಗೆ ನಿನ್ನ ಎದೆಯ ಸಿರಿಯನ್ನು ಮಾರಬೇಡ. ಬರಿ ಕನಸೊಂದನ್ನು ನಂಬಿ ಅದಕ್ಕೆ ಬಲಿಯಾಗಬೇಡ. ನಿನ್ನ ಒಲುಮೆ ಸಂಪದದ ಪೂಜೆಯನ್ನು ವಿಗ್ರಹವಿಲ್ಲದ ಆ ಗುಡಿಗೆ ಕಳುಹಿಸಬೇಡ.

'ನಾಗವೇಣಿಯೆ, ಕೀರ್ತಿ ಎನ್ನುವುದು ಗಿರಿಯ ಕಂದರದ ಮಂಜು. ಸೂರ್ಯನ ಉದಯಕ್ಕೆ ಅದು ಹೇಗೆ ತಾನೆ ಕಿವಿಯಿಂದ ಕಿವಿಗೆ, ನಾಲಗೆಯಿಂದ ನಾಲಗೆಗೆ ನೆಗೆಯಲು, ಹಿಂಜಿ ಹರಡಿಕೊಂಡು ಹಬ್ಬಲು ಸಾಧ್ಯ? ದೇಹವು ಆತ್ಮಕ್ಕೆ ಸೂತ್ರವಲ್ಲ. ನಿನ್ನ ಹೃದಯದ ನಿಧಿಯನ್ನು ಸೂರೆಗೊಂಡಿರುವ ಆತನು ಯಾರು? ನನಗೆ ತಿಳಿಸು!'

'ವೀರಯತಿಯೆ, ಬೇರೆಯವರ ಹೆಸರಿಗೆ ಹೀಗೇಕೆ ಅಸೂಯೆ ಪಡುತ್ತಿರುವೆ? ಜಗದ್ವಿಖ್ಯಾತವಾದ ಆ ಮಹಾಕುಲವನ್ನು ತಿಳಿಯೆಯಾ?'

'ಕುರುಕುಲವೆ?'

'ಕುರುವಂಶದ ಕ್ಷೀರಸಾಗರದಲ್ಲಿ ಹುಟ್ಟಿದ ಚಂದ್ರನಂತಹ ಲೋಕೈಕವೀರನ ಹೆಸರನ್ನು ಕೇಳಿ ತಿಳಿದಿಲ್ಲವೆ?'

'ನಿನ್ನ ಚೆಂದುಟಿಗಳಿಂದ ಕೇಳಲು ಆಶಿಸುವೆನು. ಲೋಲಲೋಚನೆ ಆ ಹೆಸರ ಹೆಜ್ಜೇನನ್ನು ನನಗೆ ಊಡಿಸು.'

ಮಣಿದ ಮೊಳಕಾಲಿನಲಿ ಸೆರಗೊಡ್ಡಿ ಶರಣಾರ್ಥಿಯಾಗಿರುವನರ್ಜುನಂ!

ಕಲಹಂಸ ನಡಿಗೆಯವಳು ಕಿರುನಗೆಯ ಬಿಂಕದಿಂದ, ಇಂಪಾದ ಧ್ವನಿಯ ಕೋಕಿಲ ಕಂಠದಿಂದ, ಸವ್ಯಸಾಚಿಯ ಧಮನಿಯಲ್ಲಿ ಮಧುಮದಿರೆ ಹರಿಯುವಂತೆ ಹೀಗೆ ನುಡಿ ಸಿಂಪಡನೆ ಮಾಡಿದಳು :

'ಅವನು ತ್ರಿಭುವನ ಜಗದ್ವಿಜಯಿ ಅರ್ಜುನ! ಬೆರಗಾಗಿ ದೃಷ್ಟಿಸುತ್ತಿರುವೆ ಏಕೆ? ಅಸಂಖ್ಯಾತ ಜನರ ಶುಭ್ರವಾದ ಸತತ ಹೊಗಳಿಕೆಯ ಸ್ವಾತಿ ಮಳೆಗೆ ಬಾಯ್ದೆರೆಯುತ್ತ, ನನ್ನ ಹೃದಯ ಭಕ್ತಿ ಶುಕ್ತಿ (ಮುತ್ತಿನ ಚಿಪ್ಪು)ಯಲ್ಲಿ ಮುತ್ತುಗಳನ್ನು ರಚಿಸಿದ್ದೇನೆ. ಅದರಿಂದ ವರಣ ಮಾಲೆ (ಸ್ವಯಂವರ ಸಮಯದಲ್ಲಿ ವರಿಸಿದುದರ ಸಂಕೇತವಾಗಿ ವಧುವು ವರನ ಕೊರಳಿಗೆ ಹಾಕುವ ಹಾರ)ಯನ್ನು ಹೆಣೆದಿದ್ದೇನೆ. ಆ ಪ್ರೇಮಾಂಜಲಿಯನ್ನು ಅರ್ಪಿಸಲು ಕಾದಿದ್ದೇನೆ.

'ಯತಿವರನೆ, ನನಗೆ ಹೇಳು, ಆ ಕೀರ್ತಿ ಬರಿ ಹುಸಿಯೆ? ಹುಸಿಯೆಂದು ಒಮ್ಮೆ ಹೇಳು; ಆ ವರಣ ಮಾಲೆಯನ್ನು ಹರಿದು, ಮುತ್ತುಗಳನ್ನು ಒಡೆದು ನೆಲಕ್ಕೆ ಬಡಿದು ಪುಡಿಯಾಗಿಸುತ್ತೇನೆ!'

'ದೇವಿ, ಬೇಡ. ಆ ಸಾಹಸ ಬೇಡವೆಂದು ಬೇಡಿಕೊಳ್ಳುತ್ತೇನೆ. ಆ ಹೆಸರು ಆ ಸಾಮರ್ಥ್ಯ ಆ ಧೈರ್ಯ ಆ ಕೀರ್ತಿ ಹುಸಿಯಿರಲಿ, ಇರದಿರಲಿ; ಅವನ ಕೈಯನ್ನು ಬಿಡದೆ ಕರುಣೆ ತೋರು! ನಿನ್ನೆದೆಯ ಕೋಮಲ ಆಶ್ರಯದಿಂದ ನೂಕದಿರು; ದಿಕ್ಕಿಲ್ಲದ ಪರದೇಶಿ ನಾನು! ಇದೊ ದೇವಿ, ಮಣಿದ ಮೊಣಕಾಲಿನಲ್ಲಿ ಸೆರಗೊಡ್ಡಿ ಶರಣಾರ್ಥಿಯಾಗಿರುವನು ಅರ್ಜುನನು!'

'ಆಃ! ನೀನು ಅರ್ಜುನನೆ?'

'ಹೌದು; ನಾನೇ ಆ ಪ್ರೇಮಭಿಕ್ಷಾರ್ಥಿ! ನಿನ್ನೆದೆಯ ಬಾಗಿಲಿಗೆ ತಿರುಪೆಗಾಗಿಯೆ ಬಂದೆ.'

ಎಂದು ಹೇಳುತ್ತ ಮೊಳಕಾಲೂರಿ ಆಸೆಯಿಂದ ಕೂಡಿದ ದೃಷ್ಟಿಯನ್ನು ಹರಿಸುತ್ತ, ಎರಡು ಕೈಗಳನ್ನೂ ಜೋಡಿಸಿ ಎತ್ತಿ, ತನ್ನ ಶರೀರ ಸೌಂದರ್ಯದ ಪಾದದಡಿಯಲ್ಲಿ ಪೂಜೆ ಮಾಡುತ್ತಿರುವವನನ್ನು ಚಿತ್ರಾಂಗದೆ ನೋಡಿದಳು. ಕನಿಕರದಿಂದ ಕರಗಿದಳು. ಆರ್ದ್ರತೆಯಿಂದ ಕಣ್ಣು ತೋಯ್ದಿತು. ಉಸಿರು ನಿಟ್ಟುಸಿರನ್ನು ಹೊಮ್ಮಿಸಿತು. ದೇಹ ಕಂಪಿಸುತ್ತ ಬೆವರಿತು.

ಮಣಿದ ಮುಗಿಲಿನ ಮೇಲೆ ಮಳೆಬಿಲ್ಲು ತುಸು ಬಾಗಿ ನಿಲ್ಲುವಂತೆ ಅರ್ಜುನನನ್ನು ಎತ್ತಲು ಕೊಂಕಿದಳು. ಪುನಃ ಹಿಂಜರಿದು ತೆಂಗಿನ ಮರದಂತೆ ನೆಟ್ಟನೆ ನಿಮಿರಿ ನಿಂತಳು. ಆ ಮನ್ಮಥ ಶಿಷ್ಯೆಯು ಸಂಯಮವನ್ನು ಸಾಧಿಸುತ್ತ ಮತ್ತೆ ಹೀಗೆ ನುಡಿದಳು :

'ವೀರವರನೆ, ಧರ್ಮರಾಜನ ಸಹೋದರ ಅರ್ಜುನನು ಇಪ್ಪತ್ತು ವರ್ಷಗಳು ಪೂರ್ತಿ ಬ್ರಹ್ಮಚರ್ಯ ವ್ರತವನ್ನು ಕೈಕೊಂಡು ಈ ಪೃಥ್ವಿಯಲ್ಲಿ ತೀರ್ಥ ಯಾತ್ರೆಯನ್ನು ಮಾಡವನೆಂಬುದು ಸುಳ್ಳೇನು?'

ನಿನ್ನಿದಿರೊಳಾವ ನಿಯಮಂ? ಏನು ಸಂಯಮಂ?

'ದೇವಿಯೆ, ಚಂದ್ರನು ರಾತ್ರಿಯ ಕತ್ತಲೆಯ ಕಟ್ಟಳೆಯನ್ನು ಕೆಡಿಸುವಂತೆ ನೀನು ನನ್ನ ವ್ರತವನ್ನು ಕೆಡಿಸಿರುವೆ. ನಿನ್ನ ಎದುರಿನಲ್ಲಿ ಯಾವ ನಿಯಮ? ಏನು ಸಂಯಮ? ಆ ಕಟ್ಟುಪಾಡು ಅಗ್ನಿಗೆ ದಹಿಸಿ ಹೋಗುತ್ತದೆ. ಅದು ವಿಶ್ವ ಕರ್ತೃವಿನ ಆಜ್ಞೆ, ಅದು ತರಗೆಲೆಯನ್ನು ಹೇಗೊ ಹಾಗೆ ಅರೆಬಿರಿದ ಹೂಗಳನ್ನು, ಶವವನ್ನು ಹೇಗೊ ಹಾಗೆ ಜೀವ ಚೈತನ್ಯದ ಹಸುಳೆಯನ್ನು ದಹಿಸಿ ನಿಷ್ಪಕ್ಷಪಾತತೆಯನ್ನು ಪ್ರಕಟಪಡಿಸುತ್ತದೆ.

'ಆದರೆ ನಿನ್ನಂತಹವರು ಕೈ ಹಿಡಿಯಲು ಅದು ತನ್ನ ನಿಯಮವನ್ನು ತ್ಯಜಿಸಲು ಹಿಂಜರಿಯದು! ಭಾವರಾಗದ ಜೀವಿಯೂ ಸಹಜ ಸಂಚಲ ನರಮನುಷ್ಯನೂ ಆದ ನಾನು ಆ ನಿಷ್ಠೆಯನ್ನು ಹೇಗೆ ಪಾಲಿಸುವೆನು? ಇದೇ ಪರಾಜಯ, ನನಗೆ ಇಂದು ಪರಮಜಯ!'

ಅರ್ಜುನನ ನುಡಿ ಕೇಳಿದಳು. ಮನದಲ್ಲಿ ಸಂತೋಷಗೊಂಡಳು. ಬಾಹ್ಯದಲ್ಲಿ ವೈರಿಯಂತೆ ಹೀಗೆ ಹೇಳಿದಳು :

'ಯತಿಯೆ, ಪತಿತನಾಗದಿರು. ಪ್ರತಿಜ್ಞೆಯ ನಿಯಮವನ್ನು ಮುರಿದು ಕಾಮನಿಗೆ ಕಾಣಿಕೆಯನ್ನು ಕೊಡಬೇಡ. ನಿನ್ನ ಕೀರ್ತಿಯ ಲೋಕದಲ್ಲಿ ಅಪಯಶಸ್ಸಿನ ಭೇರಿ ಸ್ವರವನ್ನು ಮೊಳಗಿಸಬೇಡ. ಕಾಡಿಗೆಯ ಕಣ್ಣು ನಿನ್ನ ಚಿತ್ತವನ್ನು ಕತ್ತಲಿಸಿತೆ? ಧೀರ ಮುನಿ ಪಣವನ್ನು ಪಾಲಿಸುವ ನಿನ್ನ ಧೈರ್ಯವು ಅದೆತ್ತ ಜಾರಿತು? ನನ್ನಲ್ಲಿ ಏನನ್ನು ಕಂಡು ಈ ರೀತಿ ಘೋರ ನರಕಕ್ಕೆ ಧುಮುಕುತ್ತಿರುವೆ?

'ನಾನು ಒಮ್ಮೆ ದಟ್ಟ ಕಾಡಿನ ಮಧ್ಯದಲ್ಲಿ ಸಂಚರಿಸುತ್ತಿದ್ದೆನು. ಆಗ ಹಸಿದ ಭೀಷಣ ಭೀಕರ ಸರ್ಪದ ಕರಾಳವಾದ ಕ್ರೂರ ನೇತ್ರದ ಮೋಹದ ಆಕರ್ಷಣೆಗೆ ಒಂದು ಜಿಂಕೆಮರಿ ಸಿಲುಕಿತು. ಅದು ಮೃದುವಾಗಿ ಮೆಲ್ಲನೆ ಸೂಜಿಗಲ್ಲಿನ ಸೆಳೆತಕ್ಕೆ ಒಳಗಾದ ಸೂಜಿಯಂತೆ ಮೃತ್ಯು ಜಿಹ್ವಾಗವಿಗೆ ಎದುರಾಗಿದ್ದು, ಅಡವಿಯೆ ಮರುಗುವಂತೆ ಚೀರಿತು. ಭಯಂಕರ ಸರ್ಪವು ಅದನ್ನು ತನ್ನ ನೇತ್ರ ಸೂತ್ರದಿಂದ ಎಳೆದು ಬಿಗಿಯಿತು. ಜಿಂಕೆ ಮರಿಯು ಬಿಡಿಸಿಕೊಳ್ಳಲು ಪ್ರಯತ್ನಿಸಿಯೂ ಬಿಡಿಸಿಕೊಳ್ಳಲಾರದೆಯೆ ತನ್ನ ಇಚ್ಛೆಗೆ ವಿರುದ್ಧವಾಗಿ ಘೋರ ಸರ್ಪದ ಮುಖದ ಕಡೆಗೆ ಚಲಿಸಿತು. ಕೊನೆಗೆ ನಾನು ನನ್ನ ಬಾಣವನ್ನು ಪ್ರಯೋಗಿಸಿ ಅದನ್ನು ರಕ್ಷಿಸಿದೆ. ಅದು ಹಾಗಿರಲಿ!

'ನೀನು ಆ ಹಸುಳೆ ಮೃಗದಂತೆ ಕುರುಡು ಮೋಹದಲ್ಲಿ ಮುಳುಗಿ ಮರುಳಾಗಿ ನುಗ್ಗುತ್ತಿರುವೆ! ನಶ್ವರದ ಪೂಜೆಗೆ ಚಿರಂತನವನ್ನು ಬಲಿಕೊಡಲು ಯೋಜಿಸುತ್ತಿರುವೆ. ನೋಡು, ಇದು ಪ್ರೇಮವಲ್ಲ, ಕಾಮದ ಚಿಹ್ನೆ! ಕ್ಷಣಿಕ ಸುಖ ಸಂಪಾದಿಸಲು ಶಾಶ್ವತದ ಬಲಿಯೆ! ದುರ್ಬಲತೆ ಏನಿದು? ಅರ್ಜುನದೇವ, ನಿನ್ನ ಪೌರುಷ ಕಥೆ ಬರಿಯ ಸುಳ್ಳು!'

ನೀನಮೃತವೆನಗೆ; ನೀನಿಲ್ಲದಮೃತವೆ ಮೃತ್ಯು!

'ನನ್ನ ಜೀವನ ಪರಮಪುರುಷಾರ್ಥ ರೂಪಿಣಿಯೆ, ಭುವನೈಕ ಮೋಹಿನಿಯೆ, ನೀನು ನನ್ನ ಸಂಪತ್ತಿಗೆ ಲಕ್ಷ್ಮಿ. ವಿದ್ಯೆಗೆ ವಾಣಿ. ಪರಮ ಸೌಂದರ್ಯಕ್ಕೆ ರತಿ. ಸರ್ವ ಅಭಿಲಾಷೆ ಆಕಾಂಕ್ಷೆಗಳ ಅಂತ್ಯ. ಪ್ರಾಣೇಶ್ವರಿ, ನೀನೆ ಶಾಶ್ವತ ಸತ್ಯ; ಉಳಿದುದೆಲ್ಲ ಬರಿಯ ನಶ್ವರ, ಮಿಥ್ಯೆ.

'ಪೂರ್ಣೆಯೆ, ನೀನಿಲ್ಲದೆ ಎಲ್ಲವೂ ಶೂನ್ಯ! ನೀನು ಅಮೃತ ನನಗೆ; ನೀನಿಲ್ಲದೆ ಅಮೃತವೆ ಮೃತ್ಯು! ನೀ ಮಾಯೆ, ನೀ ಮುಕ್ತಿ! ನೀನು ಇರಲು ಜಪತಪ ಏತಕ್ಕೆ? ಅಮೃತ ಸೋನೆಯೆ ಸುರಿಯುತ್ತಿರಲು, ಉದರ ಪೋಷಣೆಗೆ ಕೃಷಿಯೇಕೆ? ಸ್ಪರ್ಶಮಣಿ ಕೈಯಲ್ಲಿರಲು, ಬಂಗಾರದ ಗಣಿಯ ಅಗೆತ ವ್ಯರ್ಥ ಪರಿಶ್ರಮವಲ್ಲವೆ? ಸೂರ್ಯ ತಳತಳಿಸುತ್ತಿರಲು ಸೊಡರೇಕೆ?

'ಹೇ ಚಿತ್ತರಂಗಿನಿಯೆ, ನಿನ್ನ ಸಂಗವೇ ಪರಮ ಮಂಗಲ; ಆಲಿಂಗನವೇ ಮೋಕ್ಷ! ತೆಗೆ, ಕೀರ್ತಿ ಬರಿ ಮಾಯೆ! ನೀನೆ ಸತ್ಯ; ಮಿಕ್ಕಿದ್ದೆಲ್ಲ ಹುಸಿ!'

ಎಂದು ಅರ್ಜುನನು ಹೇಳಿದನು. ತನ್ನ ಎದುರು ನಿಂತು ಹೊಳೆಯುತ್ತಿರುವ ಸೌಂದರ್ಯ ಸ್ವರ್ಗವನ್ನು ತುಂಬು ಹಂಬಲದ ನೇತ್ರ ಸೂತ್ರದಿಂದ ಬಂಧಿಸಿ ಎಳೆಯುವಂತೆ ನೋಡಿದನು.

ಕಾಮನ ಉರಿ ದೇಹದಲ್ಲಿ ಸಂಪೂರ್ಣವಾಗಿ ನಾಳ ನಾಳವನ್ನು ಹೊಕ್ಕು, ಜೊತೆ ಜೊತೆಗೆ ಪ್ರೇಮಾನುರಾಗದ ಅರುಣಜ್ವಾಲೆ ಪ್ರಜ್ವಲಿಸುವಂತೆ ದಹಿಸಿತು. ಉಗ್ರವಾದ ಕಾಡ್ಗಿಚ್ಚು ಮರಗಿಡ ಸಮೂಹವನ್ನೆಲ್ಲ ಆವರಿಸಿಕೊಂಡು ಉರಿಯುವಂತೆ ಚಿತ್ರಾಂಗಿಯನ್ನು ಪ್ರಣಯ ಪ್ರಲಯ ಬೆಂಕಿ ಹೊತ್ತಿಕೊಂಡಿತು. ಉತ್ಕಂಠೆಯು ನಡುಗಿ ಹೋದಳು. ಆ ಮಧುರ ಮನ್ಮಥ ಮುಹೂರ್ತವನ್ನು ದೃಷ್ಟಿಸುತ್ತ ಹರಿವ ಕಾಲ ತನ್ನ ಕರ್ತವ್ಯವನ್ನು ಮರೆತು ತನ್ಮಯತೆಯಿಂದ ನಿಂತಿತು; ಸೃಷ್ಟಿಯು ನಿಂತಿತು!

ವಿಧಿ ಕಾಮನಬಿಲ್ಲಿನ ಇಂದ್ರಜಾಲವನ್ನು ನೆಯ್ದು ಬೀಸುತ್ತಿತ್ತು. ಆಗ ಮಧುಮದನರು ಓಕುಳಿಯ ಬಣ್ಣದ ನೀರನ್ನು ಎರಚಿ ಬೆಂಕಿಯುರಿಗೆ ಎಣ್ಣೆಯನ್ನು ಚೆಲ್ಲಿದರು!

ಸೂರೆಗೊಳ್ಳೆನ್ನ ಸರ್ವಸ್ವಮಂ, ಮೇಣೆನ್ನನಿಲ್ಲಗೈ!

'ಪ್ರೇಮನಿಧಿ, ಪ್ರಾಣೇಶ, ನನ್ನ ಸರ್ವಸ್ವವನ್ನು ಸೂರೆಮಾಡು. ಮತ್ತು ನನ್ನನ್ನು ಇಲ್ಲವಾಗಿಸು' ಎಂದು ಹೇಳುತ್ತ ಚಿತ್ರಾಂಗಿಯು ನಳಿ ತೋಳುಗಳನ್ನು ನೀಡಿದಳು. ಪ್ರೇಮದಾಲಿಂಗನದಲ್ಲಿ, ಆನಂದ ವಿಸ್ಮೃತಿಯ ಭೋಗ ನಿರ್ವಾಣದಲ್ಲಿ ಎಲ್ಲವೂ ಶೂನ್ಯವಾಯಿತು!

ಮಾತಿಲ್ಲದ ಸವಿ ಮುತ್ತುಗಳು ಇಳೆಯ ತುಟಿಗೆ ಇಳಿಯುವಂತೆ ಮಲ್ಲಿಗೆಯ ಹೊದರಿನಿಂದ ಕುಸುಮಗಳು ಮಳೆಯಂತೆ ಉದುರಿದವು. ತಂಗಾಳಿ ತೀಡಿತು. ಋತುರಾಜನ ಸಾಲಂಕೃತ ಆಸ್ಥಾನದಂತೆ ಶೋಭಿಸುವ ಮನೋಹರ ಕಾನನದ ತರುಗೋಷ್ಠಿಯಿಂದ ಪಕ್ಷಿಗಳ ಮಂಗಲವಾದ್ಯವು ಸುತ್ತಲೂ ಹೊಮ್ಮಿತು. ಸ್ವರ್ಗ ಮರ್ತ್ಯಗಳು, ಕಾಲದೇಶಗಳು, ಸುಖ ದುಃಖ, ಜನ್ಮ ಮೃತ್ಯುಗಳೆಲ್ಲ ಒಂದಾಗಿ ಒಂದು ಅನಂತ ಆನಂದದಲ್ಲಿ ಮುಳುಗಿದ್ದುವು.

ಹೀಗೆ ಕಾಲದ ಪಕ್ಷಿ ಹಗಲು ಇರುಳು ಎನ್ನುವ ಎರಡು ರೆಕ್ಕೆ ಗರಿಗಳನ್ನು ಬಿಚ್ಚಿ ಸುಖ ಮಧು ಸುಧೆಯನ್ನು ಸವಿಯುತ್ತ ಹಾರುತ್ತಿತ್ತು. ನವೀನ ದಂಪತಿಗಳಿಬ್ಬರು ರಸದ ನಾವೆಯನ್ನು ಏರಿ ಜೇನು ಹೊಳೆಯಲ್ಲಿ ತೇಲಿ ಪ್ರಯಾಣ ಮಾಡಿದರು. ಅವರು ಸಡಿಲವಾದ ಮುಡಿಯ ಮುಂಗುರುಳು, ನುಣ್ಣನೆ ಕೆನ್ನೆಯ ಇಂಪು ಕೆಂದುಟಿ ಎದೆಗಳೆಂಬ

ನಂದನ ದ್ವೀಪ ಬೃಂದಾವನದಲ್ಲಿ ಮಾವಿನ ತಳಿರಿನ ತೂಗುಯ್ಯಾಲೆಯ ಹಾಸಿಗೆಯಲ್ಲಿ ರಾಸಲೀಲೆಯಲ್ಲಿ ತೇಲಾಡಿದರು!

ಚಿತ್ರವಾಹನ ಪುತ್ರಿಯು ಇಂದ್ರನ ಮಗನು ಮಧು ಮದನರ ಯಕ್ಷಿಣೀ ವಿದ್ಯೆಯ ಲಲಿತ ಪಂಜರದಲ್ಲಿ ಎಣೆವಕ್ಕಿಗಳಂತೆ ಪ್ರತಿದಿನ ಭೋಗಿಸಿದರು. ಅವರು ಗೃಹ ಬಂಧು ಮಿತ್ರರನ್ನು ಮರೆತು, ಕರ್ತವ್ಯವನ್ನು ಮರೆತರು. ಹೊಸ ಹೊಸದಾಗಿ ಚಿಗುರಿ ನಲಿವ ವನದಲ್ಲಿ ಅಲೆದಾಡಿದರು. ಒಮ್ಮೆ ಪರಿಮಳದ ಹೂಗಳನ್ನು ಗಿಡಬಳ್ಳಿಗಳಿಂದ ಬಿಡಿಸಿ, ಅದನ್ನೇ ಆಶ್ರಯವಾಗಿಸಿಕೊಂಡು ಒಬ್ಬರು ಇನ್ನೊಬ್ಬರಿಗೆ ಅದನ್ನು ತೊಡಿಸುತ್ತ ಆನಂದಿಸಿದರು.

ಅವರು ಒಮ್ಮೆ ಕಾಮಳ್ಳಿ ಕಾಜಾಣ ಪಿಕಳಾರ ಗಿಳಿ ಚೋರೆ ಕೋಗಿಲೆಗಳ ಉಲಿತಕ್ಕೆ ನಲಿದಾಡಿದರು. ಮತ್ತೊಮ್ಮೆ ತಮಾಷೆಯಾಗಿ ಚಳಿಯ ತಿಳಿಗೊಳದ ತಣ್ಣನೆ ಸ್ನಾನದಲ್ಲಿ ಕ್ರೀಡೆಯಾಡಿ ಆನಂದಿಸಿದರು. ಹೀಗೆ ಸವಿರಸದ ಹಣ್ಣುಗಳನ್ನು ಆಯ್ದುಕೊಂಡು ಸವಿಯುತ್ತ ದಿನದಿನವೂ ಬಿಡದೆ ಕ್ರೀಡಿಸಿ ಸುಖಪಟ್ಟರು.

ಹೇಳುವೆನು ಪಾಂಡವ ಕಥಾ ವಿಸ್ತಾರಮಂ

ಒಮ್ಮೆ ಅರ್ಜುನನು ನಡು ಹಗಲ ಬಿರು ಬಿಸಿಲು ಜಗತ್ತೆಲ್ಲವನ್ನು ಆವರಿಸಿದ ಹೊತ್ತಿನಲ್ಲಿ ಮರಗಳ ಅಡಿಯ ದಟ್ಟವಾದ ನೆರಳ ಶೀತಲ ಆಶ್ರಯದಲ್ಲಿದ್ದನು. ಹಸಿರಾದ ಹುಲ್ಲ ಚಿಗುರಿನ ಸುಪ್ಪತ್ತಿಗೆಯಲ್ಲಿ, ತೊಂಡೆಯ ಹಣ್ಣಿನಂತೆ ಕೆಂಪಾದ ತುಟಿಯವಳ ಕೋಮಲವಾದ ತೊಡೆಗಳ ಮೇಲೆ ತಲೆಯಿಟ್ಟು ವಿಶ್ರಮಿಸಿಕೊಳ್ಳುತ್ತಿದ್ದನು.

ಅವನು ಆ ಮಧುರ ವೇಳೆಯಲ್ಲಿ ಪಾಂಡವರ ಕಥೆಯನ್ನು ವಿವರ ವಿವರವಾಗಿ ಹೇಳುತ್ತಿದ್ದನು. ಅದನ್ನು ಕೇಳುತ್ತ ಮೃಗಾಕ್ಷಿ ಚಿತ್ರಾಂಗದೆ ಬಾಹ್ಯ ಪ್ರಪಂಚವನ್ನು ಮರೆಯುತ್ತಿದ್ದಳು. ಹೊರಗಣ್ಣನ್ನು ಮುಚ್ಚಿದರೆ ಮನದ ಮಾಯಾಕ್ಷಿ ಅರಳುವುದು:

ಚಿತ್ತರಸ ಭಿತ್ತಿಯಲ್ಲಿ ಹಸ್ತಿನಾಪುರ ಮತ್ತು ಇಂದ್ರಪ್ರಸ್ಥ ಮುಂತಾದ ನಗರಗಳು, ನಾಡುಗಳು ಕಾಣುವವು; ಸೈನ್ಯ ರಣರಂಗದ ಕ್ಷೇತ್ರಗಳು, ಕಾಳಗದ ನೋಟಗಳು ಗೋಚರಿಸುವವು. ಪಾಂಡು ಧೃತರಾಷ್ಟ್ರ ಕೌರವ ಭೀಷ್ಮ ದ್ರೋಣ ಧರ್ಮರಾಯ ಭೀಮ ಕರ್ಣ ದ್ರೌಪದಿ ಶಕುನಿ ಶ್ರೀಕೃಷ್ಣ ಬಲರಾಮ ನಕುಲ ಸಹದೇವ ಮುಂತಾದ ಜಗದ್ವಿಖ್ಯಾತರು ಕಣ್ಣಿಗೆ ಬೀಳುವರು! ಚಿತ್ರೆಯು ಅದನ್ನು ಕೇಳುತ್ತ ಕೇಳುತ್ತ ಕನಸಿನಲ್ಲಿ ತೇಲಿ ಹೋಗುತ್ತಾ ತಾನೆ ಕನಸಾಗುವಳು.

ವನದ ಕುಸುಮಗಳಿಂದ ಸೃಷ್ಟಿಗೊಂಡು ಹರಡಿದ ಪರಿಮಳವನ್ನು ತಣ್ಣನೆಯ ಮಂದಗಾಳಿಯು ತೀಡುತ್ತಿರಲು ಕಥೆ ಹೇಳು ಹೇಳುತ್ತ ಕಿರೀಟಿಯು ಜೊಂಪಿಸುವನು.

ಕಣ್ಣಿವೆಗಳನ್ನು ಮುಚ್ಚಿ ನಿದ್ದೆ ಮಾಡುವನು. ಅಬಲೆ ಚಿತ್ರಾಂಗಿಯು ಅವನ ನಿದ್ರಿಸುವ ಸೌಂದರ್ಯ ಮುದ್ರಿಕೆಯನ್ನು ಕಣ್ಣು ತಣಿಯುವಂತೆ ನೋಡಿ ನಲಿಯುವಳು. ಅವಳ ಚುಂಬನಕ್ಕೆ ಕಣ್ಣಿವೆ ಬಿಚ್ಚಿ ನಗೆ ಮುಗುಳನ್ನು ಇಷ್ಟಿಷ್ಟೆ ಅರಳಿಸುತ್ತ ಅವನು ಕೇಳುವನು.

'ಎಲೆ ಚೆನ್ನೆ ನೀನಾರು? ಯಾವ ದೂರದ ದಿವ್ಯ ಲೋಕದಿಂದ ಇಳಿದು ಬಂದು ನನ್ನ ಬಾಳನ್ನು ಇಷ್ಟು ಸವಿಗೊಳಿಸಿತ್ತಿರುವೆ? ನಿನ್ನ ಹೆಸರೇನು ಹೇಳು. ಅದನ್ನು ಕೇಳಿ ಸವಿದು ಸುಖಿಸುತ್ತೇನೆ. ಎಷ್ಟೋ ಸಲ ಕೇಳಿದೆನು. ನೀನು ಹೆಸರು ಹೇಳದಿರುವೆ! ನಿನಗೆ ಹೆಸರಿಲ್ಲವೆ? ನೀನು ನನಗೆ ಮಾಯಾ ಸ್ವಪ್ನದಂತೆ ಕಾಣಿಸುತ್ತಿರುವೆ. ಸತ್ಯವನ್ನು ತಿಳಿಯೆನು. ಓ ಸವಿಗನಸೆ, ಮನದನ್ನೆ, ಹೆಸರನ್ನು ಹೇಳು!'

ತುಟಿಯನ್ನು ಅರಳಿಸುತ್ತ ಮರಿಕೋಗಿಲೆಯ ರೀತಿ ಚಿತ್ರಾಂಗಿ ಸವಿನುಡಿ ಆಡಿದಳು :

ಮಾಯೆ ನನ್ನಿಯ ಮೊದಲ ಛಾಯೆ!

'ಓ ನನ್ನ ಎದೆಯನ್ನ ಹೆಸರೇಕೆ? ಬಿಸಿಲ ಬೇಗೆಗೆ ಬಳಲಿ ದಾರಿ ಬಳಿಯ ತೋಟದಲ್ಲಿ ರುಚಿಯಾದ ಮಾವಿನ ಹಣ್ಣನ್ನು ಆಯ್ದುಕೊಂಡು ಸವಿದುಣ್ಣುವವನಿಗೆ ಹೊಲದ ಹೆಸರಿನ ಗೊಡವೆ ಏಕೆ? ಓ ನನ್ನ ಉಸಿರ ಒಲವೆ, ಹದವಾಗಿ ಮಾಗಿದ ಹಣ್ಣನ್ನು ಉಂಡು ಸವಿ!

'ನಾನು ಯಾರಾದರೇನು? ಹೆಸರಿನಲ್ಲಿ ರಸವೆ? ಹೆಸರಿಲ್ಲದವಳು ನಾನು. ಬರಿ ಮಾಯೆ! ಸವಿ ಸೊನ್ನೆ! ಆದರೇನು! ಮನದನ್ನೆ, ಮಾಯೆ ಸತ್ಯದ ಮೊದಲ ಛಾಯೆ! ನೀನು ಇಂದಲ್ಲದಿದ್ದರೆ ಮುಂದೆ, ಎಂದಾದರೂ ಒಂದು ದಿನ ನಾನಾರು ಎನ್ನುವುದನ್ನು ತಿಳಿಯುವೆ.

'ನೋಡು ಈ ಮಧುಮಯ ಕಾನನ ಹೇಗೆ ಹಗಲುಗನಸಿನಲ್ಲಿ ಮುಳುಗಿದೆ! ತಣ್ಣನೆಯ ಗಾಳಿ ಬೀಸಣಿಗೆಯಂತೆ ಹೇಗೆ ತೀಡುತ್ತಿದೆ! ಅಲ್ಲಿ ನೋಡು, ಬಿಸಿಲ ಹನಿ ಹಸುರಿನಲ್ಲಿ ಕಣ್ಣಿಗೆ ತಂಪನ್ನು ಎರಚುತ್ತ ಕುಣಿಯುತ್ತಿದೆ! ನವಿಲು ಆ ಮರದ ಕೊಂಬೆಯ ಮೇಲೆ ಚಿತ್ರ ಬರೆದಂತೆ ಕುಳಿತಿದೆ! ಆ ಹರಿಣಿ ತನ್ನ ಮರಿಯೊಡನೆ ಹೇಗೆ ಸರಸವಾಡುತ್ತಿದೆ! ಅದೊ, ಬನದ ಮೌನದ ತೂರ್ಯವೆಂಬ ವಾದ್ಯವನ್ನೆ ಊದುವ ರೀತಿಯಲ್ಲಿ– ವನವನವೇ ಪ್ರತಿಧ್ವನಿಸುವಂತೆ ಕೋಕಿಲ ಕಂಠವಾಣಿ ಹೊಮ್ಮಿ ಬರುತ್ತಿದೆ! ಆಃ ಅದು ಗಿರಿಯಿಂದ ಗಿರಿಗೆ ಹೇಗೆ ಅನುರಣಿತವಾಗುತ್ತಿದೆ ಕೇಳು!' ಎಂದು ಆ ನೀರೆ ಸ್ವರ ಸರಸ್ಸಿನ ಲೀಲೆಯಲ್ಲಿ ಮಧುರ ವಾಙ್ಮಧುಧಾರೆಯನ್ನು ಹರಿಸುತ್ತ, ಫಾಲ್ಗುಣ ತಾರೆಯಂತೆ ಶೋಭಿಸುತ್ತಿದ್ದಳು. ಕುಂತಿಯ ಪುತ್ರನು ಅವಳ ಸವಿದನಿಯ ಗಾನದಾನಂದದ ವೈತರಣಿ ನದಿಯಲ್ಲಿ ಮುಳುಗಿ ಕಾಡೇ ತೂಗಾಡುವಂತೆ ಮೈ ಮರೆತನು! ಚೈತ್ರ ವಾಹಿನಿಯು ಹೀಗೆ ತಾನು ಯಾರು ಎನ್ನುವುದನ್ನೆ ರಟ್ಟು ಮಾಡದೆ ಫಲ್ಗುಣನೊಡನೆ ಕ್ರೀಡಿಸುತ್ತ

ಸುಖದಲ್ಲಿದ್ದಳು. ಆಗ ಕಬ್ಬಿನ ಜಲ್ಲೆಯ ಕೋದಂಡ ಹಿಡಿದ ಮನ್ಮಥನಿಂದ ಪಡೆದುಕೊಂಡಿದ್ದ ಅವಧಿ ಮೆಲ್ಲನೆ ಮೃದುವಾಗಿ ಬಳಿಗೆ ಬಂದಿತು.

ಹಾಗೆಯೆ ಒಂದು ದಿನ ದಿವಸದ ಮುಕ್ತಾಯದ ಸಮಯದಲ್ಲಿ ಚಿತ್ರಾಂಗಿಯು ಫಲ್ಗುಣನೊಡಗೂಡಿ ಬನದ ಹೂಗಳನ್ನು ಬಿಡಿಸುತ್ತ ಇನಿಯನನ್ನು ಅಲಂಕರಿಸುತ್ತಿದ್ದಳು. ಹಣ್ಣುಗಳನ್ನು ಆಯ್ದು ಕುಯ್ದು ತಿನ್ನಲು ಕೊಡುತ್ತಿದ್ದಳು. ಕ್ರೀಡಾ ವಿನೋದದಿಂದ ಹೂವು ಬಿಟ್ಟು ವಿಸ್ತಾರವಾಗಿ ಹಬ್ಬಿದ ಬಳ್ಳಿಗಳನ್ನು ತೆಗೆದುಕೊಂಡು, ಪ್ರತಿ ಪತಿಯ ಸೊಂಟಕ್ಕೆ ನಡು ಪಟ್ಟಿಯನ್ನು ರಚಿಸಿ ತೊಡುತ್ತಿದ್ದಳು. ಸಾರಸ (ಕಮಲ) ವದನೆಯು ನಾಚಿಕೆಯಿಂದ ಹೂ ಮುಡಿಸುತ್ತ ಸರಸವಾಡುತ್ತಿದ್ದಳು. ಆ ರಸ ಲಹರಿ ಲೀಲೆಯಲ್ಲಿ ಮೆಲ್ಲ ಮೆಲ್ಲನೆ ಹತ್ತಿರದ ಪರ್ವತದ ಎತ್ತರದ ತುದಿಗೆ ಏರಿದಳು.

ಪತಿಗೆ ರಮಣೀಯ ದೃಶ್ಯ ವೈಶಾಲ್ಯವನ್ನು ತೋರಿಸಿದಳು: ಗಿರಿಯೊಡನೆ ಗಿರಿ, ಕಾಡಿನೊಡನೆ ಕಾಡು, ಬೆಟ್ಟಕ್ಕೆ ಎದುರಾದ ಕಾನನ, ಕಾಂತಾರಕ್ಕೆ ಸಮ್ಮುಖವಾದ ಪರ್ವತ ಪಂಕ್ತಿ. ಅವು ವರ್ಧಿಸುತ್ತ, ಸ್ಫರ್ಧಿಸುತ್ತ ದೂರ ಗಗನದ ಅಂಚಿನವರೆಗೆ ಅತಿಶಯವಾಗಿ ಹರಡಿ ದೃಷ್ಟಿ ಸೀಮೆಯಲ್ಲಿ ಮರೆದಿದ್ದವು. ಅರ್ಜುನನು ನಿಟ್ಟುಸಿರು ಬಿಡುತ್ತ ಅದನ್ನು ನೋಡುತ್ತ, ಖಿನ್ನತೆಯ ಭಾರದಿಂದ ಬಾಗುತ್ತ, ಕುಬೇರನ ಉತ್ತರ ದಿಕ್ಕಿನ ಕಡೆ ಬಿಟ್ಟ ಕಣ್ಣು ಬಿಟ್ಟಂತೆ ನೋಡುತ್ತ ಮೌನವಾಗಿದ್ದನು. ಅದನ್ನು ಕಂಡು ಕಾತರಳಾದ ಚಿತ್ರೆ ಸಕುರುಣ ಧ್ವನಿಯಿಂದ ಹೀಗೆ ಹೇಳಿದಳು :

'ಓ ನನ್ನ ಪ್ರಾಣ ಪ್ರಭುವೆ, ಪಶ್ಚಿಮ ದಿಕ್ತಟದಲ್ಲಿ ಶೂನ್ಯ ಚುಂಬಿತ ಪರ್ವತದ ತುದಿಯತ್ತ ತಿರುಗು. ಅಲ್ಲಿ ಸೂರ್ಯನ ಸುತ್ತಲೂ ಹೊಳೆಯುವ ಬಂಗಾರದ ಪ್ರಭಾ ವಲಯವು ದಿಗಂತ ರೇಖೆಯನ್ನು ಗರಗಸದಿಂದ ಕೊಯ್ದಂತೆ ಕೆಂಪಾಗಿ, ಮೆಟ್ಟಿ ನಿಂತು ಶೋಭಿಸುತ್ತಿದೆ. ಅದನ್ನು ನೋಡದೆ, ನೀನು ಏತಕ್ಕೆ ಉತ್ತರ ದಿಕ್ಕಿನತ್ತ ಚಿತ್ತವನ್ನು ನೆಟ್ಟಿರುವೆ? ನೆಟ್ಟ ನೋಟದಿಂದ ಏನನ್ನು ಆಲೋಚಿಸುತ್ತಿರುವೆ ಹೇಳು?'

ಆ ಮಾತಿಗೆ ಇಂದ್ರಜನು ನಲ್ಲೆಯ ಕೆನ್ನೆಯನ್ನು ಬೆರಳ ಚಿಗುರಿನಿಂದ ಸವರುತ್ತ ಹೀಗೆ ಮಾರುತ್ತರ ನೀಡಿದನು :

'ಹೃದಯೇಶ್ವರಿ, ನೀನು ನನ್ನನ್ನು ಇಲ್ಲಿಗೆ ಏತಕ್ಕೆ ಕರೆದುಕೊಂಡು ಬಂದೆ; ಅಯ್ಯೊ, ಈ ಎತ್ತರಕ್ಕೆ ಮತ್ತು ಈ ಬಿತ್ತರ (ವಿಸ್ತಾರ)ಕ್ಕೆ? ಆ ಕಂದರದ ಸಂಕುಚಿತ ಜೀವನವೆ ಸುಖಮಯವಾಗಿತ್ತು. ಅಲ್ಲಿ ನಿನ್ನೊಡನಿದ್ದು ವಿಸ್ತೃತ ಪ್ರಪಂಚವಿದು ಇದೆ ಎನ್ನುವುದನ್ನೆ ಮರೆತ ಸೊಗಸಿನಲ್ಲಿದ್ದು, ಇದನ್ನು ನೆನೆಯದೆ ಇದ್ದೆ.

'ಅಯ್ಯೊ, ನೀನು ಇಲ್ಲಿಗೇಕೆ ಎಳೆದು ತಂದೆ? ಸತಿ, ಉತ್ತರ ಆಶಾ ಶಿಖರವನ್ನು ದಾಟುತ್ತ ಅಣ್ಣ ತಮ್ಮಂದಿರನ್ನು ನೋಡುವ ಸಂಭ್ರಮದಲ್ಲಿ ನನ್ನ ಆಶೆಯು ಗರಿಗೆದರಿ

ಹಾರುತ್ತಿದೆ. ಇಂದು ನನ್ನ ಎದೆಯ ಹಕ್ಕಿ ಮದನ ಕನಕ ಪಂಜರದಿಂದ ಬಿಡುಗಡೆ ಬಯಸಿ ತುಡಿಯುತ್ತಿದೆ!

'ಸುಂದರಿ, ನಿನ್ನ ಮನೆಯೆಲ್ಲಿ? ನಿನಗೆ ತಂದೆ ತಾಯಿಯರು ಅಕ್ಕ ತಂಗಿಯರು ತಮ್ಮಂದಿರು ಬಂಧು ಬಳಗದವರಾರೂ ಇಲ್ಲವೆ? ನಿನ್ನನ್ನು ನೋಡಲು ಬಯಸುವವರು ಅಲ್ಲಿಲ್ಲವೇನು ತಿಳಿಸು? ಅಥವಾ ನೀನು ಅಪೇಕ್ಷೆ ಪಟ್ಟು ನೋಡಬೇಕಾದವರು ಅಲ್ಲಿಲ್ಲವೇನು?'

ಎಂದು ಪ್ರಶ್ನಿಸಿದ ಅರ್ಜುನನ ಮಾತು ಕಿವಿಗೆ ಬಿದ್ದೊಡನೆ, ಚಿತ್ರಾಂಗಿಯು ರತಿಪತಿ ಕಾಮದೇವನು ನೀಡಿದ್ದ ಅವಧಿ ಕೊನೆಮುಟ್ಟಿತು ಎಂದು ತಿಳಿದು ನಿಟ್ಟುಸಿರು ಬಿಟ್ಟಳು. ತುಂಬ ದುಃಖದಿಂದ ಕಂಠ ಬಿಗಿದು ಬರಲು ಹೀಗೆ ನುಡಿ ಹೊಮ್ಮಿಸಿದಳು:

ನಿನ್ನೆದೆಯೊಲ್ಮೆ ಕಾಣುತಿಹ ಸವಿಗನಸು

'ಹೃದಯೇಶ್ವರಾ, ಇಂದಿಗೆ ನನ್ನ ಬಗ್ಗೆ ಬೇಸರಗೊಂಡೆಯೇನು? ನಿನಗಿಂದು ದಣಿವಾಯಿತೆ? ಇರು, ಇನಿಯ ನಾಳೆ ಮುಂಬೆಳಗಿನಲ್ಲಿ ನಾನು ಇಲ್ಲವಾಗುವೆ! ಕನಕ ಪಂಜರದಿಂದ ಹೃತ್ಪಕ್ಷಿ ಮುಕ್ತಿ ಪಡೆಯುತ್ತದೆ! ನನಗೆ ಮನೆಯಿಲ್ಲ, ಹೆಸರಿಲ್ಲ. ನಾನೊಂದು ಕನಸು. ನಿನ್ನ ಎದೆಯ ಪ್ರೀತಿಯನ್ನು ಕಾಣುತ್ತಿರುವ ಸವಿಗನಸು. ನೀನು ನಾಳೆ ನಿದ್ದೆಯಿಂದ ಎಚ್ಚೆತ್ತು ನೋಡುವಷ್ಟರಲ್ಲಿ ಈ ಮಾಯೆ ಒಡೆದು ಹೋಗುವುದು! ಅದುವರೆಗೆ ಈ ಹೂವನ್ನು ನಿನ್ನ ಮಾಲೆಯಲ್ಲಿ ಧರಿಸು ಪ್ರಾಣೇಶ!

'ಎಷ್ಟೆಷ್ಟೊ ಹೂವುಗಳು ಇದಕ್ಕಿಂತ ಬಣ್ಣದಲ್ಲಿ, ಕಂಪಿನಲ್ಲಿ, ಚೆಲುವಿನಲ್ಲಿ ನೂರ್ಮಡಿಯಾದವುಗಳು ನಿನ್ನ ಹಾರದಲ್ಲಿ ಸೇರಿಕೊಂಡಿವೆ ಎನ್ನುವುದನ್ನು ನಾನು ಬಲ್ಲೆನು! ಆದರೂ ನೀನು ಆಯಾಸಗೊಂಡ ಸಮಯದಲ್ಲಿ, ಈ ಜನ ರಹಿತ ಕಾಡಿನಲ್ಲಿ ನಿನ್ನ ಕ್ರೀಡಾ ವಸ್ತುವಾಗಿದ್ದು, ಬೇಸರ ಆಸರ ಕಳೆದು ನಿನ್ನೊಡನೆ ನಲಿದಾಡಿದ ಈ ದೀನ ಕಾನನ ಕುಸುಮವನ್ನು ಹೇ ಕಾಂತನೇ ಮರೆಯದಿರು; ತೊರೆಯದಿರು!'

ಎಂದು ಹೇಳುತ್ತ, ಅರ್ಧಚಂದ್ರಾಕಾರದ ಹಣೆಯನ್ನು ಪಾದಕ್ಕೆ ಚಾಚಿದ ಕತ್ತಲ ಕೂದಲ ಚಿತ್ರಾಳ ಮೈಯನ್ನು ಅರ್ಜುನನು ತಬ್ಬಿಕೊಂಡನು. ಗದ್ಗದಿತನಾಗಿ ಕರುಣಾರ್ದ್ರ ವಾಣಿಯಿಂದ 'ಕಾಮಿನಿಯೆ, ಹಗಲು ಇರುಳನ್ನು ಎಂದಿಗೂ ಕೈ ಬಿಡದು. ಉದಯ ಅಸ್ತದ ಹಸ್ತ ಸಂಸರ್ಗದಿಂದ ಪೃಥ್ವಿಯನ್ನು ಶಾಶ್ವತ ರಾಸಕ್ರೀಡೆಯಿಂದ ದಿನ ದಿನವೂ ಸುತ್ತುವರು! ಹಾಗೆಯೇ ನಾವಿಬ್ಬರು! ನಿನಗೇಕೆ ಚಿಂತೆ ಸಖಿ?' ಎಂದು ಹೇಳಿದನು.

ಅದನ್ನು ಕೇಳುತ್ತ ಚಿತ್ರಾಂಗದೆಯ ಕಣ್ಣಿನಿಂದ–ಕಮಲ ಪುಷ್ಪದಿಂದ ಶಿಶಿರ ಬಿಂದು ಜಿನುಗಿ ಬೀಳುವ ರೀತಿಯಲ್ಲಿ ಕಂಬನಿಗಳು ಹನಿ ಹನಿ ಮುತ್ತು ಮುತ್ತಾಗಿ ಉರುಳಿದುವು. ಶುಭ ಶರೀರದ ಹರಿಣನೇತ್ರೆ ಹೀಗೆ ನುಡಿದಳು :

‘ಪೃಥಿವೀಂದ್ರ, ರತಿಪತಿಯ ವರ ಮಹಿಮೆಯಿಂದಾದ ಈ ಸೌಂದರ್ಯವು ನಾಳೆ ನಶಿಸುವುದು! ನಾನು ಋತುರಾಜ ವಸಂತನು ತೊರೆದ ಕಾನನ ಸಮೂಹದಂತಾಗುವೆನು. ನೀನು ಹಿಂದೆ ಕಿರಾತ ಕನ್ಯೆಯೆಂದು ನೂಕಿದ ರೀತಿ ಇನ್ನೊಮ್ಮೆ–ಮಾಯೆಯಿಂದ ವ್ರತವನ್ನು ಕೆಡಿಸಿದ ಶಾಕಿನಿಯೆಂದು ನಿಂದಿಸುವೆ!

‘ಓಹ್ ನನ್ನ ಪ್ರಿಯನೆ, ನೀನು ಇಲ್ಲಿಗೆ ಬಂದ ಆ ಪ್ರಥಮ ರಾತ್ರಿಯಲ್ಲಿ ಚಂದ್ರನ ತಂಪಾದ ಕಿರಣಗಳಿಂದ ಮಿಂದ ಕಾಂತಿಯುತ ಬಿಳಿಯ ಮುಗಿಲ ಗುಂಪು ರಾರಾಜಿಸುತ್ತಿತ್ತು. ಆ ಪ್ರಕಾಶಮಯ ವಾತಾವರಣದಲ್ಲಿ ವೃಕ್ಷದ ಅಡಿಯಲ್ಲಿ ಅಗ್ನಿಯ ಮುಂದೆ ನೀನು ಕುಳಿತಿದ್ದೆ. ಆ ಸ್ಥಳಕ್ಕೆ ಬಂದ ಲಜ್ಜೆಯಿಲ್ಲದ ನಿಶಾಚರಿಯನ್ನು ನೆನೆ! ನಿನ್ನಿಂದ ತಿರಸ್ಕೃತಳಾದ ಎಳೆಯ ಪ್ರಾಯದ ನಾಚಿಕೆ ರಹಿತ ದೂರ್ತೆ ಆ ಕಿರಾತೆ ನಾನೆ!

‘ಶ್ರೀ ಮದನನ ಕೃಪೆಯಿಂದ ನಿನ್ನ ಹೃದಯವನ್ನು ಒಂದು ತಿಂಗಳವರೆಗೆ ಗೆದ್ದು, ಸ್ವರ್ಗವನ್ನೇ ಸೂರೆಗೊಂಡವಳು ನಾನು. ಪ್ರಿಯಕರನೆ, ಇವಳನ್ನು ಪಾಪಿಯೆಂದು ಕೋಪಿಸಿಕೊಳ್ಳದೆ ಕಾಪಾಡು. ನನ್ನ ಎದೆಯು ಅಮಂಗಲದ ಭೀತಿಯಿಂದ ಕಂಪಿಸುತ್ತಿದೆ!’

ಕಥೆ ಕೇಳುತ್ತ ಆಶ್ಚರ್ಯ ಚಕಿತನಾದ ಕಿರೀಟಿಯು ನಗುಮುಖದವನಾಗಿ ರಮಣಿಯನ್ನು ಸಂತೈಸುತ್ತಿದ್ದನು. ಆಗ ದೂರ ಬಹುದೂರ ಕಂದರ ಪ್ರಾಂತದಲ್ಲಿ ಪೂರ್ವದಿಕ್ಕಿನ ಕಡೆಯಲ್ಲಿ ಮೆಲ್ಲ ಮೆಲ್ಲನೆ ಕತ್ತಲೆಯು ದಟ್ಟೈಸುತ್ತಿತ್ತು. ಅದರ ಮಬ್ಬಿನಲ್ಲಿ ದೀಪ ಮಾಲೆ ಮಿರುಗಿದುವು. ಅದು ಕಾರ್ಗತ್ತಲೆಯ ಗರ್ಭದಲ್ಲಿ ಒತ್ತಾದ ಮರಗಿಡಗಳು ಮಸಿ ಮುದ್ದೆಯಾಗಿರುವ ಮೌನದ ಏಕಾಂತದಲ್ಲಿ ಲಕ್ಷೋಪಲಕ್ಷ ಮಿಂಚುಹುಳ ಸಂಕುಲ ರಾಶಿ ರಾಶಿ ಮರೆಯುವಂತಿತ್ತು. ಜೊತೆಗೆ ಅಮಾವಾಸ್ಯೆಯ ಆಗಸದ ಅಮೃತ ಪಥದಲ್ಲಿ ಹೊಳೆಯುವ ತಾರಾ ಸಮುದಾಯದ ದೊಡ್ಡ ಗುಂಪಾಗಿ ಕಾಣುತ್ತಿತ್ತು!

ಮಣಿಪುರದ ಭೂಪಾಲ ಚಿತ್ರವಾಹನ ತನಯೆ ಚಿತ್ರಾಂಗದೆ

ಆ ದೀಪ ಸಮೂಹವನ್ನು ಕುತೂಹಲದಿಂದ ನೋಡುತ್ತ ಪ್ರಶ್ನಿಸಿದ ಇಂದ್ರಪುತ್ರನಿಗೆ ತರುಣಿ ನಗುತ್ತ,

‘ಮಣಿಪುರದ ರಾಜ ಚಿತ್ರವಾಹನನ ಮಗಳು, ರಾಜಕುಲದ ಮಹಾವೀರೆ ಚಿತ್ರಾಂಗದೆಯು ಬಿಟ್ಟ ಸೈನ್ಯದ ಶಿಬಿರದಲ್ಲಿ ದೀಪಗಳು ಜ್ವಲಿಸುತ್ತಿವೆ!’

ಎಂದು ಹೇಳಲು, ಆ ಕ್ಷಾತ್ರ ರಮಣಿಯ ತೇಜದ ಪ್ರಗತಿಯ ಕಥೆಯನ್ನು ಕೇಳುವ ಉತ್ಕಟ ಇಚ್ಛೆಯನ್ನು ಕುಂತಿಯ ಪುತ್ರನು ವ್ಯಕ್ತಪಡಿಸಿದನು. ಚಿತ್ರಾಳು ತನ್ನ ಕಥೆಯನ್ನು ಪಾರ್ಥನಿಗೆ ರೋಮಾಂಚನ ಉಂಟಾಗುವಂತೆ ಹೇಳಿದಳು.

ಸತಿ ಹೇಳುತ್ತಿದ್ದು ಅರ್ಜುನನು ಕೇಳುತ್ತಿರುವಾಗ ತ್ರಿಲೋಕವನ್ನು ಅಲುಗಿಸುವ ರಕ್ಕಸ ಗಾಳಿಯೊಂದು ಎದ್ದಿತು. ಅದು ಪ್ರಲಯದ ಬಿರುಗಾಳಿಯೆಂಬಂತೆ ಬೆಟ್ಟ

ಕಾಡುಗಳನ್ನು ಅಪ್ಪಳಿಸಿ ನಾಶದಾವೇಶದಿಂದ ಬೀಸಿತು. ಪರ್ವತವೆ ತಲೆ ಅಲುಗಾಡಿಸುತ್ತಿದೆಯೊ ಎನ್ನುವಂತೆ ಮರಗಳ ಗುಂಪು ಎಡಬಲಕ್ಕೆ ತೂಗಿತು.

ಅನೇಕ ಶತಮಾನಗಳಿಂದ ಭಯಂಕರ ಗಾಳಿಯ ಹೊಡೆತವನ್ನು ಪ್ರತಿಭಟಿಸಿ ಬೀಗುತ್ತ ನಿಮಿರಿ ನಿಂತಿದ್ದ ಮಹಾವೃಕ್ಷಗಳು ತಮ್ಮ ಕುಲದ ಮೂಲವನ್ನೆ ತಿರುವಿ ಮೀಟಿದಂತೆ ನೆಲಕ್ಕೆ ಉರುಳಿದುವು. ಅವು ಕಾಡೇ ಕೂಗಿಡುವಂತೆ ಶಬ್ದವನ್ನು ಮಾಡುತ್ತ ಬಿದ್ದ ರಭಸಕ್ಕೆ ಪೊದರು ಗಿಡಗಳು ಪುಡಿಯಾಗಿ ಹೋದವು.

ಮಾಂತ್ರಿಕನ ಮಂತ್ರದ ಎದುರು ಬೆದರಿ ಓಡುವ ಪಿಶಾಚಿಗಳಂತೆ ಆ ಧೂಳಿಗೆ ತರಗೆಲೆ ಹುಲ್ಲು ಕಸಕಡ್ಡಿಗಳ ಹಿಂಡು ನಾನಾದೆಸೆಗೆ ನುಗ್ಗಿ ಚೆದುರಿ ಹೋದವು. ಜೊತೆ ಜೊತೆಗೆ ಪಶ್ಚಿಮ ದಿಗಂತದಿಂದ ಆಗಸದ ನೆತ್ತಿಗೆ ಕಾರ್ಮುಗಿಲು ಕಪ್ಪು ಹೊಗೆಯ ಹೆಬ್ಬಂಡೆಯಂತೆ ಉಬ್ಬಿ ಎದ್ದಿತು. ಅದು ದುಶ್ಯಕುನ ಛಾಯೆಯಂತೆ ಮೆಲ್ಲ ಮೆಲ್ಲನೆ ಸಾವಕಾಶವಾಗಿ ಗಗನದಾದ್ಯಂತ ಹಬ್ಬಿತು. ಆ ಕಾರ್ಮೋಡ ಸಮೂಹದಲ್ಲಿ ಕೆಮ್ಮಿಂಚು ಹೊಮ್ಮಿಂಚು ಕುಡು ಮಿಂಚು ಕುಡಿಮಿಂಚುಗೆರೆ, ಬಳ್ಳಿ ಮಿಂಚುಗಳ ಗೊಂಚಲುಗಳು ಮೂಡಿದವು. ಅವು ಮೇಘಗಳೆಂಬ ಕಾಲಸರ್ಪಾಗ್ನಿಯ ಜಿಹ್ವೆಗಳಂತೆ ಸಂಚಲಿಸಿದವು. ಚಂಚಲವಾಗುತ್ತ ಮುನ್ನುಗ್ಗುತ್ತ ಅತಿ ಭಯಂಕರ ಹಾಗೂ ಮನೋಹರ ರೂಪದಿಂದ ರಂಜಿಸಿದವು.

ಸಿಡಿಲು ರೋಷದಿಂದ ದಿಗ್ಭಿತ್ತಿಗಳ ನಡುವಿನ ಬೆಸುಗೆ ಬಿರಿಯುವಂತೆ, ಗಿರಿವನ ಸ್ಥಿರ ಭೂಮಂಡಲ ಕಂಪಿಸುವಂತೆ ಜೋರಾಗಿ ಧ್ವನಿ ಮಾಡಿತು! ಹತ್ತಿರವಾಗುತ್ತಿರುವ ಮಳೆಯ ಭೀಷಣ ಮುಖಕ್ಕೆ ದಂಪತಿಗಳಿರ್ವರೂ ಬೆದರಿದರು. ಕಾರ್ಗತ್ತಲೆಯ ವನದ ಮಧ್ಯದಲ್ಲಿ ಉದ್ವೇಗದಿಂದ ನಡೆಯುತ್ತ ಶಿವಗುಡಿಗೆ ನಡೆದರು.

ಮಳೆಗಾಲವು ಬೋರೆಂದು ಬೀಸುತ್ತ ಪೃಥ್ವಿಯ ಕಾಡಿನ ಒಡಲಿಗೆ ಆಲಿಕಲ್ಲಿನ ಕವಣೆಗಳನ್ನೆಸೆಯಿತು. ಕತ್ತಲೆ ರಾತ್ರಿಯಲ್ಲಿ ಹೊರಗೆ ಸಿಡಿಲು ಮಿಂಚು ಗುಡುಗಿನ ಮಳೆಯ ಉಗ್ರತೆ ನಡೆದಿತ್ತು. ಆಗ ಚಿತ್ರೆಯು ಬಿಳಿ ಕುದುರೆಗಳುಳ್ಳ ಅರ್ಜುನನಿಗೆ ಚಿತ್ರಾಂಗದೆಯ ಕಥೆಯನ್ನು ಸುಲಭ ಕಲಾ ಧ್ವನಿಯಿಂದ ಚಿತ್ರಿಸಿದಳು. ಕಗ್ಗತ್ತಲೆಯು ಹೊರಗೆ ಧರೆಯನ್ನು ಮುಳ್ಳು ಮೊನೆಗೆ ಎಡೆಯಿಲ್ಲದಂತೆ ಆವರಿಸಿತ್ತು. ಎಡೆಬಿಡದೆ ಮುಸಲ ಧಾರೆ ಬೀಳುತ್ತಿತ್ತು. ಅರಣ್ಯವು ಭೈರವ ಗಾಳಿಯ ಮರ್ದನಕ್ಕೆ ಗೋಳಿಡುವಂತೆ ಹೂಂಕಾರ ಮಾಡುತ್ತಿತ್ತು!

ಕರಗಿತು ಕಡೆಯರಾತ್ರಿ!

ಹೀಗೆ ರಾತ್ರಿ ಕಳೆಯುತ್ತ ಕಥೆ ಮುಗಿಯುತ್ತಿರಲು ಅರ್ಜುನನು ಮಾತಿನ ಮಧ್ಯೆ ಲಲಿತೆಯನ್ನು ಮುದ್ದಿಸುತ್ತ–ಮಾರನೇ ದಿನ ಹೊರಟು ತೀರ್ಥಯಾತ್ರೆಯನ್ನು ಮುಗಿಸಿ

ಆರು ತಿಂಗಳ ನಂತರ ಮರಳಿ ಬರವೆನೆಂದು ಮಾತು ಕೊಟ್ಟನು. ಅವನು ತುಂಬಾ ಕಷ್ಟ ಪಟ್ಟು ಪ್ರಣಯ ಪ್ರಯತ್ನದಿಂದ ಅವಳನ್ನು ಒಪ್ಪಿಸಿದನು.

ಚಿತ್ರಾಂಗದೆಯು ಕಂಬನಿಯನ್ನು ಹರಿಸುತ್ತ ಕಾಂತನನ್ನು ನಳಿ ತೋಳುಗಳಿಂದ ಬಿಗಿಯಾಗಿ ಅಪ್ಪಿಕೊಂಡಳು. ಪತಿದೇವನನ್ನು ಮನಸ್ಸಿಲ್ಲದೆಯೆ ಬಿಡಲು ಸಮ್ಮತಿಸಿದಳು. ಅವರಿಬ್ಬರೂ ಮುಖಕ್ಕೆ ಮುಖ ಕೊಟ್ಟು, ಎದೆಗೆ ಎದೆಯಿಟ್ಟು ಆಲಿಂಗನದ ಸುಖ ಲಹರಿಯಲ್ಲಿ ತೇಲುತ್ತ ಮಲಗಿದರು : ಕಡೆಯ ರಾತ್ರಿ ಕರಗಿತು!

❑

4. ಪೂವಾಗಿ ಪೋಗಿ ಮಿಡಿಗಾಯ್ಗಳಂ ಪಡೆದೊಡಲ ವಾಸಂತದಂತ್ಯದ ರಸಾಲ

ರಾತ್ರಿ ಕಳೆಯಿತು. ಉಷೆಯು ಉದಯ ಶಿಖರಾಗ್ರದಲ್ಲಿ ಮೂಡಿದಳು. ನೋಡ ನೋಡುತ್ತಿದ್ದಂತೆ ಮೂಡಣ ಬೆಟ್ಟದ ಕೋಡುಗಲ್ಲಿನ ಎಡೆಯಲ್ಲಿ ಹೊಳೆಯುವ ರವಿಯ ಕಾಂತಿಯ ಆವರಣ ಇಣುಕಿ ಬಂದಿತು. ಭೂಮಿಯು ಹೊಸಮಳೆಯಲ್ಲಿ ಮಿಂದು ಪ್ರಕಾಶಿಸುವಂತೆ ಮಲೆಯ ಶ್ರೇಣಿಯ ನೆಪದಲ್ಲಿ ಹಸುರು ನಗೆಯ ಅಲೆಯನ್ನು ಗಹಗಹಿಸಿ ಬೀರಿತು. ಅದು ಹಿಮಮಣಿ ಕಿರಣಗಳ ದಂತ ಪಂಕ್ತಿಯ ಕಾಂತಿಯನ್ನು ದಿಕ್ಕು ದಿಕ್ಕಿಗೆ ಹರಡಿ ಶೋಭಿಸಿತು.

ಅರ್ಜುನನು ಪಕ್ಷಿಗಾನದಿಂದ ಎಚ್ಚೆತ್ತನು. ನಿದ್ರೆ ಮಾಡುತ್ತಿದ್ದ ಮನೋರಮೆಯ ತೋಳ್ತೆಕ್ಕೆಯ ಸೆರೆಯಿಂದ ಬಿಡಿಸಿಕೊಂಡನು. ನಿಧಾನವಾಗಿ ಮುಖವನ್ನು ಅವಲೋಕಿಸಿದನು. ಚಿತ್ರಾಂಗದೆಯ ಸರಳ ಸಾಮಾನ್ಯ ಸೌಂದರ್ಯವನ್ನು ಕಂಡು ಆಶ್ಚರ್ಯಕ್ಕೊಳಗಾದನು! ಮನ್ಮಥನ ಸಂಗವಿಲ್ಲದ ಕಣ್ಣುಗಳಿಗೆ ಹೆಣ್ಣಿನ ಶೃಂಗಾರ ರುಚಿಸುವುದಿಲ್ಲ ಎನ್ನುವಂತೆ ಕಂಡಳು. ಅವಳು ಹೂವಾಗಿ ಹೋಗಿ ಮಿಡಿಕಾಯಿಯನ್ನು ಪಡೆದ ವಸಂತ ಋತುವಿನ ಅಂತ್ಯದ ಮಾವಿನಂತೆ ಕಂಡಳು. ಮತ್ತು ಕೆಂದಳಿರ ಕೋಮಲ ಶ್ರೀ ಸುಂದರತೆ ಇಲ್ಲವಾಗಿ ಹಸುರೆಲೆಗಳನ್ನು ಹೊದ್ದ ತರು ಸುಂದರಿಯಂತೆ ಕಂಡಳು.

ವಿಷಣ್ಣದಿಂ ತನ್ನುಂಗುರವನೊಯ್ಯನಾ ಕಯ್ಯ ಬೆರಳಿಂಗೆ ತುಡಿಸಿ

ನಲ್ಲೆಯ ನಯನ ಕಮಲಗಳು ಚೆನ್ನಾಗಿ ಅರಳಿ ಅವಳು ಎಚ್ಚರಗೊಳ್ಳುವ ಮೊದಲೆ ತಾನು ಅಲ್ಲಿಂದ ಹೊರಟು ಹೋಗುವುದೆಂದು ಆಲೋಚಿಸಿದನು. ವಿಷಾದದಿಂದ ತನ್ನ ಉಂಗುರವನ್ನು ಮೃದುವಾಗಿ ಅವಳ ಬೆರಳಿಗೆ ತೊಡಿಸಿದನು. ಕರುಣಾರ್ದ್ರ ಹೃದಯದಿಂದ ನಿಟ್ಟುಸಿರು ಬಿಡುತ್ತ, ಒಂದೇ ಸಮನೆ ನೋಡಿದನು.

ಕಳೆದ ರಾತ್ರಿ ಪೂಜಿಸಿದ ಹೂವಿನ ಹಾರದಿಂದ ಕಂಗೊಳಿಸುತ್ತಿರುವ ಚಂದ್ರಮೌಳಿಗೆ ಬಾಗಿ ನಮಸ್ಕರಿಸಿದನು. ಆರು ತಿಂಗಳ ಅನಂತರ ಮರಳಿ ಬಂದು ಕಾಣುವೆನು ಎಂದು ನೀಡಿದ ಭರವಸೆಯನ್ನು ನಂಬಿ, ಚಿತ್ತಕ್ಕೆ ಧೈರ್ಯವನ್ನು ತಂದುಕೊಂಡು

ಸವ್ಯಸಾಚಿ ಹೊರ ಹೊರಟನು. ಅವನು ದಮಯಂತಿಯನ್ನು ನಳಮಹಾರಾಜ ನಡುಗಾಡಿನಲ್ಲಿ ಬಿಟ್ಟು ಹೋದಂತೆ ಹೊರಟು ಹೋದನು. ನಡೆದು ಸಾಗುತ್ತಿರಲು ಅಡಿಗಡಿಗೆ ಮನಸ್ಸು ಹಿಂದಕ್ಕೆ ಎಳೆಯುತ್ತಿತ್ತು. ಗೋಚರಿಸದ ಸೂಕ್ಷ್ಮ ಮೋಹ ಸೂತ್ರದಿಂದ ಪಾದವು ಬಿಗಿದಂತಾಗಲು ಮುಗ್ಗರಿಸಿ ನಿಂತನು. ಹಿಂದಕ್ಕೆ ನೋಡುತ್ತ, ಕಾದಂಬರಿಯನ್ನು ಬಿಟ್ಟು ಚಂದ್ರಾಪೀಡನು ಹೊರಟು ಹೋದಂತೆ ಅರ್ಜುನನು ಮುಂದಕ್ಕೆ ಸಾಗಿದನು. ಎದೆಯ ಚಂಚಲತೆಯನ್ನು ಉಗ್ರ ಮನಸ್ಸಿನಿಂದ ನಿಗ್ರಹಿಸಿಕೊಂಡು ಮುನ್ನಡೆದನು.

ಪಕ್ಷಿಗಳ ಇಂಚರವನ್ನು ಮುಳುಗಿಸುವ ರೀತಿಯಲ್ಲಿ ಬೆಟ್ಟದ ಅಂಚಿನಲ್ಲಿ ದಟ್ಟೈಸಿ ಬೆಳೆದಿದ್ದ ಬಿದಿರು ಮೆಳೆಯು ಗಾಳಿಯ ಸಂಘರ್ಷಣೆಗೆ ಆನೆಯಂತೆ ಘೀಂಕರಿಸಿ ವಿಕಟ ಶಬ್ದವನ್ನು ಹೊಮ್ಮಿಸಿತು. ಬಿದಿರಿನ ಕೀಚಕ ಧ್ವನಿಗೆ ಕಾಡು ಕಂಪಿಸಿತು!

ವಿಹ್ವಲಿಸಿ, ಲಲಿತಾಂಗಿ ತೊಳಲಿದಳ್

ಕಿರೀಟಿ ಅತ್ತ ನಡೆದ. ಇತ್ತ ದೇಗುಲದಲ್ಲಿ ಚಿತ್ರಾಂಗದೆಯ ಸುಪ್ತ ಸುಖ ಆವರಿಸಿದ ಚಿತ್ತದಲ್ಲಿ ಸವಿಗನಸು ಕೊಳದ ತಾವರೆಯ ಹೊನ್ನಿನ ಗುಳ್ಳೆ ಒಡೆಯಿತು. ಕಮಲ ನೇತ್ರೆಯು ಎವೆಯನ್ನು ನಿಧಾನವಾಗಿ ತೆರೆಯುತ್ತ ಸುತ್ತಲೂ ದೃಷ್ಟಿ ಹರಿಸಿದಳು. ತನ್ನ ಪಕ್ಕದ ಹಾಸಿಗೆಯಲ್ಲಿ ಪ್ರಿಯನು ಕಾಣದಿರಲು ಉದ್ವೇಗಕ್ಕೊಳಗಾದಳು. ಖೇದಗೊಂಡು ಕಳವಳಿಸುತ್ತ–ಮಧುಮಯ ಲತಾಗೃಹದಲ್ಲಿ ಹೃದಯ ಮಿಲನಕ್ಕೆ ತನ್ನ ನಲ್ಲನನ್ನು ನೇಹದಿಂದ ಕರೆಯುವ ಪಕ್ಷಿ ವಧುವಿನಂತೆ ಕೂಗಿ ಕರೆದಳು.

ಅದನ್ನು ನಿಶ್ಯಬ್ದವಾದ ಶಿವನ ಆಲಯ ಪ್ರತಿಧ್ವನಿಸಿತು. ಆ ಮರುದನಿಯನ್ನಲ್ಲದೆ ಮಾರುತ್ತರವನ್ನು ಆಲಿಸದ ಲಲಿತಾಂಗಿ ವಿಹ್ವಲಗೊಂಡು ತೊಳಲಾಡಿದಳು. ದೇವಾಲಯದ ಎಲ್ಲೆಡೆಯೂ ಕರೆಯುತ್ತ ಓಡಾಡಿ ಹುಡುಕಿದಳು. ತರುವಾಯ ದೇವಾಲಯದಿಂದ ಹೊರಗೆ ಹೋದಳು. ಆ ಕಾಡಿನಲ್ಲಿ ಕಣ್ಣು ಹರಿಯುವಷ್ಟು ದೂರಕ್ಕೆ ತನ್ನ ದೃಷ್ಟಿಯ ಕಿರಣಗಳನ್ನು ಹರಿಸಿ ಒಂದೇ ಸಮನೆ ನೋಡಿದಳು.

ಹುಲಿ ಹಿಡಿದ ದನದ ಕರು ಕಂಗೆಟ್ಟು ದಾರಿ ತಪ್ಪಿಸಿಕೊಂಡು ಅರಣ್ಯದಲ್ಲಿ ಅಂಬಾ ಅಂಬಾ ಎಂದು ತನ್ನ ತಾಯಿಯನ್ನು ನೆನೆದು, ಅತಿಯಾಗಿ ಪ್ರಲಾಪಿಸುತ್ತ ಕೂಗಿ ಕರೆಯುತ್ತದೆ. ಅದರಂತೆ ಹೆದರಿ ಕರೆ ಕರೆಯುತ್ತ ಓಡಾಡಿದಳು. ಚಿತ್ರಾಳು ಕೊಳದ ಬಳಿಗೆ ಹೋಗಿ ತವಕದಿಂದ ವೀಕ್ಷಿಸಿದಳು.

ಬೇಗ ಬೇಗನೆ ಮಾವಿನ ಮರದ ಮನ್ಮಥನ ನೆಲೆ ಬಳ್ಳಿ ಮನೆಗೆ ಹಿಂದಿರುಗಿದಳು. ಅಲ್ಲಿಯೂ ನಿಲ್ಲದೆ ತಾವು ಬನದಲ್ಲಿ ಕದ್ದು ಚುಂಬಿಸಿದ್ದ ಉಯ್ಯಾಲೆಯೆಡೆಗೆ ನಡೆದು ಹೋದಳು. ಅಲ್ಲಿಂದ ತಾವಿಬ್ಬರೂ ಅಂದೊಂದು ಪಕ್ಷಿಯನ್ನು ಸರ್ಪದಿಂದ ರಕ್ಷಿಸಿದ ದಿಣ್ಣೆಯೆಡೆಗೆ ಓಡಿದಳು. ವಾಯುವು ಹುತ್ತವನ್ನು ಪೊದೆಯೆಂದು ಭಾವಿಸಿ ಬೀಸುವಾಗ,

ಆ ಬಿರುಗಾಳಿಗೆ ಅಲೆದಾಡುವ ತರಗೆಲೆಯಂತೆ ಪ್ರಕ್ಷುಬ್ಧಗೊಂಡ ಅದರ ಸುಳಿಯಲ್ಲಿ ಸಿಲುಕಿದ ಕ್ಷುದ್ರ ಹುಲ್ಲಿನ ಕಣದಂತೆ ಅವಳು ಗೊತ್ತು ಗುರಿಯಿಲ್ಲದೆಯೆ, ಚಿತ್ತದ ಉನ್ಮತ್ತತೆಯಿಂದ ಅಲೆದಾಡಿದಳು.

ಅವಳು ಹೊಳೆಯುತ್ತಿರುವ ಬಿಸಿಲಿನಲ್ಲಿ ಅರ್ಜುನನನ್ನು ಕಾಣಲಿಲ್ಲ. ಹಕ್ಕಿ ಹಾಡುತ್ತಿದ್ದಿತು; ಅದನ್ನು ಕೇಳಲಿಲ್ಲ. ತಿರು ತಿರುಗಿ ತಿರುಗಿದಳು, ತೊಳ ತೊಳಲಿ ತೊಳಲಿದಳು. ಬಳಲಿಕೆಯನ್ನು ಲೆಕ್ಕಿಸದೆ ಭ್ರಮೆಗೊಂಡ ರೀತಿಯಲ್ಲಿ ಕಾಡು ಬೆಟ್ಟಗಳೆಲ್ಲೆಲ್ಲಿಯೂ ಹಾಸು ಹೊಕ್ಕಾಗಿ ಹುಡುಕಾಡಿದಳು. ಅವಳನ್ನು ಕಂಡು ಆಶ್ಚರ್ಯಗೊಂಡ ಜಿಂಕೆಗಳು ಕುತೂಹಲದಿಂದ ನೋಡುವ ರೀತಿಯಲ್ಲಿ ನಡೆಗೆಟ್ಟಂತೆ ನಿಂತವು!

ಕೃತ್ತಿಕೆಯ ತಿಂಗಳಲಿ, ವಿಪಿನ ಪರಿವೃತವಿಪುಲವಿಸ್ತರದ ಗದ್ದೆಕೋಗಿನಲಿ

ಕೃತ್ತಿಕಾ ನಕ್ಷತ್ರ ಪುಂಜಗಳೊಡನೆ ಶೋಭಿಸುವ ಚಂದ್ರನ ಬೆಳಕಲ್ಲಿ, ಕಾಡಿನಿಂದ ಸುತ್ತುವರಿದ ವಿಪುಲ ವಿಸ್ತಾರದ ಗದ್ದೆ ಕೋಗಿನಲ್ಲಿ ಹಳದಿ ಪೈರು ಬೆಳೆ ಬೆಳೆದು ಹಬ್ಬಿತ್ತು. ಆ ಬತ್ತದ ಗದ್ದೆಯು ಕಡಲಿನಂತಿದ್ದು, ಅದರಲ್ಲಿ ಜೋಲಾಡುತ್ತಿರುವ ಪೈರು ಮರಳ ಅಲೆಯನ್ನು ಹೋಲುತ್ತಿತ್ತು. ಅದನ್ನು ಅತ್ತಿತ್ತ ಅಲುಗಾಡಿಸುವ ಕ್ರೀಡಾಸಕ್ತ ವಾಯುವು ಮೃದುವಾಗಿ ನಿಧಾನವಾಗಿ ತೀಡುತ್ತಿತ್ತು. ಅದರಿಂದ ವಿಸ್ತಾರವಾದ ಬತ್ತದ ಗದ್ದೆಯಲ್ಲಿ ತೆರೆಯೆದ್ದು ತೆರೆಬಿದ್ದು, ನೆಲವೆ ಪ್ರಾಣಸಹಿತ ಉಸಿರನ್ನು ಎಳೆದು ಬಿಡುವಂತೆ–ತೆನೆಹುಲ್ಲಿಗೆ ತೆನೆಯುಜ್ಜಿ ಸುಯ್ದನಿಯನ್ನು ಸೂಸುತ್ತಿತ್ತು.

ಆ ಸೊಬಗಿಗೆ ಮುಂಬಿಸಿಲು ಹೊಂಬಣ್ಣವೆರಚುತ್ತಿತ್ತು. ಹೊನ್ನಿನ ತೆನೆಯ ಸುವಾಸನಾ ಕಂಪನ್ನು ಹೊತ್ತ ಗಾಳಿ ಕಾಡನ್ನೆಲ್ಲ ತುಂಬಿ ಪ್ರಾಣಿ ಪಕ್ಷಿಗಳ ಹಿಂಡನ್ನು ಔತಣಕ್ಕೆ ಆಹ್ವಾನಿಸಿತು! ಬನ ಮೆಚ್ಚಿನ ಕೆಮ್ಮೊನೆಯ (ಕೆಂಪು ಕೊಕ್ಕು) ಹಸುರು ಗರಿಯ ಗಿಳಿವಿಂಡು ಬಂದು ಆ ಭತ್ತದ ಬೆಳೆಯ ವಿಸ್ತಾರಕ್ಕೆ ಬಾಣಗಳೆಂಬಂತೆ ಎರಗಿದವು. ಕಬ್ಬಿನ ಗರಿಗೆ ಹಕ್ಕಿಗಳು ಕಪ್ಪು ಮೋಡದಂತೆ ಆವರಿಸಿದವು. ಪಾರಿವಾಳ ಸಮುದಾಯವು ಗುಬ್ಬಳಿಸುತ್ತ ಪಟಪಟನೆ ಹಾರಿಬಂದವು. ಪುರುಲೆ ಹಕ್ಕಿಗಳ ಹಿರಿದಾದ ಗುಂಪು ಬಂದಿತು. ನವಿಲುಗಳು ನಲಿದಾಡಿ ಬಂದವು. ಹೀಗೆ ಪಕ್ಷಿಗಳ ಸಮೂಹ ಬಂದಿತು.

ಹೊಲ ಕಾಯುವವನು ಅಬ್ಬರಿಸುತ್ತ ದಿಕ್ಕು ದಿಕ್ಕನ್ನು ಹೊಕ್ಕು ಪಕ್ಷಿಗಳನ್ನು ಓಡಿಸಲು ಪ್ರಯತ್ನಿಸುತ್ತ ಬೆವರಿ ನಿಟ್ಟುಸಿರು ಬಿಟ್ಟನು. ತಲೆಗೆ ಸುತ್ತಿದ್ದ ಬಟ್ಟೆ ಬಿದ್ದು ಹೋಗಲು ತುಸು ಕೋಪಗೊಂಡನು. ಒಕ್ಕಲಗಿತ್ತಿಯ ಬಿರುದನಿಗೆ, ಕೈ ಚಪ್ಪಾಳೆಗೆ, ಬೊಬ್ಬೆಗೆ, ಕವಣೆಯ ಕಲ್ಲಿಗೆ ಅವು ಒಂದಿಷ್ಟು ಹೆದರಿ ಗಾಬರಿಗೊಂಡವು. ಭುರ್ರೆಂದು ಇನ್ನೊಂದು ಕಡೆಗೆ ಹಾರಿ ಅಲ್ಲಿ ಇನ್ನೊಮ್ಮೆ ರುಚಿಯಾದ ಮೇವಿಗೆ ಕುಳಿತವು. ಅದನ್ನು ಕಂಡು

ನೊಂದ ಗ್ರಾಮ ಶ್ಯಾಮ ವರ್ಣದವಳು ಕೋಪಗೊಂಡಳು. ಅಳುತ್ತ ಬೈಯುತ್ತ ಶಪಿಸುತ್ತ ಹುಚ್ಚು ಹಿಡಿದಂತೆ ತೊಳಲಾಡಿದಳು.

ಒಕ್ಕಲಗಿತ್ತಿಯು ಇತರ ಪಕ್ಷಿ ಸಂಕುಲವನ್ನು ಓಡಿಸುತ್ತಿದ್ದರೆ, ಮನೋಹರ ಮೋಹನ ಮಯೂರ ಜೋಡಿ ಬೆಳಗಿನಲ್ಲಿ ನವಿಲು ಕಲ್ಲಿನ ಕಾಡಿನ ಎತ್ತರದ ಕೋಡಿನಿಂದ ಬೆಳೆದ ಗದ್ದೆಯ ಹಳದಿಗೆ ಇಳಿದು ಬಂದವು. ಅವು ಮೆಲ್ಲನೆ ಗದ್ದೆಯ ಮೂಲೆಯಲ್ಲಿ ನೆಲ್ಲನ್ನು ಚೆನ್ನಾಗಿ ಮೆಲ್ಲಿದವು. ಅನಂತರ ಒಲ್ಮೆ ಒಯ್ಯಾರದಿಂದ ಗಿರಿನೆತ್ತಿಗೆ ಹಾರಿದವು. ಪುರುಷ ನವಿಲು ಮನ್ಮಥನ ಪ್ರೀತಿ, ಸಂಭ್ರಮದಿಂದ ಬಿನ್ನಾಣದ ಒಯ್ಯಾರಿಯನ್ನು ಮೋಹಿಸುವ ಮನದಿಂದ ಬಂದಿತು.

ಅದು ಹೆಣ್ಣು ನವಿಲಿನ ಸಮ್ಮುಖದಲ್ಲಿ ತನ್ನ ನವಿಲು ಗರಿಯಲ್ಲಿರುವ ಸಹಸ್ರ ಕಣ್ಣುಗಳನ್ನು ಬಿಚ್ಚಿ ಪ್ರಣಯಮಯ ನರ್ತನದಲ್ಲಿ ತೊಡಗಿತು. ಅದು ಆ ನೃತ್ಯದಲ್ಲಿ ದೇವ ಅಪ್ಸರೆಯರ ಲಾಸ್ಯಮಯ ನಂದನೋದ್ಯಾನವನ್ನು ರಚಿಸಿತು. ಅದರ ಆನಂದ ಸ್ಪಂದನದ ಗರಿಯ ನಾದ ಧ್ವನಿಗೆ, ಬಣ್ಣ ಬಣ್ಣದ ಕಣ್ಣು ಕಣ್ಣುಗಳ ಕುಣಿತಕ್ಕೆ ಹೊಳೆಯುವ ಹಸುರಿನ ಕಾಂತಿ ಬಿಂಕದಿಂದ ಮಿರಿ ಮಿರಿ ಮಿಂಚಿತು.

ಅದು ಕೊಂಕಿಸುವ ಉತ್ತಮ ನೀಲ ಕಂಠದ ಸೊಬಗಿಗೆ, ಹೆಜ್ಜೆ ಹೆಜ್ಜೆ ಎತ್ತಿ ಇಡುವತ್ತ ತಿರೆಯನ್ನು ತಲ್ಲಣಗೊಳಿಸುವ ಬಿನ್ನಾಣಕ್ಕೆ, ನೆತ್ತಿಯಲ್ಲಿ ವಿಜೃಂಭಿಸುವ ತುರಾಯಿಯ ಚಲನಾ ವೈಖರಿಗೆ ಜಗತ್ತೆ ಸೋಲುತ್ತಿತ್ತು! ಹಾಗಿರುವಾಗ ಹೆಣ್ಣು ನವಿಲು ಸೋಲದಿರುವುದೆ? ಅದು ಕುಣಿಯುವ ಇನಿಯನನ್ನು ಬಲವಾಗಿ ಬಿಗಿದ ಲಕ್ಷ್ಯ ದೃಷ್ಟಿಯಿಂದ ಎಳೆದು ಹೀರುವಂತೆ ಅರಳಿದ ಉಲ್ಲಾಸದಿಂದ ನೋಡುತ್ತಿತ್ತು.

ಆಗ ಅಯ್ಯೊ, ಹಾ! ಕದ್ದು ಅಡಗಿದ್ದ ಓರ್ವ ಬೇಡರವನು ಬಿಟ್ಟ ಮೃತ್ಯುಮಯ ಬಾಣ, ಅದೊ ಗಂಡು ನವಿಲ ಎದೆಯಲ್ಲಿ ನಟ್ಟು, ನೆತ್ತರು ಉಚ್ಚಳಿಸಿ ಚಿಮ್ಮುತ್ತಿದೆ! ನೆಲಕ್ಕುರುಳಿ ಬಿದ್ದು, ನೆಗೆ ನೆಗೆಯುವ ಆ ರಕ್ತದಿಂದ ಆವೃತವಾದ ಮಯೂರನೆದೆಯು ಸಂಜೆಯ ಓಕುಳಿಯಲ್ಲಿ ಮಿಂದ ಕಾಡಿನ ಹಸುರಿನಂತೆ ಕೆಂಪೇರಿ ಕರುಣ ಭೀಕರವಾಯಿತು! ಪ್ರಣಯ ನೃತ್ಯದ ಮೋಹ ಸಂಕಲ್ಪ ಗುಳ್ಳೆಯು ಒಮ್ಮೆಗೆ ಒಡೆದು ಹೋಯಿತು!

ಮಯೂರವು ಬಾಣದ ಹೊಡೆತಕ್ಕೆ ಸಾಯದೆ ನರಳುವ ದನಿ ಹೊಮ್ಮಿಸಿ ಚೀರಿಡಲು, ಯಮನ ವೇಗದಿಂದ ಅದರ ಬಳಿಗೆ ಕಪ್ಪನೆಯ ಬೇಡನು ನುಗ್ಗಿ ಬಂದನು. ಅದನ್ನು ಕಂಡು ಮಯೂರಿ ಬೆದರಿತು. ಪ್ರಾಣ ಭಯದಿಂದ ಪ್ರಾಣೇಶನ ಮರಣ ಮುಖವನ್ನು ಬಿಟ್ಟು ಕಂಗೆಟ್ಟು ಎದೆಗೆಟ್ಟು ಆರ್ತನಾದವನ್ನು ಮಾಡುತ್ತ ದೂರದ ಕಾನನದ ಒಳಕ್ಕೆ ಹಾರಿ ಹೋಯಿತು.

ಕ್ರೂರ ಶಬರನು ನೋವಿನಿಂದ ಕೂಗಿಡುವ ಆ ಸುಂದರ ಮಯೂರವನ್ನು ಹಿಡಿದು ಕುತ್ತಿಗೆಯನ್ನು ಮುರಿದು ಹರ್ಷದಿಂದ ತೆಗೆದುಕೊಂಡನು. ಅವನು ವರ್ಷ ಮೇಘವು ರಮ್ಯ ಕಾಮನ ಬಿಲ್ಲನ್ನು ಹೊತ್ತು ಆಗಸದಲ್ಲಿ ನಡೆಯುವಂತೆ ನಡೆದು ಹೋದನು.

ಪ್ರಾಣಪ್ರಿಯಾಣ್ಮನಂ ಕಾಣದಿರೆ ಪೊತ್ತುವುದು ಹರಣದುರಿ

ಸಂಜೆಯಾಗುತ್ತ ಬರಲು ಮಯೂರಿಯು ಒಂಟಿತನಕ್ಕೆ ಬಳಲಿ ಬೇಸತ್ತಿತು. ವಿರಹದಿಂದ, ಪ್ರಿಯತಮನ ಸಮಾಗಮದ ನಿರೀಕ್ಷೆಯಿಂದ ಹೃದಯ ಬೆಂದಿತು. ನವಿಲು ಕಲ್ಲಿಗೆ ಮರಳಿ ಬಂದು ತನ್ನ ಪ್ರಿಯತಮನನ್ನು ಕೂಗಿ ಕರೆಯಿತು! ಪ್ರಾಣಪ್ರಿಯ ಇನಿಯನನ್ನು ಕಾಣದ ಅದರ ಪ್ರಾಣಕ್ಕೆ ಉರಿ ಹೊತ್ತಿತು. ಆ ಕೇಕಿಯು ಪತಿ ಪಕ್ಷಿಯನ್ನು ಕರೆ ಕರೆದು ಹುಚ್ಚು ಗಿಚ್ಚೇರಿ ಸುತ್ತುತ್ತ ಕರೆ ಕರೆದು ಅತಿ ಶೋಕ ಭಾರದಿಂದಿರಲು ಹುಬ್ಬು ಗಂಟಿಕ್ಕಿದ ರಾತ್ರಿಯು ಮೆಲ್ಲನೆ ಜಗದ ಆಸೆಯನ್ನು ಮುಚ್ಚಿತು!

ಹಾಗೆ ಮಯೂರ ಸತಿಯನ್ನು ಹೋಲುತ್ತ ಚಿತ್ರಾಂಗಿಯು ಸವ್ಯಸಾಚಿಯನ್ನು ಹುಡುಕುತ್ತ ಉನ್ಮತ್ತೆಯಂತೆ ಕರೆದು ಒರಲುತ್ತ ತೊಳಲಾಡುತ್ತಿದ್ದಳು. ಆಗ ಅವಳಿಗೆ ಕೈಯ ಬೆರಳಿನಲ್ಲಿ ರಂಜಿಸುತ್ತಿರುವ ಮುದ್ರೆಯುಂಗುರ ಕಂಡಿತು. ರಾವಣನು ಸೀತೆಯನ್ನು ಕದ್ದುಕೊಂಡು ಹೋದ ನಂತರ, ಅವಳ ಆಭರಣಗಳನ್ನು ವೀಕ್ಷಿಸಿದ ದಶರಥ ಪುತ್ರನಿಗೆ ಹರ್ಷ ಶೋಕಗಳೆರಡೂ ಹೆಚ್ಚಿದವು. ದುಃಖಾಗ್ನಿ ಕಿಡಿಗಳೊಡಗೂಡಿ ಸಂತೋಷದ ಕಂಬನಿಗಳು ಹೊನಲಾಗಿ ಹರಿದು ಹೋದವು. ಅದರಂತೆ ಚಿತ್ರಾಂಗದೆಯು ತನ್ನ ಇನಿಯನ ಉಂಗುರವನ್ನು ಕಂಡ ತಕ್ಷಣ ಇಮ್ಮಡಿಸಿದ ದುಃಖದಲ್ಲಿಯೆ, ಸಂತೋಷದಿಂದ ಅದನ್ನು ತನ್ನ ಕಣ್ಣು, ಎದೆ, ಗಲ್ಲ, ತುಟಿ, ಕೆನ್ನೆ, ಹಣೆಗೆ ಒತ್ತಿಗೊಂಡಳು.

ಮತ್ತೆ ಮತ್ತಿರದೆ ಒತ್ತಿಕೊಂಡು, ಮುದ್ದಿಸುತ್ತ ಅಳುತ್ತ ಅಡವಿಯ ಆ ನೆನೆದ ನೆಲ ಹುಲ್ಲಿನ ತರಗು ಸಜ್ಜೆಯಲ್ಲಿ ಮೈ ಮರೆತು ಮಲಗಿದಳು. ಅಲೆದಾಡುವ ತಂಗಾಳಿ ತೀಡಿತು. ಪುಷ್ಪ ಹಾಗೂ ಫಲಭರಿತ ಮಧುಮಯ ವೃಕ್ಷ ಸಾಲಿನಲ್ಲಿ ಪಕ್ಷಿ ಸಂಕುಲ ಹಾಡುತ್ತಿದ್ದವು. ಬಿಸಿಲು ಹೊಳೆಯುತ್ತಿತ್ತು. ನೆರಳಿನ ತಣ್ಣನ ತಿರುಳು ಬಲಿಯುತ್ತಿತ್ತು. ಬರಬರುತ್ತ ಕತ್ತಲೆ ಕರಗಿದಂತಾಗಿ, ಹೊತ್ತು ಏರಿತು.

ನಡೆದಳ್ ಶಿಬಿರದೆಡೆಗೆ, ಗರ್ಭಿತ ರಹಸ್ಯೆ ತಾನಾಗಿ

ಅಂಗನೆ ಕಣ್ಣು ತೆರೆದಳು. ಅಳುತ್ತಳುತ್ತ ಅರ್ಜುನನನ್ನು ಹುಡುಕುವಂತೆ ಸುತ್ತಲೂ ನೋಡಿದಳು. ಎಲ್ಲಿಯಾದರೂ ಅವನು ಕಾಣಿಸುತ್ತಾನೆ ಎಂಬ ಅತಿ ಆಕಾಂಕ್ಷೆಯ ಭ್ರಾಂತಿಯಿಂದ ಬಯಸಲಾರದೆ ಬಯಸುತ್ತ-ಅರಸಿಯು ಅರಸುತ್ತ, ಸುತ್ತಲೆತ್ತತ್ತಲೂ ನೋಡಿದಳು. ಅಲ್ಲಿ ಬನವನ್ನು ಬಿಟ್ಟು ಬೇರೊಂದು ಇರಲಿಲ್ಲ. ಕೋಗಿಲೆಯೊಂದು ಕುಕಿಲುತ್ತ ಮರದಿಂದ ಮರಕ್ಕೆ ಹಾರಿತು.

ಆರು ತಿಂಗಳಿಗೆ ಮರಳಿ ಬರುವೆನೆಂದು ನೀಡಿದ್ದ ಭಾಷೆಯನ್ನು ನೆನಪಿಸಿಕೊಳ್ಳುತ್ತ ಭಾಮಿನಿಯು ಸಮಾಧಾನದ ಬುದ್ಧಿಯಿಂದ ಮೇಲೆದ್ದಳು. ಅಲ್ಲಿಂದ ಶಿವಾಲಯಕ್ಕೆ ನಡೆದಳು. ಹರನನ್ನು ಪೂಜಿಸುತ್ತ ಅವನ ಹರಕೆಯ ಪ್ರಸಾದ ಹೂವನ್ನು ಮುಡಿಯಲ್ಲಿ ಧರಿಸಿಕೊಂಡಳು. ರಮಣನ ಉಂಗುರವನ್ನು ಎದೆಯಲ್ಲಿ ಗುಟ್ಟಾಗಿ ಮುಚ್ಚಿಟ್ಟುಕೊಂಡಳು. ತಾನು ಗರ್ಭಿತ ರಹಸ್ಯೆಯಾಗಿ ಶಿಬಿರದ ಕಡೆಗೆ ನಡೆದಳು!

ಮಾರನೇ ದಿನ ಮೂಡಲ ಹೆಣ್ಣಿನ ಕೆನ್ನೆಗಳಲ್ಲಿ ಗುಲಾಬಿಯ ರಂಗು ಅರಳಿ ಕೆಂಪೇರಿತು. ಆ ಬೆಳಗಿನಲ್ಲಿ ಚಿತ್ರಾಂಗದೆಯ ಆಜ್ಞೆಯಂತೆ ಶಿಬಿರವನ್ನು ತೆಗೆದು, ಸೈನ್ಯವೆದ್ದು ನಡೆಯಿತು. ಅದರ ವಿಜಯ ಭೇರಿರವಕ್ಕೆ ದಿಕ್ಕುಗಳ ಬೆಸುಗೆ ಬಿರಿಯುವಂತಿತ್ತು. ಚೈತ್ರವಾಹಿನಿಯ ಸೇನೆಯು ದಿವಸ ದಿವಸಗಳನ್ನು ಕಳೆಯಿತು. ಪ್ರಯಾಣ ಮುಂದು ಮುಂದಕ್ಕೆ ಸಾಗಿತು.

ಚಿತ್ರವಾಹನ ನೃಪನ ನೆಚ್ಚಿನ ರಾಜಧಾನಿ : ಮಣಲೂರು ಪಟ್ಟಣ

ಚಿತ್ರವಾಹನ ನೃಪನ ನೆಚ್ಚಿನ ರಾಜಧಾನಿ ಮಣಲೂರು ಪಟ್ಟಣವು ಹತ್ತಿರದಲ್ಲಿಯೆ ಕಡಲ ಕರೆಯಂತೆ ಮೊರೆಯುತ್ತಿತ್ತು. ಆಗ ಆ ಸೇನೆಯು ಸಮುದ್ರ ಲಗ್ನಕ್ಕೆ ಸಮೀಪಿಸುವಂತೆ ಹರ್ಷ ಘೋಷದಿಂದ ಆಕಾಶ ಭುಮಿಯನ್ನು ತುಂಬಿತು. ಆ ಪಟ್ಟಣವನ್ನು ಧೀರವೂ ದೀರ್ಘವೂ ಆದ ಕೋಟೆಯು ಸುತ್ತಿ ಶೋಭಿಸುತ್ತಿತ್ತು. ಅದು ಹುಬ್ಬುಗಂಟಿಕ್ಕುವುದರಿಂದಲೇ ವೈರಿಗಳನ್ನು ಎದುರಿಸುವ ಭೂ ದೇವಿಯ ಹುಬ್ಬು ಗಂಟು ಎನ್ನುವ ರೀತಿ ದುರ್ಗ ರೂಪದಲ್ಲಿ ನಿಂತಿತ್ತು.

ಅದು ಭೀಕರ ಆಕಾರದಿಂದ ಬೀಗುವ ಸಾವಿರ ತಲೆಯ ಸರ್ಪದಂತೆ ಹೆಡೆಯೆತ್ತಿ ನಿಂತಿತ್ತು. ಅದರ ಕೊತ್ತಳ ನೆತ್ತಿಯಲ್ಲಿ ಗಗನವನ್ನು ಚುಂಬಿಸುವ ಕೋಲ್ಮಿಂಚಿನ ರೀತಿ ಡೆಂಕಣಿಯ ಸಾಲುಗಳು (ಕೊತ್ತಳಗಳ ಮೇಲೆ ಒತ್ತೊತ್ತಾಗಿ ಅಳವಡಿಸಿ ನಿಲ್ಲಿಸುವ ಉದ್ದವಾದ ಸಬಳದಂತಹ ಒಂದು ಆಯುಧ ವಿಶೇಷ) ಮಿರು ಮಿರುಗಿ ನಿಂತಿದ್ದವು. ಆ ಕೋಟೆಯು ಎತ್ತರವಾದ ಗೋಡೆ (ಆಳುವೇರಿ) ಗಳಿಂದ ಕೂಡಿ, ಸುತ್ತಲೂ ಪಾತಾಳದಂತಹ ಕಂದಕಗಳನ್ನು ಹೊಂದಿತ್ತು.

ಆ ಕೋಟೆಯ ಒಳಗಡೆ ಉಪ್ಪರಿಗೆ ಮಹಲು, ಭವನ, ಸೌಧಗಳು ಒತ್ತಾಗಿ ಕಿಕ್ಕಿರಿದಿದ್ದವು. ಆ ಭವನಗಳು ಅಮೃತಮಯ ಬಿಳಿಯ ಬಣ್ಣದಿಂದ ಆವರಿಸಿದ ಗೋಡೆಯಿಂದ ಪ್ರಕಾಶಿಸುತ್ತಿದ್ದವು. ಅವುಗಳ ಗೋಪುರಗಳು ಚಿನ್ನದ ಲೇಪನದಿಂದ ಕೂಡಿ ವ್ಯೋಮ ಮಂಡಲವನ್ನು ವ್ಯಾಪಿಸಿ ಅದನ್ನು ತಿವಿದು ಉಕ್ಕೆದ್ದ ರೀತಿ ಇದ್ದವು. ಅವು ಪ್ರಕಾಶಮಾನವಾಗಿ ಹೊಳೆಯುತ್ತ ಕಣ್ಣಿನ ದೃಷ್ಟಿಯನ್ನು ಕುಕ್ಕಿ ಕೋರೈಸಿ ರಂಜಿಸುತ್ತಿದ್ದವು.

ಆ ರಾಜಧಾನಿಯು ದಿಗ್ವಿಜಯವನ್ನು ಪಡೆದು ಬರುವ ಚತುರಂಗ ಸೇನೆಯನ್ನು ಸ್ವಾಗತಿಸಲು ತುದಿ ಬೆರಳ ಮೇಲೆ ನಿಂತು ಕಾತರಿಸುವಂತೆ ನಲಿದು ಶೋಭಿಸುತ್ತಿತ್ತು. ಆ ಮಹಾನಗರ ಸುಂದರಿಯು ವಿಜಯ ಮಾಲೆಯನ್ನು ಕೈಯಲ್ಲಿ ಹಿಡಿದು ನಗೆಯ ಶುಭ್ರ ಅಲೆಗಳನ್ನು ಬೀರುತ್ತ, ಕಣ್ಮಿಂಚುಗಳ ನೋಟ ಬೀರುವಂತಿತ್ತು.

ಸೇನೆ ಬಂದುದನ್ನು ತಿಳಿದು, ಅದನ್ನು ಎದಿರುಗೊಳ್ಳಲು ನಗರಕ್ಕೆ ನಗರವೆ ಉತ್ಸಾಹಗೊಂಡಿತು. ಅರಸ ಅರಸಿಯರು ಜೊತೆಗೂಡಿ, ಶುಭ ವಾದ್ಯ ಮೊಳಗುತ್ತಿರಲು ನವ ಕುಸುಮ ರಾಶಿಯು, ಧೂಪ ಧೂಮದ ಕಂಪು ಪರಿಮಳ ಆಗಸವನ್ನು ವ್ಯಾಪಿಸಿತು. ಹೀಗೆ ಸುಸ್ವಾಗತವನ್ನು ಬಯಸಲು ಇಡೀ ನಗರ ಸರ್ವ ಸನ್ನಾಹದಿಂದ ಕೂಡಿ ದುರ್ಗದ ಮಹಾದ್ವಾರ ಸನ್ನಿಧಿಗೆ ಹರಿದು ಬಂದಿತು.

ಹಿಮಧೂಳಿ ತಳ್ತ ಹೇಮಂತ ಕಮಲಿನಿಯಂತೆ ಚಿತ್ರಾಂಗದೆ, ವಿಷಣ್ಣದೀನಾಸ್ಯೆ

ಸೇನೆಯಲ್ಲಿದ್ದವರು ತಂದೆ ತಾಯಿಯರಿಗೆ ನಮಸ್ಕರಿಸಿ, ಗುರುಗಳಿಗೆ ವಂದಿಸಿದರು. ಆಶೀರ್ವದಿಸಿದ ಇತರ ಬಂಧುಗಳನ್ನು ಪ್ರೀತಿ ಆದರಗಳಿಂದ ಮಾತನಾಡಿಸಿದರು. ಗೆಳತಿಯರನ್ನು ಒಲಿದ ತೋಳುಗಳಿಂದ ಅಪ್ಪಿಕೊಂಡರು. ನಮಸ್ಕರಿಸಿದ ವೀರ ಶೂರರನ್ನು ಒಳ್ಳೆಯ ಮಾತಿನಿಂದ ಉಪಚರಿಸಿದರು. ನಾಗರಿಕ ಸುಸಂಸ್ಕೃತ ಶ್ರೀಮಂತರನ್ನು ಗೌರವಿಸಿ ಬೀಳ್ಕೊಟ್ಟರು.

ಹೀಗೆ ಉತ್ಸವವು ಸುತ್ತುವರಿದಿರಲು ಚಿತ್ರಾಂಗದೆಯು ಹಿಮಧೂಳಿನಿಂದ ಆವರಿಸಿದ ಹೇಮಂತ ಋತುವಿನ ಕಮಲಿನಿಯಂತಿದ್ದಳು. ಅವಳು ನಿರುತ್ಸಾಹದಿಂದ ಕುಗ್ಗಿದ ದೀನ ಮುಖದಿಂದಿದ್ದಳು. ಚಿಂತಾಂತರಂಗದ ಅವಳು ನಗರದ ರಾಜಮಾರ್ಗದಲ್ಲಿ ನಡೆಯುತ್ತಿದ್ದ ಮೆರವಣಿಗೆಯ ಆಯಾಸವನ್ನು ಸಹಿಸಿಕೊಂಡಳು. ಅನಂತರ ಬಂಗಾರದ ಕಲಾ ಜಾಣ್ಮೆಯಿಂದ ರಚಿತವಾದ ವರ್ಷಕಾಲದ ಹಾಲು ನೊರೆಯ ಶರಮೇಘದಂತಹ ತನ್ನ ಭವ್ಯ ಅರಮನೆಯನ್ನು ಹೊಕ್ಕಳು.

ಜನರು ರಾಜಕುಮಾರಿಯ ವಿಚಿತ್ರ ನಡೆಯನ್ನು ಕಂಡು ತಮ್ಮ ತಮ್ಮಲ್ಲಿ ಹಲವು ರೀತಿಯಲ್ಲಿ ಮಾತಾಡಿಕೊಂಡರು. ತಮ್ಮ ತಮ್ಮ ಕಲ್ಪನೆಯ ಬೆಂಡುಗಳನ್ನು ಸಂಶಯ ಸಮುದ್ರದಲ್ಲಿ ಈಜಾಡಿಸಿಕೊಂಡರು.

ಚಿತ್ರಾಂಗದೆಯು, ಕಮಲವು ಅರಳಲು ಕುಮುದ ಅರಳುವುದನ್ನು ಹಾರೈಸುತ್ತ; ಕುಮುದವು ವಿಕಸಿಸಲು ಕಮಲದ ಸೊಗಸನ್ನು ಬಯಸುತ್ತಿದ್ದಳು. ಅವಳು ಹಗಲನ್ನು ಇರುಳಿನಿಂದ, ಮತ್ತೆ ಇರುಳನ್ನು ಹಗಲಿನಿಂದ ಮೀಟಿ ನೂಕುತ್ತ ಕಾತರದ ಹೃದಯ ವೇಧನೆಯಲ್ಲಿ ಆರು ತಿಂಗಳುಗಳು ಕಳೆಯುವುದನ್ನೇ ಕಾಯುತ್ತಿದ್ದಳು.

ಮೊದಲಿನ ಹುಡುಗಾಟ ಅಳಿಯಿತು; ಪೌರುಷತೆ ಮಾಸಿತು; ಹೆಂಗಸಿನ ಸಹಜ ಲಜ್ಜೆ ಏಕಾಂತದ ಸಂತೋಷದೊಡನೆ ಅರಳಿತು. ಹಿಂದಿನ ಬಹಿರ್ಮುಖತೆಯು ಹಿಮ್ಮೆಟ್ಟಿ ಅಂತರ್ಮುಖತೆ ಗೋಚರಿಸಿತು. ಅವಳು ಸಖೀ ಜನರೊಡನೆ ಮಾತಾಡುತ್ತಿರಲಿಲ್ಲ. ವಿನೋದಗಳಲ್ಲಿ ಬೆರೆಯುತ್ತಿರಲಿಲ್ಲ. ಅವಳು ಪ್ರಿಯಕರನನ್ನು ಪ್ರತಿದಿನ ನಿಂತಲ್ಲಿ ಕುಂತಲ್ಲಿ, ತೆರೆದ ಕಣ್ಣು ಮುಚ್ಚದೆಯೆ; ಮುಚ್ಚಿರಲು ತೆರೆಯದೆ ಮೈ ಮರೆತು ಧ್ಯಾನಿಸುತ್ತಿದ್ದಳು!

ಗೆಳತಿಯರು ಹತ್ತಿರವಿದ್ದರೂ ಅವರನ್ನು ಲೆಕ್ಕಿಸದೆ, ಚೇತನ ಮತ್ತು ಜಡಕ್ಕೆ ಭೇದವರಿಯದವಳಂತೆ ಹೂ ಗಿಡ ಬಳ್ಳಿಗಳೊಡನೆ ಮಾತಾಡುತ್ತಿದ್ದಳು. ಜಡಿಮಳೆ ಸುರಿಯುತ್ತ, ಹಗಲು ಇರುಳು ಮಂಕು ಕವಿದಂತೆ ಮಳೆಗಾಲದ ಮಬ್ಬು ಭೂಮಿಯನ್ನು ತಬ್ಬಿ, ವರ್ಷಋತು ಧಾತ್ರಿಯನ್ನು ತೋಯಿಸುತ್ತಿತ್ತು. ಆ ಲಲನೆಯು ಶರತ್ಪ್ರಸನ್ನತೆಗೆ ತಪವಿರುವ ನೆಲಹೆಣ್ಣಿನಂತೆ ಅರ್ಜುನನ ಪುನರಾಗಮನಕ್ಕೆ ಬೇಸರದ ಮಳೆಗಾಲದಂತಿದ್ದಳು.

ತಾಯ್ತಂದೆಯರ್ಬಂದು ಪುತ್ರಿಯಂ ನುಡಿಸಿ ಬೆದರಿದರವಳ ದುಸ್ಥಿತಿಗೆ

ಚಿತ್ರಾಂಗದೆ ಹೀಗಿರುವ ವಾರ್ತೆಯನ್ನು ಕೇಳಿ ಬಂದ ತಾಯಿ ತಂದೆಯರು ಪುತ್ರಿಯನ್ನು ಮಾತನಾಡಿಸಿ, ಅವಳ ದುಃಸ್ಥಿತಿಗೆ ಬೆದರಿದರು. ಮಣಿಪುರದ ಅರಸನು ಯೌವ್ವನದ ಜಾಡ್ಯಕ್ಕೆ ಮದುವೆ ಮದ್ದೆಂದು ತಿಳಿದನು. ಅದನ್ನು ತನ್ನ ರಾಣಿಯೊಡನೆ ಹೇಳಿ, ಮಗಳನ್ನು ಪರಿಣಯಕ್ಕೆ ಒಪ್ಪಿಸುವಂತೆ ಹೇಳಿ ಹೋದನು. ತಾಯಿಯ ಪ್ರೀತಿಯ ಒಳ್ಳೆಯ ನುಡಿಗಳು ಅವಳ ಕಿವಿಗೆ ಕಾಯಿಸಿದ ಸರಳಾಯಿತು.

ಚಿತ್ರಾಂಗದೆಯು ತನಗೆ ಮದುವೆಯು ನಿರ್ಜನಾರಣ್ಯದಲ್ಲಿ ಗಾಂಧರ್ವ ವಿವಾಹ ಕ್ರಮದಿಂದ, ಶಿವಸಾಕ್ಷಿಯಲ್ಲಿ ಆದ ವೃತ್ತಾಂತವನ್ನು ಗುಟ್ಟಾಗಿ ಹೇಳಿದಳು. ತಾಯಿ ಅದನ್ನು ಕೇಳಿ ಗದ್ಗದಿಸುತ್ತ, ನಡುಗುತ್ತ ಹೀಗೆ ಹೇಳಿದಳು:

'ಮಗಳೆ ನೀನೇನು ಮಾಡಿದೆ? ಹಾ! ಕುಲದ ಕೀರ್ತಿಯನ್ನು ಮುಳುಗಿಸಿದೆ! ಮರ್ಯಾದೆ ಮೀರಿದೆ! ಯಃಕಶ್ಚಿತ್ ಬೈರಾಗಿಯನ್ನು ಕಾಡಿನ ಮಧ್ಯೆ ಕದ್ದು ಜೊತೆಗೂಡಿ ನಮ್ಮ ಕುಲದ ಯಶಶ್ಚಂದ್ರಿಕೆಗೆ ನಿಂದನೆಯ ಅಮಾವಾಸ್ಯೆಯನ್ನು ಮೆತ್ತಿ ಹಾಳು ಮಾಡಿದೆ!'

ಅದನ್ನು ಕೇಳಿ, ತನ್ನ ಪ್ರಾಣ ದೇವತೆಯ ನಿಂದೆಗೆ ದುಃಖಿಸುತ್ತಾ,

'ಕೈ ಮುಗಿಯುತ್ತೇನೆ! ತಾಯೆ, ನನ್ನ ಹೃದಯೇಶನನ್ನು ನಿಂದಿಸದಿರು! ನನ್ನನ್ನು ಒಲಿದ ಅರ್ಜುನನು ಜಗದ್ವಿಖ್ಯಾತ ವಂಶದವನು. ಕೀಳು ಕುಲದವನಲ್ಲ. ಯಃಕಶ್ಚಿತ್ ವ್ಯಕ್ತಿಯಲ್ಲ. ಅವನು ಕುಲದ ಕೀರ್ತಿಗೆ ದೇವಲೋಕದ ಬೆಳಕನ್ನು ಹಾಗೂ ನನ್ನನ್ನು ಒಲಿದು ಹೆತ್ತವರಿಗೆ ಸಂತೃಪ್ತಿಯನ್ನು ತರುವನು! ಅವನನ್ನು ಆರು ತಿಂಗಳಲ್ಲಿ ಮಣಿಪುರಕ್ಕೆ ಕರೆದು ತರುತ್ತೇನೆ. ನಮ್ಮ ಧರೆಯು ಅವನ ಪಾದ ಧೂಳಿಯಿಂದ ಪವಿತ್ರವಾಗುವುದು.

'ಸರ್ವ ವಿಧದಿಂದಲೂ ಲೋಕ ವಿಖ್ಯಾತನಾದ ಪಾರ್ಥನನ್ನು, ದೊರೆಯಾಗುವ ನನ್ನ ಬಾಳಿನ ಸ್ವರ್ಗದಿಂದ್ರನನ್ನು, ಪುರುಷ ಸಿಂಹನನ್ನು ನಿಂದಿಸಬೇಡ.'

ಎಂದು ಕೆಚ್ಚಿನಿಂದ ಹೇಳಿದ ಮಗಳನ್ನು ಆ ಮಹಾರಾಣಿ ಮುದ್ದಿಸಿದಳು. ತನ್ನ ಅಳಿಯನ ಪ್ರಸಿದ್ಧ ಕುಲ ವಿಷಯ ಗೋತ್ರಗಳನ್ನು ಕೇಳಲು, ಅದನ್ನು ಹೇಳಲು ಪುತ್ರಿ ಒಪ್ಪಲಿಲ್ಲ. ಸಿಂಹವನ್ನು ಬಿಟ್ಟು ಬೇರೆಯದನ್ನು ಸಿಂಹಿಣಿ ವರಿಸುವುದೇ ಎಂದು ಹೇಳುತ್ತ ಮಾತೆಯನ್ನು ಮೆಚ್ಚಿಸಿ, ವಿಶ್ವಾಸವನ್ನುಂಟು ಮಾಡಿ ಕಳುಹಿಸಿದಳು.

ಮುಟ್ಟಿಬಂದುದು ತೇಲಿ ಹತ್ತಿರಕೆ ಷಣ್ಮಾಸದವಧಿ

ಕಾಲದ ತೇರು ಹಗಲು ಇರುಳುಗಳ ಗಾಲಿಯ ಮೇಲೆ ಅನಂತ ಅವಿಚ್ಛಿನ್ನ ಯಾತ್ರೆಯಲ್ಲಿ ಉರುಳುತ್ತಿತ್ತು. ಕಮಲನೇತ್ರೆ ಚಿತ್ರಾಂಗದೆಯ ಜೀವನವು ದೂರ ನಿರೀಕ್ಷಣೆಯ ಕಠಿನವೂ ಚೂಪು ಆದ ಶೂಲದ ಮೊನೆಯಲ್ಲಿ ತಪಸ್ಸನ್ನು ಮಾಡುತ್ತ ಹರಿಯುತ್ತಿತ್ತು. ಹಾಗಿರಲು ಆರು ತಿಂಗಳ ಅವಧಿ ತೇಲುತ್ತ ಹತ್ತಿರಕ್ಕೆ ಬಂದು ಮುಟ್ಟಿತು.

ಮೇಘರತಿಯು ಜಡವೇಷದಿಂದ ತನ್ನ ತಾಯಿ ಮನೆಯಾದ ಕಡಲ ಒಡಲನ್ನು, ದೂರದಲ್ಲಿರುವ ಸಹ್ಯಗಿರಿ ಮನ್ಮಥನನ್ನು ನೆನೆದು ನವೆಯುತ್ತಾಳೆ. ಮಳೆಗಾಲದ ಸಮಯವು ಬರಲು, ಸೂರ್ಯನ ಕೃಪೆಯಿಂದ ಮೇಲೆದ್ದು, ವಾಯುವಿನ ಸಹಾಯವನ್ನು ಪಡೆದು ನಡೆಯುವಳು. ಸುರಚಾಪ (ಕಾಮನ ಬಿಲ್ಲು)ದ ವರ್ಣಾಭರಣಗಳನ್ನು ಧರಿಸುವಳು. ಸುಂದರ ಸಹ್ಯಾದ್ರಿ ವರನನ್ನು ವರಿಸುವಳು. ಅವನನ್ನು ಎದೆಯಲ್ಲಿ ಸ್ಮರಿಸಿ ಬರಬರುತ್ತ ಹಸುರು ಸಿರಿಯ ಮಲೆನಾಡನ್ನು ಕಂಡು ರೋಮಾಂಚನಗೊಂಡು ಆ ನಾರಿ ಮೇಘರತಿ ಶೋಭಿಸುವಳು.

ಮೈ ಒಡವೆಗಳ ಬಂಗಾರದ ಹೊಳಹೊ, ದನಿಯೊ ಎನ್ನುವಂತೆ ಮಿಂಚು ಗೊಂಚಲುಗಳಿಂದ, ಮೊಳಗುವ ಬಳಗದಿಂದ ಹನಿಗಂಪು ತಂಪು ಹಾಗೂ ಬೀಸುಗಳಿಂದ ಕಾರ್ಮುಗಿಲ ಕಾಂತೆ ರಂಜಿಸುವಳು. ಅವಳನ್ನು ಕಾಣುತ್ತ ಗಿರಿಮದನನು ಎದೆಯ ಆನಂದವನ್ನು ಅನುಭವಿಸುತ್ತ ಉಬ್ಬಿ ಹೋಗುವನು.

ನವಿಲುಗಳು ಕುಣಿಯಲು, ಹಂಸ ಕ್ರೌಂಚ ಪಕ್ಷಿಗಳು ತೃಪ್ತಿಯಿಂದ ನಲಿದಾಡುವುವು. ಕೃಷಿಕರು ಕೃತಜ್ಞತೆಯಿಂದ ಹೊಗಳುತ್ತ ಮಣಿಯುವರು. ಬಿಸಿಲ ಬೇಗೆಗೆ ಬೆಂದ ಭುವಿಯು ದೇವಗಂಗೆಯನ್ನು ಮೊಗೆ ಮೊಗೆದು ಈಂಟುತ್ತ ತೃಪ್ತವಾಗುವುದು ತೃಣರಾಶಿಯು ಹಸುರಿನಿಂದ ಪುಲಕಗೊಂಡಂತೆ ಮೈದೋರುವವು. ಬೀಜಗಳ ಬಣಗುಟ್ಟುವ ಎದೆಯಲ್ಲಿ ಆಶಾ ಅಂಕುರದ ಜೀವದಲೆಯಾಡುವುದು. ಆಗ ಮೇಘಾಂಗನೆಯು ಸಂಭ್ರಮದಿಂದ ಸಹ್ಯಾದ್ರಿ ದೇವನನ್ನು ಆಲಂಗಿಸುವಳು. ಆದರೆ ಆಹಾ, ಅವಳು ಮರಳಿ ಜಡವಾಗಿ, ಏಕಾಂಗಿನಿಯಾಗಿ ಕಡಲಿನ ಒಡಲಿಗೆ ಹರಿಯುವಳು!

ವರ್ಷ ಪ್ರಣಯ ಯಾತ್ರೆಯ ಆ ಮೇಘ ರಾಗಿಣಿಗೆ ಪ್ರಯಾಣ ಪ್ರಸಂಗ ಮಾತ್ರದಿಂದ ಉಪಮೆಯಾಗಿ ಚಿತ್ರಾಂಗದೆಯು ಆಪ್ತ ಸಖಿಯರೊಡಗೂಡಿ ಪಾರ್ಥನನ್ನು ಎದುರುಗೊಳ್ಳಲು ಹೊರಟಳು. ಅವನನ್ನು ಬೆರಗುಗೊಳಿಸಿ, ತನ್ನ ಪಿತೃಗಳ ಜೊತೆಗೆ ಮಣಿಪುರದ ಜನರೆಲ್ಲ ಆಶ್ಚರ್ಯಕ್ಕೊಳಗಾಗುವಂತೆ, ಹಿಗ್ಗಿ ನಲಿವಂತೆ ಕರೆತರುವೆನು ಎಂಬ ಆನಂದದಿಂದ ನಡೆದಳು.

ದಿನ ದಿನಕ್ಕೆ ದೂರು ಕರಗುತ್ತ ಶಿವಗುಡಿಯ ಬನವು ಹತ್ತಿರವಾಯಿತು. ಚಿತ್ರಾಳ ಮನಸ್ಸು ಸವಿ ನೆನಪಿನಿಂದ ಮತ್ತು ಬರಲಿರುವ ಸಗ್ಗ ಸೊಗಸಿನ ಆಸೆಯಿಂದ ತುಂಬಿದ ಗರ್ಭದಂತೆ ತುಂಬಿ ಬಂದಿತು!

ಮೊದಲ ಮಿಲನದ ಮತ್ತೆ ವಿರಹದ ಶಿವಾಲಯಂ!

ಅವಳ ಕಣ್ಣಿಗೆ ತಮ್ಮ ಮೊದಲ ಬೇಟದ ಮೊಳಕೆ ಹಣ್ಣಾದ ಕಾನನ ಕಂಡಿತು. ಮೊದಲ ಮೋಹದ ಬಲೆಯನ್ನು ನೇಯ್ದ ತಿಳಿಗೊಳದ ಸ್ಥಳ ಕಂಡಿತು. ಮೊದಲ ಮಿಲನದ ಮತ್ತು ವಿರಹದ ಶಿವಾಲಯ ಕಂಡಿತು. ಅವುಗಳನ್ನು ನೋಡುತ್ತ ಅವಳ ಎದೆಯು–ಹೊನ್ನಿನ ತೆರೆಮೂಡಿ, ಎದ್ದು ದಡಕ್ಕೆ ಅಪ್ಪಳಿಸುವ ಕ್ಷೀರ ಸಮುದ್ರದ ಸಂಭ್ರಮ ಜಲೋಚ್ಛ್ವಾಸದಂತೆ ಉಕ್ಕೇರಿತು.

ಒಂದು ಎಡೆಯಿಂದ ಇನ್ನೊಂದು ಎಡೆಗೆ ಓಡಲಾರದೆ ಓಡುತ್ತ, ಪ್ರಿಯನನ್ನು ಕಾಣುತ್ತೇನೆ ಎನ್ನುವ ಅತ್ಯಾದರದಿಂದ ನೋಡಿದಳು. ಅರಳಿದ ಹೂಗಳನ್ನು ಚುಂಬಿಸುತ್ತ, ಎಲೆಗಳನ್ನು ಮುದ್ದಿಸುತ್ತ ವಿವಿಧ ವರ್ಣಗಳನ್ನು ಮೋಹಿಸಿದಳು. ಗಾಳಿಯು ತೀಡುತ್ತ ಬರಲು ಅದರೊಡನೆ ಸಖಿಯೆಂದು ಆಡಿದಳು. ತಲೆ ತಗ್ಗಿಸಿ ತೂಗಾಡುತ್ತಿದ್ದ ಎಲೆಗಳನ್ನು ವಿನೋದದಿಂದ ಪೀಡಿಸಿದಳು.

ತಾನು ಸ್ನಾನ ಮಾಡಿದ್ದ ತಾವರೆಯ ತಿಳಿಗೊಳದ ನೀರ್ಗನ್ನಡಿಯಲ್ಲಿ ತನ್ನ ಮುಖವನ್ನು ಕಂಡು ಮೆಚ್ಚಿದಳು. ಗೆಳತಿಯರನ್ನು ಕರೆ ಕರೆದು ಒಂದೊಂದು ತಾಣವೂ ಮಹಾ ಕ್ಷೇತ್ರವೆನ್ನುಂತೆ ತೋರಿಸುತ್ತ ವರ್ಣಿಸಿದಳು; ನಂದನವನಕ್ಕಿಂತ ಇಮ್ಮಡಿ ಸೊಬಗಿನ ನೆಲೆಯೆಂದು ಹೊಗಳಿದಳು. ತಾನು ತಿಳಿಯದ ಯಾವುದನ್ನೊ ಆಲೋಚಿಸುತ್ತ ಅವರಿಗೆ ಇರುವ ಪ್ರಕೃತಿ ಸೌಂದರ್ಯಕ್ಕೆ ವಿಶೇಷತೆಯನ್ನು ನೀಡುತ್ತ ಬಣ್ಣಿಸಿದಳು. ಸೊಬಗಿಲ್ಲದೆಡೆಯನ್ನು ಕಡೆಗಣಿಸಿದಳು. ಸಖಿಯರಿಗೆ ಅಗೋಚರವಾದ ಸ್ವರ್ಗದಲ್ಲಿ ಚಂದ್ರಮುಖಿ ಇದ್ದು, ಮನಸ್ಸಿನಲ್ಲಿಯೇ ಕಳೆದ ಕಾಲದಲ್ಲಿ ಪುನಃ ಬಾಳಿದಳು!

ಆ ದಿನ ಬೆಳಗಾಯಿತು. ಪತಿಯು ಬರುವ ಅವಧಿಯ ಶುಭ ದಿನ. ಆರು ತಿಂಗಳ ನಿರೀಕ್ಷಣೆಯು ಫಲಿಸುವ ದಿನ. ಚಿತ್ರಾಂಗದೆಯ ಜೀವನದ ಉದ್ವಿಗ್ನ ನಾಲಗೆಯಲ್ಲಿ ಬೇವು ಬೆಲ್ಲದ ದಿನ; ಬೆಳಗಾಯಿತು ಆ ದಿನ! ಶೃಂಗಾರ ಸದನೆಯಾದ ಚಿತ್ರಾಂಗಿಯು

ಮನ್ಮಥ ವೈರಿ ಶಿವನಿಗೆ ಪೂಜೆಮಾಡಿ ಮಧುರ ಮಂಗಲ ಸಂಗೀತದಿಂದ ಸ್ತುತಿಸಿದಳು. ಪಾರ್ಥ ದೇವನನ್ನು ಸ್ವಾಗತಿಸುವ ಉತ್ಸಾಹದಿಂದ ಲಲಿತಾಂಗಿಯರ ಜೊತೆಗೂಡಿ ವಿಪಿನ ರಂಗವನ್ನು ಪ್ರವೇಶಿಸಿದಳು.

ದಿಕ್ಕು ದಿಕ್ಕುಗಳಲ್ಲಿ ಅಲೆದಾಡುತ್ತ, ಬಳಲಿಕೆಯನ್ನು ಗಣನೆಗೆ ತೆಗೆದುಕೊಳ್ಳದೆ ಬೆಟ್ಟದ ತುದಿಗೆ ಏರಿದಳು. ಅನ್ವೇಷಣಾ ದೃಷ್ಟಿಯಿಂದ ಕಂದರವನ್ನು ನೋಡಿದಳು. ನರ ನಾಮದ ಅರ್ಜುನನಿರಲಿ, ನರನೋರ್ವನೂ ಕಾಣಿಸದಿರಲು ನಿಟ್ಟುಸಿರು ಬಿಟ್ಟಳು. ಕಲ್ಗೋಡಿನ ತುದಿಗೆ ಏರಿ ಕಾಯ್ದಳು.

ಚಿತ್ರಾಳು ಆಸೆ ತುಂಬಿದ ದೃಷ್ಟಿಯನ್ನು ಬೀರುತ್ತ ಇರಲು ನಿಧಾನ ನಿಧಾನವಾಗಿ ನೆರಳು ಉರುಳುತ್ತ ಹೊತ್ತು ಏರುತ್ತಿತ್ತು. ಹಗಲೇರುತ್ತಿದ್ದಂತೆ ಅವಳ ಹೃದಯ ಸರೋವರವು ಕಾತರತೆಯೆಂಬ ಗಾಳಿಯ ಹೊಡತಕ್ಕೆ ಕದಡಿ ಹೋಯಿತು. ಕಣ್ಣೀರು ತುಳುಕಿತು. ಕೆಳದಿಯರ ಸಂತೈಕೆಯು ಮೂದಲಿಕೆಯಂತಾಯಿತು. ಅಬಲೆಯು ತಂದೆ ತಾಯಿಯರಿಗೆ ಕೊಟ್ಟ ವಚನವನ್ನು ನೆನೆದು ಮರುಗಿದಳು, ದೀನ ದುಃಖದಲ್ಲಿ ಕೊರಗಿದಳು.

ಹೀಗಿರುವಾಗ, ಒಲವಿನ ಕೊಲೆಯಲ್ಲಿ ಆದ ಕೆಮ್ಮುಗಿಲ ರಕ್ತದ ಕೆಸರಿನಲ್ಲಿ ಪಶ್ಚಿಮ ದಿಕ್ಕಿನಲ್ಲಿ ಹೊತ್ತು ಆವರಿಸಿ ಮುಳುಗಿತು. ಗರ್ಭಿಣಿಯ ಹೃದ್ಗರ್ಭದಲ್ಲಿ ನಿರಾಶೆ ದಟ್ಟಯಿಸಿ ಕವಿಯುವಂತೆ ರಾತ್ರಿ ಕವಿದು ಬಂತು.

ಮಣಿಪುರಕೆ ಹಿಂತಿರುಗಿ ಬಂದಳತಿ ಭೀಷಣ ಮನಃಸ್ಥಿತಿಯಲ್ಲಿ!

ಹೇ ಆಶಾವಿಲಾಸಿನಿಯೆ, ರಾತ್ರಿಗೆ ನಕ್ಷತ್ರವು ಬರುವಂತೆ ನಿರಾಶೆಯಾದಾಗ ನೀನು ಬರುವೆ. ನಿನ್ನ ಅಮೃತ ಪಾಶದಿಂದಲೇ ಮೃತ್ಯುವು ಈ ಭುವನದ ಕಹಿಯಾದ ಜೀವನದಿಂದ ಅಡಿಗಡಿಗೆ ಹಿಮ್ಮೆಟ್ಟುತ್ತಿದೆ. ಬಡತನದ ಕಣ್ಣಿಗೆ ಸಂಪತ್ತಿನ ಕನಸು ನೀನು. ರಾಮಗಿರಿ ಆಶ್ರಮದ ವಿರಹಿ ಯಕ್ಷನ ಮುಂದೆ ಮೇಘದೂತನು ನೀನು. ಪ್ರಣಯಕ್ಕೆ ಭರವಸೆ ನೀನು. ಬೆಂದ ಕುದಿವೆದೆಯ ಮನುಷ್ಯರಿಗೆ ಈ ಧರೆಯ ಸಂಕಟದ ಎದುರು-ಪರದ ಸ್ವರ್ಗವನ್ನು ಒಡ್ಡಿ ಸಂತೋಷವಾಗಿಡುತ್ತಿರುವೆ! ಚಿತ್ರಾಂಗಿಯ ಎದೆ ತಾವರೆ ಕಣ್ಣ ಕುದಿನೀಲಿ ಬೇಯಲು, ಆಶಾವಿಲಾಸಿನಿಯ ಕೃಪೆಯಿಂದ ಆ ರಾತ್ರಿಯನ್ನು ಕಳೆದಳು.

ಆಶೆಯು ನಿರೀಕ್ಷಣೆಯ ಮೊನೆಯ ಮೇಲೆ ಮೈದೋರುತ್ತ ಗಗನ ಮಧ್ಯಕ್ಕೆ ಏರುತ್ತ, ಮತ್ತೆ ಮರುದಿನ ಹತಾಶ ಅಂಧತೆಯ ಬಿಲಕ್ಕೆ ಉರುಳಿತು. ಹಗಲೇರಿ ಹಗಲು ಇಳಿಯುತ್ತ, ಇರುಳಾಗಿ ಇರುಳು ಹೋಗಿ, ಕಾಲ ಜೀವನ ಸೋರುತ್ತ ಜೀವನಾಂಜಲಿಯನ್ನು ಬರಿದಾಗಿಸಿತು. ಹೀಗೆ ನಿಂತ ತುದಿಬೆರಳಿನಲ್ಲಿ ಎನ್ನುವಂತೆ ಕಾಯ್ದ ಆ ಬಸುರಿ ರೋಷ ದುಃಖ ದ್ವಂದ್ವದಲ್ಲಿ ಬೆಂದು ಹೋದಳು. ಅತಿ ಭೀಷಣ ಮನಸ್ಥಿತಿಯಲ್ಲಿ ಮಣಿಪುರಕ್ಕೆ ಹಿಂದಿರುಗಿದಳು!

❑

5. ಹೂವಿಂದೆ ಸಾರ್ಥಕವಹುದು ಗಿಡದ ಬಾಳಂತೆ ಬಾಳ್ಗಿಡಕೆ ಒಲುಮೆಯೆ ಹೂವು

ಭೂಮಿಗಿಂತ ಮೊದಲು ಸೃಷ್ಟಿಯಾದ ಜಲದ ಆಶ್ರಯವೆ (ಮುನ್ನೀರು), ಸಾಗರವೆ ಉರುಳುರುಳು. ನೀನು ಶತಶತ ವರ್ಷಗಳುರುಳಿದರೂ ಅಳಿಯದ ಪ್ರೀತಿಯಿಂದ ಹರುಷ ಭೋಗದಲ್ಲಿ ಪೃಥ್ವಿಯನ್ನು ತೆರೆ ತೋಳುಗಳಿಂದ ಆಲಂಗಿಸಿರುವೆ! ನೀರ ನಿಧಿಯಾದ ನೀನು ಗಂಭೀರ ವಿಸ್ತಾರದ ಗಹನವೂ ಆಳವೂ ಉದಾತ್ತವೂ ಆದ ಸುರನೀಲ ಸುಂದರ ಮೂರ್ತಿ. ನಮ್ಮ ಈ ಧರಾದೇವಿಯು ಸೂರ್ಯನಿಂದ ಸಿಡಿದು ಬೆಂಕಿಯಲ್ಲಿ ಮಿಂದೆದ್ದಿತು. ಅದು ಹೆತ್ತ ಬಾಳಿಗೆ ಸುಖ ಹಿತ ಪ್ರೀತಿ ನೀಡಿದ ದಾನಿಯೇ ನಿನಗೆ ನಮೋ ನಮಃ!

ಗಡಿಮೀರಿ ವಿಸ್ತಾರವಾಗಿ ಬೆಳೆದ ನಿನ್ನ ದಡಕ್ಕೆ ಗುಡಿ ಗುಡಾರವೇಕೆ? ಅಲ್ಲಿ ಆತ್ಮದ ಬಯಕೆ ಬಳ್ಳಿಯು ಕುಡಿಚಾಚಿ ಹಬ್ಬುತ್ತ, ಕಾಲದೇಶದ ಮೊಟ್ಟೆಯನ್ನು ಒಡೆದು ಮೀಟಿ, ಅನಂತತೆಯನ್ನು ಹೀರಿ ಬ್ರಹ್ಮವನ್ನು ತಬ್ಬುವುದು! ನಿರಂತರ ಚೇತಸದ ಜಲಧಿಯೆ, ನಿನ್ನ ಮೊರೆಯು ಮಾನವನೆದೆಗೆ ಧೀರತೆಯ ಕಿಡಿ ಸೂಸಿ ಸಾಹಸಕ್ಕೆ ಎಳೆದೊಯ್ಯುವ ಕರೆಯಾಗಿದೆ. ರತ್ನನಿಧಿಯೆ, ನರನ ನಾಗರಿಕತೆಯ ತೀರ್ಥಯಾತ್ರೆಯ ಮಹಾವಿಸ್ತಾರವಾದ ಜಲಪಥವೆ ಮೊರೆದು ಉರುಳು. ಅಲ್ಲೋಲ ಕಲ್ಲೋಲ ರುದ್ರಾಟ್ಟಹಾಸದಿಂದ ಮನೋಹರ ಹಾಗೂ ಭಯಂಕರ ಮೋಹವನ್ನೆರಚಿ ಬೀಸು!

ಮಣಿಪುರ ಸಮೀಪದಲ್ಲಿ ಅಂಬುಧಿ ಹಾಗೆ ಮೊರೆಯಿತು. ದೀರ್ಘವಾಗಿ ಹರಡಿಕೊಂಡಿದ್ದ ತೀರವನ್ನು ಅಪ್ಪಳಿಸಿ ಬಡಿಯಿತು. ಅದರ ಮಂಥನದಿಂದ, ನೊರೆಗರೆವ ಅಲೆಗಳಿಂದ ಮುತ್ತುಗಳೆದ್ದವು. ಬೃಹನ್ ರಾತ್ರಿಯ ಬೆಳುದಿಂಗಳ ತಪೋಮೂರ್ತಿ ತನ್ನ ಜಟಾಜೂಟದಲ್ಲಿ ಅಮೃತ ಕಿರಣಗಳನ್ನು ಮುಡಿದಿತ್ತು. ಅದು ನಿಶ್ಚಲ ಧ್ಯಾನ ನಿದ್ರೆಯಲ್ಲಿ ವಿಶ್ವವ್ಯಾಪಿ ತಾನಾಗಿತ್ತು.

ಕ್ಷಾತ್ರಕುಲ ರಮಣಿ ಚಿತ್ರಾಂಗದೆಯು ನಿರ್ಜನ ರಾತ್ರಿಯ ಆ ಸಮಯದಲ್ಲಿ ತನ್ನ ಬಾಳನ್ನು ಕೊಲೆಗೈಯಲು ಆಲೋಚಿಸುತ್ತ ಕಡಲ ತಡಿಗೆ ಬಂದಳು. ದಿಕ್ಪಾಲಕರಿಗೆ, ಗಗನ ದೇವತೆಗಳಿಗೆ, ವಾಯುವಿಗೆ, ಸಾಗರನಿಗೆ, ಶಶಿತಾರೆಗಳಿಗೆ ಕೈ ಮುಗಿದು ಹೀಗೆ ಪ್ರಾರ್ಥಿಸಿದಳು:

ಕ್ಷಮಿಸಿಮಪರಾಧಮಂ, ದುಃಖಾಗ್ನಿ ದಗ್ಧ ದುರ್ಬಲೆಯ ಈ ಪಾಪಮಂ!

'ಕರುಣ ದೇವತೆಗಳಿರ, ನೀವು ಲೋಕ ಸಾಕ್ಷಿಗಳು. ನನ್ನ ಕಾರ್ಯದ ಅವಿವೇಕವನ್ನು ಲೆಕ್ಕಿಸದೆ ಅದರ ಕಾರಣವಾದ ಅತಿ ದುಃಖ ಸಂಕಟವನ್ನು ಗಣಿಸಿ, ದುಃಖಾಗ್ನಿಯಿಂದ ದಹಿಸಿ ಹೋಗಿರುವ ಈ ದುರ್ಬಲೆಯ ಅಪರಾಧವನ್ನು ಕ್ಷಮಿಸಿ. ಈ ನರರ ಬದುಕಿನಲ್ಲಿ ಒಲುಮೆಗಿಂತಲು ಬೇರೆ ಪರಮಾರ್ಥವಿಲ್ಲ; ಹಾಗೂ ಒಲುಮೆ ಇಲ್ಲದ ಬಾಳು ಅರ್ಥಹೀನ. ಹೂವಿನಿಂದ ಸಾರ್ಥಕವಾಗುವುದು ಗಿಡದ ಬಾಳು. ಅದರಂತೆ ಬಾಳಿನ ಗಿಡಕ್ಕೆ ಒಲುಮೆಯೆ ಹೂವು. ಒಲಿದ ಒಲ್ಮೆ ಮರಳಿ ಒಲಿಯದಿದ್ದರೆ ಒಲುಮೆಗೆ ಅದೇ ಕೊಲೆ!

ಮೊದಲೆ ಕೊಲೆಯಾಗಿರುವ ನನ್ನೆದೆಯನ್ನು ನಾನು ಇಂದು ಮತ್ತೆ ಕೊಲೆ ಮಾಡುವೆನೆ? ಕಳೇಬರವನ್ನು ಪಾವನ ಸರಿತ್ಪತಿ (ನದಿಗಳ ಒಡೆಯ) ಯ ವಿಸ್ತೃತವಾದ ಔದಾರ್ಯಕ್ಕೆ ಅರ್ಪಿಸುವೆ!'

ಲಾವಣ್ಯವತಿಯ ಕೆನ್ನೆಗಳಲ್ಲಿ ಕಣ್ಣ ಉಪ್ಪು ನೀರಿನ ಹನಿಗಳು ಧಾರೆಯಾಗಿ ಹರಿಯುತ್ತಿರಲು, ನದಿ ಹರಿಯುವಂತೆ ಲವಣ ಸಿಂಧುವಿನ ಕಡೆಗೆ ನಡೆದಳು. ಅವಳು ನಡೆದುದೆ ತಡ ಲಕ್ಷೋಪ ಲಕ್ಷ ಹೆಡೆಗಳನ್ನೆತ್ತಿ ಭುಸ್ಸೆಂಬ ಸಾಸಿರ ಶಿರದ ಮಹಾಪಣಿಯಂತೆ ಸಾಗರವು ವಿಕ್ಷುಬ್ಧಗೊಂಡ ಅಲೆಗಳ ಉಚ್ಛ್ವಾಸದಿಂದ ಮುನಿದೆದ್ದಿತು. ಪ್ರೀತಿಯ ತಾಯಿಯು ಮಗಳನ್ನು ತಡೆಯುವಂತೆ ಗರ್ಭಗಾತಿನಿಯನ್ನು ನೂಕಿತು.

ತಕ್ಷಣ ಸಾಗರದ ಸಾರವೆ ತನ್ನ ಜಲದ ಆಕೃತಿಯನ್ನು ಇಲ್ಲವಾಗಿಸಿಕೊಂಡು ಶೋಭಿಸುವಂತೆ ಸಮುದ್ರ ಮೂರ್ತಿಯು ವಾರಿಧಿಯ ಮಧ್ಯೆ ಗೋಚರಿಸಿತು. ಅದು ಸರ್ವ ಸೌಂದರ್ಯದ ಸಾಕ್ಷಾತ್ಕಾರದಂತಿತ್ತು. ನವರತ್ನಗಳಿಂದ ಕೂಡಿದ ಚಿನ್ನದ ಕಿರೀಟದಿಂದ ಹೊಮ್ಮುವ ರಶ್ಮಿಯಿಂದ ಅದರ ಪರಿವೇಷ ಮಂಡಲವು ಬಣ್ಣ ಬಣ್ಣದ ಕಿರಣಗಳಿಂದ ಹೆಣೆದು ಪ್ರಕಾಶಿಸುತ್ತಿತ್ತು. ತರುಣ ಕೆಂಪು ಶರೀರವು ತೇಜಸ್ಸಿನ ತೆರೆಯ ನೊರೆಮುತ್ತಿನಿಂದ ಮೆರೆಯುವ ನೀರಿನ ಅಂಬರದಿಂದ ಹೊರಸೂಸಿ ಹೊಳೆಯುತ್ತಿತ್ತು. ಅದರ ಸುತ್ತಲೂ ಎತ್ತೆತ್ತಲೂ ಸಮುದ್ರದ ಅಲೆಗಳೊಡನೆ ಮೋಡಗಳ ಗುಂಪು ಸ್ಪರ್ಧೆಯಿಂದ ನರ್ತನವನ್ನು ಮಾಡುತ್ತಿದ್ದವು.

ತಾವರೆ ಮುಖದ, ಮೀನ ನೇತ್ರಗಳ, ಆಮೆಯಂತಹ ಕೆನ್ನೆಯ ಚೆಲುವ ಶೈವಾಲ (ನೀರಿನ ಮೇಲೆ ಬೆಳೆಯುವ ಪಾಚಿ) ಶೃಂಗಾರದ ಅಂಬುಧಿಯ ಶ್ರೀಮೂರ್ತಿ ಗಂಭೀರ ಮೌನದಿಂದ ಕೂಡಿದ ನಿನಾದದಿಂದ ಹೀಗೆ ಘೋಷಿಸಿತು :

•

ಮರ್ದಲ್ತು ಕೊಲೆ ವಿರಹಕ್ಕೆ

'ಮಗಳೆ, ಸಾಹಸವನ್ನು ಮಾಡಬೇಡ. ನಿನ್ನ ನೆಲೆಗೆ ನಡೆ. ಕಡಲ ಒಡಲಿನ ಚಳಿಗಿಂತ ಬೆಚ್ಚನೆಯ ಮನೆಯ ಮಡಿಲೇ ಒಳ್ಳೆಯದು. ಕಾಣದಿರುವ ಸಾವಿಗಿಂತ

ಕಣ್ಣೆದುರಿಗಿರುವ ನೋವು ತಾನಾಗದೆ ಸುಂದರ? ಮತ್ತು ವಿರಹಕ್ಕೆ ಕೊಲೆಯು ಮದ್ದಲ್ಲ. ನೀನು ಕೊನೆಯುಸಿರು ಎಳೆಯುವ ಮೊದಲು ನಿನ್ನ ಪತಿಯ ದರ್ಶನವಾಗುವುದು.

'ನಿಮ್ಮ ಪ್ರಣಯ ಸಾರಿ ಸರ್ವಸ್ವ ಶಿಶು ಸ್ವಾತಿ ಹನಿ ಮುತ್ತಾಗಿ ನಿನ್ನ ಒಡಲಿನಲ್ಲಿ ಬೆಳೆಯುತ್ತಿದೆ! ಬಾಳಿನ ಗಿಡಕ್ಕೆ ಪ್ರೀತಿಯು ಹೂ ಎಂದು ಹೇಳಿದೆಯಲ್ಲವೆ? ಅದು ನಿಜವಾದರೂ, ಮರಕ್ಕೆ ಹೂ ಅಲ್ಲದೆ ಹಣ್ಣು ಗುರಿಯಾಗಿರುವುದು. ಹಾಗೆ ಪ್ರಣಯ ಸಾಧನೆಗೆ ಶಿಶು ವಾತ್ಸಲ್ಯವೇ ಸಿದ್ಧಿ!

'ಮಿಡಿ ಬಂದ ಮಾವು ಹೂ ಹೋಯಿತೆಂದು ಅಳುತ್ತದೆಯೆ? ಫಲದ ಸಾಫಲ್ಯಕ್ಕೆ ಸುಮದ ಬಲಿಯಾದಂತೆ ನೀರ ನೀರೆಯರ ಒಲುಮೆ ಕಂದನಾನಂದಕ್ಕೆ ಬಲಿಯಾಗುವುದು. ಹಸುಳೆಯ ಪ್ರೀತಿ ದಾಂಪತ್ಯ ಮಂದಿರಕ್ಕೆ ಗೋಪುರದ ಹೊಂಗಳಸ. ಅಲ್ಲದೆ ಗರ್ಭಗುಡಿಯಲ್ಲಿ ಪುಣ್ಯ ವೇದಿಕೆಯ ದೇವಮೂರ್ತಿ. ವತ್ಸ ವಾತ್ಸಲ್ಯವಿಲ್ಲದಿರುವ ವಿವಾಹ ವ್ಯರ್ಥ!

'ನಿನಗೆ ಮಗನು ಹುಟ್ಟುತ್ತಾನೆ. ಅವನನ್ನು ಮುದ್ದಿಸಿ ಲಾಲಿಸಿ ಪಾಲಿಸಿ ತಿದ್ದು! ನೀನು ಗುರುವಾಗಿ ಅವನಿಗೆ ರಾಜರ ಕಲೆಗಳನ್ನು ಕಲಿಸು! ಕೆರಳಿ, ಎರಡು ಜೀವಗಳನ್ನು ಕಗ್ಗೊಲೆ ಮಾಡುವ ಈ ಸಾಹಸ ಬೇಡ. ಆ ಸಾಹಸವನ್ನು ಮಾಡಿ ಬದುಕು. ನಡೆ, ತಪಸ್ವಿನಿಯಾಗಿ ಕೀರ್ತಿಯನ್ನು ಪಡೆ!'

ಹೀಗೆಂದು ಹೇಳುತ್ತ ಆಶೀರ್ವಾದದ ಆ ವಾಣಿ ನಿಂತಿತು. ಕಣ್ತೆರೆದು ನೋಡಲು ಸಮುದ್ರ ಮೂರ್ತಿ ಕಾಣದಾಯಿತು. ಚಿತ್ರೆಯು ಕನಸಿನಿಂದ ಎಚ್ಚರಗೊಂಡಂತೆ ಮೈ ತಿಳಿದು, ನಿಧಾನವಾಗಿ ತನ್ನ ಮಂದಿರಕ್ಕೆ ಬಹು ವಿಧದ ಭಾವ ಭಾರದಲ್ಲಿ ನಡೆದಳು. ಅಂದು ಮೊದಲಾಗಿ ಆ ರಮಣಿ ತನ್ನ ಸುಪವಿತ್ರ ಭಾರವನ್ನು ತಾಯಾಗಿ ಹೊತ್ತು, ಪೂಜ್ಯ ಮನಸ್ಸಿನಿಂದ ಪೂಜೆಯೆಂದು ತಿಳಿದು ಕಾಪಾಡಿದಳು.

ಒಂಬತ್ತು ತಿಂಗಳು ತುಂಬಿ ಬರಲು ಹಸುಳೆಯು ಕತ್ತಲ ಆಕಾಶದಲ್ಲಿ ಚಂದ್ರನು ಪ್ರಕಾಶಿಸಿ ಹೊಮ್ಮಿ ಬರುವಂತೆ ಜನಿಸಿತು. ಜನಮನವು ಹಿಂದಿನ ಆ ಶಂಕೆಯನ್ನು ತೊರೆದು ಸಮುದ್ರ ಉಲ್ಲಾಸದಿಂದ ಚಿಮ್ಮಿ ಹೊರಹೊಮ್ಮಿತು. ತಾಯಿ ಹೇಳದಿದ್ದರೆ ಏನು? ಚಂದ್ರ ಸಮ ತೇಜಸ್ವಿ ಶಿಶು ತಾನು ತನ್ನ ವಂಶವನ್ನು ಹೇಳಿತು!

ಮತ್ತೋರ್ವನರ್ಜುನನೊ ಎನೆ ಬಭ್ರುವಾಹನನಂಬಳೆದನಾ ತನ್ನ ನಾಡಿಗೆ ಕೋಂಟೆ ತಾನಾಗಿ

ಚಿತ್ರಾಂಗಿಯು ಕ್ಷತ್ರಿಯೋಚಿತವಾಗಿ ರಾಜ ಸಂಭ್ರಮದಿಂದ ಬಭ್ರುವಾಹನ ಎಂದು ಹೆಸರಿಟ್ಟಳು. ಎಳೆಯ ಮಗುವಿಗೆ ಮೋಹದ ಹೆಮ್ಮೆಯಿಂದ ಮೊಲೆಯೂಡಿ ಪಾಲಿಸುತ್ತ,

ಪಾರ್ಥನನ್ನು ಮರೆತಳು. ಸಿಂಹಿಣಿಯು ಕಿಶೋರ ಕೇಸರಿಯನ್ನು ಸಾಕುವಂತೆ ಸಾಕಿದಳು. ಮತ್ತೋರ್ವ ಅರ್ಜುನನೊ ಎನ್ನುವಂತೆ ತನ್ನ ನಾಡಿಗೆ ತಾನು ಕೋಟೆಯಾಗಿ ಬೆಳೆದನು. ನೆರೆಯ ರಾಜ್ಯದ ದೊರೆಗಳ ದರ್ಪಕ್ಕೆ ಕೊಡಲಿಯಾದನು.

ಚಿತ್ರವಾಹನನು ಗತಿಸಲು ಚಿತ್ರಾಂಗದೆಯೆ ರಾಜ್ಯಸೂತ್ರವನ್ನು ಹಿಡಿದು ದರ್ಪದಿಂದ ನಡೆಸಿದಳು. ಕಿರಿಮಗನು ಹರೆಯಕ್ಕೆ ಬರಲು ರಾಜ್ಯವನ್ನು ಅವನ ಕೈಗಿಟ್ಟಳು. ಪಟ್ಟಣದ ಹೊರವಲಯದ ಒಂದು ಉದ್ಯಾನವನದಲ್ಲಿ ಸದಾ ತಪಸ್ಸಿನಿಂದಿದ್ದಳು. ಮಗನು ಒಮ್ಮೊಮ್ಮೆ ತನ್ನ ಬಳಿಗೆ ಬಂದಾಗ ಅವನಿಗೆ ರಾಜನೀತಿಯನ್ನು ಮತ್ತು ಧರ್ಮ ಭೀತಿಯನ್ನು ಕಲಿಸುತ್ತಿದ್ದಳು.

ಆ ಬಭ್ರುವಾಹನನು ಎಷ್ಟೆ ಬಲಶಾಲಿಯಾದರೂ, ಕಚ್ಚಿ ವಿಷಕಾರಿ ಕೊಲ್ಲದೆಯೆ ಹೆಡೆಯೆತ್ತಿ ಹೆದರಿಸುವ ನಯದ ಮಾರ್ಗವನ್ನೆ ಹಿಡಿದನು. ವಿಜಯ ಲಂಪಟತೆಯಿಂದ ವಿನಾಕಾರಣ ಅಕ್ಕ ಪಕ್ಕದ ನಾಡುಗಳನ್ನು ಮುತ್ತಿ ರಕ್ತವನ್ನು ತೊರೆಯಾಗಿ ಹರಿಸಿ, ಕಪ್ಪ ಕಾಣಿಕೆ ತೆಗೆದುಕೊಳ್ಳುತ್ತಿರಲಿಲ್ಲ. ನೆರೆಯ ದೊರೆಗಳನ್ನು ಮಿತ್ರರೆಂದು ತಿಳಿದು ರಾಜ್ಯಭಾರ ಮಾಡುತ್ತಿರಲು ಅವನ ರಾಜ್ಯ ವರ್ಧಿಸುತ್ತ ಸ್ವರ್ಗವೆಂಬಂತಾಯಿತು. ಮಣಿಪುರವು ವಿಸ್ತಾರಗೊಂಡು ಮೆರೆಯಿತು. ಸೌಂದರ್ಯ ಸ್ವಾತಂತ್ರ್ಯ ಸಂಸ್ಕೃತಿಗಳೊಡನೆ ಧೈರ್ಯ ಶೌರ್ಯಗಳಿಂದ, ಶಾಂತಿಯಿಂದ ಆ ರಾಜ್ಯದ ಪ್ರಜೆಗಳು ಸದಾ ಸಂತೋಷದಿಂದಿದ್ದರು!

ಸಿತವಾಹನಂಗೆಲ್ಲಿ ಚಿತ್ರಾಂಗದೆಯ ನೆನಹು?

ಸಂವತ್ಸರಗಳು ಉರುಳಿ ನಿರಂತರವಾಗಿ ಕಾಲನದಿ ಹರಿಯುತ್ತಿತ್ತು. ಆರು ತಿಂಗಳಿಗೆ ಮತ್ತೆ ಹಿಂತಿರುಗಿ ಬಂದು ಕಾಣುವೆನೆಂದು ಹೇಳಿ ಮಾತು ಕೊಟ್ಟು ಹೋದ ಪಾರ್ಥ ಯತಿಯು ಕಾರಣಾಂತರಗಳಿಂದ ಎರಡು ತಿಂಗಳು ತಡವಾಗಿ ಶಿವನ ಗುಡಿಗೆ ಬಂದನು. ಇನಿಯಳನ್ನು ಕಾಣದೆ, ಕಣ್ಣೀರು ಕರೆದು, ಮನಸ್ಸಿನಲ್ಲಿ ಮಮ್ಮಲ ಮರುಗಿದನು. ಕಾಂತೆ ಎಲ್ಲಿರುವಳು, ಅವಳು ಯಾರು ಎನ್ನುವುದನ್ನು ತಿಳಿಯದೆಯೆ ಕಾದಲೆಗೆ ಕಾದನು. ಕೆಲ ದಿನಗಳು ಅಲ್ಲಿದ್ದು, ಅವಳು ಕಾಣದಿರಲು ಉತ್ತರಕ್ಕೆ ಮುಂದುವರಿದನು. ತನ್ನ ಅಕ್ಕರೆಯ ಹೆಣ್ಣಿಗಾಗಿ ಎನ್ನುತ್ತ ಭಾರತದ ಉತ್ತರಕ್ಕೆ ನಡೆದನು.

ವಿಧಿಯ ನಿಯಮದಂತೆ ಮುಂದೆ ಕುರು ಮತ್ತು ಪಾಂಡು ಮಕ್ಕಳ ಮಧ್ಯೆ ಭೀಷಣ ಯುದ್ಧ ನಡೆಯಿತು. ಅದು ಮೈ ನವಿರೇಳಿಸುವ ಮಹತ್ ಭವ್ಯ ಭಾರತ ಯುದ್ಧ. ಅದು ಭೀಷ್ಮ ದ್ರೋಣ ಕರ್ಣ ದುರ್ಯೋಧನರ ಜೀವನ ಕಾನನವನ್ನು ದಹಿಸಿ ಪ್ರಜ್ವಲಿಸಿತು. ಅದು ಶ್ರೀಕೃಷ್ಣ ಪಾರ್ಥ ಧರ್ಮ ಭೀಮ ಅಭಿಮನ್ಯು ಮುಂತಾದ ವೀರರು ಯಶಸ್ಸಿನ ಧ್ವಜ ಹಾರಿಸಿದ ನೆಲೆ!

ಆ ಮಹಾ ಘಟನೆಗಳು ಒಟ್ಟುಗೂಡಿದುದರ ಮಧ್ಯೆ, ಕಿಡಿಮಳೆಯ ನಟ್ಟ ನಡುವೆ ಸಿಡಿಮದ್ದಿನಂತಿದ್ದ ಸಿತವಾಹನ ಅರ್ಜುನನಿಗೆ ಚಿತ್ರಾಂಗದೆಯ ನೆನಪೆಲ್ಲಾಗುವುದು? ಹೆಸರೆನ್ನುವುದನ್ನು ಅವಲಂಬಿಸಿದ್ದರೂ, ಅದು ನೆನಪಿನಲ್ಲಿರುವುದೆ? ಅಯ್ಯೊ, ಹೆಸರಿಲ್ಲದ ಆ ವನಿತೆ ಮನಸ್ಸಿನಿಂದ ಜಾರಿ ನಿಧಾನವಾಗಿ ವಿಸ್ಮೃತಿಯ ಕತ್ತಲ ವೈತರಣಿಗೆ ಬಿದ್ದು ಹೋದಳು!

ಪಾರ್ಥನಾ ಗಾಂಡೀವಕಾಶೀರ್ವಚನ ಶಕ್ತಿಯಂ ನೀಡಿ ನೆರವಾದಪೆಂ!

ನರನು ಮರೆತರೇನು, ಸತ್ಯವು ತಾನು ಮರೆಯುವುದೆ? ಚಿತ್ರಾಂಗದೆ ಮರೆಯುವಳೆ? ಭಾರತ ಯುದ್ಧಾರಂಭದ ಮೊದಲಿನಿಂದ ಪಾರ್ಥನಿಗೆ ಗೆಲುವಾಗಲಿ! ಅರ್ಜುನನಿಗೆ ಸೊಗವಾಗಲಿ! ಜಯ ವಧು ಸವತಿಯಾಗಲಿ! ಧರ್ಮ ಸಂಸ್ಥಾಪಕನಾದ ದೇವಕಿನಂದನ ಶ್ರೀಕೃಷ್ಣನಿಗೆ ನಿತ್ಯ ಮಂಗಳವಾಗಲಿ! ಲೋಕಕ್ಕೆ ಶಾಂತಿಯುಂಟಾಗಲಿ! ಎಂದು ವ್ರತದೀಕ್ಷೆ ಕೈಕೊಂಡಾಗಿನಿಂದ ಶಿವನನ್ನು ಪ್ರತಿದಿನ ಪ್ರಾರ್ಥಿಸುತ್ತಿದ್ದಳು. ಪಾಂಡವ ವಿಜಯವಾರ್ತೆ ಕಿವಿಗೆ ಬೀಳುವವರೆಗೆ ಬೇಡಿಕೊಳ್ಳುತ್ತಿದ್ದಳು.

ಹಾಗೆ ವ್ರತದಲ್ಲಿರುವಾಗ ಒಮ್ಮೆ ಬಭ್ರುವಾಹನನು ತಾಯಿಯ ಬಳಿಗೆ ಬಂದನು. ಮಾತಿನ ನಡುವೆ ವ್ರತದ ಉದ್ದೇಶವನ್ನು ಕೇಳಿದನು. ಆಗ ಅವಳು ಹೀಗೆ ಹೇಳಿದಳು :

'ಈಶ್ವರನನ್ನು ಧರ್ಮದ ಜಯಕ್ಕಾಗಿ ಬೇಡುತ್ತಿದ್ದೇನೆ. ಋತದ ಖಡ್ಗಕ್ಕೆ ಸುವ್ರತದ ಪ್ರಾರ್ಥನೆ ಸಾಣೆಯಾಗುವುದು. ಧರ್ಮದ ಮಹಾಭಾರತದ ಜಯಕ್ಕೆ ಪಾರ್ಥನ ಆ ಪೌರುಷವೆಷ್ಟಿದೆಯೊ, ಚಿತ್ರೆಯ ಈ ವ್ರತದ ಪ್ರಾರ್ಥನಾ ಪೌರುಷವು ಅಷ್ಟೆ ಇರುತ್ತದೆ ಎಂಬುದು ಶ್ರದ್ಧೆಯ ಸತ್ಯ!

'ಧರ್ಮದ ಮೇಲ್ಮೆಗಾಗಿ ಹೋರಾಡುವ ಆತನು ಗೆದ್ದರೆ, ಅವನ ಬಿಲ್ಲಿನ ಸಾಮರ್ಥ್ಯವೊಂದೇ ಕಾರಣವಲ್ಲ. ಧರ್ಮಿಷ್ಠರಾದವರ ಆಶೀರ್ವಾದ ಪೂರ್ಣಬಲ ಅಲ್ಲಿರುವುದು ಎಂದು ತಿಳಿ. ಇದು ನಿಜ. ಗಾಂಗೇಯನ ದೇಹವು ಆ ಕೌರವರ ಪಕ್ಷದಲ್ಲಿದ್ದರೂ, ಆಶೀರ್ವಾದವೆಲ್ಲ ಪಾಂಡವರ ಕಡೆಗೆ! ಮುರವೈರಿ ಶ್ರೀ ಕೃಷ್ಣ ಪಾಂಡವರ ಕಡೆಗಿದ್ದ, ಬಲರಾಮನು ಸೈನ್ಯ ಸಮೇತ ಆ ಕಡೆಗಿದ್ದನಲ್ಲವೆ? ನಾನು ಹಾಗೆ, ಪಾರ್ಥನ ಗಾಂಡೀವಕ್ಕೆ ಆಶೀರ್ವಚನ ಶಕ್ತಿಯನ್ನು ನೀಡಿ ನೆರವಾಗುತ್ತೇನೆ!

ತಾಯಿಯ ನುಡಿಯನ್ನು ಆಸಕ್ತಿಯಿಂದ ಕೇಳಿದ ಮಗನು ಕಣ್ಣಿನಲ್ಲಿ ಹನಿ ತುಂಬಿಕೊಂಡನು. ತಾನು ಆ ಕುರು ಭೂಮಿಗೆ ಹೋಗಿ, ಧರ್ಮದ ಜಯಕ್ಕೆ ನೆರವಾಗಿ, ಮಣಿಪುರದ ಕೀರ್ತಿಗೆ ಕಲಶವಿಟ್ಟು ಬರುವೆನೆಂದನು. ಆಗ ತಾಯಿಯು 'ಕರೆಯದೆ ಹೋಗುವುದು ರಾಜರಿಗೆ ತಕ್ಕ ಮರ್ಯಾದೆಯಲ್ಲ' ಎಂದು ಹೇಳಿದಳು. ಅದಕ್ಕೆ ಮಗನು ನಿಟ್ಟುಸಿರು ಬಿಡುತ್ತ 'ತಾನು ಎಂದಾದರೂ ಒಂದು ದಿನ ಕದನದಲ್ಲಿ ಅರ್ಜುನನ

ಎದುರು ನಿಂತು ತನ್ನ ಪರಾಕ್ರಮದ ತೇಜಸ್ಸನ್ನು ತೋರಿಸುವೆನು. ಅವನು ಮುಂದೆ ಯಾವಾಗಲೂ ಮಣಿಪುರ ದೊರೆಗಳನ್ನು ಮರೆಯದ ರೀತಿ ಮಾಡುವೆನು' ಎಂದು ಹೇಳಿದನು.

ಆ ಮಾತಿಗೆ ತಾಯಿ ತಿಳಿಯದ ಆ ಶಂಕೆಯಿಂದ ಕಂಪಿಸಿ, ಕುಮಾರನನ್ನು ಸಂತೈಸಿ ಕಳುಹಿಸಿದಳು. ಕೈ ಮುಗಿದು ಕಣ್ಮುಚ್ಚಿ ದೇವತೆಗಳನ್ನು ಕಾಪಾಡಿ ಎಂದು ಬೇಡಿಕೊಂಡಳು!

ಯಜ್ಞಹರಿ, ಕಟ್ಟುಗೊಂಡುದು ಕೂಡೆ ಚಿತ್ರಾಂಗದಾ ತನೂಜನ ದಿಟ್ಟ ಭಟರಿಂದೆ!

ಕಾಲದ ಹೊಳೆ ಈ ರೀತಿ ಹರಿದಿರಲು, ಒಂದು ವಾರ್ತೆ ಹರಡಿತು. ಯಾಗ ನಿಮಿತ್ತವಾಗಿ ಯಾಗದ ಕುದುರೆಯ ಬೆಂಗಾವಲಿಗೆ ಸೈನ್ಯಸಾಗರ ಸಹಿತ ರಣಧೀರ ನೃಪರೊಡನೆ, ರಣವಧೂವಲ್ಲಭ ವಿಜಯನು ವಿಜಯಕ್ಕೆಂದು ಹೊರಟಿರುವನು. ದೇಶ ದೇಶವನ್ನು ಗೆಲ್ಲುತ್ತ, ಪರಾಕ್ರಮ ಕತ್ತಿಯನ್ನು ಝಳಪಿಸುತ್ತ ಚಂಡವೇಗದಿಂದ ಇತ್ತ ಕಡೆಗೆ ನುಗ್ಗುತ್ತಿರುವನು.

ಚಿತ್ರಾಂಗದೆಗೆ ಬಹುಕಾಲದ ನಂತರ ತನ್ನ ಪತಿಯ ಸಂದರ್ಶನ ಪ್ರತ್ಯಕ್ಷವಾಗಿ ಲಭಿಸುತ್ತದೆಂದು ಸಂತಸ ಉಂಟಾಯಿತು. ಅದೇ ರೀತಿ ಅವಳ ಮಗನು–ತನಗೆ ಮೂರು ಲೋಕದ ವೀರ, ಯಶಸ್ಸಿನ ತವರಿನಂತಿರುವ ಸವ್ಯಸಾಚಿಯ ಜೊತೆಗೆ ಸಮರ ಉಂಟಾಗುವುದೆಂದು ಸಂತೋಷಗೊಂಡನು. ಅವರಲ್ಲಿ ಒಬ್ಬರು ಇನ್ನೊಬ್ಬರಿಗೆ ತಮ್ಮ ಗುಟ್ಟನ್ನು ಹೇಳಲಿಲ್ಲ.

ಕಾರ್ಮುಗಿಲು ಮುತ್ತಿಕೊಂಡು ಗಗನವನ್ನು ಏರಿ, ವರ್ಷಋತು ಹರ್ಷವನ್ನು ಎರಚುವಂತೆ ಮಳೆಗರೆಯಿತು. ಆಗ ಹಸುರು ಹೊಮ್ಮಿಸುವ ಹೊಸ ಹುಲ್ಲಿನ ಸೊಂಪಿಡಿದು ಹೊಳೆಯುವ ನೆಲದ ಶಾದ್ವಲ ಶ್ಯಾಮಲ ಸ್ಮಿತದ ಸುಂದರ ಕಾಂತಿ ಕಂಡಿತು. ಅದು ತಾನು ಕಾಮನ ಬಿಲ್ಲಿನ ವರ್ಣಗಳನ್ನು ಪ್ರಕಟಪಡಿಸುತ್ತ, ಮೋಹಿಸುತ್ತ ಬಂದು ಕುಸುಮ ಸಮೂಹದ ಕೇಸರದ ಧೂಳಿಯನ್ನು ಕೆದರುತ್ತಿರುವ ಗಾಳಿಯ ಜೊತೆಗೂಡಿ ಕಳಕಳಿಸುತ್ತಿತ್ತು. ಪುರದ ಉದ್ಯಾನ ವೀಧಿಯಲ್ಲಿ ಪಕ್ಷಿಗಳ ಸುಮಧುರಗಾನ ಹೊಮ್ಮಿ ಬರುತ್ತಿತ್ತು. ಅಂತಹ ಸ್ಥಳದಲ್ಲಿ ಅರ್ಜುನ ಸೈನ್ಯ ಶಿಬಿರ ಬೀಡು ಬಿಟ್ಟಿತು!

ಚಿತ್ರಾಂಗದೆಯ ಮಗನ ದಿಟ್ಟ ಭಟರು ಯಜ್ಞದ ಕುದುರೆಯ ಹಣೆಗೆ ಕಟ್ಟಿದ್ದ ಲಿಖಿತವನ್ನು ಅನುಸರಿಸಿ ಕಟ್ಟಿ ಹಾಕಿದರು. ಆ ಪಟ್ಟಣದ ದೊರೆ ಅಕ್ಕಪಕ್ಕದ ರಾಜರ ದರ್ಪವನ್ನು ಕೋಪದಿಂದ ಬತ್ತಿಸಿ, ನೀಲಧ್ವಜನನ್ನು ಸೋಲಿಸಿ, ಹಂಸಧ್ವಜನನ್ನು ಗೆದ್ದು, ಪ್ರಮೀಲೆಯನ್ನು ಸೋಲಿಸಿದವನು. ಅವನು ಲಕ್ಷ್ಮಿಯ ನಿವಾಸವೆನ್ನುವಂತೆ ಸ್ವರ್ಣ ಸಂಪತ್ತಿನಿಂದ ಮೇರುವಿಗೆ ಸಮನಾಗಿ ಕಣ್ಣು ಕೋರೈಸಿ ಹೊಳೆಯುವ ರಾಜಧಾನಿಗಳನ್ನು

ಸುಲಿದು ಸೂರೆಗೊಂಡಿರುವವನು. ಅದನ್ನು ಪಾರ್ಥನೆ ಸ್ವತಃ ಕಂಡು ಮಣಿಪುರದ ಸಿರಿಗೆ ಬೆರಗಾದನು. ಹಂಸಧ್ವಜನನ್ನು ಕುರಿತು 'ಆ ನಾಡಿನ ಅರಸು ಯಾರು' ಎಂದು ಕೇಳಿದನು.

'ಪಾರ್ಥನೇ, ಏನೆಂದು ಹೇಳಲಿ? ಈ ಪಟ್ಟಣದ ಅರಸನಿಗೆ ಗೊತ್ತುಪಡಿಸಿದ ತೆರಿಗೆಯನ್ನು ನಾವಿಬ್ಬರು ತಪ್ಪದೆಯೆ ಪ್ರತಿವರ್ಷಕ್ಕೆ ಒಂದು ಸಾವಿರ ಬಂಡಿ ಚಿನ್ನವನ್ನು ಕೊಟ್ಟು ಬರುತ್ತೇವೆ. ಹಾಗಲ್ಲದಿದ್ದರೆ ದಂಡನೆಯೆಂದು ಬೆದರುತ್ತೇವೆ! ಈತನಿಗೆ ಸಚಿವನು ಸುಬುದ್ಧಿ. ಜೊತೆಗೆ ಇವನ ಸೈನ್ಯವನ್ನು ಗೆಲ್ಲಬಲ್ಲವರು ಲೋಕದಲ್ಲಿಲ್ಲ. ಅವನ ಹೆಸರು ಬಭ್ರುವಾಹನ!

'ಕರುಣೆಯಲ್ಲಿ ನಯ ವಿನಯಗಳಲ್ಲಿ ಮತ್ತು ಶೌರ್ಯದಲ್ಲಿ, ಸಂಸ್ಕೃತಿಯ ಸೌಜನ್ಯ ಭಕ್ತಿಯಲ್ಲಿ, ಸೊಬಗಿನಲ್ಲಿ ಸರ್ವ ಸಂಪನ್ನತೆಯಲ್ಲಿ ಆತನಿಗೆ ಸಮನಾದವರು ಮೂರು ಲೋಕಗಳಲ್ಲಿ ಯಾರೂ ಇಲ್ಲ. ಪುಣ್ಯ ಪುರುಷನಾದ ಅವನಿಗೆ ಗುರು ಆತನ ತಾಯಿ! ವರ ತಪಸ್ವಿನಿಯಾಗಿ, ನಗರದ ಉಪವನದಲ್ಲಿ ಪರ್ಣ ಶಾಲೆಯಲ್ಲಿರುವಳಂತೆ, ಆಕೆಯ ಹೆಸರು ಚಿತ್ರಾಂಗದೆ!

'ಚಿತ್ರಾಂಗದೆಯ ಕಥೆ ವಿಚಿತ್ರ ಎಂದು ಜನ ಆಡಿಕೊಳ್ಳುವರು. ಚಿತ್ರವಾಹನನಿಗೆ ಅವಳೊಬ್ಬಳೆ ಮಗಳಾಗಿ ಹುಟ್ಟಲು, ಮಗಳನ್ನೆ ಮಗನೆಂದು ತಿಳಿದು ಪ್ರೀತಿಯಿಂದ ಸಲಹಿದನು. ನಾಡಪ್ರಭುಗಳಿಗೆ ಸೂಕ್ತವಾದಂತಹ ವೀರತನವನ್ನು ಕಲಿಸಿದನು.

'ಅವಳು ಯೌವನದಲ್ಲಿ ಬೇಟೆಗೆಂದು ಕಾಡಿನಲ್ಲಿ ಸುತ್ತಾಡುತ್ತಿರುವಾಗ, ಅಲ್ಲಿ ಓರ್ವ ಕಾವಿ ವಸ್ತ್ರವನ್ನು ಧರಿಸಿದ ಸುರ ಪುರುಷನನ್ನು ಕಂಡಳು. ಅವರ ಕಣ್ಬೇಟವು ಹೆಚ್ಚಿ, ಗಾಂಧರ್ವ ವಿಧಿಯಿಂದ ಮದುವೆಯಾದಳು. ಬಭ್ರುವಾಹನನ ಜನನವಾಯಿತೆಂಬುದು ಜನ ಜನಿತವಾದ ವೃತ್ತಾಂತವಾಗಿದೆ. ಅದು ಎಷ್ಟು ದಿಟವೊ ನನಗೆ ತಿಳಿಯದು.'

ಎಂದು ಹೇಳಿದ ಹಂಸಧ್ವಜನ ನುಡಿಯನ್ನು ಕೇಳುತ್ತ ಅರ್ಜುನನ ಎದೆಯ ಗುಹೆಯ ಆಳದಲ್ಲಿ ಒಂದು ಅತಿದೂರದ ಆ ದೂರ ಸ್ಮೃತಿ ಮೂಡಿತು.

ಬಿದಿಯ ವಂಚಿಸಲಹುದೆ? ಕಣ್ಮುಚ್ಚಲೇನರ್ಜುನಂ?

ಆದರೆ, ಅದಕು ಇದಕು ಏನು ನಂಟು ಎಂದು ನೆನಪಿನೊಡನೆ ಅದನ್ನು ಆಚೆಗೆ ತಳ್ಳಿದನು. ಹತ್ತಿರದಲ್ಲಿಯೇ ಕಥೆ ಕೇಳುತ್ತ ಕುಳಿತಿದ್ದ ವೃಷಕೇತುವನ್ನು ಕುರಿತು, 'ಯೇ, ಯುವಕ ವೀರನೆ, ಬಭ್ರುವಾಹನನನ್ನು ಎದುರಿಸಿ ಜಯಿಸುವೆಯ ನೀನು?' ಎಂದು ಮೊದಲಾಗಿ ಮಾತಾಡತೊಡಗಿದನು. ಆದರೇನು? ವಿಧಿಯನ್ನು ವಂಚಿಸಲು ಸಾಧ್ಯವೆ?

ಅರ್ಜುನನು ಕಣ್ಣು ಮುಚ್ಚಿದರೇನು? ಅದೊ, ನೋಡು ಆ ಛಾಯೆ ರಾಹುವಿನ ರೀತಿ ಹತ್ತಿರಕ್ಕೆ ಹರಿದು ಬರುತ್ತಿದೆ!

ನಿಧಾನವಾಗಿ ತನ್ನೆಡೆಗೆ ಹಾರಿ ಬರುತ್ತಿದ್ದ ವಿಧಿ ವಿಹಂಗಮದ ರೆಕ್ಕೆಗಳು ಛಾಯೆಯಂತೆ ಹಗಲು ಮುಗಿಯುತ್ತಿದ್ದಂತೆ ಕತ್ತಲೆಯ ಕಗ್ಗಪ್ಪು ಆಗಿ ಧರಿತ್ರಿಯನ್ನು ಆವರಿಸಿತು. ಇಂದ್ರಪುತ್ರನು ಮನಸ್ಸಿನಲ್ಲಿ ಏನನ್ನು ನೆನಸಿಕೊಂಡನೊ? ಮೂಡುವ ಆ ತಾರಾ ಸಮೂಹದೊಡನೆ ತನ್ನನ್ನು ಯಾರೂ ಅರಿಯದ ರೀತಿ ಮಾರುವೇಷವನ್ನು ಧರಿಸಿಕೊಂಡನು. ಮೆಲ್ಲ ಮೆಲ್ಲನೆ ಪಟ್ಟಣದ ಬೀದಿಗಳನ್ನು ಸುತ್ತಾಡಿ, ಚಿತ್ರಾಂಗದೆಯ ಪರ್ಣಶಾಲೆಯ ಬಳಿಗೆ ಬಂದನು. ಪೂಜೆಯಲ್ಲಿ ತೊಡಗಿದ್ದ ಚಿತ್ರಾಂಗಿಯನ್ನು, ಅಲ್ಲಿಯ ನಿರ್ಜನತೆ, ನೀರವತೆ, ನಿರ್ಭೀತಿಯನ್ನು ನೋಡಿ ಅಚ್ಚರಿಗೊಂಡನು!

ತಕ್ಷಣ ಗೌರವ ಭಾವವು ಆತನ ಎದೆಯಲ್ಲಿ ಹೊಮ್ಮಿ ಬರಲು, ತನಗೆ ತೋರಿದ ಆಶಂಕೆಯನ್ನು ಹೊರದೂಡಿದನು. ಹಂಸಧ್ವಜ ಹೇಳಿದ ಕಥೆಯನ್ನು ಆಲಿಸುತ್ತ ಹಲವು ವರ್ಷಗಳ ಹಿಂದೆ ಕಾನನ ಮಧ್ಯೆ ಯತಿವೇಷದಿಂದ ಬಂದ ತಾನು ಕಂಡು ಅವಳನ್ನು ಪ್ರೀತಿಸಿದೆ. ಆಮೇಲೆ ಅವಳು ಕಣ್ಮರೆಯಾಗಿ ಹೋದಳು. ಆಕೆ ರಾಣಿ ಚಿತ್ರಾಂಗದೆ ಇರಬಹುದೆ ಎಂಬ ಸಂದೇಹದಿಂದ ಬಂದು ಕಂಡ ಅರ್ಜುನನಿಗೆ ಮನದ ಶಂಕೆ ಇಲ್ಲವಾಯಿತು.

ಚಿತ್ರದಲ್ಲಿ ಚಿತ್ರಿಸುತ್ತ ಆ ಭುವನ ರಮಣೀಯ ರಮಣಿಯನ್ನು ತನ್ನ ಎದುರಿಗೆ ಇದ್ದ ರಾಣಿ ತಪಸ್ವಿನಿಯ ರೂಪಿಗೆ ಹೋಲಿಸಿ ನೋಡಿದನು! ಹೋಲಿಕೆಯೆ? ತೆಗೆ ತೆಗೆ ಅದೆಲ್ಲಿಯದು? ಅವಳೆಲ್ಲಿ ಇವಳೆಲ್ಲಿ? ಅದು ಸರ್ವ ಸೌಂದರ್ಯ ಸಾರ! ಇದು ನಿಸ್ಸಾರ!

ತಾಯಿತನದ ಗಾಂಭೀರ್ಯವನ್ನು ತರುಣತೆಯ ಮೋಹನ ಚಂಚಲತೆಯೊಡನೆ ಹೋಲಿಸುವುದೆ? ಪುಷ್ಪ ಗರ್ಭಿತ ನವ ವಸಂತದ ಹೊಳೆ ಹೊಳೆಯುವ ಮರದೊಡನೆ, ಹೂ ಹಣ್ಣುಗಳು ಬಿಡುವುದು ನಿಂತು ಹೋಗಿರುವ ಮಾಗಿಯ ಮರದ ಹೋಲಿಕೆಯೆ? ಅಂತೂ ಇಂತೂ, ಇವಳು ಅವಳಲ್ಲವೆಂದು ನಿಶ್ಚಯಿಸಿದನು. ಭ್ರಾಂತಿಗೊಳಗಾದ ನರನು ಸಂದೇಹವನ್ನು ಪರಿಹರಿಸಿಕೊಂಡು, ತನ್ನೆದೆಯನ್ನು ಸಂತೈಸಿಕೊಳ್ಳುತ್ತ ಪಾಳೆಯಕ್ಕೆ ಹಿಂತಿರುಗಿದನು.

ಗುರುಗೆ ಗುರುವಾದವಗೆ ಗೌರವಮೆ ಗುರುಗಾಣ್ಕೆ!

ಇಂದ್ರಜನ ಮಗ ಬಭ್ರುವಾಹನನು ಕಾವಲು ಭಟರು ತನಗೆ ತಂದಿತ್ತ ಆ ಯಜ್ಞ ಕುದುರೆಯ ಹಣೆಯ ಉರುವಣೆಯ ಒಕ್ಕಣೆಯ ಪಟ್ಟಲಿಖಿತ ಕನಕದ ಓಲೆಯನ್ನು ತಾನು ಓದಿದನು. ಸಾಹಸವು ಲಭಿಸಿತೆಂದು ಉತ್ಸಾಹಗೊಂಡು, ಯುದ್ಧ ಮಾಡಲು

ನಿಶ್ಚಯಿಸಿದನು. ಆ ಕುರಿತು ಮಂತ್ರಿಗೆ ಆಜ್ಞೆ ಮಾಡಿದನು. ವೈರಿಯ ಕೊಲೆಗೆ ತಾಯಿಯ ಆಶೀರ್ವಾದವನ್ನು ಪಡೆಯಲು ಪುರವನದ ನಡುವೆಯಿದ್ದ ಪರ್ಣಶಾಲೆಗೆ ವೇಗವಾಗಿ ಹೋದನು.

ಕುಮಾರನು ಬರುವುದನ್ನು ಕಂಡು, ತಾಯಿಯು ಪ್ರೀತಿ ಸಂಭ್ರಮದಿಂದ ಎದುರು ಬಂದಳು. ಮಣಿದ ಮಣಿಪುರೇಶ ಮಣಿಯನ್ನು ಬಾಗಿ ಎತ್ತಿಕೊಂಡಳು. ಬಂದ ಕಾರಣವೇನೆಂದು ಪ್ರೀತಿಯಿಂದ ಕೇಳಿದಳು.

ಶುಭ್ರ ಶ್ವೇತ ಮಡಿವಸ್ತ್ರವನ್ನುಟ್ಟ, ವರ ಜಪಮಣಿಯ ಕರದ, ಧ್ಯಾನದಿಂದ ಶಾಂತಿ ಆವರಿಸಿದ ಮುಖಕಮಲದ ತಾಯಿಯನ್ನು ಒಲ್ಮೆ ಉಕ್ಕುವ ರೀತಿ ಪಾರ್ಥಜನು ನೋಡಿದನು. ರಾಜ ಕಾರ್ಯವನ್ನು ತಿಳಿಸಿ ಆಶೀರ್ವಾದವನ್ನು ಬೇಡಿದನು. ಆಗ ಆ ಮಾತೆ ಮೈ ಮರೆತು ಕುಳಿತು, ಕಂಬನಿಯನ್ನು ಸುರಿಸುತ್ತ, ಮೌನಿಯಾಗಿ ಅಳತೊಡಗಿದಳು. ಅದನ್ನು ಕಂಡು ಆಶ್ಚರ್ಯಚಕಿತನಾದ ಬಭ್ರುವಾಹನನನ್ನು ಉದ್ದೇಶಿಸಿ ಹೀಗೆ ಹೇಳಿದಳು:

'ಮಗನೇ, ನಿನ್ನ ಮಾತೆಯ ಅಧೈರ್ಯವನ್ನು ಕ್ಷಮಿಸು. ನಿನ್ನ ವೀರತನಕ್ಕೆ ನನ್ನ ಎದೆಯ ಹೆದರಿಕೆಯ ಹೆಣ್ಣು ನಾಚುತ್ತಿರುವಳು. ವೀರ, ರಣಧೀರ ಶೂರನೆ, ನಿನಗೆ ನನ್ನ ಸಾತ್ವಿಕತೆ ರುಚಿಸದಿದ್ದರೆ, ದೀನವಾಣಿಯನ್ನು ಆಲಿಸು. ಧರ್ಮನಂದನನು ನಡೆಸುತ್ತಿರುವ ಅಶ್ವಮೇಧಯಾಗ ಧರ್ಮಕಾರ್ಯವಾಗಿದೆ. ಧರ್ಮ ಸಂಸ್ಥಾಪಕನಾದ ಶ್ರೀಕೃಷ್ಣನು ಈ ಯಾಗಕ್ಕೆ ಜೀವಾಳವಾಗಿದ್ದಾನೆ. ಧರ್ಮರಾಯನ ಸಹೋದರ ಅರ್ಜುನನು ಈ ಅಶ್ವಮೇಧದ ಕುದುರೆಯ ಬೆಂಗಾವಲಿಗೆ ಬಂದಿದ್ದಾನೆ. ಪುಣ್ಯವನ್ನು ಪ್ರತಿಭಟಿಸಿ ನಿಲ್ಲುವುದು ಧರ್ಮವಲ್ಲ.

'ಧರ್ಮರಕ್ಷಕರೆಲ್ಲರೂ ಒಟ್ಟಾಗಿ ಕೂಡಿ ಇದಕ್ಕೆ ಸಹಾಯ ಮಾಡಬೇಕಾಗಿದೆ. ಅದಕ್ಕೆ ನೀನು ಏತಕ್ಕೆ ಅಡ್ಡಿಯಾಗಿ ನಿಲ್ಲುವೆ? ಕುಂತಿಯ ಪುತ್ರನು ನಿನಗೆ ಇನ್ನೊಂದು ರೀತಿಯಲ್ಲಿ ಗುರು. ನಾನು ಬಾಲ್ಯ ಕಾಲದಲ್ಲಿ ಅರ್ಜುನನ ನಾಮ ಜಪದಿಂದ ಬಿಲ್ವಿದ್ಯೆಯನ್ನು ಕಲಿತು ಕಲಿಯಾದೆ. ನಾನು ನಿನಗೆ ಗುರುವಲ್ಲವೆ? ಗುರುಗೆ ಗುರುವಾದವನಿಗೆ ಗೌರವಿಸುವುದೇ ಗುರುಕಾಣ್ಕೆ!

'ಗುರು ಪಿತೃವಿಗೆ ಸಮನಲ್ಲವೆ? ನೀನು ಇಂದು ಕಾಳಗಕ್ಕೆ ನಿಂತು ಪ್ರತಿಭಟಿಸಿದರೆ, ವೈರಿಯ ಸಂಹಾರದಿಂದ ಪಿತೃವಧಾ ಪಾತಕ ನಿನಗೆ ಬಿಡದೆ ಬರುವುದು ನಿಜ. ಕಂದನೇ, ನನ್ನ ಈ ನಿಶ್ಚಯ ನುಡಿಯನ್ನು ಕೇಳಿಸಿಕೊಂಡು ಕೋಪಗೊಳ್ಳಬೇಡ!'

ಪಾರ್ಥಜನು ಮಾತೆಯ ನುಡಿಗೆ ನಡುಗಿ, ಭೀತಿಯಿಂದ ಅಡಿಗಳಿಗೆ ನಮಸ್ಕರಿಸುತ್ತ,

'ಕ್ಷತ್ರಿಯರ ಪಥದಿಂದ ನಾನು ಆತನ ಕುದುರೆಯನ್ನು ಕಟ್ಟಿದೆನು. ನಿಮ್ಮ ಚಿತ್ತಕ್ಕೆ ಅದು ಸರಿಯಲ್ಲವೆನಿಸಿದರೆ, ನೀವು ಪ್ರೀತಿ ಪೂರ್ವಕವಾಗಿ ಏನೆಂದು ಆಜ್ಞೆ ಮಾಡುವಿರೊ ಅದರಂತೆ ನಡೆದುಕೊಳ್ಳುತ್ತೇನೆ.'

ಎಂದು ಹೇಳಿ ತಾಯಿಯನ್ನು ಸಂತೈಸಿದನು. ಆಗ ಆ ಮಾತೆಯು,

ಪಾರ್ಥನ ಬರವಿಗುಬ್ಬದಳ್ ಚಿತ್ರೆ !

'ಬೇಗ ನಡೆ, ನಿನ್ನ ಅಖಿಲ ರಾಜ್ಯ ಸಂಪತ್ತನ್ನು ಗುರುವಿಗೆ, ಧರ್ಮರಾಜನ ಸಹೋದರನಿಗೆ, ಮಧುಸೂದನನ ಪ್ರಿಯಸಖನಿಗೆ, ಆ ಗುರುವಿನ ಅಡಿದಾವರೆಗಳಿಗೆ ಅರ್ಪಿಸು. ಗೌರವ ಪೂರ್ವಕವಾಗಿ ಆತನನ್ನು ಪುರಕ್ಕೆ ಕರೆದುಕೊಂಡು ಬಾ. ಆ ಪರಾಕ್ರಮಿ ನರ ವೀರವರನ ಸಂದರ್ಶನದಿಂದ ಸಂತುಷ್ಟಳಾಗುತ್ತೇನೆ.'

ಎಂದು ಹೇಳುತ್ತ, ಮಗನಿಗೆ ಬುದ್ಧಿಯನ್ನು ಹೇಳಿ ಕಳುಹಿಸಿದಳು. ಮತ್ತೆ ಸಂಕಲ್ಪ ಪ್ರಾಪ್ತಿಗಾಗಿ ಪರಮೇಶ್ವರನನ್ನು ಪೂಜಿಸುತ್ತ, ಪಾರ್ಥನು ಬರುವುದನ್ನು ನೆನೆದು ಚಿತ್ರೆ ಹರ್ಷಗೊಂಡಳು.

ಮರುದಿನ ಬೆಳಗಿನಲ್ಲಿ ಹರಿದ ಬೆಳ್ಳಿದಾರೆಗೆ ಮೂಡಣ ದಿಕ್ಕು ಬಾಡಿತು. ಬೆಟ್ಟಗೋಡನ್ನು ಮೆಟ್ಟಿ ಕನಕ ದಿನಮಣಿ ಮೂಡಿದನು. ಹಕ್ಕಿಗಳು ಗಾನಗೈಯ್ಯುತ್ತಿದ್ದವು. ದೇವಾಲಯದ ವಾದ್ಯ ಮೇಳಗಳು ಮಂಗಳರವವನ್ನು ಹೊಮ್ಮಿಸುತ್ತಿದ್ದವು. ಸುಪ್ರಭಾತವು ಸ್ವರ್ಗೀಯ ರಮ್ಯತೆಯನ್ನು ನೇಯ್ದಿತು. ಆ ಬಭ್ರುವಾಹನನು ತಾಯಿಯ ನಿರೂಪದಂತೆ ಯುದ್ಧವು ನಿಂದಿತೆಂದು ಪುರದೊಳಗೆ ಡಂಗೂರವನ್ನು ಸಾರಿಸಿದನು.

ನರನ ಪಾದಗಳಿಗೆ ನೈವೇದ್ಯವಾಗಿ ನೀಡಲು ಕೋಶದ ಅಮೂಲ್ಯ ವಸ್ತುಗಳೆಲ್ಲವನ್ನೂ ತೆಗೆಸಿದನು. ಗುಡಿ ತೋರಣಗಳನ್ನು ಕಟ್ಟಿ ನಗರವನ್ನು ಅಲಂಕರಿಸಿದನು. ಸೇನೆಯನ್ನು ಶಾಂತಿ ಧ್ವಜದಿಂದ ಸಿಂಗರಿಸಿದನು. ಗೌರವಕ್ಕೆ ಪಾತ್ರರಾದವರು ಹಾಗೂ ನಾಗರಿಕರೆಲ್ಲರನ್ನೂ ಕರೆಸಿದನು. ಅವರೆಲ್ಲರೂ ಸೇರಿಕೊಂಡು ಶೃಂಗಾರ ಸಾಗರ ತರಂಗಿಣಿಯರಂತೆ ಕನ್ನಡಿ ಕಳಶ ಹಿಡಿದು ಸಾಗಿದರು. ಸಾತ್ವಿಕ ಸುಮಂಗಳದ ಸಂಗೀತ ಶೈಲಿಯಿಂದ ಮೆರವಣಿಗೆಯ ವೈಖರಿಯಿಂದ ಪಾರ್ಥನ ಶಿಬಿರಕ್ಕೆ ನಡೆದನು.

ಮದುವೆ ದಿಬ್ಬಣದೊಸಗೆ ಮೆರವಣಿಗೆ!

ಇತ್ತ ಪಾರ್ಥನ ಸೇನೆಯು ಪ್ರದ್ಯುಮ್ನ, ಅನುಸಾಲ್ವ, ಕರ್ಣನ ಮಗನ ಮಗನ ಜೊತೆಗೆ ಯೌವನಾಶ್ವ, ಹಂಸಕೇತು, ನೀಲಧ್ವಜ ಮೊದಲಾದ ರಣ ಪರಿಣತರ ಸೂಚನೆಯನ್ನು ಅನುಸರಿಸಿ ವಿವಿಧ ವ್ಯೂಹಗಳನ್ನು ರಚಿಸಿತು. ವೈರಿದಳದ ಆಗಮನವನ್ನು ನಿರೀಕ್ಷಿಸುತ್ತಿತ್ತು.

ಆಗ ಅವರಿಗೆ ಯುದ್ಧವನ್ನು ನೀಡುವ ಸಾಹಸಿಗಳ ಸೈನ್ಯಕ್ಕೆ ಬದಲಾಗಿ, ಬೀಗರನ್ನು ಎದುರುಗೊಳ್ಳುವಂತೆ ತಮ್ಮ ಕಡೆಗೆ ಮೋಹನಾಂಗಿಯರೊಡನೆ ಮೋಹದಿಂದ ಬರುತ್ತಿರುವ ಮದುವೆ ದಿಬ್ಬಣದ ಉತ್ಸಾಹದ ಮೆರವಣಿಗೆ ಕಂಡರು. ಪಾಂಡವ ಸೇನಾ ಸಮುದ್ರದಲ್ಲಿ ಗೊಳ್ಳೆಂದು ನಗೆಯ ತೆರೆ ನೊರೆಯು ಉತ್ಸಾಹದಿಂದ ಉಕ್ಕೇರಿತು. ಅಸಂಖ್ಯ ಜನರ ಕೈಗಳ ತಡೆ ರಹಿತ ಚಪ್ಪಾಳೆಯಿಂದ ಸಿಡಿಲು ಬಡಿದಂತಾಯಿತು.

'ನಿನಗೊಸಗೆ!'

'ನನಗೊಸಗೆ!'

'ಹೆಣ್ಣು ಚೆಲುವು!'

'ಸವಿಗೆಲ್ಲು!'

ಎಂದು ಎಲ್ಲ ಯುವ ಸೈನಿಕರು ತಮ್ಮ ತಮ್ಮಲ್ಲಿ ಕುಚೋದ್ಯದ, ತಮಾಷೆಯ, ಸೋಜಿಗದ ನುಡಿಗಳನ್ನು ಆಡಿಕೊಂಡರು.

'ಪಟ್ಟಣವನ್ನು ಆಳುವವರೇನು ಗಂಡಸೊ?'

'ಗಂಡಸರನ್ನು ಕಂಡೊಡನೆ ನಮಗೆ ಗಂಡಂದಿರು ಎಂಬ ಹೆಂಗಸರೊ?'

'ಅಂದು ಆ ಹೆಣ್ಣಾದ ಪ್ರಮೀಳೆ ಪ್ರತಿಭಟಿಸಿ ಯುದ್ಧವನ್ನು ಮಾಡಿ ಗಂಡೆಂದು ಮೆರೆದಳಲ್ಲವೆ?'

'ಬಭ್ರುವಾಹನ ಎನ್ನುವ ಹೆಸರು ಸ್ತ್ರೀ ಲಿಂಗವೋ, ಪುಲ್ಲಿಂಗವೋ ತಿಳಿಯೆ?'

ಹೀಗೆಂದು ವೀರಯೋಧರು ಅಲ್ಲಲ್ಲಿ ನಗೆ ನುಡಿಗಳನ್ನಾಡುತ್ತಿರಲು ಅರ್ಜುನನು ಅಚ್ಚರಿಗೊಂಡನು. ಪಕ್ಕದಲ್ಲಿದ್ದ ಪ್ರದ್ಯುಮ್ನನನ್ನುದ್ದೇಶಿಸಿ,

'ದನುಜಾರಿ ಶ್ರೀಕೃಷ್ಣನ ಪುತ್ರನೆ, ಕತ್ತಿಗಳನ್ನು ಹಿಡಿದು ರೋಷದಿಂದ ಮೇಲೇರಿ ಬರುವ ಪರಾಕ್ರಮಿಗಳ ಜೊತೆಗೂಡಿ ಬರುವ ಬದಲಾಗಿ ಈ ನೃಪನು ನಾರಿಯರ ಗುಂಪಿನೊಡನೆ ಈ ರೀತಿ ಏತಕ್ಕೆ ಬರುತ್ತಿರುವನು?

'ಹೆತ್ತ ತಾಯಿಯೆ ವಿದ್ಯೆಯ ಗುರುವಾದ ಈತನಿಗೆ ಸ್ತ್ರೀ ಸೇನೆಯು ಬದುಕಿನಲ್ಲಿ ರಾಣಿಯರೊ, ಕದನ ಸಮ್ಮುಖದಲ್ಲಿ ಬದುಕಿಸುವ ಗುರಾಣಿಯರೊ? ಆಶ್ಚರ್ಯವಾಗಿದೆ!'

ಎಂದು ಅಣಕವಾಡುತ್ತಿರುವಾಗ ಬಭ್ರುವಾಹನನ ಆ ನಾಗರಿಕ ಸೇನೆ ಬಳಿಗೆ ಬಂದಿತು. ಚಿತ್ರಾಂಗದೆಯ ಮಗನು ತೇರಿನಿಂದ ಭೂಮಿಗೆ ಇಳಿದನು. ಗುರುವೆಂಬ ಗೌರವದಿಂದ ಪಾರ್ಥನ ಬಳಿಗೆ ನಡೆದನು. ಸಾಷ್ಟಾಂಗದಿಂದ ಮಣಿದನು.

ವೀರ ಪಾನೋನ್ಮತ್ತ ಮನಸ್ಸಿನ ಆ ಕಿರೀಟಿ ಮುಖವನ್ನು ತಿರುಗಿಸಿ ಮದದಿಂದ ಅಹಂಭಾವದ ನಗೆಯನ್ನು ಬೀರಿದನು. ಕಾಳಗಕ್ಕೆ ಬೆದರಿ ತನ್ನ ಪಾದದಡಿ ಶರಣಾದವರನ್ನು ತಾನು ಈ ಹಿಂದೆ ಕಂಡಂತೆ ಕಂಡು ಉದಾಸೀನವಾಗಿ ವರ್ತಿಸಿದನು. ಕಿರೀಟಿಯ ಮಗನಿಗೆ ಮುನಿಸು ಸಿಟ್ಟು ಹೊಗೆ ಹೊತ್ತಿ ಉರಿಯಲು ಒಳಗೊಳಗೆ ಕೋಪಗೊಂಡನು. ತನ್ನನ್ನು ಈ ದುರವಸ್ಥೆಗೆ ಅಪಮಾನಕ್ಕೆ ನೂಕಿ ನಗೆಗೇಡು ಮಾಡಿದ ತಾಯಿಯನ್ನು ಮನದಲ್ಲಿ ಬಯ್ದುಕೊಂಡನು!

ನಿನ್ನ ಸೂಡಿಗೆ ನೀನೆ ಕೆರಳಿಸೆನ್ನಂ ಕಿಚ್ಚನುರಿಯಿಟ್ಟೆಯೆಂದು ತಿಳಿ!

ಬಭ್ರುವಾಹನನು ಕುಲುಮೆಯಲ್ಲಿ ಕಾದ ಕಬ್ಬಿಣದಂತೆ ಕೆಂಪಾದ ಮುಖದಿಂದ ಕೆಂಪು ಜ್ವಾಲೆಯನ್ನು ಕಾರುವ ಕಣ್ಣುಗಳಿಂದ ವೈರಿಯ ಮುಖವನ್ನು ಇರಿದಂತೆ ನೋಡುತ್ತ,

'ಎಲವೆಲವೊ ನಯರುಚಿ ವಿಹೀನ ಸಂಸ್ಕೃತಿ ಬಾಹಿರ ಕಿರಾತ ಜಯ ಮದಾಂಧ ಪಾರ್ಥನೆ, ಗೌರವವೇನೆಂದು ತಿಳಿಯೆಯಾ? ಧರ್ಮರಾಜನ ಧರ್ಮಕಾರ್ಯದಲ್ಲಿ ನೀನಿರುವೆ ಎಂದು ಮತ್ತು ಗುರುವೆಂದು ಹೇಳಿದ ತಾಯಿಯ ಆಜ್ಞೆಯಂತೆ ಬಂದು, ನಾನು ನಿನಗೆ ನಮಸ್ಕರಿಸಿದೆ. ಆದರೆ ನೀನು ಅತಿಯಾದ ಕೊಬ್ಬಿನ ಸೊಕ್ಕಿನಿಂದ ಮೋರೆ ತಿರುಗಿಸಿದೆ?

'ಎಲವೊ, ಸಮರೋತ್ಸವಕ್ಕೆ ಹೆದರಿ; ನಿನ್ನ ಶಕ್ತಿ ಸಾಮರ್ಥ್ಯಕ್ಕೆ ಯಶಸ್ಸಿನ ಹುಸಿ ಬೆಳಕಿಗೆ ಅತಿಯಾಗಿ ಸೋತು; ಸೋಲುವ ಅಪಕೀರ್ತಿಯಿಂದ ನುಸುಳಿಕೊಳ್ಳಲೆಂದು ಪ್ರಯತ್ನಿಸಿ ಬಂದೆನೆಂದು ತಿಳಿಯದಿರೊ!

'ನಾನು, ಜನನಿಯ ಉಪದೇಶದ ಆ ವಿನಯಕ್ಕೆ ವಿಧೇಯನಾಗಿ ಅವಿವೇಕಿಯಾದೆನು! ನಿನ್ನ ಕೀರ್ತಿಗೆ ಚಿತೆಯನ್ನು ಒಡ್ಡುವಂತೆ ಮಾಡಲೆಂದಿದ್ದೆನು. ನನ್ನ ಭುಜ ಪರಾಕ್ರಮ ತೀರ್ಥದಲ್ಲಿ ನಿನ್ನ ಭಸ್ಮಾವಶೇಷವನ್ನು ತೊಳೆಯಲೆಂದಿದ್ದೆನು. ನನ್ನ ಆ ತಾಯಿ ಸಮಾಧಾನ ಮಾಡಿದಳು. ನೀನೆ ನನ್ನನ್ನು ಕೆರಳಿಸಿ ನಿನ್ನ ಚಿತೆಗೆ ಕಿಚ್ಚಿನ ಉರಿಯನ್ನು ಇಟ್ಟೆಯೆಂದು ತಿಳಿ!

'ನಿನ್ನ ವಿಕ್ರಮಸಿಂಹದ ಆ ಕೇಸರವನ್ನೆಲ್ಲ ಕತ್ತರಿಸದಿದ್ದರೆ, ಬೆಳೆದಿರುವ ಕೋರೆಹಲ್ಲು ಉಗುರುಗಳನ್ನು ಕಸಿ ಮಾಡದಿದ್ದರೆ, ನಿನ್ನನ್ನು ಈ ನಿನ್ನ ಸೇನೆಯ ಜೊತೆಗೂಡಿ ಬಿರುಗಾಳಿ ತರಗೆಲೆಯನ್ನು ಒದೆದು ಅಟ್ಟುವಂತೆ ಎಬ್ಬಿ ನಾಡಿನ ಅಚೆಯ ನರಿಯನ್ನಾಗಿ

ಮಾಡದಿದ್ದರೆ, ಹೆತ್ತ ತಾಯಿಯ ಮತ್ತು ತಂದೆಯ ಮೇಲಾಣೆ! ಈ ಬಾಳು ಸುಡಲಿ!'

ಎಂದು ಉರಿದುರಿದು, ನುಡಿಯ ಉರಿಯನ್ನು ಧಗಧಗಿಸಿ ಹೊಮ್ಮಿಸಿದನು. ಅದನ್ನು ಹುಬ್ಬುಗಂಟಿಕ್ಕಿ ನೋಡುತ್ತ ಅತಿ ಕೋಪಗೊಂಡ ಅರ್ಜುನನು,

ತಂದೆಯಿಲ್ಲದೆ ಹುಟ್ಟಿ ಪಂದೆಯಾದೆಲವೊ

'ಎಲವೊ ಹೆಂಬೇಡಿಯೆ, ಬಾಯಿ ಕುದುರೆಗೆ ಕಡಿವಾಣವಿಕ್ಕು! ಪೊಳ್ಳು ಕರಡಿಯು ಸಿಂಹದ ಎದುರಿನಲ್ಲಿ ಬಳ್ಳಿಕ್ಕುತ್ತಿದೆ! ನಾನು ನಿನ್ನಂತಹ ಬಾಯಿ ನುಡಿಯ ವೀರರನ್ನೆಷ್ಟೊ ಕಂಡಿರುವೆನು. ನನ್ನ ಸಾನ್ನಿಧ್ಯದಲ್ಲಿ ವೀರರಿಗೆ ಉಚಿತವಾದ ಗೌರವವಿದ್ದು, ಹೇಡಿಗಳಿಗೆ ಅದು ದೊರೆಯುವುದಿಲ್ಲ. ಶೂರ ಸಂಗ್ರಾಮದಲ್ಲಿ ಹೋರಾಡಿ ಬಿದ್ದರೂ ಬಳಲಿದರೂ ಆ ವೀರನು ಸನ್ಮಾನ್ಯನು. ಇನ್ನುಳಿದ ಅಂಜುಬುರುಕ ಹೇಡಿಗಳಿಗೆ ಆ ಪೂಜೆ ಸಲ್ಲುವುದಿಲ್ಲ. ಯುದ್ಧ ಮಾಡುವ ಸಾಮರ್ಥ್ಯವಿದ್ದರೆ ಯುದ್ಧ ಮಾಡಿ ಗೆಲುವನ್ನು ಪಡೆ. ಹೋರಾಡಿ ಸೋತರೂ, ಶ್ರೇಯಸ್ಸನ್ನು ಪಡೆದರೂ ವಿಖ್ಯಾತನಾಗುವೆ.

'ಯುದ್ಧಕ್ಕೆ ತಯಾರಿಲ್ಲದಿದ್ದರೆ ಕಪ್ಪಕಾಣಿಕೆಯೊಡನೆ ಕಾಲಿಗೆರಗು. ಕಟ್ಟಿರುವ ಆ ಯಜ್ಞ ಕುದುರೆಯನ್ನು ಜೊತೆಗೆ ತಂದಿಟ್ಟು, ಕೊಟ್ಟುದ್ದಕ್ಕೆ ಅನುಗ್ರಹ ಎಂದಿರು.

'ಕೆಲವರು ನಪುಂಸಕರುಂಟು. ಅವರು ಸತ್ತ್ವದ ಹೆಸರು ಹಿಡಿದು ಯುಕ್ತರಂತೆ ನಟಿಸಿ ಪೌರುಷತೆಯನ್ನು ಸಾಧಿಸಲು ಪ್ರಯತ್ನಿಸುವರು. ಮೊದಲು ಕುದುರೆಯನ್ನು ಕಟ್ಟಿ ಹಾಕಿ, ನೀನೀಗ ಅದನ್ನು ಹುಡುಗಾಟವೆಂದುಕೊಂಡಿರುವೆಯಾ? ಸಂಸ್ಕೃತಿಗೆ ಬಂದಿಯಾದರೇನು, ನೀನು ಅದಕ್ಕೆ ಒಡೆಯನಲ್ಲ ಎನ್ನುವುದನ್ನು ನಿನ್ನ ನಾಲಗೆಯ ನಡೆ ತೋರುತ್ತಿದೆ!

'ತಂದೆಯಿಲ್ಲದೆ ಹುಟ್ಟಿ ಹೇಡಿಯಾದವನೆ, ನಿನ್ನ ತಂದೆಯೇನು ಬಳೆ ತೊಟ್ಟ ನಟ್ಟುವನೊ? ಧೈರ್ಯವಂತನಾದವನಿಂದ ಎಂದಾದರೂ ಹೇಡಿ ಹುಟ್ಟುವನೆ?'

ಎಂದು ಬಿರುನುಡಿಗಳನ್ನು ತನ್ನ ಮುಖಕ್ಕೆ ಇರಿದಂತೆ ಜರಿದು ಖಂಡಿಸುವ ಅರ್ಜುನನ ಮುಖಕ್ಕೆ ಬಭ್ರುವಾಹನನು ದಿಟ್ಟಿಯಿಂದ ಒದ್ದನು. ಯಾಗದ ಕುದುರೆ, ಪುರಜನ, ಸ್ತ್ರೀಯರು, ಚತುರಂಗ ಸೇನೆಯೊಡಗೂಡಿ ಭೀಷಣ ಯುದ್ಧ ಸನ್ನದ್ಧನಾಗಲು ಹಿಂದಿರುಗಿದನು!

ಫಲ್ಗುಣನ ತಾರುಣ್ಯದ ಅಪರಾವತಾರವೆನ್ನುವ ರೀತಿ ವೀರ ಸೌಂದರ್ಯದಿಂದ ಶೋಭಿಸುವ ಬಭ್ರುವಾಹನನನ್ನು ಕಂಡು, ಆ ಹೋಲಿಕೆಗೆ ಆ ಸೇನೆಯಲ್ಲಿ ಹಳಬರಾದವರೆಲ್ಲರೂ ಬೆರಗಾದರು. ಮತ್ತೆ ಕೆಲವರಿಗೆ ಗೌರವದೊಡನೆ

ಭೀತಿಯುಂಟಾಯಿತು. ಇಂದ್ರಜನ ಕೆಚ್ಚೆದೆಯಲ್ಲಿಯೂ ಅಧೀರತೆಯ ಛಾಯೆ ಕಂಡು ಬಂದಿತು!

ವೀರಪುಂಗವರು ಅರ್ಥಮಯ ಮೌನ ನೇತ್ರದಿಂದ ತಾವು ಒಬ್ಬರಿಗೊಬ್ಬರು ನೋಡಿದರು. ವರ್ಷಋತುವಿನ ಗಗನದಲ್ಲಿ ಕಾಳಮೇಘಗಳು ಒತ್ತಿ ಮುತ್ತಿ ಬರಲು ಜಡಿಯ ಸೋನೆ ಮಳೆಯು ನಿಲ್ಲದೆ ಸುರಿಯುತ್ತ ವಿಧಿಯ ಬದ್ಧ ಭ್ರುಕುಟಿಯಂತೆ-ದುರ್ದಿನವು ಕರ್ಕಶವಾಯ್ತು. ದುಶ್ಯಕುನ ಗರ್ಭಿತ ವಿಕೃತ ವಿಕಟ ಧ್ವನಿಯಿಂದ ಒಂದು ರಣಹದ್ದು ಚೀರಿತು! ಚೀರಿಡುತ್ತಿರುವುದನ್ನು ಕಿವಿಗೊಟ್ಟು ಕೇಳು!

❑

6. ಶುಭದೇವತಾಮೂರ್ತಿ

ತೊಡಗಿದಳ್ ನರ್ತನಕೆ ಕರ್ಕಶ ಕದನಕಾಳಿ

ಪ್ರಲಯ ರುದ್ರ ಭಯಂಕರ ಶೂಲಧರ ಶಿವನ ತಾಂಡವ ಸಮಯದ ಉಗ್ರ ಡಮರುವಿನ ಡಂಡಿಮದಂತೆ ರಣಭೇರಿ ಮೊಳಗಿತು! ಅದು ದಿಗ್ಭಿತ್ತಿಯಲ್ಲಿ ಮೇರು ಪರ್ವತ ಮಾರ್ದನಿಸಿದಂತಿತ್ತು! ಕರ್ಕಶ ಕದನ ಕಾಳಿಯು ಧಿಮ್ಮಿ ಧಿಮ್ಮಿ ಧಿಮ್ಮಿ ಧಿಮ್ಮಿ ಎಂದು ಕುಣಿಯಲು, ಅವಳ ಸೊಂಟದಲ್ಲಿ ಕಟ್ಟಿದ್ದ ನರ ಮುಂಡ ಮಾಲೆಯು ಗದೆಯ ಘಾತದ ಭಯಂಕರ ರೀತಿಯಿಂದ ಕುಣಿ ಕುಣಿಯಿತು. ಹಸಿಯಾದ ಬಿಸಿ ಬಿಸಿ ರಕ್ತವನ್ನು ಕಾರುವ ರುಂಡದ ಸರವು ಕಂಠದಲ್ಲಿ ನೃತ್ಯ ಮಾಡುತ್ತ ಆಡಿತು.

ಕತ್ತಲಲ್ಲಿ ಮೆಳೆ ಹೊತ್ತಿ ಕಾಡ್ಗಿಚ್ಚು ಪ್ರಜ್ವಲಿಸುವ ಜ್ವಾಲೆಯಂತೆ–ಕಪ್ಪು ಮುಖದ ರಕ್ತವನ್ನು ಬಸಿಯುವ ನಾಲಗೆಯು ಮೇಲೆ ಕೆಳಗೆ ಬಳುಕಾಡುತ್ತ, ದಿಕ್ಕು ದೆಸೆಯನ್ನು ನೆಕ್ಕುವಂತೆ ಜೋಲಾಡಿತು. ಪಾದದ ತುಳಿತಕ್ಕೆ ರಣರಂಗವು ಎಡಬಲಕ್ಕೆ ತೂಗಾಡಿತು ಎನ್ನುವ ರೀತಿ ಆ ಕದನ ಕಾಳಿ ನರ್ತಿಸ ತೊಡಗಿದಳು. ರುದ್ರ ಚಾಮುಂಡಿಯ ಉದ್ವೇಗ ನಡೆಯ ಛಂದಸ್ಸಿಗೆ ಎರಡೂ ಸೇನಾ ಸಮುದ್ರಗಳು ಲಯ ವಿನೋದದಲ್ಲಿ ಚಲಿಸಿದವು!

ಬಭ್ರುವಾಹನನ ಸೇನೆ ಒಂದು ಕಡೆಯಿದ್ದು, ಅದರ ಎದುರು ಫಲ್ಗುಣನ ಸೇನೆಯ ಸಾಲುಗಳಿದ್ದವು. ಮುಂಗಾರಿನಲ್ಲಿ ಸಿಡಿಲು ಮಿಂಚಿನ ಗರ್ಭ ಹೊತ್ತ ಎರಡು ತೀಕ್ಷ್ಣ ಮುಗಿಲುಗಳ ಗುಂಪು ಬಾನಿನ ಗಾಳಿಯ ಉರುಬಿಗೆ ಘರ್ಷಣೆಗೆ ಒಳಗಾಗಿ ಅಗ್ನಿಯ ಉಲ್ಕೆಯೊಡನೆ ಶಬ್ದ ಹೊಮ್ಮಿಸುವ ಮೊದಲು ದೃಷ್ಟಿ ಕಾಳಗಕ್ಕೆ ತೊಡಗುವುವು. ಹಾಗೆ ಆ ಎರಡು ಸೇನೆಗಳು ಯುದ್ಧಕ್ಕೆ ತಯಾರಾಗಿ ಆಯೋಜನೆಗೊಂಡು ನಿಂತಿದ್ದವು.

ತೇರಾನೆ, ಕುದುರೆ, ಕಾಲಾಳುಗಳು ಆ ಭೂಮಿಯನ್ನೆಲ್ಲ ತುಂಬಿ ಆವರಿಸಿತ್ತು. ಸೈನಿಕರು ಶಿರಸ್ತ್ರಾಣ, ಬಂಗಾರದ ಕುಶಲತೆಯಿಂದ ಮಾಡಲಾದ ಉಕ್ಕಿನ ಕವಚ ಧರಿಸಿದ್ದರು. ಅವರು ಚರ್ಮದಿಂದ ಮಾಡಿದ ಬತ್ತಳಿಕೆ, ಖಡ್ಗ, ಕೋದಂಡ, ಮುದ್ಗರ, ಗದೆ, ಬಿಂಡಿವಾಲ (ಕೈಯಿಂದ ಎಸೆಯುವ ಸಣ್ಣ ಭಲ್ಲೆಯಂತಹ ಆಯುಧ), ಚಕ್ರ,

ಪರಿಘ (ಕಬ್ಬಿಣದ ಮೊನೆಗಳಿಂದ ಕೂಡಿದ ಗದೆ) ಮುಂತಾದ ನಾನಾ ಆಯುಧಗಳ ಕನಕ ಕಾಂತಿಯಿಂದ ಹೊಳೆಯುತ್ತಿದ್ದರು. ಅದು ದೇವತೆಗಳ ನೋಟಕ್ಕೆ ಹಬ್ಬವಾದಂತಿತ್ತು!

ಯುದ್ಧ ಪ್ರಾರಂಭ ಸಮಯದ ತೂರ್ಯವಾದ್ಯದ ಧ್ವನಿಗೆ, ವೇಗ ದುದ್ವೇಗದಿಂದ ರೋಷದಿಂದ ಘೋಷಣೆಗಳೊಡನೆ ಎರಡೂ ಸೇನೆ ಒಂದನ್ನೊಂದು ಎದುರಿಸಿತು. ಅದು ಭೂಕಂಪ ಕಾಲದಲ್ಲಿ ಎದುರು ಶಿಖರ ಸೀಮೆಯಿಂದ ಬಂಡೆಗಳು ಉರುಳಿ ಕಂದರ ತಳದಲ್ಲಿ ಡಿಕ್ಕಿ ಹೊಡೆದು ಹುಡಿ ಹುಡಿ ಹಾರಿ, ಕಿಡಿ ಕಿಡಿಯಾಗಿ ಸಿಡಿಯುವಂತಿತ್ತು.

ಗಜ ಸೇನೆಯ ಘೀಳು, ಕುದುರೆಗಳ ಹೇಷಾರವ, ಚಕ್ರದ ಚೀತ್ಕಾರ, ಬಿಲ್ಲಿನ ಹೆದೆ ಮಿಡಿದ ಠೇಂಕಾರ, ವೀರ ಪೌರುಷದ ರೋಷ ಆವೇಶದಬ್ಬರ, ಖಡ್ಗ ಖಡ್ಗದ ಖಣಿಲ್, ಕವಚ ಶಿರಸ್ತ್ರಾಣಗಳ ಠಣತ್ಕಾರ ಮುಂತಾದ ಅನೇಕ ವಿಧದ ನಾನಾ ಶಬ್ದಗಳು ಕಿವಿಗೆ ಅಪ್ಪಳಿಸಿ ಕಠೋರತೆಯನ್ನುಂಟು ಮಾಡಿದವು.

ಗಾಯ ಗಾಯಗಳಿಂದ ಚಿಮ್ಮಿದ ರಕ್ತ ಚಿಲುಮೆಗಳಿಂದ, ಸೈನಿಕರ ರಕ್ತದ ಹೊಳೆ ಹರಿದಿತ್ತು. ಅಲ್ಲಿ ರಣಕಾಳಿಯು ರುಂಡ ಮುಂಡಗಳ ಚೆಂಡಾಟವಾಡಲು ಆ ಯುದ್ಧ ಭೂಮಿ ಯಮ ಭಯಂಕರವಾಯಿತು. ಆಗಸದಲ್ಲಿ ನೆರೆದು ನೋಡುತ್ತಿದ್ದ ದೇವತೆಗಳು ಬೆಚ್ಚಿ ಹೋದರು! ವಿಜಯಲಕ್ಷ್ಮಿಯು ಕೈಯಲ್ಲಿ ವಿಜಯ ಮಾಲೆಯನ್ನು ಹಿಡಿದು ಒಮ್ಮೆ ಹಸ್ತಿನಾಪುರದ ಕಡೆಗೆ ಮತ್ತೊಮ್ಮೆ ಮಣಿಪುರದ ಕಡೆಗೆ ಮನಸ್ಸನ್ನು ಓಲಾಡಿಸುತ್ತ, ಕೆಂಪಾದ ಒಲವಿನ ಉಯ್ಯಾಲೆಯಲ್ಲಿ ನಲಿದಾಡಿದಳು!

ಚಿತ್ರಾಂಗದೆ ಬೇಡುತಿರ್ದಳ್ ಬಿಡದೆ ಫಣಿಧರ ಪಿನಾಕಿಯಂ ತನ್ನಭೀಷ್ಟಂ ಸಫಲಮಕ್ಕೆಂದು

ಮಣಿಪುರದ ಧರಣಿಯಲ್ಲಿ ಹೀಗೆ ಆ ದಿನವೆಲ್ಲ ರಣದ ಕೋಲಾಹಲ, ಕೊಲೆಯ ಕೋಲಾಹಲ ಸತತವಾಗಿ ನಡೆಯಿತು. ಬಭ್ರುವಾಹನನ ತಾಯಿಯು ಇದೇನೊಂದನ್ನು ತಿಳಿಯದೆ, ಪರ್ಣಕುಟೀರದ ಮಧ್ಯೆ ಫಣಿದರ ಪಿನಾಕಿಯನ್ನು ತನ್ನ ಅಭೀಷ್ಟವು ಸಫಲವಾಗಲೆಂದು ಸತತವಾಗಿ ಪ್ರಾರ್ಥಿಸುತ್ತಿದ್ದಳು. ಹೊತ್ತಿಳಿದು ಕತ್ತಲಾಯಿತು. ಮತ್ತೆ ಕತ್ತಲು ಅಳಿದು ಉದಯದ ಕಡೆ ಮುಂಬೆಳಕು ಮಳೆಯ ಮಬ್ಬಿನಲ್ಲಿ ಮೈದೋರಿತು.

ಚಿತ್ರೆಗೆ ಅವಳು ಹಾರೈಸಿದ ಆ ವಾರ್ತೆ ಬರದಿರಲು, ಖಿನ್ನತೆ ವಿಷಣ್ಣತೆಗಳು ಮುತ್ತಿಕೊಂಡು ಚಿತ್ತ ಹಿಂಸೆಯುಂಟಾಯಿತು. ಮತ್ತೆ ಆ ದಿನವೂ ನಿರೀಕ್ಷಣೆಯ ಹರಿತವಾದ ಅಲಗಿನ ಮೇಲೆ ಕಳೆಯಿತು. ಪತಿಸುತ ಹಿತದಿಂದ ಕುತೂಹಲಿತ ಮನಸ್ಸಿನ ಅವಳು ಆ ರಾತ್ರಿಯೂ ಶಿವನನ್ನು ಪೂಜಿಸಿದಳು. ತಮದ ನಿದ್ರೆಯನ್ನು ತೊರೆದು ಸಾತ್ವಿಕ ತುರೀಯ ನಿದ್ರಾ ಭಕ್ತಿರಸದಿಂದಿದ್ದಳು. ಆಗ ಧ್ಯಾಸ ನಿದ್ರಾ ಸ್ವಪ್ನ ದರ್ಶನದಲ್ಲಿ ಒಂದು ದಿವ್ಯಾಕೃತಿಯ ಸುಂದರ ಮೂರ್ತಿ ಕಾಣಿಸಿತು!

'ಸಾಧ್ವಿಯೆ, ತಪಸ್ವಿನಿಯೆ, ಪಿಂಗಲ ಜಟಾಧಾರಿ ಮಂಗಲ ವಿಭೂತಿಯಾದ ತ್ರಿಶೂಲಿಯ ಆಜ್ಞೆಯಂತೆ ನಾನು ನಿನ್ನ ಬಳಿಗೆ ಬಂದಿರುವೆನು. ಮಣಿಪುರದ ಕದನದಲ್ಲಿ ನಿನ್ನ ರಣಕಲಿ ಕುಮಾರನ ಕೈಲಿ, ಫಲ್ಗುಣನ ಸೇನೆಯಲ್ಲಿಯ ಅಪಾರ ಜನ ಮಡಿದರು. ಕ್ಷಣ ಕ್ಷಣಕ್ಕೆ ವೈರಿಯ ದಳವು ಬಲಗುಂದುತ್ತ ಅಳಿಯುತ್ತಿದೆ. ವೀರ ಪಾರ್ಥನ ವೀರವಾಣಿಯನ್ನು ಲೆಕ್ಕಿಸದೆ ಹಿಂಜರಿದು ಓಡುತ್ತಿದೆ.

'ಕೆಲವರು ಸೇನಾನಿಗಳು ಗಾಯಗೊಂಡರು, ಕೆಲವರು ಪ್ರಾಣಬಿಟ್ಟರು. ಮತ್ತು ಉಳಿದವರ ಪ್ರಾಣ ಕೊರಳಿನಲ್ಲಿ ಮಿಡುಕಾಡುತ್ತಿದೆ. ಸೂರ್ಯನ ಮಗನ ಮಗ, ಹಂಸಧ್ವಜ, ನೀಲಕೇತು ಹಾಗೂ ಅನುಸಾಲ್ವ, ಪ್ರದ್ಯುಮ್ನ, ಯೌವನಾಶ್ವ ಮುಂತಾದ ರಣವೀರರು ಯುದ್ಧದಲ್ಲಿ ಹೋರಾಡಿ ಬಳಲಿದ್ದಾರೆ. ಕಟ್ಟಕಡೆಗೆ ಏನೆಂದು ಹೇಳಲಿ? ನಿನ್ನ ಮಗನಿಗೆ ಯುದ್ಧ ಕೈಗೂಡಿದೆ. ಲೋಕಕ್ಕೆ ಪ್ರಳಯ ಭೀತಿ ಹಬ್ಬಿದೆ. ರಜತ ಗಿರಿ ಕಂಪಿಸಿದೆ. ದೇವತೆಗಳು ಆ ಬಿರಿ ಉರಿಗೆ ಬೆದರಿ ಭಯಪಟ್ಟಿದ್ದಾರೆ! ಇಂದ್ರನು ಕೈಲಾಸಕ್ಕೆ ಓಡಿ ಹೋಗಿ, ತನ್ನ ಕುಮಾರನಾದ ಅರ್ಜುನನ ಕ್ಷೇಮಕ್ಕೆ ಪ್ರಾರ್ಥಿಸುತ್ತಿದ್ದಾನೆ.

'ಸುಧಾಮೌಳಿಯು ನಿನ್ನ ಭಕ್ತಿಗೆ ಮೆಚ್ಚಿ, ನನ್ನನ್ನು ಇಲ್ಲಿಗೆ ಕಳುಹಿಸಿದ್ದಾನೆ. ಹೋಗು, ನಡೆ ಬೇಗ. ನಿಧಾನ ಮಾಡಿದರೆ ಪಾರ್ಥನ ಕಳೇಬರ ಧರೆಗೆ ಉರುಳಿ ಬೀಳುತ್ತದೆ. ಈ ರಾತ್ರಿಯು ನಿಶಾಯುದ್ಧದಲ್ಲಿ ತೊಡಗಿದೆ. ರಣ ದೇವತೆಗೆ ನಿನ್ನ ಹೃದಯದ ಬಲವನ್ನು ನೀಡಿ, ಕೆರಳಿರುವ ವಿಧಿಯನ್ನು ಸಮಾಧಾನಪಡಿಸು. ನೀನು ಪತಿಸುತ ಇಬ್ಬರಿಗೂ ಶುಭಂಕರಿಯಾಗು. ನಡೆ, ಹೋಗು, ಬೇಗ ಸಾಗು!'

ನಿಮಿಷದಲಿ ಮಿಂಚಿ ಕಣ್ಮರೆಯಾಗಿ ಹೊಕ್ಕಳು ಕಳನ ನಡುವೆ

ಚಿತ್ರೆಯು ನಡುಗಿ ಬೆದರುತ್ತ, ಬೆವರಿ ಕನಸಿನಿಂದ ಎಚ್ಚೆತ್ತಳು. ಹಾ ಎನ್ನುತ್ತ, ಆ ತಾಯಿಯು, ಆ ಸತಿಯು 'ಹಾ ಮಗನೆ! ಹಾ ಪತಿಯೆ' ಎಂದು ಕೂಗುತ್ತ ಕಂಗೆಟ್ಟಳು. ಕುದಿವ ಎದೆಯಲ್ಲಿ, ಓ, ಎಂದು ರೋದಿಸುತ್ತ ಪರ್ಣ ಕುಟಿಯಿಂದ ಹೊರ ಹೊರಟಳು. ಕಗ್ಗತ್ತಲೆಯಲ್ಲಿ ಮುಗ್ಗುರಿಸಿ, ಮುನ್ನಡೆಯುತ್ತ ಅರಮನೆಗೆ ಬಂದಳು.

ಹಗಲೆನ್ನುವಂತೆ ದೀಪ ಸಾಲುಗಳು ಹೊಳೆಯುತ್ತಿದ್ದವು. ವಿಜಯ ವಾರ್ತೆಯ ಡಂಗೂರವನ್ನು ಹೊಡೆಯುತ್ತಿದ್ದರು. ಅದನ್ನು ಕೇಳಲು ಜನರು ಬೀದಿಗಳ ನಡು ನಡುವೆ ಕಿಕ್ಕಿರಿದು ಸೇರಿದ್ದರು. ಅದನ್ನೆಲ್ಲ ನೋಡಿ, ಹವ್ವಗೆ ಹಾರಿ ಎಚ್ಚರ ತಪ್ಪಿದಂತಾದಳು!

ನಿರ್ಜನತೆ ನಿಶ್ಚಿಂತೆ ನಿರ್ಮಲತೆಗಳ ತಪಸ್ವಿನಿ ರಾಣಿ ಅರಮನೆಗೆ ರಾತ್ರಿಯ ಹೊತ್ತು ಒಬ್ಬಳೇ ಬಂದುದನ್ನು ಕಂಡು ಸಖಿಯರು ಆಶ್ಚರ್ಯಗೊಂಡರು. ಅವಳ ಸುತ್ತಲೂ ಸುತ್ತಿ ನಿಂತರು. ಧೈರ್ಯವಹಿಸಿ ಹೀಗೆ ಹೇಳಿದರು : 'ದೇವಿ; ಪಾರ್ಥನನ್ನು ಹಿಮ್ಮೆಟ್ಟಿಸಿದ, ವೈರಿಯಲ್ಲಿ ಬೇಗೆಯನ್ನುಂಟು ಮಾಡಿದ ಇಂತಹ ಮಗನನ್ನು ಪಡೆದ

ನೀನು ಧನ್ಯೆ. ಪಕ್ಷಿಯು ಬಾಣದ ಹೊಡೆತಕ್ಕೆ ಗರಿಗಳನ್ನು ಉದುರಿಸುತ್ತ ಹೋಗುವಂತೆ ಹೆಜ್ಜೆ ಹೆಜ್ಜೆಗೆ ವೈರಿಸೇನೆ ಹಿಮ್ಮೆಟ್ಟುತ್ತಿದೆ. ದಿಂಡುರುಳಿ ಬೀಳುತ್ತಿರುವ ವೈರಿಸೇನೆ ಸಾವಿರ ಲಕ್ಷಕ್ಕಿಂತ ಹೆಚ್ಚಾಗಿದ್ದು, ಅವರು ಭಯಗೊಂಡು ಕೆಟ್ಟೋಡುತ್ತಿದ್ದಾರೆ. ರಾಣಿಯೆ, ನಿನಗೆ ಭೀತಿ ಬೇಡ. ನಿನ್ನ ಮಗನು ಮಣಿಪುರದ ಕೀರ್ತಿಗೆ ಕಳಸವಿಕ್ಕಿ ಬರುವನು!'

ಅದನ್ನು ಕೇಳುತ್ತಿದ್ದ ವೀರ ಸತಿಯ ಕಿವಿಗೆ ನುಡಿಯ ಚೂರಿಯಿಂದ ತಿರುಚಿದಂತಾಯಿತು. ಅವಳು ಆಳುಗಳಿಗೆ ತಡಮಾಡದೆ ಬೇಗ ಕುದುರೆಯನ್ನು ತನ್ನಿ ಎಂದು ಆಜ್ಞೆ ಮಾಡಿದಳು. ಅವರು ಬೆಳ್ಳನೆಯ ರಣ ಕುದುರೆಯನ್ನು ತಂದರು. ಶಾಂತಿಯನ್ನು ಸೂಚಿಸಲು ಶರತ್ಯಮಯ ಮುಗಿಲಿನಂತೆ ಬೆಳ್ಳಗೆ ಪ್ರಕಾಶಿಸುವ ಬಿಳಿಯ ಬಾವುಟವನ್ನು ಎಲ್ಲರೂ ಕಾಣುವಂತೆ ಎತ್ತಿಕೊಂಡಳು. ಜೊತೆಗೆ ಸಂಧಿ ಸೂಚಕ ಸುಸ್ವರದ ವೀರ ತೂರ್ಯವನ್ನು ಊದುತ್ತ, ಕುದುರೆಯ ಮೇಲೆ ನೆಗೆದು ಕುಳಿತು ಯುದ್ಧ ಭೂಮಿಯ ಕಡೆಗೆ ನಡೆದಳು. ಅವಳು ಕವಚ ಗಿವಚ, ಕತ್ತಿ ಗಿತ್ತಿಗಳೊಂದನ್ನು ಹೊಂದಿರಲಿಲ್ಲ. ಕೊರಳ ಜಪಮಣಿ ಮಾಲೆ, ಉಟ್ಟ ಬೆಳ್ಳನೆ ನಾರು ಸೀರೆಯಲ್ಲಿ ಶಾಂತಿ ಸಂಕೇತವಾಗಿ ನಡೆದಳು!

ಕೆಲವು ಸಖಿಯರು ಹಿಂಬಾಲಿಸಲು ಪ್ರಯತ್ನಿಸಿದರು, ಆದರೆ ಪ್ರಯೋಜನವೇನು? ಬಭ್ರುವಾಹನನ ತಾಯಿ, ಸಿತವಾಹನನ ಪತ್ನಿ, ಮಣಿಪುರದ ರಾಣಿ ಚಿತ್ರಾಂಗದೆ ನಿಮಿಷದಲ್ಲಿ ಮಿಂಚಿ ಮರೆಯಾಗಿ ಯುದ್ಧರಂಗವನ್ನು ಹೊಕ್ಕಳು.

ರುಂದ್ರ ರಣರಂಗದಲಿ, ನುಗ್ಗಿನಡೆದಳ್ ಚಿತ್ರೆ, ಬಿಳಿಯ ಬಾವುಟವಿಡಿದು, ತುತ್ತುರಿಯ ದನಿಗೈದು

ಆ ರಣಭೂಮಿಯು ಯಮನ ನಿವಾಸದಂತೆ ಗೋಚರಿಸುತ್ತಿತ್ತು! ಅಲ್ಲಿ ರಕ್ತಾಗ್ನಿ ಹೊತ್ತಿದ್ದ ಸಹಸ್ರಾರು ದೀವಿಗೆಗಳ ಸೊಡರ್ಮಾಲೆಗಳು – ಕತ್ತಲ ಕಾಳಿಯ ನಾಲಗೆಯ ನರ್ತನವನ್ನು ಹೋಲುತ್ತ ರಂಜಿಸಿದವು. ಸಿಟ್ಟು ಹರಿಸಿದ ರಕ್ತದಿಂದ ತೊಪ್ಪನೆಯೆ ತೊಯ್ದ ಕೆಸರಿನಲ್ಲಿ, ಕಿವಿಗೆ ಕರ್ಕಶವಾದ ರಣದ ಭೀಷಣ ರುದ್ರ ಕೋಲಾಹಲವು ಸ್ನಾನ ಮಾಡಿದಂತಿತ್ತು. ಕಾಳಗವು ರೋಷ ಉನ್ಮಾದದ ಶಿಖರವನ್ನು ಏರಿ ಜ್ವಾಲಾಮುಖಿ ಎನ್ನುವಂತೆ ಧುಮುಕುತ್ತಿತ್ತು!

ಹರಿತವಾದ ಮೊನೆಯ ಬಾಣಗಳ ಸಮೂಹ ಹಾಸು ಹೊಕ್ಕಾಗಿ ಸಂಚಲಿಸಿದವು. ಅದು ಮೃತ್ಯುವಿನ ಭೋಜನ ಸಮಯದ ಮುಖದ ಹಲ್ಲುಗಳ ಪಂಜರದಂತೆ ನಿಗ್ರಹಿಸಲು ಸಾಧ್ಯವಿಲ್ಲದ, ಸಹಿಸಲಾಗದ ಉಗ್ರತೆಯಿಂದ ಕೂಡಿತ್ತು. ಕಣ್ಣಿನ ದೃಷ್ಟಿ ಹರಿಯುವವರೆಗೂ ಹರಡಿ ಹಬ್ಬಿಕೊಂಡಿದ್ದ ರುದ್ರ ರಣರಂಗದಲ್ಲಿ ಚಿತ್ರೆ ನುಗ್ಗಿ ನಡೆದಳು. ಬಿಳಿಯ ಬಾವುಟ ಹಿಡಿದು, ತುತ್ತುರಿಯ ದನಿ ಮಾಡುತ್ತ, ಶಾಂತಿಯನ್ನು ತೋರುತ್ತ, ಸಂಧಿಯನ್ನು ನಿರಂತರವಾಗಿ ಸಾರುತ್ತಿದ್ದಳು!

ಬಾಣಗಳ ಹರಿತವಾದ ಅಂಚು ಕುದುರೆಯನ್ನು ಮತ್ತು ರಾಣಿಯನ್ನು ಚುಚ್ಚಿದವು. ಅಶ್ವದ ಬಿಳಿ ಮೈ ಕೆಂಪಾಯಿತು. ಸಾಧ್ವಿಯ ಬಿಳಿಯ ಉಡುಪು ರಕ್ತ ರಂಗಾಗಿ, ಆ ರಕ್ತವು ಅವಳ ಧವಳ ಪತಾಕೆಗೂ ಚಿಮ್ಮಿತು. ಯುದ್ಧ ಶಬ್ದದ ಮಧ್ಯೆ, ಪೊಂಜುಗಳು ಉರಿಯುವ ಕಾಂತಿ ಕತ್ತಲಲ್ಲಿ ಕಣ್ಮಾಯೆಯಾಗಿಸುವ ಆ ಗಲಿಬಿಲಿಯ ಹೋರಾಟದ ಮಿಥ್ಯೆಯ ಹುಚ್ಚಿನಲ್ಲಿ – ಮೊದಲು ಯಾರೂ ಆ ಕುದುರೆಯನ್ನು, ಅದರ ಮೇಲಿದ್ದ ಶಾಂತಿ ಪತಾಕೆಯನ್ನು, ಅದನ್ನು ಹಿಡಿದು ತುತ್ತುರಿ ಊದುತ್ತಿದ್ದವಳನ್ನು ಲೆಕ್ಕಿಸಲಿಲ್ಲ.

ಆದರೇನು ಒಂದಿಷ್ಟು ಹೊತ್ತಿನಲ್ಲಿ ಕೆಲವು ಸೈನಿಕರು ತೂರ್ಯವನ್ನು ಕೇಳಿ, ಅದರೊಡನೆ ಆ ಧ್ವಜವನ್ನು ಕಂಡರು. ವೈರಿಯ ಕುಹಕವೇನು? ಅಲ್ಲಲ್ಲ! ಅದೊ ನೋಡು! ಶುಭ್ರ ದೇವತಾ ಮೂರ್ತಿ, ಬಭ್ರುವಾಹನನ ಜನನಿ, ವೀರ ವೀರರ ವೀರಮಾತೆ! ತಕ್ಷಣ ಹೋ ಹೋ ಎಂದು ಗುಲ್ಲೆದ್ದಿತು! ಅದೊ, ನೋಡು ಭಟರಲ್ಲಿ ಕೆಲವರು ಅವಳ ಸಹಾಯಕ್ಕೆ ನುಗ್ಗುತ್ತಿರುವರು!

ಚಿತ್ರಾಂಗಿಯು ತನಗೆ ಆದ ಬಾಣದ ಏಟುಗಳನ್ನು ಲೆಕ್ಕಿಸದೆ, ಬಭ್ರುವಾಹನನ ರಥದ ಬಾವುಟವನ್ನು ಹುಡುಕುತ್ತ, ಧಾವಿಸುತ್ತಿದ್ದಳು. ಆಗ ಮುಂದೆ ದೂರದಲ್ಲಿ ಸಮರ ಭೈರವ ಭೀಷ್ಮ ಲೀಲೆಯಲ್ಲಿ ತೊಡಗಿದ್ದ ತಂದೆ ಮಕ್ಕಳ ಕಾಳೆಗದ ಆವೇಶ ರಾಹು ಕಂಡಿತು! ಅವರ ನೆತ್ತಿಯ ಎಡೆಯಲ್ಲಿ ರಣಚಂಡಿಯೊಡಗೂಡಿ, ರಕ್ತದಾಹದ ಆತುರದಿಂದ ಕುಣಿಯುತ್ತಿರುವ ಮೃತ್ಯು ಕಾಣಿಸಿತು!

'ಹೇ ಮೃತ್ಯುವೇ, ನನ್ನನ್ನು ತೆಗೆದುಕೊ, ಕೊಳ್ಳೆನ್ನ! ನನ್ನ ಪತಿ ಮತ್ತು ಮಗನನ್ನು ಕಾಪಾಡು!'

ಎಂದು ಆ ರಾಣಿಯು ಹೇಳುತ್ತ ಬಾವುಟದೊಡನೆ ತೂರ್ಯದ ಮಹಾಧ್ವನಿ ಹೊರಹೊಮ್ಮಿಸುತ್ತ, ರಣರಂಗಕ್ಕೆಲ್ಲ ಕೇಳಿಸುವಂತೆ ಮೇರೆ ಮೀರಿ ಕೂಗುತ್ತ, ಕುದುರೆಯಿಂದ ಕೆಳಕ್ಕೆ ಧುಮುಕಿದಳು.

'ಹಾ! ಹಾ! ಮಗನೆ! ಹಾ ಮಗನೆ! ಕೈಯ್ಯ ತಡೆ! ಕೈಯ ತಡೆ! ದಮ್ಮಯ್ಯ ದಮ್ಮಯ್ಯ!'

ಎಂದು ಹೇಳಿ, ಗಟ್ಟಿಯಾಗಿ ಕೂಗುತ್ತ, ಆಯಾಸಗೊಂಡು ದೊಪ್ಪೆಂದು – ಸೇತುವೆ ಎನ್ನುವಂತೆ ಪಿಣಿಲು ಹೆಣೆದ ಬಾಣದ ರಕ್ತಮಯ ಶಯ್ಯೆಯಲ್ಲಿ, ಆ ತಂದೆ ಮಕ್ಕಳ ನಡುವೆ ಬಿದ್ದಳು!

ಬಭ್ರುವಾಹನ ಮತ್ತು ಅರ್ಜುನ ಇಬ್ಬರೂ 'ಹಾ' ಎಂದು ಹೇಳುತ್ತ, ತಮ್ಮ ತಮ್ಮ ತೇರುಗಳಿಂದ ಧುಮುಕಿದರು! ನಾರಿ ಬಿದ್ದ ಕಡೆಗೆ ನಡೆದು ಓಡಿದರು. ಹತ್ತಿರದಲ್ಲಿಯೆ

ಬಾಣಗಳಿಂದ ತುಂಬಿದ ಬಾವುಟವಿದೆ! ಮೈ ಗಾಯಗಳಿಂದ ಮುಖದಿಂದ ರಕ್ತ ಪ್ರವಾಹದಂತೆ ಹರಿಯುತ್ತಿದೆ! ಅವಳುಟ್ಟ ಬಟ್ಟೆ ತೊಪ್ಪನೆ ತೊಯ್ದು ಸೋರುತ್ತಿದೆ!

ಮೈ ಮರೆತು ಬಿದ್ದಿದ್ದ ತಾಯಿ ಚಿತ್ರಾಂಗದೆಯನ್ನು ನೋಡಿದೊಡನೆ ಮಗನು 'ಹಾ' ಎಂದು ಹೇಳುತ್ತ ಕಾಲಿಗೆ ಎರಗಿ ಅಳತೊಡಗಿದನು. ಅರ್ಜುನನು ತನ್ನ ಸೆರಗಿನಿಂದ ಗಾಳಿಯನ್ನು ಬೀಸಿ, ನೀರನ್ನು ತರಿಸಿ ನೀಡಿ ಶುಶ್ರೂಷೆ ಮಾಡಿದನು.

ಕಣ್ಣು ತೆರೆಯುತ್ತ ಆ ಚಿತ್ರೆಯು ತನ್ನ ಮಗನನ್ನು, ಪಕ್ಕದಲ್ಲಿಯೆ ಖಿನ್ನ ಮುಖಿಯಾಗಿದ್ದ ಪತಿದೇವನನ್ನು ನೋಡಿದಳು. ಕರುಣೆ ದುಃಖ ಹರ್ಷದ ಪ್ರೀತಿಯಿಂದ ನೋಡಿ, ಮತ್ತೆ ಮತ್ತೆ ನೋಡಿ ನಿಟ್ಟುಸಿರು ಬಿಡುತ್ತ ಹೀಗೆ ಹೇಳಿದಳು :

'ಮಗನೆ, ದುಗುಡವೇತಕ್ಕೆ? ಇದು ಸಂತೋಷ ಪಡಬೇಕಾದ ಸಮಯ! ನಾನು ಸಾಯುವೆನು, ಆದರೇನು? ಮಂಗಳ ಮುಹೂರ್ತಕ್ಕೆ ನಾನು ಇಲ್ಲಿಗೆ ಬಂದೆನು. ಇಲ್ಲದಿದ್ದರೆ ನೀನು ಈ ನಿನ್ನ ತಂದೆಯನ್ನು ಕೊಲ್ಲುತ್ತಿದ್ದೆ! ಮಹಾ ಪಾತಕಕ್ಕೆ ಗುರಿಯಾಗುತ್ತಿದ್ದೆ. ನಾನು ಇದುವರೆಗೆ ನಿನಗೆ ಹೇಳದ ಒಂದು ರಹಸ್ಯ ಇಂದು ಹೇಳುವೆನು ಕೇಳು. ನರನೆ, ನೀನೂ ಅದೇ ರೀತಿ ಕೇಳು. ನೀನು ನನ್ನ ಹೃದಯೇಶನಾದ ನನ್ನ ಪತಿ! ಗಾಬರಿಗೊಳ್ಳದಿರು, ಬೆರಗಾಗದಿರು, ಸಾಹಸದ ಕೆಚ್ಚು ನುಡಿ ಎಂದು ಹೇಳದಿರು.'

ಶಾಂತಾತ್ಮದಿಂ ಶಿವನಾಮವಂ ಸ್ಮರಿಸಿ ಕಣ್ಣು ಮುಚ್ಚಿದಳಮೃತಮಯ ಚಿರಸಮಾಧಿಯಲಿ!

ಚಿತ್ರೆಯು ತನ್ನ ಕಥೆಯನ್ನು ಪ್ರಾರಂಭದಿಂದ ಅತಿ ಸಂಕ್ಷೇಪವಾಗಿ ಹೇಳಿದಳು. ಅರ್ಜುನನ ನಾಮಾಂಕಿತದ ಮುದ್ರೆಯ ಶ್ರೀಉಂಗುರವನ್ನು ಅವನ ಕೈಗೆ ಸಾಕ್ಷಿಯಾಗಿ ನೀಡಿದಳು. ಒಂದು ಕೈಯಲ್ಲಿ ಮಗನನ್ನು ಮತ್ತೊಂದರಲ್ಲಿ ಪತಿಯ ಕೈಯನ್ನು ಹಿಡಿದು ಸಂಧಿಯನ್ನು ಮಾಡಿದಳು. ಶಾಂತಿಯ ನುಡಿ ಹೇಳಿದಳು. ಶಾಂತಾತ್ಮದಿಂದ ಶಿವನಾಮವನ್ನು ಸ್ಮರಿಸುತ್ತ ಅಮೃತಮಯ ಚಿರಸಮಾಧಿಯಲ್ಲಿ ಕಣ್ಮುಚ್ಚಿದಳು! ಅತಿಯಾದ ದುಃಖ ಎತ್ತೆತ್ತಲೂ ತೇಲಾಡಿತು. ಕಂಬನಿ ಮಳೆ ಕರೆಯುವ ತೀರ್ಥದಲ್ಲಿ ಯುದ್ಧ ನಿಂತಿತು!

ಆ ವಿಷಮ ವಿಷಮಯ ರಾತ್ರಿ ಕಳೆಯಿತು. ಮರು ದಿನ ಮೂಡಿತು. ಮೋಡ ಕವಿದು ಸೋನೆ ಮಳೆ ಸೂಸಿ ಜಗತ್ತು ಮೌನದಲ್ಲಿ ಖಿನ್ನವಾಗಿತ್ತು. ಧರೆ ಬಿರಿಯುವಂತ ಶೋಕ ಭೇರೀರವ, ಕಹಳೆ ನಿಸ್ಸಾಳ ಸಮೂಹ ಹೊಮ್ಮಿಸಿದ ನಡುಗಿಸುವ ಸದ್ದಿಗೆ ಮಣಿಪುರ ಇದ್ದಕ್ಕಿದ್ದಂತೆ ಬೆಚ್ಚಿ ಬಿದ್ದಿತು! ಅದು ಮೃದುವಾದ ಸುಸ್ವನದೊಡನೆ ವೈದಿಕ ಪುರೋಹಿತರ ಮಂತ್ರ ಘೋಷಗಳೊಡಗೂಡಿ ಬಹು ನಿಧಾನವಾಗಿ ಜನರ ರೋದನದ ಜೊತೆಗೆ ಎಚ್ಚರಗೊಂಡಿತು.

ಮಸಣ ಯಾತ್ರೆಯು ಮಣಿಪುರದ ಅರಮನೆಯ ಕೋಟೆಯ ಚಿನ್ನದ ಹೆಬ್ಬಾಗಿಲಿನಿಂದ ಹೊರನಡೆದು ಸಮುದ್ರದ ವಿಸ್ತೃತ ಹೊಂಬಣ್ಣದ ಮರಳು ದಂಡೆಯ ಕಡೆಗೆ ನಡೆಯಿತು.

ಆನೆಗಳ ಪಂಕ್ತಿ, ಕುದುರೆಗಳ ಸಾಲು, ಕಾಲಾಳುಗಳ ಸಾಲು, ರಥ ಸಮೂಹಗಳು ದೃಷ್ಟಿ ಹರಿಯುವಷ್ಟು ದೂರ ನದಿಯಂತೆ ಹರಿದಿತ್ತು. ಅದರ ಜೊತೆಗೆ ನಾಗರಿಕ ನರನಾರಿಯರ ದಳದ ಮೆರವಣಿಗೆ ದುಃಖ ಭಾರದಿಂದ ಮಂದವಾಗಿ ಕಡಲ ತಡಿಯ ಕಡೆಗೆ ಸಾಗಿತು.

ಚಾಮರ ಛತ್ರಗಳ ಮಧ್ಯೆ ಪುಷ್ಪಗಳ ನವ ಪರಿಮಳಗಳಿಂದ ಸಿಂಗರಿಸಿದ ಚಿತ್ರಾಂಗದೆಯ ಕಳೇಬರವಿದ್ದ ಚಟ್ಟದ ಬಳಿ ಪಾರ್ಥ ಮತ್ತು ಪಾರ್ಥಜರಿಬ್ಬರೂ ಕಾಲು ನಡಿಗೆಯಿಂದ ಇತರ ಮಿತ್ರ ಸಾಮಾಂತರ ಗುಂಪಿನಲ್ಲಿ ನಡೆದರು. ಸೈನಿಕರ ಸೊಂಟದಲ್ಲಿ ಬಂಗಾರ ಖಚಿತ ಸುಂದರ ಕತ್ತಿಯ ಒರೆಯಿದೆ. ಅವರ ಮುಷ್ಟಿಯಲ್ಲಿ ರಾಜಗೌರವ ಸೂಚಿಸುವ ಝಗಮಗಿಸುವ ಒರೆಯೊಳಗಿರುವ ಖಡ್ಗವಿದೆ. ಹೀಗಿರುವ ಉಭಯ ಸೈನಿಕರು ಐಕ್ಯಮತದಲ್ಲಿ, ಶಿಸ್ತು ಬದ್ಧವಾಗಿ ಛಂದೋಗಮನದಿಂದ ಹೆಜ್ಜೆ ಹಾಕಿ ನಡೆದರು.

ಸಮುದ್ರ ದಡದಲ್ಲಿಯ ಚಿತೆಯು ಚಂದನ ಶ್ರೀಗಂಧದ ತುಂಡುಗಳ ಇಂಧನದಿಂದ, ಕಸ್ತೂರಿ ಕರ್ಪೂರ ಸಜ್ಜರಸ (ಒಂದು ಬಗೆಯ ಅರಗಿನಂತಹ ಅಂಟು) ಲೋಬಾನ ಯಕ್ಷಕರ್ದಮವೆಂಬ ಸುಗಂಧ ಲೇಪನದಿಂದ, ಬಕುಳ ಮಲ್ಲಿಗೆ ಜಾಜಿ ಮೊಲ್ಲೆ ಸಂಪಿಗೆ ಕಮಲ ದೇವ ಕುಸುಮಗಳಿಂದ ಕಂಪಿಡಿದು ಸೊಂಪಿಡಿದಿತ್ತು. ಅದು ಮರ್ತ್ಯದಿಂದ ಸ್ವರ್ಗಕ್ಕೆ ಕೊಂಡೊಯ್ಯುವ ಒಂದು ಬೃಂದಾರಕ ವಿಮಾನವೆನ್ನುವಂತಿತ್ತು.

ಜನ ಒಟ್ಟಾಗಿ ಬಂದು ಕಡಲಿನ ಅಂಚಿನಲ್ಲಿ ನೆರೆದರು. ಅದು ಮತ್ತೊಂದು ಮಹಾ ಸಮುದ್ರವೆನ್ನುವಂತೆ ಗೋಚರಿಸುತ್ತಿತ್ತು. ಅತ್ಯುತ್ತಮವಾದ ಘನಸಾರ ಎನ್ನುವ ಕಾಶ್ಮೀರ ಮೂಲದ ಲೇಪನದಿಂದ, ಶುಭ್ರ ಶ್ವೇತ ಪೀತಾಂಬರದ ಉಡುಪಿನಿಂದ ಶೋಭಿಸುವ, ನವರತ್ನಮಯ ಹೇಮದಾಭರಣಗಳಿಂದ ಅಲಂಕರಿಸಿದ, ಉಚಿತ ಪರಿಕರ್ಮಾಂಗಗಳಿಂದ ಶುದ್ಧಿ ಸಂಸ್ಕಾರಗೊಂಡ ಶವವನ್ನು ಚಿತೆಯ ಮೇಲೇರಿಸಿದರು.

ಮೃದುವಾದ್ಯ ವೀಣಾರವದೊಂದಿಗೆ ಜನರ ಆಕ್ರಂದನ ಬೆರೆತು ಹೊರಹೊಮ್ಮಿತು. ಮಾರುತನು ಗಂಧ ಭಾರಕ್ಕೆ ಕುಸಿದು ನಿಟ್ಟುಸಿರು ಬಿಡುತ್ತಿರಲು, ಸಮುದ್ರ ಪತಿಯು ತರಂಗ ಸಂಕುಲ ನಾದದಿಂದ ಮೊರೆಯುತ್ತಿದ್ದನು. ನಭವು ಸೋನೆ ಮಳೆಯ ನೆವದಿಂದ ಬಿಡದೆ ಕಂಬನಿ ಸೂಸುತ್ತಿದ್ದಿತು. ಆಗ ಸರ್ವಶುಚಿ ಸಪ್ತಾರ್ಚಿ ಅಗ್ನಿಯ ಸೂಡನ್ನು ಹೊತ್ತಿಸಲು, ಹೊಗೆ ಸೂಸಿ ಕಿಡಿಗೆದರಿ, ನೆತ್ತರು ಉರಿ ನಾಲಗೆಯ ತಾಂಡವದಂತೆ ಇಂಧನ ಸುಗಂಧ ಚಿತೆಯನ್ನು ನೊಣೆದು ನೆಕ್ಕಿತು. ಧಗಧಗಿಸುತ್ತ ಆಪೋಷಣ ತೆಗೆದುಕೊಂಡಿತು.

ಮಣಿಪುರ ಮನದ ಮಹಾ ಸ್ಮೃತಿ ಸುಧಾಶಿವರೂಪಿ

ಚಿತಾ ಚಿತ್ರ ಭಾನಿನ ಮಧ್ಯೆ ಶೋಭಿಸುವ ಇಂದ್ರ ಧನುಸ್ಸಿನಂತಹ ಉತ್ತಮ ವಸ್ತ್ರದ ಚಿತ್ರಾಂಗದೆಯ ಸುಂದರ ದೇವ ಮೂರ್ತಿ ಪುಷ್ಪಕ ವಿಮಾನ ಪೀಠದಲ್ಲಿರುವುದನ್ನು

ಎಲ್ಲರೂ ಕಣಸು ಕಂಡಂತೆ ಕಂಡರು. ನಂದನದ ದೇವಲೋಕದ ಪುಷ್ಪ ಹಾರವನ್ನು ಹಿಡಿದು ಅಮರ ಫಣಿವೇಣಿಯರು ಅಲ್ಲಿ ಸುರಗಾನವನ್ನು ಹಾಡುತ್ತಿದ್ದರು. ಜನರ ತೀವ್ರವಾದ ಉತ್ಸಾಹದ ಕೂಗಿನಲ್ಲಿ ನೋಡ ನೋಡುತ್ತಿದ್ದಂತೆ ಪುಷ್ಪಕ ವಿಮಾನವು ಆಗಸಕ್ಕೆ ಏರಿತು!

ಜ್ಞಾನವು ಅಜ್ಞಾನವನ್ನು ದಹಿಸುವಂತೆ ಅಗ್ನಿಯು ಕಾಯ ಮಾಯೆಯನ್ನು ಸುಟ್ಟಿತು. ಪ್ರೇಮ ಅಮೃತ ತತ್ವದಂತಿರುವ ನೊರೆ ನೊರೆಯ ಬೆಳ್ಳನೆಯ ಗೋವಿನ ಹಾಲನ್ನು ಕುಂಭ ಕುಂಭಗಳಲ್ಲಿ ತುಂಬಿ ಅಭಿಷೇಕವೆರೆದು ಅದನ್ನು ಕುಂದಿಸಿದರು.

ಅನಂತರ ಏಳು ದಿನಗಳು ಹಗಲು ಇರುಳುಗಳಲ್ಲಿ ಅಲ್ಲಿ ಅಮೃತ ಶಿಲೆಯ ಚೇತ್ಯಾಲಯವು ಚಿತ್ರಾಂಗದೆಯ ಯಶಶ್ಚೈತ್ರ ಸುರತರುವಿನಂತೆ ಬೆಳೆಯಿತು. ಅದು ಚಳಿಯಿಂದ ಹೆಪ್ಪುಗಟ್ಟಿದ ಹಾಲ್ಗಡಲಿನ ಮಂಜುಗಡ್ಡೆಯನ್ನು ಕಡಿ ಕಡಿಯುತ್ತ, ಇಟ್ಟಿಗೆಯಾಗಿ ಜೋಡಿಸುತ್ತ ಕಲ್ಪನೆಯಲ್ಲಿ ಸವಿ ನೆನಪಿನ ಮನೆಯನ್ನು ಪ್ರೀತಿಯಿಂದ ನಿರ್ಮಿಸಿದಂತಿತ್ತು. ಆ ಸ್ಮಾರಕ ನಿಕೇತನ ಸ್ತೂಪವನ್ನು ಸಹಸ್ರ ಸಹಸ್ರ ಶಿಲ್ಪಿಗಳು ಎಡೆಬಿಡದೆ ಕಟ್ಟಿದರು!

ಆ ಮೂಕ ಶೋಕದ ಶಿಲೆಯ ಸಂಗೀತವು ನೆಲದ ಪ್ರೀತಿ ತಲೆಯೆತ್ತಿ ಸಗ್ಗ ನೀಲಿಗೆ ಮುತ್ತು ಕೊಡುವಂತಿತ್ತು! ಅದು ಮಣಿಪುರದ ಜನರ ಮಹಾಜನರ ಮಹಾಸ್ಮೃತಿಯ ಸುಧಾ ಶಿವರೂಪಿಯಾಗಿ ಶೋಭಿಸುತ್ತಿತ್ತು!

❑

ಅನುಬಂಧ – 1

‘ಚಿತ್ರಾಂಗದಾ’ ಖಂಡಕಾವ್ಯದ ಮಹೋಪಮೆಗಳು

ಕುವೆಂಪು ಅವರು ಮಿಲ್ಟನ್, ಡಾಂಟೆ, ವರ್ಜಿಲ್‌ರ ಮಹಾಕಾವ್ಯಗಳನ್ನೂ ಮ್ಯಾಥ್ಯೂ ಆರ್ನಾಲ್ಡ್‌ರ ಕಥನಕಾವ್ಯವನ್ನೂ ಚೆನ್ನಾಗಿ ಅಧ್ಯಯನ ಮಾಡಿದ್ದರು. ಪುರಾಣಕವಿ ಹೋಮರನು ತನ್ನ ಕಾವ್ಯದಲ್ಲಿ ಮೊಟ್ಟಮೊದಲಿಗೆ ಮಹೋಪಮೆಗಳನ್ನು ಪ್ರಯೋಗಿಸಿರುವುದನ್ನು ತಿಳಿದಿದ್ದರು. ಅದನ್ನು ‘ಹೋಮರುಪಮೆ’ ಎಂದು ಕರೆಯುವರು. ಅಂತಹ ಮಹೋಪಮೆಯ ಪ್ರಯೋಗ ನಮ್ಮ ಭಾರತೀಯ ಕಾವ್ಯಗಳಲ್ಲಿ ಇಲ್ಲ. ‘ಪಾಶ್ಚಾತ್ಯರಲ್ಲಿ ಮಹೋಪಮೆ ಒಂದು ವಿಶೇಷ ಕಲೆಯಾಗಿ ಪರಿಣಮಿಸಿದೆ’ ಎಂದು ಹೇಳುವ ಕುವೆಂಪು ಅವರು ಕನ್ನಡ ಕಾವ್ಯದಲ್ಲಿ ಅದನ್ನು ವಿಶೇಷ ಕಲೆಯಾಗಿ ರೂಪಿಸಿ ಪ್ರಯೋಗಿಸಿದ ಪ್ರಥಮರಾಗಿದ್ದಾರೆ. ಅವರು ಮೊಟ್ಟಮೊದಲಿಗೆ ಮಹೋಪಮೆಯನ್ನು ‘ಚಿತ್ರಾಂಗದಾ’ ಖಂಡಕಾವ್ಯದಲ್ಲಿ ಪ್ರಯೋಗಕ್ಕೆ ತಂದರು. ಅದನ್ನು ‘ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ’ದಲ್ಲಿ ವಿಪುಲವಾಗಿ ಬಳಸಿದರು.

ಕುವೆಂಪು ಅವರು ಹೇಳುವಂತೆ ಮಹೋಪಮೆ ಎಂದರೆ ಮಹಾ ಉಪಮೆ. ಮಹಾ ಎಂದರೆ ದೀರ್ಘ ಎಂದಷ್ಟೇ ಅರ್ಥವಾಗದಿದ್ದರೂ ದೀರ್ಘತೆಯೂ ಅದಕ್ಕೊಂದು ಅನಿವಾರ್ಯವಾದ ಆತ್ಮ ಲಕ್ಷಣ.... ಉಪಮೆ ಮಾಡುವ ಕೆಲಸವನ್ನೆ ಮಾಡುತ್ತದೆ ಮಹೋಪಮೆ: ಇನ್ನೂ ಬೃಹತ್ತಾಗಿ, ಇನ್ನೂ ಮಹತ್ತಾಗಿ, ಪ್ರಕೃತ ವಿಷಯಕ್ಕೆ ದೂರವಾಗಿರುವುದರ ಶ್ರೀಮಂತ ಭಾವಕೋಶವನ್ನು ಪ್ರಕೃತ ವಿಷಯದ ಭಾವಕೋಶಕ್ಕೆ ಜಲಕ್ಕನೆ ತಗುಳ್ಚುವುದೇ ಉಪಮೆಯ ಕರ್ತವ್ಯ. ‘ಜಲಕ್ಕನೆ ತಗುಳ್ಚು’ವುದೆಂದರೆ ಆ ವ್ಯಾಪಾರವು ಅಪ್ರತ್ಯಕ್ಷ ಮತ್ತು ಅತಿಶೀಘ್ರ. ಅದೊಂದು ಆಧ್ಯಾತ್ಮಿಕ ರಸಾಯನ ಕ್ರಿಯೆ... ಮಾಹಾಕಾವ್ಯಗಳಿಗೆ ಮಾತ್ರ ಮಹೋಪಮೆ ಒಪ್ಪುತ್ತದೆ....ಮಹೋಪಮೆಯಲ್ಲಿ ಪರಿಣಾಮ ರಮಣೀಯತೆಯೇ ಅಗ್ರಗಣ್ಯ ಫಲ ಮತ್ತು ಪರಮಗಮ್ಯ.... ಪಾಶ್ಚಾತ್ಯರಲ್ಲಿ ಮಹೋಪಮೆ ಒಂದು ವಿಶೇಷಕಲೆಯಾಗಿ ಪರಿಣಮಿಸಿದೆ.... ನಮ್ಮ ಕಾವ್ಯದೇವಿಗೆ ಪಾಶ್ಚಾತ್ಯ ಕಾವ್ಯದೇವಿಯಿತ್ತ ಹೊಸ ಕಾಣಿಕೆ ‘ಮಹೋಪಮೆ’.1

ರಾಘವಾಂಕ ಮಹಾಕವಿಯ ‘ಹರಿಶ್ಚಂದ್ರ ಚಾರಿತ್ರ’ ಕಾವ್ಯದಲ್ಲಿಯ ಬೇಟೆಯ ವರ್ಣನೆ ಅತಿಸಹಜ. ಅದರ ನಂತರ ಅದೇ ಬಗೆಯ ಸ್ವಾನುಭವದ ಕಾಡಿನ ಬೇಟೆಯ ಚಿತ್ರಣವನ್ನು ಕನ್ನಡ ಸಾಹಿತ್ಯದಲ್ಲಿ ನೀಡಿರುವವರು ಕುವೆಂಪು. ಅವರ ಚಿತ್ರಾಂಗದಾ’

ಖಂಡಕಾವ್ಯ ಮತ್ತು 'ಶ್ರೀ ರಾಮಾಯಣದರ್ಶನಂ' ಮಹಾಕಾವ್ಯ ಹಾಗೂ ಕಾದಂಬರಿಗಳಲ್ಲಿ ಅದು ಬಣ್ಣಿತವಾಗಿರುವ ರೀತಿ ಅನನ್ಯ.

'ಚಿತ್ರಾಂಗದಾ' ಖಂಡಕಾವ್ಯದಲ್ಲಿ ಚಿತ್ರಾಂಗದೆಯನ್ನು ಕುವೆಂಪು ಪರಿಚಯಿಸುವುದು ಅವಳು ಪ್ರಾಣಿಗಳನ್ನು ಬೇಟೆಯಾಡಿ ಬಳಲಿ ಬಂದ ತರುಣಿಯಾಗಿ.

'ಕರದಿ ಬಿಲ್ಲಂ ಪಿಡಿದು, ಮೇಣುಟ್ಟು
ಮಲ್ಲಗಚ್ಚೆಯ ಪೀತವಸನಮಂ, ತಿರುಗುತಿರೆ
ಚಿತ್ರಾಂಗಿ, ಕಾನನದ ರಾಣಿ ತಾನೆಂಬವೊಲ್' (ಸಾಲು 68–70)

ಅವಳು ಕನಸಿನಲ್ಲಿ ಕಂಡ ತೇಜಸ್ವಿಯನ್ನು ನಿಜವಾಗಿ ಕಂಡಾಗ ಅವಳಲ್ಲಿ ಪ್ರಣಯಾನುರಾಗ ಕುಡಿಯೊಡೆಯುತ್ತದೆ. ಮೊದಲಿಗೆ ಅಬಲತಾ ಭಾವದಿಂದ ಹೆಣ್ತನದ ತಿಳಿವಳಿಕೆಯನ್ನು ಅನುಭವಿಸುತ್ತಾಳೆ. ಆ ತಪಸ್ವಿ ಅವಳನ್ನು ತರುಣ ಬೇಟೆಗಾರನೆಂದು ತಿಳಿದು, ಅಂಜದಿರು ಎಂದು ಹೇಳಿ ಮಾತಾಡಿಸುವನು. ಆಗ ಅವಳು ಉದ್ಧಟತನದಿಂದ ವರ್ತಿಸಿ 'ನೀನಾರೆಲೆ ತಪಸ್ವಿ' ಎಂದು ಕೇಳುವಳು. ಆಗ ಅರ್ಜುನನು,

ವೀರಕ್ಕೆ ವಿನಯಮೆಂಬುದು ಮುಡಿಯ ಮಾಣಿಕಂ;
ವಿನಯಮಿರದಿರಲದೆ ಕುಸಂಸ್ಕೃತಿ! ಕಿರಾತರೊಲ್
ಮಾತು ಮಾತಿಗೆ ಮಲೆತು ಕೆರಳಿದರಹಮ್ಮಿನಿಂ
ಕ್ಷಾತ್ರಮಲ್ತದು ಧೂರ್ತ ಲಕ್ಷಣಂ!' (ಸಾಲು 343–346)

ಎಂದು ತಿಳಿಹೇಳಿ, ತಾನು ಪಾಂಡವರ ಮಧ್ಯಮ ಅರ್ಜುನ ಎಂದು ಹೇಳುತ್ತ, ಸಿಂಹ ಗಾಂಭೀರ್ಯದಿಂದ ಸಿಂಹಾವಲೋಕನದಲ್ಲಿ ನಡೆಯುತ್ತ ಕಾಡಿನಲ್ಲಿ ಒಮ್ಮೆಗೆ ಮರೆಯಾಗುವನು. ಅರ್ಜುನ ಅವಳ ಆರಾಧನೆಯ ಮೂರ್ತಿ. ಅವನೇ ಎದುರಿಗೆ ಬಂದಿರಲು, ತಾನು ತಿಳಿಯದೆ ಮಾತಾಡಿ ತಿಳಿಗೇಡಿತನಕ್ಕೆ ಒಳಗಾದಳು. ಅವನು ಅವಳ ನಡವಳಿಕೆಯ ರೀತಿಗೆ ಬೇಸತ್ತು ವನಮಧ್ಯದಲ್ಲಿ ಮರೆಯಾದನು. ಅವಳು ದುಃಖಿತಳಾಗಿ ಮೌನದಲ್ಲಿ ನಿಟ್ಟುಸಿರು ಬಿಡುತ್ತ ಲಜ್ಜೆ ಭಯ ವಿಸ್ಮಯ ಭಾರದಿಂದ ಕುಸಿದು ಕುಗ್ಗುವಳು. ಕುವೆಂಪು ಅವರು ಆ ಸಂದರ್ಭವನ್ನು ಓರ್ವ ಬೇಟೆಗಾರನ ಚಿತ್ರಣದ ಮಹೋಪಮೆಯಲ್ಲಿ ಹೀಗೆ ವರ್ಣಿಸಿರುವರು:

'ಕೆಚ್ಚೆದೆಯ ಬೇಂಟೆಯ ಕಿರಾತಕಲಿ
ಪಶ್ಚಿಮಾದ್ರಿಯ ರುದ್ರಸಾಂದ್ರ ಭೀಷಣರುಂದ್ರ
ಘೋರ ವಿಪಿನಾಂತರದ ನಿಮ್ನೋನ್ನತಂಗಳಲಿ
ಬೆಳುಗಿನಿಂ ಬೈಗನ್ನವರಮಲೆದು, ಕಾಣದಿರೆ
ಬೇಂಟೆ, ಬೇಸರದಿಂದೆ, ತನುವಿನಾಸರದಿಂದೆ,
ಕನಲುವನ್; ಕುದಿಯುವನ್; ಬಿದಿಯ ಬಯ್ವನ್ ಬಾಯ್ಗೆ ಬಂದಂತೆ'

ಹೊತ್ತು ಇಳಿಯುತ್ತಿದ್ದಂತೆ ಹಸಿವು ಹೆಚ್ಚಿ ಬಾಣವನ್ನು ಬತ್ತಳಿಕೆಗೆ ಇಳಿಬಿಡುವನು. ಹತಾಶೆಯಿಂದ ಬಿಲ್ಲನ್ನು ಒಂದು ಕಡೆಗೆ ಎಸೆದು ಹಚ್ಚನೆಯ ಹಸುರಿನ ಮೇಲೆ ಕಾಡಿನ ತಣ್ಣೆಳಲಿನಲ್ಲಿ ಮಲಗುವನು.

ಅವನು ಹಾಗೆ ನಿದ್ರಾಸಮುದ್ರದಲ್ಲಿ ಲೀನವಾಗಿರಲು, ಹೊಟ್ಟೆ ತುಂಬ ತೃಪ್ತವಾದ ಭೀಮ ಭಯಂಕರ ಕರಡಿಯೊಂದು ಸುತ್ತಾಡುತ್ತ ಅಲ್ಲಿಗೆ ಬರುವುದು. ಅದು ಆ ಮನುಷ್ಯನ ಶರೀರವನ್ನು ಕಂಡು ಕುತೂಹಲದಿಂದ ಘೂತ್ಕರಿಸುತ್ತ ಆಘ್ರಾಣಿಸುವುದು!

ಕ್ರೂರ ಮೃಗದ ಸಿನುಗು, ಕೆಟ್ಟನಾತದ ಬಿಸಿಯುಸಿರು ಮುಖಕ್ಕೆ ತೀಡುತ್ತಿರಲು ಕರಿಯ ಬಣ್ಣದ ಕಿರಾತ ಎಚ್ಚೆತ್ತು ಕಣ್ತೆರವನು. ಹಾ, ಮುಖದ ಮೇಲಿದೆ ಹಿರಿದಾದ ಕರ್ರನೆ ಕರಡಿಯ ಮೋರೆ! ನರನು ಕಣ್ಣು ತೆರೆದ ತಕ್ಷಣ ಆ ಕಾಡು ಮೃಗ ಬೆಚ್ಚಿ ಹೂಂಕರಿಸುತ್ತ ಕಾಡಿನ ಕಡೆಗೆ ಓಡಿ, ನುಣುಚಿಕೊಂಡು ಪಕ್ಕನೆ ಅಡಗಿಕೊಂಡಿತು.

ಬೇಡನಾದರೊ ತೆರೆದ ಕಣ್ಣುಗಳನ್ನು ಮುಚ್ಚಲಾರದೆ, ಕೂಗಲಾರದೆ ಚಲಿಸಲಾರದೆ ಅತಿ ಆಶ್ಚರ್ಯದಿಂದ ಕಂಗೆಡುವನು. ಬಲವಾದ ಗ್ರಹ ಬಡಿದಂತೆ ಮರಗಟ್ಟಿ ಹೋಗುವನು. ಕರಡಿ ಹೋದ ಕಡೆಗೆ ಮಂಕು ಮರುಳಾಗಿ ಮಿಳ್ಮಿಳನೆ ನೋಡುವನು! ಹಾ! ಹಾಗೆಯೆ ತರುಣಿ ನಿಂತಳು.

ಈ ಮಹೋಪಮೆಯು ಚಿತ್ರಾಂಗದೆ ಪಾತ್ರದ ಆ ಸನ್ನಿವೇಶ, ಸಂದರ್ಭದ ಮನಸ್ಥಿತಿಯ ಗುಣಲಕ್ಷಣಗಳಿಗೆ ಪರಿಪುಷ್ಟವಾಗಿ ರೂಪಗೊಂಡಿದೆ.

ಕಿರಾತ ನಿದ್ದೆ ಹೋಗುತ್ತಿದ್ದಾಗ ನಿಜ ಕರಡಿ ಬಂದಿದೆ. ಅದು ಆಘ್ರಾಣಿಸಲು ಅವನು ಎಚ್ಚೆತ್ತು ಬದುಕಿರುವ ಸುಳಿವು ಸಿಕ್ಕಿ– ನಿಷ್ಪಂದನಾಗಿ ನೋಡುತ್ತಾನೆ. ಚಿತ್ರಾಂಗದೆ ಸದಾ ಮನದಲ್ಲಿ ಧ್ಯಾನಿಸುತ್ತಿದ್ದ ನಿಜ ಅರ್ಜುನ ಮುಂದೆ ನಿಂತಿದ್ದಾನೆ. ಅವನು ಮೂದಲಿಸಿ ಹೊರಟು ಹೋಗಲು ಅವಳು ನಿಷ್ಪಂದಳಾಗಿ ಅವನನ್ನು ನೋಡುತ್ತಾ ನಿಂತಿದ್ದಾಳೆ. ಆ ನಿಷ್ಪಂದತೆಯೆ ಸಮಾನ ಧರ್ಮ.

ಚಿತ್ರಾಂಗದೆಯ ಒಳಮನದ ಪ್ರೇಮಭಾವ ಸಂದರ್ಭವು ಉಪಮಾನಗಳಿಂದ ರಂಗಾಗಿದೆ. ಗಂಡುಡುಗೆ ಬೇಟೆಗಾರಳಾದ ಅವಳ ಆಂತರ್ಯದ ಹೆಣ್ಣಿಗೆ ಪ್ರೇಮ ಲಹರಿಯನ್ನು ಬೇಟೆಯ ಮಹೋಪಮೆಯಲ್ಲಿ ಕುವೆಂಪು ರೂಪಿಸಿರುವ ರೀತಿಯು ಮಹೋಪಮೆ ರಚನಾ ಶೈಲಿಗೆ ಕನ್ನಡದಲ್ಲಿ ಭದ್ರ ಬುನಾದಿ ಹಾಕಿದೆ.

ಚಿತ್ರಾಂಗದೆಯು ತನ್ನ ಶಿಬಿರದಲ್ಲಿ ಹೆಣ್ಣಿನ ಅಲಂಕರಣದಿಂದ ಶೃಂಗಾರಗೊಳ್ಳುತ್ತಾಳೆ. ಅರ್ಜುನನನ್ನು ಹುಡುಕುತ್ತ ಕಾಡಿಗೆ ಬರುತ್ತಾಳೆ. ಆಗ ಕತ್ತಲೆಯ ಪ್ರವಾಹ ರೊಯ್ಯರೊಯ್ಯನೆ

ಹರಿದು ಬಂದು ಇಳೆಯನ್ನು ಆವರಿಸುತ್ತದೆ. ತಕ್ಷಣ ಪೂರ್ವದ ಸಾಕಷ್ಟು ದೂರದಲ್ಲಿ ದಿಗಂತದೆಡೆಯಲ್ಲಿ ಕತ್ತಲೆಯ ಕಾಡಿನಂಚಿಗೆ ಬೆಂಕಿ ಹೊತ್ತಿತೇನೊ ಎನ್ನುವಂತೆ ಹೊನ್ನಿನ ಉರಿ ಹೊಮ್ಮಿ ತಣ್ಣಗೆ ಹಬ್ಬಿತು. ಹುಣ್ಣಿಮೆಯ ಉಣ್ಣೆ ಮುಗಿಲಿನ ಹಾಸು ಹೊಕ್ಕಿನಲ್ಲಿ ಜೊನ್ನಸಿರಿ (ಬೆಳದಿಂಗಳ ಸಂಪತ್ತು) ಹರಿಯಿತು.

'ಬೆಳ್ದಿಂಗಳಿಂಗಡಲ ಹೊನ್ ಜೊನ್ನದಲೆಗಳೆಡೆ
ಒಮ್ಮೆಯಾಸೆಯ ಪಿಂಚೆಯೌನ್ನತ್ಯದಲಿ, ಒಮ್ಮೆ
ನೈರಾಶ್ಯ ಕಂದರದ ನಿಮ್ನತೆಯೊಳೇರಿಳಿದು
ತೇಂಕಾಡಿದತ್ತಹಾ ಪ್ರೇಮ ಕಾತರ ಪೂರ್ಣ
ರಾಕೆಯ ಹೃದಯನೌಕೆ! ಕಾಮಿನಿ ಕಿರೀಟಿಯಂ
ಇಂತರಸಿ ಅಲೆಯುತಿರೆ, ದೂರ ಮರಗತ್ತಲೆಯ
ರಕ್ಕಸಿಯ ಉರಿವ ಕಣ್ಣಿಂಬಂತೆ ರಂಜಿಸಿದೆ, ಕಾಣ್
ಉರಿನಾಲಗೆಯ ನಾಟ್ಯದಿಂ ನಲಿವ ಕೆಂಬೆಂಕೆ. (ಸಾಲು 562–569)

ಓರ್ವ ಸಾಹಸದ ನಾವಿಕನು ತನ್ನ ಹಡಗಿನ ಪಡೆಯೊಡನೆ ಸಮುದ್ರಯಾತ್ರೆ ಕೈಗೊಳ್ಳುವನು. ಅವನು ಸಾಗರದಿಂದ ಆವೃತವಾದ ಈ ಧರಾಮಂಡಲವನ್ನು ಸುತ್ತಿ ಹೊಸದೇಶಗಳನ್ನು ಕಂಡು ಹಿಡಿಯುವೆನು ಎಂಬ ಉಲ್ಲಾಸ ಉಲ್ಲಾಸದಿಂದ ಹೊರಡುವನು. ಬೀಸಿ ಬರುತ್ತಿರುವ ಅನುಕೂಲಗಳಿಗೆ ಅತಿಯಾಗಿ ಉಬ್ಬಿ ಆ ತೆಪ್ಪ ಪಟಗೆದರಿಕೊಂಡು ಹಾರಾಡುವುದು. ಆ ಗಂಭೀರ ವಿಸ್ತರದ ಅಲೆಗಳಿಲ್ಲದ ನೀಲಜಲದಲ್ಲಿ ಹಡಗು ತೇಲುತ್ತ ಪಯಣ ಮಾಡಿ ಮುಂದುವರೆದು ದಿನದಿನಕ್ಕೆ ದೂರದೂರಕ್ಕೆ ಸಾಗುವುದು.

ಹಡಗಿನ ಚುಕ್ಕಾಣಿ ಹಿಡಿದವನು ಪ್ರತಿದಿನ ಹಡಗಿನ ಧ್ವಜಸ್ತಂಭದ ತುದಿಗೆ ಏರಿ, ಹೊಸನಾಡು ಕಣ್ಣಿಗೆ ಬೀಳುವುದೆಂಬ ಕಾತ್ರೈಕೆಯಿಂದ ನೋಡುವನು. ದೃಷ್ಟಿ ಹರಿಸಿ ನೋಡಿ ಬಳಲುವನು. ಅವನು ಕೆಳಗಿಳಿದು ಬರಲು ನೌಕಾಪಡೆಯ ಜನರು ಅವನ ಸುತ್ತ ಮುತ್ತಿ 'ಏನಾದರೂ ಕಂಡಿತೆ?' ಎಂದು ಕೇಳುವರು. ಅವನು ಎಂದಿನಂತೆ 'ಮೇಲೆ ನೀಲಾಕಾಶ, ಕೆಳಗೆ ನೀಲಾಂಬುಧಿ. ನೆಲದ ಚಿಹ್ನೆ ಕಾಣುತ್ತಿಲ್ಲ' ಎಂದು ಹೇಳುವನು! ಹೀಗೆ ದಿನಗಳು ಕಳೆದು. ಪಕ್ಷಪಕ್ಷಗಳು ಉರುಳಿ, ಮಾಸ ಮಾಸಗಳಾಗಿ ಹೋಗುತ್ತಿರಲು ಆಹಾರ ಸಾಮಗ್ರಿ ಕರಗಿ ಇಲ್ಲವಾಗುವ ಸ್ಥಿತಿಗೆ ಬರುವುದು. ಆಗ ಪಡೆಯವರು ಆತಂಕದಿಂದ ಬೇಸರಗೊಳ್ಳುವರು. ಬಳಲಿ ಸಾಯುತ್ತೇವೆ ಎಂಬ ಭಯದಿಂದ ಹಡಗಿನ ಒಡೆಯನ ಮೇಲೆ ಕೋಪಗೊಳ್ಳುವರು. ಹಾಗೂ ಅವನು ಹಿಂತಿರುಗಲು ಒಪ್ಪದಿರುವಾಗ ಕ್ರಾಂತಿಗೆ ಸಿದ್ಧರಾಗುವರು!

ಅದರಿಂದ ಭಯಗೊಂಡ ನೌಕೆಯ ಒಡೆಯನು ಭಗವಂತನನ್ನು ಬೇಡುತ್ತ, ಪರ್ವತದ ಸಾಲುಗಳ ದಿಕ್ಕಿನೆಡೆ ನೋಡುತ್ತಿದ್ದನು. ಆಗ ತಕ್ಷಣ, ಅತಿ ದೂರದಲ್ಲಿ

ಮಂಜು ಮಸುಕಾಗಿ, ಗಗನಾಂಬುಧಿಯ ತೀರದಲ್ಲಿ ಒಂದು ಭೂಭಾಗವು ಕಣ್ಣಿಗೆ ಕಾಣಿಸಿತು. ಅದು ಸ್ವರ್ಗದ ತುಟಿ ಮತ್ತು ಮರ್ತ್ಯದ ತುಟಿ ಚುಂಬಿಸುವ ಎಡೆಯಲ್ಲಿತ್ತು! ಅವನು ಆನಂದದಿಂದ ಮೈಮರೆತನು. ತನ್ನ ಪಡೆಯ ಜನರನ್ನು ಕೂಗಿ ಕರೆದನು. ಹರ್ಷದ ಕೃತಜ್ಞತೆಯಿಂದ ಕಣ್ಣೀರು ಹರಿಯುತ್ತಿರಲು ಮಾತಾಡದೆ ತಾನು ಕಂಡ ಕಾಣ್ಕೆಯನ್ನು ಎಲ್ಲರಿಗೂ ತೋರಿಸಿದನು.

'ಪಡಗು ಪಡೆ ಸಂತಸದಿಂದ ಹುಚ್ಚಿದ್ದು
ಕಡಲ ಮೊರೆವೆರಸಿ ಗೆಲುವಿನ ದನಿಗಳೇಳುತಿರೆ,
ಬೇಗ ಬೇಗನೆ–ಬೇಗಿ ನೂಂಕುವನು ನಾವೆಯಂ
ತಾಂ ದಿಗಂತದೆಡೆ ಸಂದರ್ಶಿಸಿದ ಮೇಲಾವನಿಯ
ಕಡೆಗಡ!' (ಸಾಲು 600–603)

ಎಂದು ಕುವೆಂಪು ಅವರು ಚಿತ್ರಾಂಗದೆ ಪಾತ್ರ ಅನುಭವಿಸುವ ಭಾವಕ್ಕೆ ತಕ್ಕಂತೆ ಒಂದು ಮಹೋಪಮೆಯನ್ನು ಸೃಷ್ಟಿಸಿದ್ದಾರೆ. ಆ ಸಾದೃಶ್ಯ ಸಂಪತ್ತು ಪರಿಣಾಮ ರಮಣೀಯವಾಗಿ ಸಹೃದಯನಿಗೆ ಅವಳ ಒಳಭಾವದ ರಸಾನಂದವನ್ನು ದರ್ಶಿಸುತ್ತದೆ.

ಅವಳ ಪ್ರೇಮ ಕಾತರ ಪೂರ್ಣ ಹೃದಯ ನೌಕೆ ತೇಲಾಡುತ್ತದೆ. ನಾವಿಕನು ನಡೆಸುವ ನೌಕೆಯು ಸಮುದ್ರದ ಅಲೆಗಳಲ್ಲಿ ತೇಲಾಡಿ ಸಾಗುತ್ತದೆ. ಇದು ಉಪಮಾನ ಉಮೇಯಗಳ ಅಭೇದವನ್ನು ಸಾಧಿಸುವುದರ ಜೊತೆಗೆ ಸಾದೃಶ್ಯವನ್ನು ಒತ್ತಿ ಹೇಳುವ ಉಪಮಾರೂಪಕವಾಗಿದೆ. ಅರ್ಜುನನನ್ನು ಕಾಣದ ನಿರಾಶೆಯಲ್ಲಿ ಚಿತ್ರಾಂಗದೆ ಇದ್ದಾಳೆ. ಮಹೋಪಮೆಯಲ್ಲಿ ಅದೇ ನಿರಾಶೆಯಲ್ಲಿ ನಾವಿಕರ ಒಡೆಯನಿದ್ದಾನೆ. ಅವಳು ದೂರದ ಮರಗತ್ತಲೆಯಲ್ಲಿ ಕೆಂಪಾದ ಉರಿ ನಾಲಗೆಯ ನಾಟ್ಯದಿಂದ ನಲಿಯುತ್ತಿರುವುದನ್ನು ಕಂಡು ನಲಿದಾಡುವಳು. ಮಹೋಪಮೆಯಲ್ಲಿ ನಾವಿಕರ ಒಡೆಯ ಗಗನಾಂಬುಧಿಯ ತೀರದಲ್ಲಿ ಒಂದು ಭೂಭಾಗ ಕಂಡ ಆನಂದದಿಂದ ಮೈಮರೆಯುವನು.

ಇಲ್ಲಿ ಕವಿ ಅವಳ ಮನದ ನಿರಾಶೆಯಿಂದ ಹೊಮ್ಮಿ ಬರುವ ಆನಂದವನ್ನು ನಿರೂಪಿಸುವಾಗ ಆ ಭವಿ ಸಾಹಚರ್ಯವನ್ನು ಹೋಲುವ ನಾವಿಕರ ಒಡೆಯನ ಘಟನೆಯನ್ನು ವಿವರಿಸಿ ಮಹೋಪಮೆಯನ್ನು ಸೃಷ್ಟಿಸಿದ್ದಾರೆ. ನಿರಾಶೆಯಿಂದ ದೂರವಾಗಿ ಆನಂದದಿಂದ ಮೈಮರೆತು ನಲಿಯುವುದು ಇಲ್ಲಿ ಸಮಾನಧರ್ಮ. ಇದೊಂದು ಸಂಪದ್ಯುಕ್ತವಾದ ಹೋಲಿಕೆ. ಈ ಮಹೋಪಮೆಯಿಂದ ಚಿತ್ರಾಂಗದೆಯ ಭಾವೋತ್ಕರ್ಷವು ಸ್ಪಷ್ಟಗೊಳ್ಳುತ್ತ ರಸಾನುಭೂತಿಯನ್ನುಂಟು ಮಾಡುತ್ತದೆ.

ಅರ್ಜುನನು ರಾತ್ರಿ ಕಳೆದು ಬೆಳಗಾಗುವಷ್ಟರಲ್ಲಿ ಚಿತ್ರಾಂಗದೆಯನ್ನು ತೊರೆದು ಹೋಗುವನು. ಅವಳು ಬೆಳಗಿನಲ್ಲಿ ಎಚ್ಚೆತ್ತು ನಲ್ಲನು ಇಲ್ಲದಿರುವುದನ್ನು ಕಂಡಳು. ಬಿರುಗಾಳಿಗೆ ಅಲೆದಾಡುವ ತರಗೆಲೆಯಂತೆ ಪ್ರಕ್ಷುಬ್ಧಗೊಂಡ ಅದರ ಸುಳಿಯಲ್ಲಿ ಸಿಲುಕಿದ

ಕ್ಷುದ್ರಹುಲ್ಲಿನ ಕಣದಂತೆ ಅವಳು ಗೊತ್ತುಗುರಿಯಿಲ್ಲದೆಯೆ ಚಿತ್ತದ ಉನ್ಮತ್ತತೆಯಿಂದ ಅಲೆದಾಡಿದಳು.

ಅವಳು ಅಸಹಾಯಕ ಮನಸ್ಥಿತಿಯಲ್ಲಿ ಬುದ್ಧಿಭ್ರಮಣೆಗೊಂಡವಳಂತೆ ವ್ಯರ್ಥವಾಗಿ ಸುತ್ತಾಡಿ ಬಳಲಿದಳು. ಅದನ್ನು ಕುವೆಂಪು ಅವರು ಭತ್ತದ ಬೆಳೆಗೆ ಬಂದ ಗಿಳಿವಿಂಡನ್ನು ಓಡಿಸಲು ಪ್ರಯತ್ನಿಸಿ ಸೋತ ಓರ್ವ ಒಕ್ಕಲಗಿತ್ತಿಯ ಮಹೋಪಮೆಯಲ್ಲಿ ಚಿತ್ರಿಸಿದ್ದಾರೆ.

‘ಪೊಲಗಾಹಿಯಬ್ಬರಿಸಿ
ದಿಕ್ಕು ದಿಕ್ಕಂಬೊಕ್ಕು ತಾನೆಳ್ಬುತಿರಲಿರದೆ
ಬೆಮರಿಳಿದು ಬಿಸುಸುಯ್ದು ಮುಡಿಬಿರ್ಚಿ ಮುನಿಸುರ್ಕಿ,
ಪಾಮರಿಯ ಬಿರುದನಿಗೆ ಕೈಪರೆಗೆ ಬಾಯ್ಪರೆಗೆ
ಕಲ್ಗವಣೆಗೊಂದಿನಿತು ಪೆಳರಿ ಗಾರಾಗುತುಂ,
ಭುರ್ರೆಂದು ಪೆರತೊಂದೆಡೆಗೆ ಪಾರಿ ಮಂಡಿಸುತೆ
ತೊಡಗಿದವಿನ್ನೊರ್ಮೆ ನಲ್ಮೇವಿಗೆ. ಕಂಡದಂ
ಪೀಡಿತ ಗ್ರಾಮ ಶ್ಯಾಮಾಂಗಿ ಕೋಪಕ್ಕಳುತೆ
ಬೈಯುತ್ತೆ ಶಪಿಸುತ್ತೆ ತೊಳಲುವಳ್ ಗದ್ದೆಯಂ
ಮರುಳಮರ್ದಳಂತೆ.’ (ಸಾಲು 1448–1457)

ಅದರ ಜೊತೆಗೆ ಕವಿಯು ಓರ್ವ ಸಹಸ್ರಕಣ್ಣುಗಳನ್ನು ಬಿಚ್ಚಿ ಪ್ರಣಯಮಯ ನರ್ತನದಲ್ಲಿದ್ದ ಪುರುಷ ನವಿಲನ್ನು ಕಂಡು, ಉಲ್ಲಾಸದಿಂದ ನೋಡುವ ಸೊಬಗನ್ನು ಮಹೋಪಮೆಯಲ್ಲಿ ಚಿತ್ರಿಸಿದ್ದಾರೆ.

‘ಸೋಲದಿರ್ಪುದೆ ನವಿಲ್ವೆಣ್ಣು ? ಕುಣಿವಿನಿಯನಂ
ವ್ಯಾಬದ್ಧ ಲಕ್ಷ್ಯದೃಷ್ಟಿಯಿನೆಳೆದು ಪೀರ್ವಂತೆ
ನೋಡುತಿರಲುತ್ಫುಲ್ಲತೋಲ್ಲಾಸದಿಂದೆ’ (ಸಾಲು 1477–1479)

ಅನಂತರ ಆ ಗಂಡು ನವಿಲು ಬೇಟೆಗಾರನ ಬಾಣಕ್ಕೆ ಬಲಿಯಾದ ದುರಂತ ಚಿತ್ರಣ ನೀಡಿ, ಹೆಣ್ಣು ನವಿಲ ಅಸಹಾಯ ಆರ್ತನಾದವನ್ನು ಬಣ್ಣಿಸುತ್ತ ಅದರ ಪ್ರಣಯ ನೃತ್ಯದ ಮೋಹ ಸಂಕಲ್ಪ ಗುಳ್ಳೆಯು ಒಮ್ಮೆಗೆ ಒಡೆದು ಹೋಯಿತು! ಎಂದು ರೂಪಕಾತ್ಮಕವಾಗಿ ವರ್ಣಿಸಿದ್ದಾರೆ. ಮಯೂರವು ಬಾಣದ ಹೊಡೆತಕ್ಕೆ ಸಾಯದೆ ನರಳುವ ದನಿ ಹೊಮ್ಮಿಸಿ ಚೀರಿಡಲು, ಯಮನ ವೇಗದಿಂದ ಅದರ ಬಳಿಗೆ ಕಪ್ಪನೆಯ ಬೇಡನು ನುಗ್ಗಿ ಬಂದನು. ಅದನ್ನು ಕಂಡು ಮಯೂರಿ ಬೆದರಿತು. ಪ್ರಾಣಭಯದಿಂದ ಪ್ರಾಣೇಶನ ಮರಣ ಮುಖವನ್ನು ಬಿಟ್ಟು ಕಂಗೆಟ್ಟು ಎದೆಗೆಟ್ಟು ಆರ್ತನಾದವನ್ನು ಮಾಡುತ್ತ ದೂರದ ಕಾನನದ ಒಳಕ್ಕೆ ಹಾರಿಹೋಯಿತು. ಕ್ರೂರ ಶಬರನು ನೋವಿನಿಂದ ಕೂಗಿಡುವ ಆ ಸುಂದರ ಮಯೂರವನ್ನು ಹಿಡಿದು ಕುತ್ತಿಗೆಯನ್ನು ಮುರಿದು ಹರ್ಷದಿಂದ

ತೆಗೆದುಕೊಂಡನು. ಅವನು 'ವರ್ಷಮೇಘವು ರಮ್ಯ ಕಾಮನಬಿಲ್ಲನ್ನು ಹೊತ್ತು ಆಗಸದಲ್ಲಿ ನಡೆಯುವಂತೆ' ನಡೆದುಹೋದನು.

'ಬೈಗು ಬರಲೊಂಟಿತನಕುರೆ ಬಳಲಿ, ಬೇಸತ್ತು,
ವಿರಹದಿಂ ಪ್ರಿಯತಮ ಸಮಾಗಮ ಪ್ರತ್ಯಾಶೆ
ಹೃದಯಮಂ ಬೇಯಿಸಲ್ಕಾ ಬೇಟೆವೆಣ್ ಸೋಗೆ
ನವಿಲುಕಲ್ಲಿಗೆ ಮರಳಿ ಬಂದು ಕರೆವುದು ಕೇಗಿ
ತನ್ನೆರೆಯನಂ. ಬರಿದೆ! ಪ್ರಾಣಪ್ರಿಯಾಣ್ಮನಂ
ಕಾಣದಿರೆ ಪೊತ್ತುವುದು ಹರಣದುರಿ. ಸುತ್ತುತಿರೆ
ಹುಚ್ಚುಗಿಚ್ಚೇರಿ ಕರೆಕರೆದು ಪತಿವಿಹಗನಂ
ಶೋಕಾತಿಭಾರದಿಂದಾ ಕೇಕಿ, ಮುಚ್ಚುವುದು
ಮೆಲ್ಲನೆ ಭುವನ ಲಿಪ್ಸು ಬದ್ಧಭ್ರುಕುಟಿರಾತ್ರಿ!' (ಸಾಲು 1499–1507)

ಹಾಗೆ ಮಯೂರ ಸತಿಯನ್ನು ಹೋಲುತ್ತ ಚಿತ್ರಾಂಗಿಯು ಸವ್ಯಸಾಚಿಯನ್ನು ಹುಡುಕುತ್ತ ಉನ್ಮತ್ತೆಯಂತೆ ಕರೆದು ಒರಲುತ್ತ ತೊಳಲಾಡುತ್ತಿದ್ದಳು. ಆಗ ಅವಳ ಕೈಯ ಬೆರಳಿನಲ್ಲಿ ರಂಜಿಸುತ್ತಿರುವ ಮುದ್ರೆಯುಂಗುರ ಕಂಡಿತು. ಅರ್ಜುನನನ್ನು ಕಾಣದೆ ಚಿತ್ರಾಂಗದೆ ತೊಳತೊಳಲಿ ತೊಳಲಿದಳು. ಬಳಲಿಕೆಯನ್ನು ಲೆಕ್ಕಿಸದೆ ಭ್ರಮೆಗೊಂಡ ರೀತಿಯಲ್ಲಿ ಕಾಡು ಬೆಟ್ಟಗಳಲ್ಲೆಲ್ಲಿಯೂ ಹಾಸುಹೊಕ್ಕಾಗಿ ಹುಡುಕಾಡಿದಳು.

ಮಹೋಪಮೆಯ ಒಕ್ಕಲುಗಿತ್ತಿಯು ಕೋಪಗೊಂಡು ಅಳುತ್ತ ಬೈಯುತ್ತ ಶಪಿಸುತ್ತ ಹುಚ್ಚು ಹಿಡಿದಂತೆ ತೊಳಲಾಡಿದಳು. ಈ ಬಗೆಯ ಭ್ರಮೆ ಆವರಿಸಿದ ತೊಳಲಾಟ ಸಮಾನ ಧರ್ಮ.

ಅಲ್ಲಿಯೆ ಚಿತ್ರಿಸಿರುವ ಇನ್ನೊಂದು ಮಹೋಪಮೆಯಲ್ಲಿ ಮಯೂರಿಯು ಪ್ರಾಣಪ್ರಿಯ ಇನಿಯನನ್ನು ಕಾಣದೆ ಪ್ರಾಣಕ್ಕೆ ಉರಿಹೊತ್ತಿದಂತೆ ಬಳಲಿತು. ಪತಿಪಕ್ಷಿಯನ್ನು ಕರೆಕರೆದು ಹುಚ್ಚುಗಿಚ್ಚೇರಿ ಸುತ್ತುತ್ತ ಕರೆಕರೆದು ಅತಿಶೋಕಭರಕ್ಕೊಳಗಾಯಿತು.

ಚಿತ್ರಾಂಗಿಯು ಸವ್ಯಸಾಚಿಯನ್ನು ಹುಡುಕುತ್ತ ಉನ್ಮತ್ತೆಯಂತೆ ಕರೆದು ಒರಲುತ್ತ ತೊಳಲಾಡುತ್ತಿದ್ದಳು. ಅವಳ ನೋವಿನ ಭಾವ ಸಾಹಚರ್ಯಕ್ಕೆ ಹೋಲುವ ಮತ್ತೊಂದು ಘಟನೆ ಮಹೋಪಮೆಯ ಮಯೂರಿಯದು. ಪತಿಯ ವಿರಹದ ನೋವಿನ ಗಹನತೆ ಸಹೃದಯತೆಯ ಭವಕೋಶವನ್ನು ಹೊಕ್ಕು ಅಲುಗಾಡಿಸುವುದು. ಇಲ್ಲಿ ಚಿತ್ರಾಂಗದೆಯ ಸಂಕಟ ಮತ್ತು ವಿರಹ ಪ್ರಕಟಿಸುವ ಮಿಶ್ರ ಮಹೋಪಮೆಯು ದೀರ್ಘವರ್ಣನೆಯಿಂದ ವಿಸ್ತಾರವಾಗಿ ಬೃಹತ್ತಾಗಿ ರೂಪುಗೊಂಡಿದೆ. ಅದರಲ್ಲಿ ಪ್ರೇಮಸತ್ಯ ಮಹತ್ತು ತನ್ನ ಪತಾಕೆಯನ್ನು ಹಾರಿಸಿ ಸಹೃದಯರನ್ನು ಕರುಣಾರ್ದ್ರವಾಗಿಸುತ್ತದೆ.

ಕುವೆಂಪು ಅವರಿಗೆ ಪಕ್ಷಿಪ್ರೇಮ, ಮನುಷ್ಯ ಪ್ರೇಮದ ನಡುವೆ ಅಭೇದ ಕಲ್ಪನೆಯಿದೆ. ಅದು ಇಲ್ಲಿ ಸಾಕಾರಗೊಂಡು ಕಾವ್ಯರೂಪ ಪಡೆದಿದೆ. ಕವಿಯು ಮಯೂರ ಸತಿಯ ವಿಷಾದವನ್ನು ಚಿತ್ರಾಂಗದೆಯ ವಿಷಾದದೊಂದಿಗೆ ಸಮೀಕರಿಸಿ ಅಭೇದ ಕಲ್ಪನೆಯ ಕಾವ್ಯಧ್ವನಿಯನ್ನು ಹೊಮ್ಮಿಸಿದ್ದಾರೆ. ಕುವೆಂಪು ಅವರೇ ಮಹೋಪಮೆಯ ಲಕ್ಷಣ ಕುರಿತು ಹೇಳಿರುವಂತೆ– ಚಿತ್ರಾಂಗದೆಯ ವಿಷಾದ ಮೇಲಿನ ಮಹೋಪಮೆಯಲ್ಲಿ ಅಪ್ರತ್ಯಕ್ಷ ಮತ್ತು ಅತಿಶೀಘ್ರವಾಗಿ ಸಹೃದಯನಿಗೆ 'ಜಲಕ್ಕನೆ ತಗಳ್ಚಿ' – ಅವನನ್ನು ಅವಳ ವಿಷಾದಭಾವದೊಂದಿಗೆ ಒಂದಾಗಿ ವಿಶೇಷ ರಸಾನುಭವಕ್ಕೆ ಒಳಗಾಗುವಂತೆ ಮಾಡುತ್ತದೆ.

ಆಕರ ಗ್ರಂಥ :

ಕುವೆಂಪು ಸಮಗ್ರ ಗದ್ಯ ಸಂಪುಟ 1., ಮಹೋಪಮೆ., ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ(ರಿ)., ಕುಪ್ಪಳಿ 2013., ಪುಟ ಸಂಖ್ಯೆ 201ರಿಂದ 213.

ಅನುಬಂಧ – 2

'ಚಿತ್ರಾಂಗದಾ' ಕಾವ್ಯ ಸೌಂದರ್ಯ

'ಸೌಂದರ್ಯವೆಂದರೆ ಚಮತ್ಕಾರ ಜನಕವಾದ ಗುಣ. ಚಮತ್ಕಾರವೆಂದರೆ ಆನಂದ ವಿಶೇಷ; ಇದಕ್ಕೆ ಸಹೃದಯರ ಹೃದಯವೇ ಪ್ರಮಾಣ' ಎಂದು ರಸಗಂಗಾಧರಕಾರ ವಿವರಿಸಿದ್ದಾನೆ. (ಭಾರತೀಯ ಕಾವ್ಯ ಮೀಮಾಂಸೆ ಪು–153) ಚಿತ್ರಾಂಗದಾ ಖಂಡಕಾವ್ಯದಲ್ಲಿ ಆ ಬಗೆಯ ಕಾವ್ಯ ಚಮತ್ಕಾರದ ಎರಡು ಆನಂದ ವಿಶೇಷಗಳು ಹೀಗಿವೆ :

ಚಿತ್ರಾಂಗದೆಯು ಒಂದು ತಿಂಗಳ ಅವಧಿಯ ಸೌಂದರ್ಯದ ಬೆಡಗನ್ನು ಮನ್ಮಥನಿಂದ ಪಡೆಯುತ್ತಾಳೆ. ಅವಳು ತಪಸ್ವಿ ಅರ್ಜುನನ ಎದುರು ಒಯ್ಯಾರದಿಂದ ಸುಳಿದಾಡಿ, ಕಂಡರೂ ಕಾಣಲಿಲ್ಲ ಎನ್ನುವಂತೆ ಹೊರಟು ಹೋಗುತ್ತಾಳೆ. ಅವಳನ್ನು ಕಂಡು ಭಾವೋದ್ರೇಕಕ್ಕೆ ಒಳಗಾದ ಕಿರೀಟಿಯು ಅವಳು ಹೊರಟ ದಾರಿಯಲ್ಲಿ ಸಾಗಿ, ಶಾಂತಿಮಯ ಶಿವದೇವಾಲಯದ ಅಂಗಣಕ್ಕೆ ಬರುತ್ತಾನೆ. ಅಲ್ಲಿ ಅವಳು ಮಲ್ಲಿಗೆಯ ಹಂಬಿನ ಬಳಿ ಪಾದದ ತುದಿ ಬೆರಳ ಮೇಲೆ ಬೆಡಗಿನಿಂದ ನಿಂತು ತೋಳೆತ್ತಿ ಹೂ ಕುಯ್ಯುತ್ತಿರುತ್ತಾಳೆ. ಅವಳು ಅವನನ್ನು ನೋಡಿ ಅವನ ಹತ್ತಿರಕ್ಕೆ ಧಾವಿಸಿ ಬರುವುದನ್ನು ಕವಿ ನವನವೀನ ನಿಸರ್ಗ ಪ್ರತಿಮೆಯಲ್ಲಿ ಹೀಗೆ ಚಿತ್ರಿಸಿದ್ದಾರೆ :

'ಕೆಸುವಿನೆಲೆ ಮೇಲೆಸೆವ ಶಿಶಿರದ ಬಿಂದು
ಗಾಳಿಗೆ ಜಗುಳ್ವಂತೆ ಪಾರ್ಥನ ಹೊರೆಗೆ ಬಂದು
ಕೈ ಜೋಡಿಸುತೆ, ನಾಣ್ಚಿ ಕೆಂಪೇರುತಿರೆ ಮೊಗಂ' (ಸಾಲು 950–952)

ಕುವೆಂಪು ಅವರು ಪಾರ್ಥನನ್ನು ಕೆಸುವಿನ ಎಲೆಯಾಗಿಯು, ಚಿತ್ರಾಂಗದೆಯನ್ನು ಶಿಶಿರದ ಬಿಂದುವಾಗಿಯೂ ಕಂಡು – ಅಂಟಿಯೂ ಅಂಟದಂತಿರುವ ಅವರ ಸಂಬಂಧವನ್ನು ಸೂಕ್ಷ್ಮವಾಗಿ ಉಪಮಾಲಂಕಾರದಲ್ಲಿ ಬಣ್ಣಿಸಿದ್ದಾರೆ. ಅವಳು ಪುಟಿದೆದ್ದು ಅವನ ಬಳಿಗೆ ಕ್ಷಣಾರ್ಧದಲ್ಲಿ ಹೋಗಿದುದನ್ನು 'ಗಾಳಿಗೆ ಜಗುಳ್ವಂತೆ' ಪದಗಳಲ್ಲಿ ತೂಗಾಡಿಸಿದ್ದಾರೆ. ಅದು ಅವನ ದರ್ಶನದಿಂದ ಗಾಳಿಯಲ್ಲಿ ಜಾರಿಹೋದ ಅವಳ ಮನಸ್ಸು ಮತ್ತು ದೇಹದ ಬಳುಕಿನ ಚಲನೆಯ ಉದ್ವೇಗವನ್ನು ರಮಣೀಯವಾಗಿ ಅಭಿವ್ಯಕ್ತಿಸುವ ವಸ್ತುಧ್ವನಿ.

ಚಿತ್ರಾಂಗದೆಯ ಪ್ರೇಮಭಾವಕ್ಕೆ ಮೈಯಾಗಿ ಅವಳ ಚಲನಶೀಲ ಆವೇಗ ಉಪಮಾಲಂಕಾರದಲ್ಲಿ ನೆಗೆದಾಡಿದೆ. ಈ ಅಲಂಕಾರ ಒಂದು ಮನೋಹರ ನೈಸರ್ಗಿಕ ಚಿತ್ರ.

* * *

ನಿದ್ರೆಯ ಆಲಿಂಗನದಲ್ಲಿದ್ದ ಚಿತ್ರಾಂಗದೆಯ ಬೆರಳಿಗೆ ಅರ್ಜುನನು ಮುದ್ರೆಯುಂಗುರವನ್ನು ತೊಡಿಸುವನು. ನಳ ದಮಯಂತಿಯನ್ನು ತೊರೆದು ಹೋದಂತೆ ಹೊರಟುಹೋಗುವನು. ಎಚ್ಚೆತ್ತ ಚಿತ್ರಾಂಗದೆಯು ತನ್ನ ಒಲ್ಮೆಯವನನ್ನು ಕಾಣದೆ ದುಃಖಿತಳಾಗುವಳು. ಆಗ ನಿಸರ್ಗದಲ್ಲಾದ ಸೂರ್ಯೋದಯವನ್ನು ವರ್ಣಿಸುತ್ತ ಕವಿ ನೆರಳನ್ನು ಚಿತ್ರಿಸಿರುವ ರೀತಿ ಕನ್ನಡ ಕಾವ್ಯದಲ್ಲಿಯೆ ವಿಶಿಷ್ಟವಾಗಿದೆ.

'ಹೊಳೆಯುತಿರ್ದುದು ಬಿಸಿಲ್;
ಬಲಿಯುತಿರ್ದುದು ನೆಳಲ ತಂಬೊಳಲ್, ಬರಬರುತ್ತೆ
ಕಳ್ತಲೆ ಕರಗಿದಂತಾಗಿ; ಏರ್ದುದು ಪೊಳ್ತು.' (ಸಾಲು 1523 – 25)

ಬಿಸಿಲು ಹೊಳೆಯುತ್ತಿತ್ತು. ನೆರಳಿನ ತಣ್ಣನೆಯ ಒಳತಿರುಳು ಬಲಿಯುತ್ತಿತ್ತು ಎಂದು ಸಹಜಾನುಭವದಲ್ಲಿ ಕಡೆದಿಟ್ಟಿದ್ದಾರೆ. (ಒಳಲು=ಒಳ ತಿರುಳು)

ನೆರಳಿನ ತಂಪಾದ ವಲಯ ಹೆಚ್ಚು ಸಾಂದ್ರವಾಗುತ್ತ ಅದರ ತಣ್ಣನೆ ಅಂತಸ್ಸತ್ವ ಗಾಢವಾದಂತೆ ಅವಳ ಒಳಮನದ ಭಾವವಿತ್ತು!

ಇಲ್ಲಿ ಕವಿ ಏನನ್ನೂ ಬೆರಸದೆ ನೆರಳಿನ ಸಹಜ ಗುಣಲಕ್ಷಣಗಳನ್ನು ಕಂಡದ್ದು ಕಂಡಂತೆ ನಿರೂಪಿಸಿದ್ದಾರೆ. ಹಾಗಾಗಿ ಇದು 'ಅಲಂಕಾರ ಸರ್ವಸ್ವ'ದಲ್ಲಿ ರುಯ್ಯಕ ಹೇಳಿರುವಂತಹ 'ಸ್ವಭಾವೋಕ್ತಿ'ಯಾಗಿದೆ. 'ಸೂಕ್ಷ್ಮವಸ್ತು ಸ್ವಭಾವಸ್ಯ ಯಥಾವತ್ ವರ್ಣನಂ ಸ್ವಭಾವೋಕ್ತಿ.'

❑

ಅನುಬಂಧ – 3

ಚಿತ್ರಾಂಗದಾ : ಪದಾರ್ಥಕೋಶ

ಅನಲ (ನಾ). ಅಗ್ನಿ, ಬೆಂಕಿ (607)

ಅನ್ನೆಗಂ (ಅ). ಆ ವರೆಗೆ; ಆ ತನಕ; ಅಲ್ಲಿಯವರೆಗೆ (192)

ಅಭಿಷವ (ನಾ). ಕರ್ಮಾಂಗವಾದ ಮಂಗಳ ಸ್ನಾನ; ಸ್ನಾನ; ಅಭಿಷೇಕ; ಪಟ್ಟಾಭಿಷೇಕ (439)

ಅಭಿರಾಮ (ಗು). ಸುಂದರವಾದ; ಮನೋಹರವಾದ (143)

ಅಭ್ರ (ನಾ). 1. ಮೋಡ; ಮುಗಿಲು 2. ಆಕಾಶ (148)

ಅರ್ಭಕ (ನಾ). ಮೊಲೆಗೂಸು; ಎಳೆಯ ಮಗು (1860)

ಅಲಂಪು (ನಾ). ಪ್ರೀತಿ; ಸಂತೋಷ; ಸಂಭ್ರಮ (1464)

ಅಲಂಪು (ನಾ). ಪ್ರೀತಿ; ಸಂತೋಷ; ಸಂಭ್ರಮ (880)

ಅಲರ್ವಳೆ (ನಾ). ಹೂವಿನ ಮಳೆ; ಪುಷ್ಪವರ್ಷ (243)

ಅಲರ್, ಅರಲ್, ಅರಳು ಅಲರು (ನಾ). ಹೂವು; ಪುಷ್ಪ (513)

ಅಲಗು (ನಾ). 1. ಕತ್ತಿ, ಚಾಕು, ಚೂರಿ ಮುಂತಾದ ಆಯುಧಗಳ ಹರಿತವಾದ ಅಂಚು, ಬಾಯಿ. 2. ಕತ್ತಿ; ಖಡ್ಗ (530)

ಅಸ್ರ (ನಾ). ರಕ್ತ (2345)

ಅಸುಗೆ, ಅಸುಕೆ (ನಾ). ಅಶೋಕ ವೃಕ್ಷ (417)

ಅಶನಿ (ನಾ). ಸಿಡಿಲು (1330)

ಅವಿಚ್ಛಿನ್ನ (ಗು). ಎಡೆಬಿಡದ; ನಿರಂತರವಾದ (1342)

ಅಳವಿಗೊಡು (ಕ್ರಿ). ಪ್ರತಿಭಟಿಸು; ಎದುರಾಗು; ಕಾಳಗಕ್ಕೆ ನಿಲ್ಲು (2077)

ಅಳುರ್, ಅಳುರು (ಕ್ರಿ). ಆವರಿಸು; ವ್ಯಾಪಿಸು; ಹರಡು (1142)

ಅಳ್ಕು, ಅಳುಕು (ಕ್ರಿ). ಹೆದರು; ಭಯಪಡು (265)

ಅಳ್ಕು, ಅಳುಕು (ಕ್ರಿ). ಹೆದರು; ಭಯಪಡು (588)

ಅಳ್ಕರು, ಅಳ್ಕರೆ (ನಾ). ಪ್ರೀತಿ; ಆದರ (1582)

ಅಳಿಪು (ನಾ). ಅತಿಯಾಸೆ; ಬಯಕೆ; ವ್ಯಾಮೋಹ (233)

ಅಳ್ಳಿರಿ (ಕ್ರಿ). ನಡುಗಿಸು; ಅಲುಗಾಡಿಸು (2430)

ಅಳ್ತಿ (ನಾ). ಪ್ರೀತಿ; ಆಸಕ್ತಿ (323)

ಅಱಿಲ್, ಅರಿಲ್, (ನಾ). ನಕ್ಷತ್ರ; ಚುಕ್ಕಿ; ತಾರೆ (23)

ಅಸಿ (ನಾ). ಕತ್ತಿ; ಖಡ್ಗ (2448)

ಅಸಿದು, ಅಸಿ, ಅಸಿಯ (ಗು). ಸಣ್ಣದಾದ; ಚಿಕ್ಕದಾದ; ತೆಳ್ಳಗಿರುವ; ಸೂಕ್ಷ್ಮವಾದ (2242)

ಅಂಬುಧಿ (ನಾ). ನೀರು ನಿಲ್ಲುವ ಸ್ಥಳ; ಸಮುದ್ರ; ಕಡಲು (1796)

ಅಂಬರ (ನಾ). 1. ಬಟ್ಟೆ; ಅರಿವೆ. 2. ಆಕಾಶ 3. ಹತ್ತಿರ; ನೆರೆಹೊರೆ; ಆಸುಪಾಸು (610)

ಅಮರ್ದು (ನಾ). ಅಮೃತ; ಸುಧೆ; ಪೀಯೂಷ (929)

ಅವ್ವಳಿಸು (ಕ್ರಿ). ಮೇಲೆ ಬೀಳು; ಆಕ್ರಮಿಸು (939)

ಅಂಜಲಿ (ನಾ). ಬೊಗಸೆ (1015)

ಅಂಡಲೆ (ಕ್ರಿ). ವ್ಯಾಪಿಸು; ಕವಿ (1565)

ಅಂಗವಟ್ಟ (ನಾ). 1. ಶರೀರ; ಮೈಕಟ್ಟು. 2. ಅಂಗಸೌಷ್ಠವ; ಸೌಂದರ್ಯ(459)

ಅಂಗಜ (ನಾ). ಮನ್ಮಥ (820)

ಅಂತರ (ಗು). ಒಳಗಿನ; ನಡುವಣ; ಮಧ್ಯದ (970)

ಅಂಚಲ, (ನಾ). (ಬಟ್ಟೆಯ, ಮುಖ್ಯವಾಗಿ ಸೀರೆಯ) ಸೆರಗು (838)

ಅಜಸ್ರಂ (ಅ). ಯಾವಾಗಲೂ; ಎಡೆಬಿಡದೆ; ಸತತವಾಗಿ (2492)

ಅರುಣ (ನಾ). ಕೆಂಪು ಬಣ್ಣ (1813)

ಅರಗುಲಿ (ನಾ). ಬೇಡ; ಬೇಟೆಗಾರ (1480)

ಅಟಮಟ, ಅಟವಟ (ನಾ). 1. ಸುಳ್ಳು; ಅಸತ್ಯ 2. ಮಿಥ್ಯೆ; ಮಾಯೆ 3. ಕಪಟ; ವಂಚನೆ (2367)

ಅಣಿ (ನಾ). ಸಿದ್ಧತೆ; ಸಜ್ಜು (590)

ಅಗಳ್ತೆ (ನಾ). ಕಂದಕ; ಅಗಳು (1559)

ಅಗುರ್ವು (ನಾ). ಭಯಂಕರತೆ; ಉಗ್ರತೆ; ಭಯ (1337)

ಅಗುರ್ವು (ನಾ). ಭಯಂಕರತೆ; ಉಗ್ರತೆ; ಭಯ (2354)

ಅತನು (ನಾ). ದೇಹವಿಲ್ಲದವನು; ಮನ್ಮಥ (417)

ಅಗ್ಗಿ, ಹಗ್ಗಿ (ನಾ). ಅಗ್ನಿ; ಬೆಂಕಿ; ಉರಿ; ಕಿಚ್ಚು (432)

ಆಸರು (ನಾ). ದಣಿವು; ಬಳಲಿಕೆ; ಆಯಾಸ (588)

ಆರ್ಪು, ಆಪು (ನಾ). ಸಾಮರ್ಥ್ಯ; ಪರಾಕ್ರಮ; ಸಾಹಸ (2187)

ಆಶಂಕೆ (ನಾ). ಭಯ; ಆತಂಕ (604)

ಆಭೀಲ, ಆಭೀಳ (ಗು). ಹೆದರಿಕೆಯನ್ನುಂಟು ಮಾಡುವ; ಭಯಂಕರವಾದ (2218)

ಆಲವಾಲ, ಆಳವಾಳ (ನಾ). ಮರದ ಬುಡದಲ್ಲಿ ನೀರು ನಿಲ್ಲುವಂತೆ ಸುತ್ತಲೂ ಕಟ್ಟುವ ಕಟ್ಟೆ; ಪಾತಿ; ಮಡಿ (298)

ಆಲಿ, ಆಳಿ (ನಾ). ಗೆಳತಿ; ಸ್ನೇಹಿತೆ; ಸಖಿ (497)

ಆಳುವೇರಿ, ಆಳ್ವೇರಿ (ನಾ). ಕೋಟೆಯ ಸುತ್ತಣ ಗೋಡೆ; ಕೋಟೆಯ ಎತ್ತರವಾದ ಗೋಡೆ (1558)

ಆಳ್ವ, ಆಣ್ಮ, ಆಮ್ಮಿ (ನಾ). ಒಡೆಯ; ಯಜಮಾನ; ಗಂಡ; ಪ್ರಭು (1994)

ಆಯತನ (ನಾ). ದೇವಾಲಯ (1405)

ಆಜಿ (ನಾ). ಯುದ್ಧ; ಕದನ (2099)

ಆರಕ್ತ (ಗು). ಪೂರ್ಣ ಕೆಂಪಾದ (34), (204)

ಆರಡಿ (ನಾ). ಆರು ಕಾಲುಗಳುಳ್ಳ ಕೀಟ; ದುಂಬಿ; ಗುಂಗೀಹುಳು, ಭ್ರಮರ (782)

ಆರ್ (ಕ್ರಿ). ಗಟ್ಟಿಯಾಗಿ ಕೂಗು; ಗರ್ಜಿಸು; ಆರ್ಭಟಿಸು; ಆರ್ದು (ಭೂತನ್ಯೂ), ಆರ್ವ (ಭವಿಕೃ) (2291)

ಆಟೋಪ (ನಾ). ದರ್ಪ, ಗರ್ವದ ಪ್ರದರ್ಶನ (117)

ಆಟಿಸು (ಕ್ರಿ). ಬಯಸು; ಆಸೆಪಡು; ಅಪೇಕ್ಷಿಸು (24)

ಆಕರ್ಣಿಸು (ಕ್ರಿ). ಕಿವಿಯಿಂದ ಕೇಳು; ಆಲಿಸು (2022)

ಆಗರ (ನಾ). ಆಧಾರವಾದ ಸ್ಥಳ; ಮೂಲಸ್ಥಾನ; ಆಶ್ರಯ; ಗಣಿ (1758)

ಆತುರ (ನಾ). ಬಲವಾದ ಆಸೆ; ಉತ್ಕಟವಾದ ಇಚ್ಛೆ (1334)

ಆರ್ತೆ (ನಾ). ಕಷ್ಟಕ್ಕೆ ಗುರಿಯಾದವಳು; ದುಃಖಿತೆ (794)

ಇರ್ಪು (ನಾ). ಹಸಿ; ತೇವ; ದ್ರವ; ರಸ; ಆರ್ದ್ರತೆ (1032)

ಇಂಬು, ಇನ್ಬು (ನಾ). 1. ಇಂಪು; ಸುಖ; ಸಂತೋಷ 2. ಪ್ರೀತಿ 3.ಸೌಕರ್ಯ; ಅನುಕೂಲತೆ; ಹಿತ 4. ಕ್ರಮ; ಸೌಂದರ್ಯ; ಸೊಗಸು; ಲೇಸು (1765)

ಇಂಗಡಲ್, ಇಂಗಡಲು, ಈಂಗಡಲ್ (ನಾ). ಕ್ಷೀರ ಸಾಗರ; ಹಾಲ್ಗಡಲು (562)

ಇಂದ್ರ ದಿಕ್ಕು, ದೇವೇಂದ್ರ ದಿಕ್ಕು (ನಾ). ಇಂದ್ರನ ದಿಕ್ಕು; ಪೂರ್ವದಿಕ್ಕು (1288)

ಇಂದ್ರಜಾಲ (ನಾ). ಯಕ್ಷಿಣೀ ವಿದ್ಯೆ; ಗಾರುಡಿ; ಕಣ್ಕಟ್ಟು; ಮೋಡಿ (1132)

ಇಕ್ಷುದಂಡ (ನಾ). ಕಬ್ಬಿನ ಬಿಲ್ಲು – ಕಬ್ಬಿನ ಜಲ್ಲೆ (1198)

ಈಂಟು (ಕ್ರಿ). ಕುಡಿ; ಹೀರು; ಪಾನಮಾಡು (1768)

ಉಬ್ಬೆಗ, ಉಬ್ಬೇಗ, ಉಬ್ಬೇಗೆ (ನಾ). ದುಃಖ; ಸಂತಾಪ; ಕ್ಷೋಭೆ (380)

ಉಬ್ಬೆಗಂಬಡು (ಕ್ರಿ). ಆತಂಕಪಡು; ದುಃಖಪಡು (482)

ಉಪಲ, ಉಪಳ (ನಾ). ಕಲ್ಲು; ಶಿಲೆ (41)

ಉಜ್ಜುಗಂಗೆಯ್, ಉಜ್ಜುಗಗೈ (ಕ್ರಿ). ಆಲೋಚಿಸು, ಕಾರ್ಯ ನಿರ್ವಹಿಸು (1783)

ಉರವಣೆ, ಉರವಣಿ (ನಾ). ಸಂಭ್ರಮ; ಸಡಗರ; ಆಟೋಪ; ಆಡಂಬರ; ಪ್ರಭಾವ (56)

ಉರೆ (ಅ). ಅತಿಶಯವಾಗಿ; ಬಹಳವಾಗಿ; ಮಹತ್ತರವಾಗಿ (461)

ಉಡೆ (ನಾ). ಉಡುಗೆ; ಬಟ್ಟೆ; ವಸ್ತ್ರ (837)

ಉತ್ಫುಲ್ಲ (ಗು). ವಿಕಾಸ ಹೊಂದಿದ; ಚೆನ್ನಾಗಿ ಅರಳಿದ (1372)

ಉಚ್ಚಳಿಸು (ಕ್ರಿ). ಹೊರಹೊಮ್ಮು; ಹೊರಬೀಳು (1855)

ಋತ (ನಾ). ಸತ್ಯ (1906)

ಎಳಸು (ಕ್ರಿ). ಬಯಸು; ಅಪೇಕ್ಷಿಸು; ಆಶಿಸು (864)

ಎರೆಯ (ನಾ). ಒಡೆಯ; ಯಜಮಾನ, ಪ್ರಭು (421)

ಎಡರು (ಕ್ರಿ). ಅಡ್ಡವಾಗಿರು; ಅಡ್ಡಿಯಾಗಿರು; ಪ್ರತಿಭಟಿಸು (438)

ಎಡರ್, ಎಡರು (ನಾ). ಅಡಚಣೆ; ಅಡ್ಡಿ; ಆತಂಕ; ಕಷ್ಟ; ವಿಪತ್ತು (2070)

ಎಡೆ (ನಾ). ಪ್ರದೇಶ; ಸ್ಥಳ; ಜಾಗ (1279)

ಎಣೆ (ನಾ). ಸಮ; ಸರಿ; ಹೊಂದಿಕೆ; ಸಾಟಿ (125)

ಎಣೆವಕ್ಕಿ (ನಾ). ಜತೆಯಾಗಿರುವ ಪಕ್ಷಿ; ಜೋಡಿಹಕ್ಕಿ; ಚಕ್ರವಾಕ (1133)

ಏಷಣ (ನಾ). ಬಾಣ (431)

ಐಸಿರಿ (ನಾ). ಸಂಪತ್ತು; ಭಾಗ್ಯ (994)

ಐತರ್ (ಕ್ರಿ). ಬರು; ಸಮೀಪಿಸು; ಬಂದು ಸೇರು (793)

ಒನಪು (ನಾ). ಬೆಡಗು; ಬಿನ್ನಾಣ; ಒಯ್ಯಾರ (1464)

ಒಳ್ನಗೆ (ನಾ). ಚೆಲುವಾದ ನಗೆ; ಮಂದಹಾಸ (137)

ಒಯ್ಯನೆ (ಅ). ಮೆಲ್ಲನೆ; ಮೃದುವಾಗಿ, ಸಾವಕಾಶವಾಗಿ (183)

ಒರೆ (ನಾ). ಹೇಳಿಕೆ; ನುಡಿ; ಮಾತು (1648)

ಒಡಲಿಚ (ನಾ). ಮನ್ಮಥ (1464)

ಒಡಂಬಡಿಸು (ಕ್ರಿ). ಒಪ್ಪಿಸು; ಸಮ್ಮತಿಸುವಂತೆ ಮಾಡು (1348)

ಒಡ್ಡೈಸು (ಕ್ರಿ). ಒಡ್ಡುವಂತೆ ಮಾಡು; ಚಾಚಿಸು (2166)

ಒಚ್ಚತಂ (ಅ). ಚೆನ್ನಾಗಿ; ಹೆಚ್ಚಾಗಿ; ಅತಿಶಯವಾಗಿ; ಎಡೆಬಿಡದೆ; ಗಾಢವಾಗಿ (1462)

ಓಕುಳಿ (ನಾ). ಉತ್ಸವ ಸಂದರ್ಭಗಳಲ್ಲಿ ಒಬ್ಬರ ಮೇಲೊಬ್ಬರು ಎರಚುವ ಬಣ್ಣದ ನೀರು (1483)

ಓ (ಕ್ರಿ). ಓತ (ಭೂತಕೃ); ಓತು (ಭೂತನ್ಯೂ), 1. ಪ್ರೀತಿಸು 2. ಸಲಹು; ರಕ್ಷಿಸು (78)

ಓಪ (ನಾ). ಪ್ರೀತಿ ಪಾತ್ರನಾದವನು; ಪ್ರಿಯಕರ; ನಲ್ಲ; ಕಾದಲ (1283)

ಕಲಾಪ (ನಾ). ನವಿಲಿನ ಗರಿ; –ಸೋಗೆ, –ಪುಚ್ಛ (1467)

ಕಲ್ಲೋಲ (ನಾ). ದೊಡ್ಡ ಅಲೆ; –ತೆರೆ, ಹೆದ್ದೆರೆ (132)

ಕರ್ದಿಂಗಳ್, ಕದ್ದಿಂಗಳು (ನಾ). ಕೃಷ್ಣಪಕ್ಷ; ಅಮಾವಾಸ್ಯೆ (906)

ಕದಿರ್, ಕದಿರು (ನಾ). 1. ಕಿರಣ 2. ಕಾಂತಿ; ಹೊಳಪು (537)

ಕನ್ನಡಿಸು (ಕ್ರಿ). ಕನ್ನಡಿಯಂತೆ ವರ್ತಿಸು, –ಪ್ರತಿಬಿಂಬಿಸು, –ಪ್ರಕಟಿಸು, –ತೋರು. (21)

ಕಪರ್ದಿ (ನಾ). ಜಡೆಗಟ್ಟಿದ ಕೂದಲುಳ್ಳವನು; ಶಿವ (434)

ಕಮ್ಮಿತು, ಕಮ್ಮಿತ್ತು (ಗು). ಒಳ್ಳೆಯ ವಾಸನೆಯುಳ್ಳ; ಸುಗಂಧದ

(ನಾ). ಪರಿಮಳ; ಸುವಾಸನೆ (1440)

ಕಲಹಂಸ, ಕಳಹಂಸ (ನಾ). ಬೂದುಬಣ್ಣದ ಪಕ್ಕಗಳಿರುವ ಹಂಸ; ಕಂದು ಬಣ್ಣದ ರೆಕ್ಕೆಯ ಅಂಚೆ (147)

ಕಲಕಂಠ, ಕಳಕಂಠ (ನಾ). ಇಂಪಾದ ಧ್ವನಿಯುಳ್ಳದ್ದು; ಕೋಗಿಲೆ (1008)

ಕಮನೀಯ (ಗು). ಸುಂದರವಾದ; ಮನೋಹರವಾದ (54)

ಕವಣೆ, ಕವಣಿ (ನಾ). ಕಲ್ಲನ್ನು ಇಟ್ಟು ತಿರುಗಿಸಿ ಬೀಸಿ ಹೊಡೆಯುವುದಕ್ಕಾಗಿ ಮಾಡಿದ ಒಂದು ಜಾಳಿಗೆಯ ಹಗ್ಗ (74)

ಕರ್ವೇಡ; ಕರ್ಬೇಡ (ನಾ). ಕರಿಯ ಬಣ್ಣದ ಕಿರಾತ; ಕಪ್ಪು ಬಣ್ಣದ ಬೇಡ (398)

ಕಯ್ಗಣ್ಮು. ಉಂಟಾಗು (893)

ಕಯ್ಗೆಯ್ಸು, ಕೆಯ್ಗೆಯ್ಸು, ಕೈಗೈಸು (ಕ್ರಿ). 1. ಸಿಂಗರಿಸು; ಅಲಂಕಾರ ಮಾಡು 2. ಅಣಿಗೊಳಿಸು; ಸಿದ್ಧಗೊಳಿಸು (863)

ಕಯ್ಗೆಯ್ (ಕ್ರಿ). ಸಿಂಗರಿಸು; ಅಲಂಕರಿಸು (419)

ಕಂಡರಿಸು (ಕ್ರಿ). ಕೆತ್ತನೆ ಕೆಲಸಮಾಡು; ಕಡೆ; ಕೊರೆದು ಮೂಡಿಸು (170)

ಕಂದರ್ಪ (ನಾ). ಕಾಮ; ಮನ್ಮಥ (1413)

ಕಂದು (ಕ್ರಿ). ಕಳೆಗುಂದು; ಮಾಸು; ಬಣ್ಣಗೆಡು (448)

ಕಾಲಾಹಿ, ಕಾಳಾಹಿ (ನಾ). ಕಾಲಸರ್ಪ; ಕೃಷ್ಣಸರ್ಪ (1326)

ಕಾಸಾರ (ನಾ). ಕೊಳ; ಸರೋವರ (315)

ಕಾಂಚಿ (ನಾ). ಹೆಂಗಸರ ನಡುಕಟ್ಟು, ಉಡೆನೂಲು; ಡಾಬು (506)

ಕಾರ್ಮುಕ (ನಾ). ಬಿಲ್ಲು; ಧನುಸ್ಸು (1961)

ಕಾಮಧನು (ನಾ). 1. ಮನ್ಮಥನ ಬಿಲ್ಲು. 2. ಮಳೆಬಿಲ್ಲು; ಇಂದ್ರ ಧನುಸ್ಸು (45)

ಕಾವರ, ಕಾವುರ, ಕಾಹುರ (ನಾ). 1. ಕ್ರೋಧ; ಕೋಪ 2. ಉದ್ವೇಗ; ರಭಸ; ಆವೇಶ (2392)

ಕಾಂಚನ (ನಾ). ಹೊನ್ನು; ಚಿನ್ನ; ಬಂಗಾರ (486)

ಕುಬೇರ (ನಾ). ಅಷ್ಟದಿಕ್ಪಾಲಕರಲ್ಲಿ ಒಬ್ಬ; ಉತ್ತರ ದಿಕ್ಕಿನ ಅಧಿಪತಿ; ಧನಪತಿ (1216)

ಕುಳಿರ್, ಕುಳಿರು (ನಾ). ಚಳಿ; ತಂಪು; ಶೈತ್ಯ (1140)

ಕುಂಭಿನಿ (ನಾ). ನೆಲ; ಭೂಮಿ; ಪೃಥ್ವಿ (1546)

ಕುಮುದಿನಿ (ನಾ). ಹೂಗಳಿಂದ ತುಂಬಿದ ನೈದಿಲೆ ಬಳ್ಳಿ; ನೈದಿಲೆಯ ಬಳ್ಳಿ (216)

ಕುಮುದ (ನಾ). 1. ಬಿಳಿಯ ನೈದಿಲೆ 2. ಕೆಂಪು ನೈದಿಲೆ; ನೀಲೋತ್ಪಲ 3. ಕೆಂಪು ತಾವರೆ; ಕೆಂದಾವರೆ (1599)

ಕುಂಚಿಕೆ (ನಾ). ಚಿತ್ರ ಬರೆಯುವುದಕ್ಕೂ ಬಣ್ಣ ತುಂಬುವುದಕ್ಕೂ ಉಪಯೋಗಿಸುವ ಕೂದಲಿನ ಕುಚ್ಚು; ಕುಂಚ (170)

ಕುಂತಲ (ನಾ). ಕೂದಲು, ತಲೆಗೂದಲು (513)

ಕುಂದು (ಕ್ರಿ). ಕುಗ್ಗು; ತಗ್ಗು; ಕೊರಗು; ಸೊರಗು; ಬಡವಾಗು; ಕ್ಷಯಿಸು. (448)

ಕುರುಪು, ಕುರುಹು (ನಾ). ಗುರುತು, ಚಿಹ್ನೆ (587)

ಕುಟಜ (ನಾ). ಬೆಟ್ಟ ಮಲ್ಲಿಗೆ; ಕೊಡಸಿಗೆ (230)

ಕುಹಕ (ನಾ). ಮೋಸ; ಕಪಟ; ವಂಚನೆ (2373)

ಕುಡು (ನಾ). ವಕ್ರವಾಗಿರುವಿಕೆ; ಬಾಗಿರುವಿಕೆ; ಕೊಂಕು; ವಕ್ರತೆ; ಡೊಂಕು. (1324)

ಕುಡ್ಯ (ನಾ). ಗೋಡೆ (1562)

ಕುಡುಮಿಂಚು (ನಾ). ಕೊಂಕಾದ ಮಿಂಚು; ಬಳ್ಳಿ ಮಿಂಚು (1324)

ಕುಡಿಮಿಂಚು (ನಾ). (ಬಳ್ಳಿಯ) ಕುಡಿಯಂತಿರುವ ಮಿಂಚು; ಕುಡಿಯೊಡೆಯುವ ಮಿಂಚು (1324)

ಕುತ್ಕೀಲ, ಕುತ್ಕೀಳ (ನಾ). ಭೂಮಿಗೆ ಕೀಲಿನಂತಿರುವುದು; ಬೆಟ್ಟ; ಪರ್ವತ (1207)

ಕೂಪಕ (ನಾ). ಕೋವೆಯ ಕಂಬ, –ಮರ; ಹಡಗಿನ ಸ್ತಂಭ (579)

ಕೂರ್ಮೊನೆ (ನಾ). ಹರಿತವಾದ ಮೊನೆ; ತೀಕ್ಷ್ಣವಾದ ತುದಿ (2353)

ಕೂಜನ (ನಾ). ಕೂಜಿತ; ಕೂಗು; ಕುಕಿಲು; ಧ್ವನಿ (220)

ಕೂರಾಳ್, ಕೂರಾಳು (ನಾ). ಕಡುಗಲಿ; ಪರಾಕ್ರಮಿ (2135)

ಕೂರಂಬು (ನಾ). ಹರಿತವಾದ ಅಂಬು; ಚೂಪಾದ ಬಾಣ (530)

ಕ್ರಂದನ (ನಾ). ಅಳುವಿಕೆ; ರೋದನ (764)

ಕ್ರಕಚ (ನಾ). ಕರಗಸ; ಗರಗಸ (1222)

ಕೃತ್ತಿಕೆ (ನಾ). ಇಪ್ಪತ್ತೇಳು ನಕ್ಷತ್ರ ರಾಶಿಗಳಲ್ಲಿ ಮೂರನೆಯದು; ಆರು ತಾರೆಗಳನ್ನೊಳಗೊಂಡ ಒಂದು ನಕ್ಷತ್ರ ಪುಂಜ (1430)

ಕರಪುಟ (ನಾ). 1. ಬೊಗಸೆ. 2. ಗೌರವಾರ್ಥವಾಗಿ ಮುಗಿದ ಕೈ; ಎರಡೂ ಕೈಗಳನ್ನು ಜೋಡಿಸುವಿಕೆ (1029)

ಕರು (ನಾ). 1. ಎರಕ ಹೊಯ್ಯುವುದಕ್ಕಾಗಿ ಮಾಡಿದ ಅಚ್ಚು; ಎರಕದಚ್ಚು; ಪಡಿಯಚ್ಚು 2. ಎರಕ ಹೊಯ್ದು ರಚಿಸಿದ ಬೊಂಬೆ; ಎರಕದ ಗೊಂಬೆ (169)

ಕರುಬು (ಕ್ರಿ). ಹೊಟ್ಟೆಕಿಚ್ಚುಪಡು; ಮತ್ಸರಿಸು; ಅಸೂಯೆಪಡು (1001)

ಕರವಾಲ, ಕರವಾಳ (ನಾ). ಕತ್ತಿ; ಖಡ್ಗ (894)

ಕರುಣಿಸು (ಕ್ರಿ). ಕನಿಕರವನ್ನು ತೋರು; ದಯೆ ತೋರು; ಅನುಗ್ರಹಿಸು (652)

ಕರೆ (ನಾ). ದಡ; ತೀರ; ಮೇರೆ; ಸೀಮೆ.

ಕರೆಗಣ್ಮು (ಕ್ರಿ). ಮೇರೆ ಮೀರು, ತುಂಬಿ ತುಳುಕು; ಸೂಸಿಹರಿ (2388)

ಕಾರ್, ಕಾರು (ನಾ). 1. ಮಳೆಗಾಲ; ವರ್ಷಾಕಾಲ 2. ಮಳೆಯ ಮೋಡ; ಮೇಘ (1326)

ಕರಿಘಟೆ (ನಾ). ಆನೆಯ ಹಿಂಡು; ಗಜಸೇನೆ (2252)

ಕಟಕ (ನಾ). ಕಡಗ, ಕೈಬಳೆ (486)

ಕಟಕ (ನಾ). ದಂಡು; ಸೈನ್ಯ (1542)

ಕಟಿ (ನಾ). ಸೊಂಟ; ನಡು (45), (2448)

ಕಟಿವ (ನಾ). ಸೊಂಟ (505)

ಕಾಕಲಿ (ನಾ). ಸೂಕ್ಷ್ಮವಾದ ಮತ್ತು ಅಸ್ಫುಟವಾದ ಮಧುರ ಧ್ವನಿ (851)

ಕಣ್ಣಿ (ನಾ). 1. ಹಗ್ಗ 2. (ದನಗಳ) ಕೊರಳಿಗೆ ಕಟ್ಟುವ ಹಗ್ಗ (899)

ಕರ್ಣಧಾರ (ನಾ). ಹಡಗಿನ ಚುಕ್ಕಾಣಿ ಹಿಡಿದಿರುವವನು; ಹಡಗಿನ ನಾವಿಕ (578)

ಕಣೆ (ನಾ). ಕೋಲು; ಸರಳು; ಬಾಣ (1444)

ಕಣ್ಬೇಟ, ಕಂಬೇಟ (ನಾ). ಕಂಡ ಕೂಡಲೇ ಮೋಹಿಸುವುದು; ಕಣ್ಣೊಲುಮೆ; ಚಕ್ಷು : ಪ್ರೀತಿ (1997)

ಕಾರ್ತಸ್ವರ (ನಾ). ಚಿನ್ನ, ಬಂಗಾರ (1566)

ಕದಂಪು, ಕದಪು (ನಾ). ಕೆನ್ನೆ; ಗಲ್ಲ; ಕಪೋಲ (1226)

ಕಾದಂಬಿನಿ (ನಾ). ಮುಗಿಲುಗಳ ಗುಂಪು; ಮೇಘಮಾಲೆ (204)

ಕೆಸವು, ಕೆಸ, ಕೆಸವೆ (ನಾ). ಅಗಲವಾದ ಎಲೆಗಳುಳ್ಳ ಹಾಗೂ ದಂಟುಳ್ಳ ಒಂದು ಬಗೆಯ ಸಸ್ಯ; ಸೇಬು ದಂಟು; ಶೇಮೆ ದಂಟು. (950)

ಕೌಶೇಯ (ನಾ). 1. ಕೋಶದಿಂದ (ರೇಷ್ಮೆ ಹುಳುವಿನ ಗೂಡಿನಿಂದ) ಬಂದದ್ದು; ರೇಷ್ಮೆನೂಲು 2. ರೇಷ್ಮೆಯ ಬಟ್ಟೆ; ಪೀತಾಂಬರ (2462)

ಕೆಳದಿ (ನಾ). ಗೆಳತಿ; ಜೊತೆಗಾತಿ; ಸಖಿ (1583)

ಕೇಸು, ಕೇಸ (ನಾ). ಕೆಂಪು; ಕೆಂಪು ಬಣ್ಣ (2265)

ಕೇಸುರಿ (ನಾ). ಕೆಂಪಾದ ಉರಿ; ಕೆಂಪು ಜ್ವಾಲೆ (2154)

ಕೇಸರ (ನಾ). (ಕೋಳಿ, ಕುದುರೆ ಅಥವಾ ಸಿಂಹದ) ಕತ್ತಿನ ಮೇಲಿರುವ ಕೂದಲು; ಆಯಾಲ (2171)

ಕೋಳುಹೋಗು (ಕ್ರಿ). ಬಲಿಯಾಗು; ತುತ್ತಾಗು (963)

ಕೋಳ್ಮಿಗ (ನಾ). ಇತರ ಪ್ರಾಣಿಗಳನ್ನು ಹಿಂಸಿಸುವ ಅಥವಾ ಅವುಗಳ ಮಾಂಸವನ್ನು ತಿಂದು ಬದುಕುವ ಮಾಂಸಾಹಾರಿ ಮೃಗ; ಕ್ರೂರಮೃಗ (397)

ಕೋರಯಿಸು, ಕೋರೈಸು (ಕ್ರಿ). (ಅತಿ ಪ್ರಕಾಶದಿಂದ) ಕಣ್ಣು ಕುಕ್ಕು, –ಚುಚ್ಚು (1564)

ಕೋತು, ಕೋದು, ಕೋ (ಕ್ರಿ). ಮಣಿ ಮೊದಲಾದುವುಗಳನ್ನು ನೂಲಿನಿಂದ ಏರಿಸು; ಪೋಣಿಸು To string (pearls, beads etc) upon a thread, to thread (Kittel)

ಕೊಂಚೆ (ನಾ). ಒಂದು ಬಗೆಯ ಪಕ್ಷಿ; ಕ್ರೌಂಚ (1671)

ಕೆಯ್ಕೊಳ್, ಕಯ್ಕೊಳ್, ಕೈ ಕೊಳು, ಕೈಗೊಳ್ (ಕ್ರಿ). ಪರಿಗ್ರಹಿಸು, ಸ್ವೀಕರಿಸು; ಅಂಗೀಕರಿಸು (486)

ಕೇಗು, ಕೇಕು (ನಾ). ನವಿಲಿನ ಕೂಗು; ಕೇಕಾರವ (718)

ಕೈಪರೆ (ನಾ). ಕೈ ಚಪ್ಪಾಳೆ (1451)

ಕೈತವ (ನಾ). ಕಪಟ; ವಂಚನೆ (973)

ಕೌರು (ಕ್ರಿ). 1. ದುರ್ಗಂಧದ ವಾಸನೆ ಬರು; ಕಟುವಾಸನೆಯಾಗು

(ನಾ). ಸುಟ್ಟವಾಸನೆ; ಕೆಟ್ಟನಾತ; ಕಂಟು (397)

ಕೌಕ್ಷೇಯ (ನಾ). ಒರೆಯ ಒಳಗೆ ಇರುವ ಕತ್ತಿ, –ಖಡ್ಗ (2449)

ಕೌಕ್ಷೇಯಕ (ನಾ). ಕತ್ತಿ; ಖಡ್ಗ (967)

ಕೌತುಕ (ನಾ). ಆಶ್ಚರ್ಯ; ಅದ್ಭುತವಾದದ್ದು; ವಿಸ್ಮಯಕರವಾದದ್ದು; ಕುತೂಹಲಕಾರಿ (642)

ಕೆರ್ಚು, ಕೆಚ್ಚು (ನಾ). ಧೈರ್ಯ; ಸಾಹಸ; ಶಕ್ತಿ (2416)

ಕಿಸಲಯ (ನಾ). ಚಿಗುರು; ಪಲ್ಲವ (893)

ಕಿಬ್ಬಿ, ಕಿಬ್ಬೆ (ನಾ). ಇಳಿಜಾರು; ಬೆಟ್ಟದ ಪಕ್ಕ, –ತಟ (103)

ಕೀಲಾಲ (ನಾ). ನೀರು; ಜಲ (576)

ಕೀಚಕ (ನಾ). ಗಾಳಿಗೆ ಧ್ವನಿಮಾಡುವ ಬಿದಿರು (1392)

ಕಿರಾತ (ನಾ). ಕಾಡು ಮೇಡುಗಳಲ್ಲಿ ವಾಸಮಾಡುವ ಜನ; ಬೇಡ; ಶಬರ (344)

ಕಿತ್ತಡಿ (ನಾ). ಋಷಿ; ಮುನಿ; ವ್ರತಿ (341)

ಖ (ನಾ). ಬಾನು; ಆಕಾಶ, ಗಗನ (1750)

ಖನನ (ನಾ). ತೋಡುವಿಕೆ; ಅಗೆತ (1091)

ಖನಿ (ನಾ). ಲೋಹ, ರತ್ನ ಮೊದಲಾದವುಗಳ ಉತ್ಪತ್ತಿ ಸ್ಥಾನ; ಗಣಿ; ಆಕರ (1090)

ಖಲೀನ (ನಾ). ಕಡಿವಾಣ (486)

ಖಮಣಿ (ನಾ). ಆಕಾಶದ ರತ್ನ; ಸೂರ್ಯ (1092)

ಗಭೀರ (ಗು). ಗಂಭೀರವಾದ; ಗಹನವಾದ; ಘನವಾದ; ಉದಾತ್ತವಾದ

(ನಾ). ಗಂಭೀರವಾದುದು; ಆಳವಾದುದು; ಗಹನವಾದುದು; ಉದಾತ್ತವಾದುದು (1762)

ಗಳಹು (ಕ್ರಿ). ಮತ್ತೆ ಮತ್ತೆ ಧ್ವನಿಮಾಡು; ಕೂಗು (219)

ಗುಲ್ಮ (ನಾ). ಕುರುಚಲು ಗಿಡಗಳ ಅಥವಾ ಸಣ್ಣ ಮರಗಳ ಗುಂಪು; ಪೊದರು (920)

ಗಾವರ (ನಾ). ಗದ್ದಲ; ಗಲಾಟೆ; ಅಬ್ಬರ (850)

ಗುಹ್ಯ (ನಾ). ಮುಚ್ಚಿಡಬೇಕಾದುದು; ಗುಟ್ಟು; ರಹಸ್ಯ (1956)

ಗುಡಿ (ನಾ). ಮನೆ; ಕುಟೀರ; ಗುಡಾರ (1765)

ಗಾಂಧರ್ವವಿಧಿ (ನಾ). ಗಾಂಧರ್ವ ವಿವಾಹ ಕ್ರಮ; ವಧೂವರರು ಪರಸ್ಪರ ಮೆಚ್ಚಿ ತಾವೇ ಮದುವೆ ಮಾಡಿಕೊಳ್ಳುವ ಕ್ರಮ (1627)

ಗಾರು (ನಾ). ಗಾಸಿ; ಗಾಬರಿ (1452)

ಗರುವ (ಗು). ಶ್ರೇಷ್ಠವಾದ; ಉತ್ತಮವಾದ (1473)

ಗಾರಾಗು. ಗಾಬರಿಗೊಳ್ಳು; ಗಾಸಿಯಾಗು

ಗಹ್ವರ (ನಾ). ಬಿಲ; ಬೆಟ್ಟದ ಗವಿ; ಗುಹೆ (128)

ಗಾಡಿ (ನಾ). ಚೆಲುವು; ಸೊಬಗು; ಬೆಡಗು (1473)

ಗಾತ್ರ (ನಾ). ಮೈ; ದೇಹ; ಶರೀರ (998)

ಗಿರು (ಕ್ರಿ). ಗೆತ್ತು (ಭೂತನ್ಯೂ). ಭಾವಿಸು; ಎಣಿಸು; ಭ್ರಮಿಸು

ಗೊತ್ತುಕೂರು (ಕ್ರಿ). ಗೂಡು ಸೇರು; ಇಕ್ಕೆಯನ್ನು ಸೇರಿಕೊಳ್ಳು (544)

ಗೈರಿಕ ವಸನಧಾರಿ (ನಾ). ಕಾವಿವಸ್ತ್ರವನ್ನು ಧರಿಸಿದವನು (1998)

ಗೀರ್ವಾಣ (ನಾ). ದೇವತೆ; ಸುರ; ಅಮರ (2478)

ಗ್ರೀವ, ಗ್ರೀವೆ (ನಾ). ಕೊರಳು; ಕಂಠ; ಕುತ್ತಿಗೆ (507)

ಘನಸಾರ (ಗು). 1. ಅತಿ ಶ್ರೇಷ್ಠವಾದ; ಅತ್ಯುತ್ತಮವಾದ 2. ಚಂದನದಂತಹ ಪರಿಮಳ ಪೂರ್ಣವಾದ ಒಂದು ಬಗೆಯ ಮರ (2461)

ಘನಿ (ನಾ). ಶ್ರೇಷ್ಠನಾದವನು; ಗಂಭೀರನಾದವನು (182)

ಘನೀಭೂತ (ಗು). ಗಟ್ಟಿಯಾದ, ಸಾಂದ್ರವಾದ; ಹೆಪ್ಪುಗಟ್ಟಿದ (861)

ಘೂರ್ಣಿಸು (ಕ್ರಿ). ಅಲ್ಲೋಲಕಲ್ಲೋಲವಾಗು; ಪ್ರಕ್ಷುಬ್ಧವಾಗು; ಚಲಿಸು; ಕ್ಷೋಭೆಗೊಳ್ಳು (1422)

ಚರಮ (ಗು). ಕಡೆಯ; ಕೊನೆಯ; ಅಂತಿಮವಾದ (1084)

ಚಕ್ಷು ಶ್ರವ (ನಾ). ಕಣ್ಣುಗಳನ್ನೇ ಕಿವಿಗಳಾಗಿ ಬಳಸಿಕೊಳ್ಳುವ ಪ್ರಾಣಿ; ಸರ್ಪ (1416)

ಚಚ್ಚರ, ಚೆಚ್ಚರ, ಚೆಚ್ಚರು (ನಾ). ಬೇಗ; ಶೀಘ್ರತೆ; ಜಾಗ್ರತೆ (626)

ಚಂಚಲಿಸು (ಕ್ರಿ). ಚಂಚಲವಾಗು; ಅಸ್ಥಿರವಾಗು; ಏಕಾಗ್ರತೆಯನ್ನು ಕಳೆದುಕೊಳ್ಳು (1327)

ಚಂದ್ರಿಕೆ (ನಾ). ಬೆಳುದಿಂಗಳು; ತಿಂಗಳ ಬೆಳಕು (825)

ಚಾಪಟಂಕೃತಿ (ನಾ). ಬಿಲ್ಲಿನ ಟೇಂಕಾರ; ಧನುಸ್ಸಿನ ಟಂಕಾರ (2254)

ಚಾರು (ಗು). ಚೆಲುವಾದ; ಸುಂದರವಾದ; ಆಹ್ಲಾದಕರವಾದ (131)

ಚೂಡ (ನಾ). (ನವಿಲು, ಹುಂಜ ಮುಂತಾದುವುಗಳ) ತಲೆಯ ಮೇಲಿನ ತುರಾಯಿ, –ಕೊಟ್ಟು (1476)

ಚೂಡ (ನಾ). ಶಿಖರ; ತುದಿ (1355)

ಚೂತ (ನಾ). ಮಾವಿನ ಮರ; ಸಹಕಾರ (273)

ಚೋದಿಸು (ಕ್ರಿ). ಪ್ರಚೋದಿಸು; ಪ್ರೇರೇಪಿಸು (730)

ಚೋಜಿಗ, ಚೋದಿಗ, ಸೋಜಿಗ (ನಾ). ಆಶ್ಚರ್ಯಕರವಾದುದು; ಚೋದ್ಯ; ವಿಚಿತ್ರವಾದುದು (1596)

ಚೋದ್ಯ (ನಾ). ಆಶ್ಚರ್ಯ; ಸೋಜಿಗ; ವಿಸ್ಮಯ (2125)

ಚೈತ್ಯಾಲಯ, ಚೈತ್ಯಾಳಯ (ನಾ). ಜೈನ ಅಥವಾ ಬೌದ್ಧ ದೇವಾಲಯ (2486)

ಛವಿ (ನಾ). ಕಾಂತಿ; ಹೊಳಪು; ಶೋಭೆ (1563)

ಜಲಧಿ, ಜಳಧಿ (ನಾ). ಕಡಲು; ಸಮುದ್ರ (1771)

ಜುಣುಗು (ಕ್ರಿ). ಜಾರಿಕೊಳ್ಳು; ನುಣುಚಿಕೊಳ್ಳು (102)

ಜರೆ (ನಾ). ಮುಪ್ಪು; ವೃದ್ಧಾಪ್ಯ (730)

ಜಟಾಜೂಟ (ನಾ). ಜಡೆಮುಡಿ; ಜಡೆಗಟ್ಟಿದ ಕೂದಲು, ಜಟಾಸಮೂಹ (422)

ಜಗುಳು (ಕ್ರಿ). 1 ಓಡಿಹೋಗು; ದೂರ ಹೋಗು. 2. ಜಾರು; ಜಾರಿಕೊಳ್ಳು 3. ಬೀಳು; ಕೆಡೆ (951)

ಜಾಂಬೂನದ (ಗು). 1. ಚಿನ್ನದಿಂದ ಮಾಡಿದ (ನಾ). ಚಿನ್ನ; ಸುವರ್ಣ (1555)

ಜಾತಿ (ನಾ). ಹುಟ್ಟು; ಜನನ (974)

ಜೊನ್ನ (ನಾ). ಚಂದ್ರನ ಬೆಳಕು; ಬೆಳುದಿಂಗಳು (556)

ಜ್ಯೋತ್ಸ್ನ, ಜ್ಯೋತ್ಸ್ನೆ (ನಾ). ಚಂದ್ರನ ಬೆಳಕು; ಬೆಳುದಿಂಗಳು (1799)

ಜೀಮೂತ (ನಾ). ಮುಗಿಲು; ಮೋಡ; ಮೇಘ (34)

ಡೆಂಕಣಿ (ನಾ). ಕೊತ್ತಳಗಳ ಮೇಲೆ ಪೊದರಿನಂತೆ ಒತ್ತೊತ್ತಾಗಿ ಅಳವಡಿಸಿ ನಿಲ್ಲಿಸುವ ಉದ್ದವಾದ ಸಬಳದಂತಹ ಒಂದು ಆಯುಧ ವಿಶೇಷ (1557)

ತಲೋದರಿ, ತಳೋದರಿ (ನಾ). ತೆಳುವಾದ ಹೊಟ್ಟೆಯುಳ್ಳ ಹೆಂಗಸು; ಕೃಶವಾದ ಉದರವುಳ್ಳವಳು; ಸುಂದರ ಸ್ತ್ರೀ (126)

ತಱಿಸಲ್, ತರಿಸಲ್ (ಕ್ರಿ). ನಿಶ್ಚಯಿಸು; ನಿರ್ಧಾರಮಾಡು; ಗಟ್ಟಿಮನಸ್ಸು ಮಾಡು; ದೃಢ ಸಂಕಲ್ಪ ಮಾಡು (2037)

ತನುಜೆ, ತನುಜಾತೆ (ನಾ). ಮಗಳು, ಪುತ್ರಿ (742)

ತನಿ (ನಾ). ಅಂದ; ಸೊಗಸು (510)

ತನಿವಣ್, ತನಿವಣ್ಣು (ನಾ). ಪಕ್ವವಾದ; ಹದವಾಗಿ ಮಾಗಿದ ಹಣ್ಣು (1177)

ತಪನ (ನಾ). ಸೂರ್ಯ (181)

ತಪನೀಯ (ನಾ). ಬಂಗಾರ; ಚಿನ್ನ, ಸುವರ್ಣ (180)

ತವಿ (ಕ್ರಿ). ಕುಂದು; ಕಡಮೆಯಾಗು (2483)

ತವಿ, ತವೆ (ಕ್ರಿ). ಕುಂದು; ಕಡಮೆಯಾಗು (731)

ತಮಿಸ್ರ (ನಾ). ಕಗ್ಗತ್ತಲೆ; ಗಾಢಾಂಧಕಾರ (610)

ತಳ್ವು, ತಳುವು, ತಳುಹು (ನಾ). ತಡ; ವಿಳಂಬ; ನಿಧಾನ (1886)

ತಳ್ (ಕ್ರಿ). ತಳ್ತ (ಭೂತಕೃ). ಹರಡು; ವ್ಯಾಪಿಸು; ಕವಿ; ಆವರಿಸು (1588)

ತಳಿರ್, ತಣಿರು, ತಳಿರು (ನಾ). ಚಿಗುರು; ಪಲ್ಲವ (1227)

ತುಱಿಲಾಳ್, ತುಳಿಲಾಳ್, ತುಳಿಲಾಳು (ನಾ). ಪರಾಕ್ರಮ ಉಳ್ಳವನು; ಶೂರ; ವೀರ (1584)

ತುಱಿಲ್ಗೆಯ್, ತುಳಿಲುಗೆಯ್, ತುಳಿಲ್ಗೆಯ್ (ಕ್ರಿ). ವಂದಿಸು; ನಮಸ್ಕರಿಸು (1584)

ತೂರ್ಯ (ನಾ). ಒಂದು ಬಗೆಯ ವಾದ್ಯ (1189)

ತೂಣೀರ (ನಾ). ಬಾಣವನ್ನು ತುಂಬುವ ಚರ್ಮದ ಚೀಲ; ಬತ್ತಳಿಕೆ (2241)

ತುರೀಯ (ಗು). ನಾಲ್ಕನೆಯ ಒಂದು ಭಾಗ; ಚತುರ್ಥ (2280)

ತಾಂಡವ (ನಾ). ಶಿವನ (ಮತ್ತು ಅವನ ಗಣಗಳ) ಉಗ್ರವಾದ ಒಂದು ಬಗೆಯ ನೃತ್ಯ (938)

ತೃಪ್ತ (ಗು). ತೃಪ್ತಿ ಹೊಂದಿದ; ತಣಿದ; ಸಂತೃಪ್ತಿಗೊಂಡ (394)

ತೃಷಿತ (ಗು). 1. ಬಾಯಾರಿದ; ನೀರಡಸಿದ. 2. ಆಸೆಯಿಂದ ಕೂಡಿರುವ; ಹಂಬಲಿಸುವ (873)

ತೇಂಕು (ಕ್ರಿ). ತೇಲು, ಮೇಲುಸಿರು; ಪರವಶಗೊಳ್ಳು (316)

ತೋಷ (ನಾ). ಆನಂದ; ಹರ್ಷ; ಸಂತೋಷ (1546)

ತೋಯದ (ನಾ). ನೀರನ್ನು ನೀಡುವುದು; ಮೋಡ; ಮುಗಿಲು (2333)

ತೋಯದ (ನಾ). ನೀರನ್ನು ನೀಡುವುದು; ಮೋಡ; ಮುಗಿಲು (504)

ತೊಡರ್ಚು (ಕ್ರಿ). ಕಟ್ಟು; ಬಂಧಿಸು (900)

ತೆಕ್ಕನೆ (ಅ). ತಕ್ಷಣ; ಕೂಡಲೆ, ಒಡನೆ (75)

ತಿಮಿರ (ನಾ). ಕತ್ತಲೆ; ಅಂಧಕಾರ (2347)

ತೀವು (ಕ್ರಿ). ತುಂಬು; ಭರ್ತಿಮಾಡು (805)

ತಿಕ್ತ (ಗು). 1. ಕಹಿಯಾದ 2. ಹರಿತವಾದ; ಚೂಪಾದ. 3. (ಆಲಂ) ಮನಸ್ಸನ್ನು ನೋಯಿಸುವ; ಅಪ್ರಿಯವಾದ (1741)

ದಿವ (ನಾ). ದೇವಲೋಕ; ಸ್ವರ್ಗ (1097)

ದಿಂಡಿರುಳ್, ದಿಂಡುರುಳು (ಕ್ರಿ). ಮರದ ಕಾಂಡದಂತೆ ನೆಲದ ಮೇಲೆ ಉರುಳು (966)

ದೀರ್ಘಿಕೆ (ನಾ). 1. ಉದ್ದವಾದ ಕೊಳ. 2. ಸರಸ್ಸು; ಕಲ್ಯಾಣಿ; ಪುಷ್ಕರಿಣಿ (644)

ದಳ್ಳುರಿ (ನಾ). ಭುಗಿಲಿಡುವ ಕಿಚ್ಚು; ದೊಡ್ಡ ಉರಿ; ಪ್ರಜ್ವಲಿಸುವ ಜ್ವಾಲೆ (2226)

ದಳ್ಳಿಸು (ಕ್ರಿ). ಉರಿಯೇಳು; ಭುಗಿಲಿಡು; ಪ್ರಜ್ವಲಿಸು; ಧಗಧಗಿಸು (2177)

ದಂಷ್ಟ್ರ (ನಾ). ಆನೆ, ಹುಲಿ, ಸಿಂಹ, ಹಂದಿ ಮೊದಲಾದುವುಗಳ ಉದ್ದವಾದ, ಹೊರಹಾಯ್ದಿರುವ ಹಲ್ಲು, ಕೋರೆಹಲ್ಲು, ದಾಡೆ (2172)

ದವಳ (ಗು). ಬಿಳಿಯ; ಬೆಳ್ಳಗಿನ (2334)

ದಾಮ (ನಾ). ನೆಲೆ; ಆಶ್ರಯ; ಬೀಡು; ಮನೆ (1136)

ದುರ್ವಾರ (ಗು). ತಡೆಯಲು ಅಶಕ್ಯವಾದ; ಸಹಿಸಲಾಗದ; ದುರ್ಭರವಾದ (2356)

ದಾಂಟುಂಗುಡಿ, ದಾಂಗುಡಿ (ನಾ). ಉದ್ದವಾದ ಕುಡಿ; ಚಾಚಿಕೊಂಡಿರುವ ಕುಡಿ (244)

ದುಕೂಲ (ನಾ). ರೇಷ್ಮೆ ಬಟ್ಟೆ; ಪಟ್ಟೆವಸ್ತ್ರ (501)

ದಾಂಗುಡಿವರಿ (ಕ್ರಿ). ಕುಡಿಹಬ್ಬು; ಮುಂದೆ ಚಾಚು (649)

ದುರ್ದಮ್ಯ, ದುರ್ದಮನೀಯ (ಗು). ನಿಗ್ರಹಿಸಲು ಅಶಕ್ಯವಾದ; ಅಧೀನಗೊಳಿಸಲು ಅಸಾಧ್ಯವಾದ (2356)

ದಾತೃ (ಗು). ದಾನ ಮಾಡುವ; ನೀಡುವ; ಕೊಡುವ (ನಾ). ಕೊಡುವವನು; ದಾನಮಾಡುವವನು (1765)

ದೊರೆ (ನಾ). ಸಮಾನ; ಎಣೆ; ಸಾಟಿ; ಸರಿ (986)

ದೌತಾಂಬರ, ಧೌತವಸ್ತ್ರ (ನಾ). ಮಡಿ, ೦ ತಿಭುಜಜ ಛಿಟಜಚಿಟಿ ಛಿಟಂಣು (2051)

ಧುನಿ (ನಾ). ನದಿ; ಹೊಳೆ (294)

ಧವಲ, ಧವಳ (ಗು). ಬಿಳಿಯ; ಶುಭ್ರವಾದ (1012)

ಧೂರ್ಜಟಿ (ನಾ). ಶಿವ; ಈಶ್ವರ (2219)

ಧುರಧೀರ (ನಾ). ಯುದ್ಧ ಮಾಡುವುದರಲ್ಲಿ ಶೂರನಾದವನು; ರಣಧೀರ. (2060)

ಧ್ವಾನ (ನಾ). ಧ್ವನಿ; ಶಬ್ದ; ನಾದ (474)

ಧರಿತ್ರಿ (ನಾ). ನೆಲ; ಭೂಮಿ; ಪೃಥ್ವಿ (1759)

ನನ್ನಿ (ನಾ). ಸಹಜವಾದುದು; ವಾಸ್ತವವಾದುದು; ಸತ್ಯ; ದಿಟ; ನಿಜ; ನಿಶ್ಚಯ (2078)

ನಳಿದೋಳ್, ನಳಿತೋಳ್, ನಳಿತೋಳು (ನಾ). ಕೋಮಲವಾದ ತೋಳು; ಮೃದುವಾದ ಬಾಹು (895)

ನಂದಿನಿ (ನಾ). ಸಂತೋಷವನ್ನುಂಟು ಮಾಡುವವಳು; ಆನಂದವನ್ನು ಕೊಡುವವಳು, ಮಗಳು (741)

ನಾಯಕನರಕ (ನಾ). ನರಕಗಳಲ್ಲಿ ಮುಖ್ಯವಾದ ನರಕ; ಭಯಂಕರವಾದ ನರಕ; ಘೋರ ನರಕ (1061)

ನಕ್ತಂಚರಿ (ನಾ). ರಾತ್ರಿಯಲ್ಲಿ ಸಂಚರಿಸುವವಳು; ರಾಕ್ಷಸಿ (628)

ನಾಣ (ನಾ). ತಿಳಿವಳಿಕೆ; ಜ್ಞಾನ; ಬುದ್ಧಿ (284)

ನಾಣಿಲಿ (ಗು). ನಾಚಿಕೆಯಿಲ್ಲದ; ಲಜ್ಜೆಯಿಲ್ಲದ (1279)

ನಾಣ್ಮೆಸಲು (ನಾ). ನಾಚಿಕೆಯಲ್ಲಿ ತೋರುವ ಪವಿತ್ರತೆ; ಪರಿಶುದ್ಧತೆಯುಳ್ಳ ನಾಚಿಕೆ (908)

ನಿಶಿತ (ಗು). ಹರಿತವಾದ; ಮಸೆದ; ಚೂಪಾದ (1655)

ನಿಶಿತಧಾರೆ (ನಾ). ಹರಿತವಾದ ಅಲಗು, –ಚೂಪಾದ ಬಾಯಿ (2277)

ನೀರ್ದಿಗುರಿ (ನಾ). ನೀರಿನ ಚಕ್ರ; ಸುಳಿ; ಜಲಾವರ್ತ (1423)

ನಿವಹ (ಗು). ಉಂಟುಮಾಡುವ; ತರುವ (ನಾ). ತಂಡ; ಗುಂಪು; ಸಮೂಹ (876)

ನಿವೇದಿಸು (ಕ್ರಿ). ಒಪ್ಪಿಸು; ಕೊಡು; ಸಮರ್ಪಿಸು (778)

ನೀರವ (ಗು). ನಿಶ್ಶಬ್ದವಾದ; ಮೌನದಿಂದ ಕೂಡಿದ (55)

ನೀರಡಸು, ನೀರಡಿಸು (ಕ್ರಿ). ನೀರನ್ನು ಬಯಸು; ಬಾಯಾರು; ತೃಷೆಯಾಗು (782)

ನೀರದ (ನಾ). ಮೋಡ; ಮೇಘ; ಮುಗಿಲು (1816)

ನೀರೇಜ (ನಾ). ನೀರಿನಲ್ಲಿ ಹುಟ್ಟಿದುದು; ತಾವರೆ; ಕಮಲ (798)

ನಿಯತಿಕೃತ (ಗು). ವಿಧಿಯಿಂದ ಮಾಡಿದ; ಅದೃಷ್ಟದಿಂದ ನೆರವೇರಿಸಿದ (1893)

ನೀಹಾರ (ನಾ). ಮಂಜು; ಹಿಮ (996)

ನಿರ್ಜರ, ನಿರ್ಝರ, ನಿರ್ಝರಿಣಿ (ನಾ). ಬೆಟ್ಟದಿಂದ ಕೆಳಕ್ಕೆ ಹರಿಯುವ ಪ್ರವಾಹ; ಬೆಟ್ಟದ ಹೊಳೆ (844)

ನಿರುತಂ, ನಿರುತ (ಅ). ದಿಟವಾಗಿ; ಸತ್ಯವಾಗಿ (267)

ನಿಕುಂಜ (ನಾ). ಬಳ್ಳಿಮಾಡ; ಲತಾಗೃಹ (1399)

ನಿಕ್ಕುಳಿಸು (ಕ್ರಿ). ಒಯ್ಯಾರದಿಂದ ಒಲೆದಾಡು; ಬೆಡಗಿನಿಂದ ಬಾಗು (945)

ನಿಡುಸರ (ನಾ). ದೊಡ್ಡ ಕೂಗು; ಗಟ್ಟಿಯಾದ ಸ್ವರ; ದೀರ್ಘಧ್ವನಿ (219)

ನಿಡುನೋಟ (ನಾ). ಒಂದೇ ಸಮನೆ ನೋಡುವ ದೃಷ್ಟಿ; ನೆಟ್ಟನೋಟ (1225)

ನಿಡುವೊನಲು (ನಾ). ದೊಡ್ಡ ಪ್ರವಾಹ (905)

ನೆಲ (ನಾ). ಭೂ ಪ್ರದೇಶ, ಭೂಮಿ; ಭೂತಳ

ನೆಲವೆಣ್, ನೆಲವೆಣ್ಣು (ನಾ). ಭೂದೇವಿ; ಭೂಮಿ (137)

ನೆಲದರಿಕೆ. ಲೋಕದಲ್ಲೆಲ್ಲಾ ಹರಡಿದ ಖ್ಯಾತಿ, –ಪ್ರಸಿದ್ಧಿ; ಜಗದ್ವಿಖ್ಯಾತಿ (1002)

ನೋಂಪಿ, ನೋಹಿ (ನಾ). ವ್ರತ; ನಿಯಮ (665)

ನೈಕ (ಗು). ಏಕವಲ್ಲದ; ಅನೇಕ; ಬಹಳ; ಹೆಚ್ಚಾದ (1311)

ನೆರಪು, ನೆರಹು, ನೆರೆಪು (ಕ್ರಿ). ಕೂಡಿಸು; ಸೇರಿಸು (2069)

ನೆರೆ (ನಾ). ಅತಿಶಯ; ಹೆಚ್ಚಳ; ಆಧಿಕ್ಯ (1214)

ನೆರೆ (ನಾ). ತುಂಬಿ ಹರಿಯುವ ನೀರು; ತುಂಬು ಪ್ರವಾಹ; ಮಹಾಪೂರ (904)

ನೆಣಗೊಬ್ಬು (ನಾ). 1. ದೇಹದಾರ್ಢ್ಯ; ಅಂಗಸೌಷ್ಠವ 2. (ಆಲಂ) ಅತಿಯಾದ ಹೆಮ್ಮೆ, –ಕೊಬ್ಬು, –ಸೊಕ್ಕು (2161)

ನೆಗಳ್, ನೆಗಳು (ಕ್ರಿ). ನಡೆದುಕೊಳ್ಳು; ವ್ಯವಹರಿಸು; ವರ್ತಿಸು (948)

ಪಸಲೆ, ಹಸಲೆ (ನಾ). 1 ಎಳೆಯ ಹುಲ್ಲು; ಹಸುರು ಹುಲ್ಲು. 2. ಹುಲ್ಲು ಬೆಳೆದ ನೆಲ; ಹುಲ್ಲುಗಾವಲು (540)

ಪಸಾಯ್ತೆ, ಪಸಾಯಿತೆ (ನಾ). ರಾಣಿಯ ಕೃಪೆಗೆ ಪಾತ್ರಳಾದವಳು (494)

ಪಸರಿಸು, ಹಸರಿಸು (ಕ್ರಿ). ವಿಸ್ತಾರವಾಗು; ವ್ಯಾಪಿಸು; ಹರಡಿಕೊಳ್ಳು (998)

ಪಸಾದ, ಹಸಾದ (ನಾ). ಅನುಗ್ರಹ; ದಯೆ (2191)

ಪಸದನಂಗೈ (ಕ್ರಿ). ಅಲಂಕರಿಸು; ಶೃಂಗಾರ ಮಾಡು (496)

ಪಲುಂಬು, ಪಲುಬು, ಹಲುಬು (ಕ್ರಿ). ದುಃಖವನ್ನು ಹೇಳಿಕೊಳ್ಳು, ತೋಡಿಕೊಳ್ಳು; ಪ್ರಲಾಪಿಸು (1411)

ಪಾಲುಗುಣ, ಫಾಲ್ಗುಣ (ನಾ). ಚಂದ್ರಮಾನ ವರ್ಷದ ಹನ್ನೆರಡನೆಯ ತಿಂಗಳು (1992)

ಪಲ್ಲವಿತ (ಗು). ಚಿಗುರಿದ; ಕುಡಿಯೊಡೆದ (272)

ಪಳುವ, ಹಳುವ, ಹಳವು, ಹಳುವು (ನಾ). ಕಾಡು; ಅರಣ್ಯ (102)

ಪಳಂಚು (ಕ್ರಿ). 1. ಚಿಮ್ಮು; ಸಿಡಿ; ಹಾರು (ನಾ). 2. ಹೊಳಪು; ಕಾಂತಿ (74)

ಪಳಿ (ನಾ). ಅನ್ಯಾಯವಾದ ಆರೋಪ; ನಿಂದೆ (1274)

ಪಂಬಲಿಸು, ಹಂಬಲಿಸು (ಕ್ರಿ). ತವಕಿಸು; ತೀವ್ರವಾಗಿ ಬಯಸು; ಹಾತೊರೆ; ಉತ್ಕಟೇಚ್ಛೆಯನ್ನು ಹೊಂದು (1410)

ಪಾಳೆಯ (ನಾ). ಪಡೆ; ಸೈನ್ಯ; ದಂಡು (35)

ಪಾಳೆಯ (ನಾ). 1. ಪಡೆ; ಸೈನ್ಯ, ದಂಡು. 2. ಸೈನ್ಯದ ಶಿಬಿರ; ದಂಡಿನ ಠಾಣ್ಯ (463)

ಪಾಮರಿ (ನಾ). ಹಳ್ಳಿಯ ಹೆಂಗಸು; ಒಕ್ಕಲಗಿತ್ತಿ (1451)

ಪಿಂಗಲ (ಗು). ಕಂದು ಬಣ್ಣದಿಂದ ಕೂಡಿದ; ಕಂದು ಬಣ್ಣದ (422)

ಪಿಂಚೆ (ನಾ). ನವಿಲು (563)

ಪೀಯೂಷ (ನಾ). 1. ಅಮೃತ; ಸುಧೆ. 2. ಹಾಲು; ಕ್ಷೀರ (1692)

ಪೀತ (ನಾ). ಅರಿಸಿನದ ಬಣ್ಣ; ಹಳದಿ (69)

ಪುಷ್ಪಾಚಯ (ನಾ). ಗಿಡಬಳ್ಳಿಗಳಿಂದ ಹೂವುಗಳನ್ನು ಬಿಡಿಸುವುದು, –ತಿರಿಯುವುದು (1136)

ಪುಷ್ಪಿತ (ಗು). ಹೂವು ಬಿಟ್ಟ; ಹೂವರಳಿದ (1204)

ಪುರುಳೆ (ನಾ). ಒಂದು ಬಗೆಯ ಪಕ್ಷಿ (1445)

ಪರ್ಯಂಕ (ನಾ). ಹಾಸುಗೆ; ಸುಪ್ಪತ್ತಿಗೆ (1145)

ಪುಟಭೇದನ, ಪುಟಭೇದ (ನಾ). ನಗರ; ಪಟ್ಟಣ (1553)

ಪಂಕೇಜ (ನಾ). ಪಂಕಜ; ಕೆಸರಿನಲ್ಲಿ ಹುಟ್ಟಿದುದು; ತಾವರೆ; ಕಮಲ. (6)

ಪಂದೆ, ಹಂದೆ (ನಾ). ಹೇಡಿ; ಅಂಜುಬುರುಕ; ಪುಕ್ಕಲ (2185)

ಪ್ಲಾವಿತ (ನಾ). ಆವೃತವಾಗುವಿಕೆ (1485)

ಪೃಥುಲ (ನಾ). ದೊಡ್ಡವನು; ಹಿರಿಯ (727)

ಪಾರ (ನಾ). ಎಲ್ಲೆ; ಗಡಿ; ಮೇರೆ, ಸೀಮೆ (1213)

ಪರಭೃತ (ನಾ). ಅನ್ಯರಿಂದ ಪೋಷಿಸಲ್ಪಟ್ಟುದು; ಕೋಗಿಲೆ (875)

ಪಾರು (ಕ್ರಿ). ವಿಚಾರ ಮಾಡು; ಯೋಚಿಸು; ಆಲೋಚನೆ ಮಾಡು (1708)

ಸಪಾರು (ಕ್ರಿ). ಬಯಸು; ಅಪೇಕ್ಷಿಸು (960)

ಪರಮೆ (ನಾ). ದುಂಬಿ; ಭ್ರಮರ (806)

ಪರಕೆ, ಹರಕೆ, ಹರಿಕೆ (ನಾ). ಆಶೀರ್ವಾದ; ಆಶೀರ್ವಚನ (1582)

ಪಾರ್ (ಕ್ರಿ). ನೋಡು; ಅವಲೋಕಿಸು (178)

ಪರಿಭೂತ (ಗು). ಅವಮಾನಗೊಳಿಸಲ್ಪಟ್ಟ; ಉಪೇಕ್ಷೆಗೊಳಗಾದ; ತಿರಸ್ಕರಿಸಲ್ಪಟ್ಟ (1280)

ಪರಿಪುಷ್ಟ (ಗು). ಪಾಲನೆಗೊಂಡ; ಪೋಷಣೆ ಹೊಂದಿದ (989)

ಪರಿಶೋಭಿತ (ಗು). ಸುಂದರವಾದ; ರಮಣೀಯವಾದ (ನಾ). ಶೋಭಿಸುವುದು; ರಮಣೀಯವಾದುದು (2462)

ಪರಿಯಿಸು, ಪರಿಸು, ಹರಿಸು (ಕ್ರಿ). ಓಡುವಂತೆ ಮಾಡು; ಓಡಿಸು; ನುಗ್ಗಿಸು (897)

ಪರಿಷತ್ತು (ನಾ). 1. ಸಭೆ, ಸಮ್ಮೇಳನ; ಗೋಷ್ಠಿ 2. ಸಂಘ; ಸಂಸ್ಥೆ 3. ಗುಂಪು; ಸಮೂಹ (155)

ಪರಿವೇಷ (ನಾ). 1. ಸುತ್ತುವರಿದಿರುವಿಕೆ, ಬಳಸಿರುವಿಕೆ. 2. ಆವರಣ; ಪರಿಧಿ; ವಲಯ (607)

ಪರಿಕರ್ಮ (ನಾ). 1. (ವಸ್ತ್ರ, ಪರಿಮಳ, ಲೇಪನ ಮುಂತಾದುವುಗಳಿಂದ) ದೇಹವನ್ನು ಅಲಂಕರಿಸಿಕೊಳ್ಳುವಿಕೆ. 2. ಶುದ್ಧಿಗೊಳಿಸುವಿಕೆ; ಸ್ವಚ್ಛಗೊಳಿಸುವಿಕೆ (2464)

ಪರಿತಾಪ (ನಾ). ಅತಿಯಾದ ದುಃಖ; ಬಹಳವಾದ ಸಂಕಟ, –ಬೇಗುದಿ (1789)

ಪರಿಘ (ನಾ). ಕಬ್ಬಿಣದ ಮೊನೆಗಳಿಂದ ಕೂಡಿದ ಗದೆ (5325)

ಪರಿಧಾನ (ನಾ). 1. (ವಸ್ತ್ರ ಮುಂತಾದುವನ್ನು) ಉಡುವುದು; ಧರಿಸುವುದು 2. ವಸ್ತ್ರ; ಉಡುಪು (2462)

ಪಟ (ನಾ). ಬಾವುಟ; ಧ್ವಜ (488)

ಪಟಗೃಹ (ನಾ). ಪಟಕುಟಿ; (ಬಟ್ಟೆಯಿಂದ ರಚಿಸಿದ) ಗುಡಾರ; ಡೇರೆ (464)

ಪಕ್ಕು (ನಾ). ಗುರಿ; ಈಡು

ಪಕ್ಕಾಗು. ಗುರಿಯಾಗು; ಒಳಗಾಗು; ಈಡಾಡು (2413)

ಪಡಿನೆಳಲು (ನಾ). ಪ್ರತಿಬಿಂಬ; ಪ್ರತಿಚ್ಛಾಯೆ; ಪಡಿಬಿಂಬ (267)

ಪಾಣಿ (ನಾ). ಕೈ; ಹಸ್ತ (2422)

ಪಾರ್ಥಿವ ಕುಲ (ನಾ). ರಾಜ ಮನೆತನ; ಅರಸು ವಂಶ (116)

ಪೆಳರ್ (ಕ್ರಿ). ಹೆದರು; ಭಯಪಡು; ಅಂಜು (1408)

ಪೊನಲ್, ಪೊನಲು, ಹೊನಲ್, ಹೊನಲು (ನಾ). 1. (ನದಿಯ) ಪ್ರವಾಹ; ನೀರೋಟ 2. ತೊರೆ; ಹೊಳೆ (551)

ಪೊಲಂಬು, ಪೊಲಬು, ಹೊಲಬು (ನಾ). ದಾರಿ; ಮಾರ್ಗ (105)

ಪೊಳ್ತರೆ (ನಾ). ಪ್ರಾತಃಕಾಲ; ಪ್ರಭಾತಸಮಯ; ಮುಂಜಾವು; ಬೆಳಗಿನ ಕಾಲ (489)

ಪ್ರೋಜ್ವಲಿಸು (ಕ್ರಿ). ಬಹಳವಾಗಿ ಉರಿ; ಪ್ರಜ್ವಲಿಸು (1101)

ಪೊರೆ, ಹೊರೆ (ನಾ). ಹತ್ತಿರ; ಬಳಿ; ಸಮೀಪ (951)

ಪೊರೆ, ಹೊರೆ (ಕ್ರಿ). ಕಾಪಾಡು; ರಕ್ಷಿಸು (1850)

ಪೊಡೆ, ಹೊಡೆ (ನಾ). 1. ಹೊಟ್ಟೆ; ಉದರ; ಒಡಲು 2. ಬಸಿರು; ಗರ್ಭ (1336)

ಪೊಗರೇಟ್, ಹೊಗರೇಳ್, ಹೊಗರೇಳು (ಕ್ರಿ). ಕಾಂತಿಯನ್ನು ಸೂಸು; ತೇಜಸ್ಸನ್ನು ಬೀರು (200)

ಪೊದರ್ವನೆ (ನಾ). ಬಳ್ಳಿಮನೆ; ಲತೆವನೆ; ಪರ್ಣಶಾಲೆ (1414)

ಪೈಜೆ (ನಾ). ಶರತ್ತು; ಕರಾರು; ಪಣ (1059)

ಪೆರೆ, ಪೆಱೆ, ಹೆರೆ (ನಾ). ಚಂದ್ರ; ಶಶಿ (903)

ಪೆರೆನೊಸಲ್, ಪೆರೆನೊಸಲು (ನಾ). ಅರ್ಧಚಂದ್ರನಾಕಾರದ ಹಣೆ (903)

ಪೆರ್ಚು (ಕ್ರಿ). ಉಕ್ಕು; ಪ್ರವಹಿಸು (1691)

ಫೂತ್ಕಾರ (ನಾ). 1. ಸಶಬ್ದವಾಗಿ ಉಸಿರು ಬಿಡುವಿಕೆ. 2. ಹಾವಿನ ಬುಸುಗುಟ್ಟುವಿಕೆ (396)

ಫಣಿವೇಣಿ (ನಾ). ಹಾವಿನಂತೆ ಜಡೆಯುಳ್ಳವಳು; ನಾಗವೇಣಿ (995)

ಫೇನ (ನಾ). ನೊರೆ, ಬುರುಗು (133)

ಪರ್ವ (ನಾ). (ಸಂತೋಷದ ಸಂದರ್ಭ, ಪುಣ್ಯಕಾಲ ಮೊದಲಾದುವುಗಳಲ್ಲಿ ಆಚರಿಸುವ) ಹಬ್ಬ; ಉತ್ಸವ (2246)

ಪ್ರಭಂಜನ (ನಾ). ಗಾಳಿ; ವಾಯು (1662)

ಪ್ರಸ್ಥಾನ (ನಾ). ಪ್ರಯಾಣ; ಯಾತ್ರೆ; ಸಂಚಾರ (1681)

ಪ್ರಸ್ತಾವ (ನಾ). ಪ್ರಸಂಗ; ಸಂದರ್ಭ (1681)

ಪ್ರಫುಲ್ಲ (ಗು). 1. ಅರಳಿದ; ವಿಕಸಿತವಾದ 2. ಪ್ರಸನ್ನವಾದ (213)

ಪ್ರಲಯ, ಪ್ರಳಯ (ನಾ). ಲಯ; ಐಕ್ಯ (858)

ಪ್ರಗ್ರಹ (ನಾ). ಹಗ್ಗ; ರಜ್ಜು (937)

ಪ್ರತ್ಯಾಶೆ (ನಾ). ಒಂದು ವಸ್ತುವು ತನಗೆ ದೊರಕುವುದೆಂಬ ಭರವಸೆ; ಇಷ್ಟವಾದ ವಸ್ತುವಿನ ನಿರೀಕ್ಷಣೆ (1500)

ಪ್ರತೀತಿ (ನಾ). ಕರ್ಣ ಪರಂಪರೆಯಿಂದ ಬಂದಿರುವ ಸಂಗತಿ; ಜನಶ್ರುತಿ; ಜನಜನಿತವಾದ ವೃತ್ತಾಂತ (1999)

ಬೆರ್ಚು, ಬೆಚ್ಚು (ಕ್ರಿ). ಹೆದರು; ಭಯಪಡು (642)

ಬಲ್ಮೆ, ಬಲುಮೆ (ನಾ). ಬಲ; ಶಕ್ತಿ; ಸಾಮರ್ಥ್ಯ; ಪರಾಕ್ರಮ (6294)

ಬರ್ಹಿ (ನಾ). ನವಿಲು; ಮಯೂರ (1446)

ಬಹಿತ್ರ, ಬಾಹಿತ್ರ, ಬೈತ್ರ, ಭೈತ್ರ (ನಾ). ತೆಪ್ಪ; ಹರಿಗೋಲು (575)

ಬಲ್ಪು, ಬಲುಪು, ಬಲುಹು (ನಾ). ಬಲ, ಶಕ್ತಿ; ಸಾಮರ್ಥ್ಯ, ಪರಾಕ್ರಮ (776)

ಬಲ್ಗರ, ಬಲುಗರ (ನಾ). ಬಲವಾದ ಗ್ರಹ (404)

ಬಳಸು (ಕ್ರಿ). ಸುತ್ತುವರಿ; ಸುತ್ತುಗಟ್ಟು (1587)

ಬಳ್ಳಿಕ್ಕು (ಕ್ರಿ). ನಾಯಿ, ನರಿ ಮೊದಲಾದುವು ಅರಚು, –ಬಗುಳು, –ಊಳಿಡು (2180)

ಬಸಿ (ಕ್ರಿ). ಬಸಿದು (ಭೂತಕೃ). ಒಸರು; ಸ್ರವಿಸು; ಜಿನುಗು (1267)

ಬಂಡು (ನಾ). ಜೇನು; ಮಕರಂದ; ಮಧು (781)

ಬಂಡುಣಿ (ನಾ). ಹೂವಿನ ರಸವನ್ನು ಆಹಾರವಾಗಿ ಉಳ್ಳುದು; ದುಂಬಿ (711)

ಬುದ್ಬುದ (ನಾ). ನೀರಿನ ಮೇಲಿನ ಗುಳ್ಳೆ; ಬೊಬ್ಬುಳಿ (203)

ಬಂಧುರ (ಗು). ಚೆಲುವಾದ; ಸುಂದರವಾದ (208)

ಬಜ್ಜರ (ನಾ). 1. ನವರತ್ನಗಳಲ್ಲಿ ಒಂದು; ವಜ್ರ; ಹೀರ 2. ಇಂದ್ರನ ಆಯುಧ; ವಜ್ರಾಯುಧ (195)

ಬೃಂಹಿತ (ನಾ). ಆನೆಯ ಘೀಳು (473), (2252)

ಬೃಂದಾರಕ (ಗು). ದೇವಲೋಕಕ್ಕೆ ಸೇರಿದ; ಸ್ವರ್ಗದ (2457)

ಬಹುಲ, (ಗು). ಅನೇಕ; ಯಥೇಷ್ಟ (2256)

ಬಣಗು (ಗು). ಕೆಲಸಕ್ಕೆ ಬಾರದ; ಅಪ್ರಯೋಜಕನಾದ (769)

ಬದ್ಧಭ್ರುಕುಟಿ (ನಾ). ಗಂಟಿಕ್ಕಿದ ಹುಬ್ಬು; ಹುಬ್ಬುಗಂಟು (1507)

ಬಿಸುಗದಿರ, ಬೆಂಗದಿರ (ನಾ). ಬಿಸಿಯಾದ ಕಿರಣಗಳುಳ್ಳವನು; ಸೂರ್ಯ (807)

ಬಿನದ (ನಾ). 1. ವಿನೋದ; ತಮಾಷೆ. 2. ಆಟ; ವಿಹಾರ; ಕ್ರೀಡೆ (1139)

ಬೀ, ಬೀಗು, ಬೀಯ (ಕ್ರಿ), ಭೀತ (ಭೂತಕೃ), ಬೀತು (ಭೂತನ್ಯೂ). (ಮರಗಿಡಗಳಲ್ಲಿ ಹಣ್ಣು, ಹೂವು ಮೊದಲಾದುವು ಬಿಡುವುದು) ನಿಂತು ಹೋಗು; ಕೊನೆಗೊಳ್ಳು (2036)

ಬಿಂಬಾಧರೆ (ನಾ). ತೊಂಡೆಯ ಹಣ್ಣಿನಂತೆ ಕೆಂಪಾದ ತುಟಿಯುಳ್ಳವಳು (1146)

ಬಿಂಬ (ನಾ). ಸೂರ್ಯ ಅಥವಾ ಚಂದ್ರನ ಸುತ್ತಲೂ ಇರುವ ಪ್ರಭಾವಲಯ, –ಪರಿವೇಷ (1222)

ಬಿಜ್ಜಣ (ನಾ). ಬೀಸಣಿಕೆ; ವೀಜನ; ಪಂಕ (1184)

ಬಿಣ್ಪು (ನಾ). ಭಾರ; ಒಜ್ಜೆ; ತೂಕ (713)

ಭೀಷ್ಮ (ಗು). ಭಯವನ್ನುಂಟು ಮಾಡುವ; ಭಯಂಕರವಾದ (57)

ಭೀಮ (ಗು). ಹೆದರಿಕೆಯನ್ನುಂಟು ಮಾಡುವ; ಭೀಕರವಾದ; ಅಂಜಿಕೆಯನ್ನುಂಟು ಮಾಡುವ (60), (1063)

ಬಿಗುರ್, ಬಿಗುರು (ಕ್ರಿ). ಬಿಗುರ್ತ (ಭೂತಕೃ), ಬಿಗುರ್ತು (ಭೂತನ್ಯೂ). ಬಿಗುರ್ಪ, ಬಿಗುರ್ವ (ವರ್ತಕೃ). 1. ಹೆದರು; ಅಂಜು; ಭಯಪಡು. 2. ಕುಗ್ಗು; ಕುಸಿ; ಸೊರಗು (491)

ಬಾಲಾತಪ (ನಾ). ಆಗತಾನೆ ಉದಯವಾದ ಸೂರ್ಯನ ಬೆಳಕು; ಎಳೆಬಿಸಿಲು; ಬಲಿಯದಿರುವ ಬಿಸಿಲು (182)

ಬಾಂಬೊಜ್ಜ (ನಾ). ಆಕಾಶದ ನದಿ; ದೇವಗಂಗೆ (1673)

ಬಾಯ್ಗೂಡು, ಬಾಯಿಗೂಡು (ಕ್ರಿ). ಮುದ್ದಿಸು; ಚುಂಬಿಸು (1415)

ಬಾಯ್ಪರೆ (ನಾ). ಬಾಯಿಯಿಂದ ಮಾಡುವ ಶಬ್ದ; ಬೊಬ್ಬೆ (1451)

ಬಾಯ್ದೆರೆ (ನಾ). ತುಟಿ; ಅಧರ (1172)

ಬಾಗಿಲ್ವಾಡ, ಬಾಗಿಲುವಾಡ (ನಾ). ಹೆಬ್ಬಾಗಿಲು; ಪುರದ್ವಾರ; ಗೋಪುರ (933)

ಬಿತ್ತರಿಸು (ಕ್ರಿ). ವಿಸ್ತರಿಸು; ಹರಡು (1880)

ಬಿತ್ತಿ, ಭಿತ್ತಿ (ನಾ). ಗೋಡೆ (1150)

ಬೆಳ್ಮಿಗ (ನಾ). ಒಂದು ಬಗೆಯ ಜಿಂಕೆ; ಚಿಗರೆ (878)

ಬೇಂಟ, ಬೇಟ (ನಾ). 1. ಹೆಣ್ಣು ಗಂಡುಗಳಲ್ಲಿ ಪರಸ್ಪರ ಉಂಟಾಗುವ ಮೋಹ, ಪ್ರಣಯ; ಪ್ರೀತಿ. 2. ಆಕರ್ಷಣೆ; ಸೆಳೆತ (266)

ಬೋಳೈಸು (ಕ್ರಿ). ಸಮಾಧಾನ ಮಾಡು; ಸಂತೈಸು (2169)

ಭಾವಿಸು (ಕ್ರಿ). ನೆನಪು ಮಾಡಿಕೊಳ್ಳು; ಜ್ಞಾಪಿಸಿಕೊಳ್ಳು; ಸ್ಮರಿಸು (1534)

ಭರ್ಮ (ನಾ). ಬಂಗಾರ; ಚಿನ್ನ (488)

ಭಾವಜ (ನಾ). ಮನಸ್ಸಿನಲ್ಲಿ ಜನಿಸಿದವನು; ಮನ್ಮಥ; ಕಾಮ (721)

ಭೂಷಿತ (ಗು). ಅಲಂಕೃತವಾದ (2463)

ಭ್ರೂಭಂಗ, ಭ್ರುಕುಟಿ ಭ್ರೂಭ್ರುಕುಟಿ (ನಾ). (ಕೋಪ ಮೊದಲಾದ ಕಾರಣದಿಂದ ಉಂಟಾಗುವ) ಹುಬ್ಬುಗಂಟು (1549)

ಭೂಜ (ನಾ). ಭೂಮಿಯಲ್ಲಿ ಹುಟ್ಟುವುದು; ಮರ; ಗಿಡ; ವೃಕ್ಷ (62)

ಭೂಧರ (ನಾ). ಬೆಟ್ಟ; ಪರ್ವತ (1310)

ಭೋಂಕನೆ (ಅ). ಒಂದು ಅನುಕರಣಾವ್ಯಯ; ತಟ್ಟನೆ; ಬೇಗನೆ. (249)

ಭೋಗ (ನಾ). ನಾಡಿನ ಒಂದು ಭಾಗ; –ಪ್ರದೇಶ; ಮಂಡಲ (162)

ಭಿಂಡಿವಾಲ, ಭಿಂಡಿವಾಳ (ನಾ). ಕೈಯಿಂದ ಎಸೆಯುವ ಸಣ್ಣ ಭಲ್ಲೆಯಂತಹ ಆಯುಧ (2244)

ಮಲರ್, ಮರಲ್, ಮಲರು (ನಾ). ಹೂವು; ಪುಷ್ಪ (518)

ಮನ್ನೆಯ (ನಾ). 1. ಗೌರವ; ಮರ್ಯಾದೆ. 2. ಗೌರವಕ್ಕೆ ಪಾತ್ರನಾದವನು; ಮನ್ನಣೆಗೆ ಯೋಗ್ಯನಾದವನು (480)

ಮನ್ನೆಯ, ಮಣೆಯ, ಮನ್ನೆ (ನಾ). 1. ಗೌರವ; ಮರ್ಯಾದೆ. 2. ಗೌರವಕ್ಕೆ ಪಾತ್ರನಾದವನು; ಮನ್ನಣೆಗೆ ಯೋಗ್ಯನಾದವನು, ಮಾನ್ಯ (2104)

ಮಲೆ (ಕ್ರಿ). ಉದ್ಧಟತನದಿಂದ ಕೂಡಿರು, ಬೀಗು, ಗರ್ವಿಸು (329)

ಮಲೆ (ಕ್ರಿ). ಎದುರಿಸು; ಪ್ರತಿಭಟಿಸು; ಇದಿರು ಬೀಳು (2077)

ಮಸುಳ್, ಮಸುಳು (ಕ್ರಿ). ಕಾಂತಿಹೀನವಾಗು; ಮಂಕಾಗು (609)

ಮಸಗು (ಕ್ರಿ). 1. ಹೆಚ್ಚಾಗು; ಅತಿಯಾಗು; ಅಧಿಕಗೊಳ್ಳು. 2. ಕ್ಷೋಭೆಗೊಳ್ಳು; ಉಕ್ಕೇರು (326)

ಮಿಕ್ಕು (ಕ್ರಿ). ಮೀರು; ಅತಿಕ್ರಮಿಸು (76)

ಮಿಥುನ (ನಾ). 1. ಜೋಡಿ; ಯುಗ್ಮ; ಯುಗಳ 2. ಹೆಣ್ಣು ಮತ್ತು ಗಂಡಿನ ಜೋಡಿ; ದಂಪತಿ (1459)

ಮಿಥ್ಯೆ (ನಾ). ಅಸತ್ಯ; ಸಟೆ; ಸುಳ್ಳು (1085)

ಮುಸಲಧಾರೆ (ನಾ). ಒನಕೆಯಷ್ಟು ದಪ್ಪವಾಗಿ ಸುರಿಯುವ – ಧಾರಾಕಾರ ಮಳೆ (1341)

ಮುದ್ರಿಸು (ಕ್ರಿ). ಅಚ್ಚೊತ್ತಿದ ಹಾಗೆ ನೆಲಸು, ಇರು (459)

ಮುನ್ನೀರ್, ಮುನ್ನೀರು (ನಾ). ಭೂಮಿಗಿಂತ ಮೊದಲು ಸೃಷ್ಟಿಯಾದ ಜಲ; ಕಡಲು; ಸಮುದ್ರ (1758)

ಮುಂಚು (ಕ್ರಿ). ಮುಂದೆ ಹೋಗು; ಮುಂದುವರಿ; ಮುಂದಕ್ಕೆ ಹೋಗು. (76)

ಮಯೂಖ (ನಾ). ಕಿರಣ; ರಶ್ಮಿ (1407)

ಮುಕ್ತಾವಲಿ, ಮುಕ್ತಾವಳಿ (ನಾ). ಮುತ್ತಿನ ಹಾರ, – ಸರ (507)

ಮುಡಿ (ನಾ). ಕಿರೀಟ; ಮುಕುಟ (755)

ಮುಗುಳ್, ಮುಗುಳು (ನಾ). ಅರೆಬಿರಿದ ಹೂವು; ಕುಟ್ಮಲ, ಮೊಗ್ಗು (893)

ಮಜ್ಜ, ಮಜ್ಜೆ (ನಾ). ದೇಹದ ಧಾತುಗಳಲ್ಲಿ ಒಂದು; ಮೂಳೆಯ ಒಳಗಿನ ಸಾರವತ್ತಾದ ಭಾಗ; ಅಸ್ಥಿಸಾರ (968)

ಮೃಣಾಲ, ಮೃಣಾಳ (ನಾ). ತಾವರೆಯ ದಂಟು, ದಿಂಡು (909)

ಮೃಗಾಕ್ಷಿ (ನಾ). ಜಿಂಕೆಯ ಕಣ್ಣುಗಳಂತೆ ಕಣ್ಣುಳ್ಳವಳು; ಸುಂದರಿ (1148)

ಮೃದುಲ, ಮೃದುಳ (ಗು). ಮೆದುವಾದ; ಕೋಮಲವಾದ (906)

ಮರುಳ್, ಮರುಳು (ನಾ). ಭೂತ; ದೆವ್ವ; ಪಿಶಾಚಿ (1317)

ಮರೀಚಿ (ನಾ). ಕಿರಣ; ರಶ್ಮಿ (1360)

ಮದನ (ನಾ). ಮನ್ಮಥ; ಕಾಮ (184)

ಮಧು (ನಾ). 1. ಸವಿಯಾದ; ರುಚಿಯಾದ 2. ಸುಖಕರವಾದ; ಆಹ್ಲಾದಕರವಾದ 3. ಜೇನುತುಪ್ಪ 4. ತುಂಬಿ; ಭ್ರಮರ 5. ಹೆಜ್ಜೇನು (48)

ಮಧು ಮಾಸ (ನಾ). ವಸಂತ ಋತು (184)

ಮಧುಪ (ನಾ). ತುಂಬಿ; ಭ್ರಮರ (227)

ಮಾಲೆ (ನಾ). ಸಾಲು; ಶ್ರೇಣಿ; ಪಂಕ್ತಿ (1358)

ಮಾಜೂನ್, ಮಾರಾನ್ (ಕ್ರಿ). ಎದುರಿಸು; ಪ್ರತಿಭಟಿಸು (2128)

ಮಾಕಂದ (ನಾ). ಮಾವಿನ ಮರ (1413)

ಮಾತಿಲಿ (ನಾ). ನುಡಿಯದೆ ಸುಮ್ಮನಿರುವ ವ್ಯಕ್ತಿ; ಮೌನಿ (2056)

ಮಾದು (ಕ್ರಿ). ಕಾಣೆಯಾಗು; ಮರೆಯಾಗು (791)

ಮಿಸುನಿ (ನಾ). ಚಿನ್ನ; ಬಂಗಾರ (559)

ಮಿಸುಗು (ಕ್ರಿ). 1. ಹೊಳೆ; ಪ್ರಕಾಶಿಸು. 2. ಕಂಗೊಳಿಸು; ಶೋಭಿಸು (191)

ಮೌಕ್ತಿಕ (ನಾ). ನವರತ್ನಗಳಲ್ಲಿ ಒಂದು; ಮುಕ್ತಾಫಲ; ಮುತ್ತು (133)

ಮೆಯ್ದೋರು, ಮೈದೋರು (ಕ್ರಿ). ಕಾಣಿಸಿಕೊಳ್ಳು; ಪ್ರಕಟವಾಗು (159)

ಮೇಖಲೆ (ನಾ). ಪರ್ವತದ ಅಗ್ರಭಾಗ; ಶಿಖರ (1234)

ಮೇಖಲೆ, ಮೇಕಳೆ (ನಾ). ಪರ್ವತದ ಸಾನು, ತಪ್ಪಲು (592)

ಮೇಣ್, ಮೇಣು (ಅ). 1. ಇನ್ನು; ಮತ್ತು; ಜೊತೆಗೆ; ಹಾಗೂ; ಅಲ್ಲದೆ. 2. ಅಥವಾ; ಇಲ್ಲವೆ (369)

ಮೇಚಕ (ನಾ). ನವಿಲು ಗರಿಯಲ್ಲಿರುವ ಕಣ್ಣು; ಚಂದ್ರಕ (1467)

ಮೋಹರ (ನಾ). ಸೈನ್ಯ; ದಂಡು; ಪಡೆ; ದಳ (2116)

ಮೈಜೋಡು (ನಾ). ಶರೀರದ ರಕ್ಷಣೆಗಾಗಿ ಹಾಕಿಕೊಳ್ಳುವ ಕವಚ; ತನುತ್ರಾಣ, ಚಿಲಖತ್ತು (750)

ಮೊರಡಿ (ನಾ). ದಿಣ್ಣೆ; ತೆವರು; ಗುಡ್ಡ (1418)

ಮೆರೆ (ಕ್ರಿ). 1. ಹೊಳೆ; ಪ್ರಕಾಶಿಸು. 2. ಎದ್ದು ತೋರು; ವ್ಯಕ್ತವಾಗು; ಸ್ಪಷ್ಟವಾಗಿ ಕಾಣಿಸಿಕೊಳ್ಳು (271)

ಮೀಯಿಸು, ಮಿಸಿಸು, ಮೀಸು (ಕ್ರಿ). ಸ್ನಾನ ಮಾಡಿಸು; ಮಜ್ಜನ ಮಾಡಿಸು (2351)

ಯಃಕಶ್ಚಿತ್ (ಗು). ತೀರ ಕ್ಷುಲ್ಲಕವಾದ; ಗಣನೆಗೆ ಬಾರದ; ಸಾಮಾನ್ಯವಾದ (1631)

ಯಕ್ಷಕರ್ದಮ (ನಾ). ಕರ್ಪೂರ, ಅಗರು, ಕಸ್ತೂರಿ, ತಕ್ಕೋಲ ಮೊದಲಾದ ಸುಗಂಧ ದ್ರವ್ಯಗಳನ್ನು ಸಮ ಪ್ರಮಾಣದಲ್ಲಿ ಬೆರಸಿ ತಯಾರಿಸುವ ಒಂದು ಬಗೆಯ ಸುಗಂಧಲೇಪ (2454)

ಯಾಮಿನಿ (ನಾ). ಇರುಳು; ರಾತ್ರಿ (53)

ರಸಧಿ (ನಾ). ಕಡಲು; ಜಲಧಿ (1122)

ರಸಾಲ, ರಸಾಳ (ಗು). 1. ಸವಿಯಾದ; ಮಧುರವಾದ (ನಾ). 2. ಮಾವು 3. ಕಬ್ಬು (416)

ರಾಸಕೇಳಿ; ರಾಸಕ್ರೀಡೆ (ನಾ). ಕೃಷ್ಣನು ಗೋಪಿಕಾ ಸ್ತ್ರೀಯರ ಜೊತೆ ಆಡಿದ ಮಂಡಲಾಕಾರದ ನೃತ್ಯ (1205)

ರನ್ನಗನ್ನಡಿ, ರನ್ನಕನ್ನಡಿ (ನಾ). ರತ್ನ ಖಚಿತವಾದ ಕನ್ನಡಿ (517)

ರಶನ (ನಾ). ನಡುವಿಗೆ ಧರಿಸುವ ಪಟ್ಟಿ; ಡಾಬು (505)

ರಮಿಸು (ಕ್ರಿ). 1. ಆನಂದ ಪಡು; ಸುಖಿಸು. 2. ಸಂಭೋಗಿಸು; ಕ್ರೀಡಿಸು (1141)

ರುಷ್ಟ (ನಾ). ಕೋಪ; ಸಿಟ್ಟು (2348)

ರುಷಿತ (ಗು). ಕೋಪಗೊಂಡ; ರೋಷಗೊಂಡ (2255)

ರುಚಿ (ನಾ). 1. ಕಾಂತಿ; ಪ್ರಕಾಶ; ತೇಜಸ್ಸು. 2. ಕಿರಣ; ರಶ್ಮಿ (508), (1562)

ರವ (ನಾ). ಧ್ವನಿ; ಶಬ್ದ (2217)

ರಮಣೀಯ (ಗು). ಚೆಲುವಾದ; ಮನೋಹರವಾದ (2028)

ರುಚಿರ (ಗು). ಹೊಳೆಯುವ; ಪ್ರಕಾಶಮಾನವಾದ (1357)

ರುಚಿರತ (ನಾ). ಸೌಂದರ್ಯ; ಚೆಲುವು (1029)

ರುಂದ್ರ (ಗು). ವಿಸ್ತಾರವಾದ; ವಿಶಾಲವಾದ (206)

ರೂಪು, ರೂವು (ನಾ). 1. ಆಕಾರ; ರೂಪ 2. ಚೆಲುವು; ಅಂದ; ಸೊಗಸು (182)

ರೂಕ್ಷಣ (ಗು). ಕಠಿಣವಾದ, ಒರಟಾದ (611)

ರಂಜಿಸು (ಕ್ರಿ). ಹೊಳೆ, ಪ್ರಕಾಶಿಸು (568)

ರಯ (ನಾ). ವೇಗ; ರಭಸ (2047)

ರುಕ್ಮ (ಗು). ಹೊಳೆಯುವ; ಪ್ರಕಾಶಿಸುವ (ನಾ). ಚಿನ್ನ; ಬಂಗಾರ.

ರುದ್ರ (ಗು). ಭಯವನ್ನು ಹುಟ್ಟಿಸುವ; ಭಯಂಕರವಾದ; ಭೀಕರವಾದ (384)

ರಜನಿ (ನಾ). ಇರುಳು; ರಾತ್ರಿ (610)

ರಾಜಿಸು (ಕ್ರಿ). ಶೋಭಿಸು; ಕಂಗೊಳಿಸು (195)

ರಾಕೆ (ನಾ). 1. ಪೂರ್ಣಚಂದ್ರನಿರುವ ದಿನ; ಹುಣ್ಣಿಮೆ. 2. ಮೊದಲನೆಯ ಬಾರಿ ಋತುಮತಿಯಾದವಳು; ಮೈ ನೆರೆದ ಹುಡುಗಿ (565)

ರಕ್ತಿ (ನಾ). ಒಲವು; ಆಸಕ್ತಿ; ಪ್ರೀತಿ (423)

ರತ್ನಧಿ (ನಾ). ಕಡಲು; ಸಮುದ್ರ (1773)

ರದನ, ರದ (ನಾ). ಹಲ್ಲು; ದಂತ (2355)

ರೌಪ್ಯಗಿರಿ (ನಾ). ಬೆಳ್ಳಿಯ ಬೆಟ್ಟ; ರಜತಗಿರಿ (2299)

ರೋಚಿಮಂಡಲ (ನಾ). ಕಾಂತಿಯ ಆವರಣ (1357)

ರೋದಸಿ (ನಾ). ಆಕಾಶ ಮತ್ತು ಭೂಮಿ (834)

ರೌರವ (ಗು). ಭಯಂಕರವಾದ; ಭೀಕರವಾದ (1315)

ರೌದ್ರ (ಗು). 1. ರುದ್ರನಿಗೆ ಸಂಬಂಧಿಸಿದ 2. ಭಯಂಕರವಾದ; ಭೀಕರವಾದ (2218)

ರಿಂಗಣಗುಣಿ (ಕ್ರಿ). (ಸುತ್ತುತ್ತಾ) ನೃತ್ಯ ಮಾಡು; ಲಾಸ್ಯವಾಡು (2225)

ಱೋಡಾಡು, ರೋಡಾಡು (ಕ್ರಿ). ಹೀಯಾಳಿಸು; ಅಪಹಾಸ್ಯ ಮಾಡು (762)

ಲಂಬ (ಗು). ಜೋಲುವ; ನೇತಾಡುವ; ತೂಗುತ್ತಿರುವ (1434)

ಲವಣಸಿಂಧು (ನಾ). ಉಪ್ಪುನೀರಿನ ಸಮುದ್ರ, –ಕಡಲು (1801)

ಲಘುತ್ವ (ನಾ). ಹುಡುಗಾಟ; ಗಂಭೀರರಾಹಿತ್ಯ (1604)

ಲಿಪ್ಸು (ಗು). ಪಡೆಯಬೇಕೆಂಬ ಆಸೆಯುಳ್ಳ (1507)

ಲೋಬಾನ, ಲೋಭಾನ (ನಾ). ಸುಗಂಧ ದ್ರವ್ಯದಂತೆ ಬಳಸುವ ಒಂದು ಬಗೆಯ ಮರದ ಅಂಟು; ತುರುಷ್ಕ (2453)

ಲೋಲ (ಗು). ಅತ್ತಿತ್ತ ಅಲುಗಾಡುವ, –ಚಲಿಸುವ; ಚಂಚಲವಾದ (846)

ಲೋಲಲೋಚನೆ (ನಾ). ಚಚಲವಾದ ಕಣ್ಣುಗಳನ್ನುಳ್ಳವಳು; ಚೆಲುವೆ (1006)

ಲೋಲುಪ್ತಿ (ನಾ). ಸುಖ; ಸಂತೋಷ (1606)

ಲೋಗ (ನಾ). 1. ಜಗತ್ತಿನಲ್ಲಿರುವ ಜನ 2. ಬೇರೆಯವನು; ಅನ್ಯ; ಪರಕೀಯ. 3. ಸಾಮಾನ್ಯ ಮನುಷ್ಯ; ನಾಡಾಡಿ; ಎಗ್ಗ (349)

ವಿಪಿನ (ನಾ). ಮರಗಳ ಗುಂಪು; ತೋಪು (1310)

ವಿಪಿನ (ನಾ). ಅಡವಿ; ಕಾಡು (824)

ವಿಭಾವರಿ (ನಾ). ಇರುಳು; ನಿಶೆ; ರಾತ್ರಿ (44)

ವಿಭ್ರಾಜಿಸು (ಕ್ರಿ). ಹೊಳೆ; ಪ್ರಕಾಶಿಸು; ರಾರಾಜಿಸು (1277)

ವಿಸ್ತೃತ (ಗು). ಅಗಲವಾದ; ವಿಸ್ತಾರವಾದ (477)

ವಿಷಣ್ಣ (ಗು). 1. ಖಿನ್ನವಾದ; ದುಃಖಿತ. 2. ನಿರುತ್ಸಾಹದಿಂದ ಕೂಡಿದ; ಕುಗ್ಗಿದ (1589)

ವೀಚಿ (ನಾ). (ನೀರಿನ) ಸಣ್ಣ ಅಲೆ; ತೆರೆ; ತರಂಗ (846)

ವ್ರೀಹಿ (ನಾ). ಒಂದು ಬಗೆಯ ಏಕದಳ ಧಾನ್ಯ; ನೆಲ್ಲು; ಭತ್ತ (1443)

ವ್ರೀಡೆ (ನಾ). ನಾಚಿಕೆ; ಲಜ್ಜೆ; ಸಿಗ್ಗು (1205)

ವಿಯತ್ತಲ, ವಿಯತ್ತಳ (ನಾ). ಆಕಾಶ ಸ್ಥಲ; ನಭೋಂಗಣ; ಗಗನ ಮಂಡಲ (32)

ವೀಣಾಪಾಣಿ (ನಾ). 1. ವೀಣೆಯನ್ನು ಕೈಯಲ್ಲಿ ಹಿಡಿದಿರುವ ವ್ಯಕ್ತಿ 2. ಸರಸ್ವತಿ (4)

ವಿಹಂಗ (ನಾ). 1. ಪಕ್ಷಿ; ಹಕ್ಕಿ. 2. ಮೋಡ; ಮೇಘ (441)

ವಿಗ್ರಹ (ನಾ). 1. ಆಕಾರ; ಆಕೃತಿ; ರೂಪ. 2. ದೇಹ; ಶರೀರ (935)

ವಿಧುರ (ನಾ). ಬರಿದು; ಶೂನ್ಯ (686)

ವಸನ (ನಾ). ಬಟ್ಟೆ; ವಸ್ತ್ರ (36)

ವಾಸಂತ (ನಾ). ವಸಂತ ಋತು; ಚೈತ್ರಮಾಸ (1369)

ವನಧಿ (ನಾ). ಕಡಲು; ಸಮುದ್ರ (1433)

ವನಚರ (ನಾ). 1. ಕಾಡಿನಲ್ಲಿ ಸಂಚರಿಸುವವನು; ಬೇಡ. 2. ಕಾಡಿನಲ್ಲಿ ವಾಸಿಸುವ ಮೃಗ, ಪಕ್ಷಿ, ಮುಂತಾದ ಜೀವಿ; ವನ್ಯ ಜೀವಿ. (367)

ವಪ್ರ (ನಾ). ಕೋಟೆಯ ಹೆಬ್ಬಾಗಿಲು (2435)

ವಾಹಿನಿ (ನಾ). 1. ಹರಿಯುವಂಥದು; ಹೊಳೆ; ನದಿ. 2. ಪಡೆ; ದಳ; ಸೈನ್ಯ (461)

ವಾಹಿನಿ (ನಾ). 1. ಹರಿಯುವಂಥದು; ಹೊಳೆ; ನದಿ. 2. ಪಡೆ; ದಳ; ಸೈನ್ಯ (534)

ವಹಿಲ, ವೈಲ (ನಾ). ಬೇಗ; ತ್ವರೆ (2084)

ವಲ್ಗುತೆ (ನಾ). ಅಂದ; ಸೌಂದರ್ಯ (693)

ವಂದಿ (ನಾ). ಸೆರೆಯಾಳು; ಬಂದಿ (2195)

ವ್ಯಾಬದ್ಧ (ಗು). ಬಲವಾಗಿ ಬಿಗಿದ; ಭದ್ರವಾಗಿ ಕಟ್ಟಿದ (1478)

ವರ್ಮ (ನಾ). ಅಂಗರಕ್ಷಣೆಗಾಗಿ ತೊಡುವ ಉಕ್ಕಿನ ಕವಚ; ಮೈ ಜೋಡು (2242)

ವ್ರಜ (ನಾ). ಸಮೂಹ; ಗುಂಪು (1448)

ವ್ರತತಿ (ನಾ). 1. ಹರಹು; ವಿಸ್ತಾರ 2. ಬಳ್ಳಿ; ಲತೆ. 3. ಗುಂಪು; ಸಮೂಹ; ಸಂದಣಿ (1204)

ವರೂಥಿನಿ (ನಾ). ಪಡೆ; ಸೈನ್ಯ (2234)

ವರುಣ (ನಾ). ನೀರಿನ ಅಧಿದೇವತೆಯೂ ಪಶ್ಚಿಮ ದಿಕ್ಪಾಲಕನೂ ಆಗಿರುವ ಒಬ್ಬ ದೇವತೆ (1320)

ವರಣಮಾಲೆ, ವರಣಮಾಲಿಕೆ (ನಾ). ಸ್ವಯಂವರ ಸಮಯದಲ್ಲಿ ವರಿಸಿದುದರ ಸಂಕೇತವಾಗಿ ವಧುವು ವರನ ಕೊರಳಿಗೆ ಹಾಕುವ ಹಾರ (1014)

ವರಿಷ್ಠ (ನಾ). ಶ್ರೇಷ್ಠನಾದವನು; ಅಗ್ರಗಣ್ಯ (990)

ವಾಹ (ನಾ). ಪ್ರವಹಿಸುವಂಥದು; ಪ್ರವಾಹ (846)

ವಕ್ಷಸ್ಥಳ, ವಕ್ಷ (ನಾ). ಎದೆ; ಉರಸ್ಸು (909)

ವಾಣಿ (ನಾ). ನುಡಿಯ ಅಧಿದೇವತೆ; ಸರಸ್ವತಿ (3)

ವೇಲಾವನ, ವೇಳಾವನ (ನಾ). ಸಮುದ್ರದ ತಡಿಯಲ್ಲಿರುವ ವನ; ಸಮುದ್ರ ತೀರದ ಕಾಡು (603)

ವೇಲೆ (ನಾ). ಸಮುದ್ರದ ತೀರ (1797)

ವೇಲೆ (ನಾ). ಸಮುದ್ರದ ತೀರ (940)

ವೇಷ್ಟಿತ (ಕ್ರಿ). ಸುತ್ತುವರಿದ; ಆವರಿಸಿದ (34)

ವೇಣಿ (ನಾ). ನೆರೆ; ಪ್ರವಾಹ; ಹರಿವು (902)

ವ್ಯೋಮ (ನಾ). ಪಂಚಮಹಾಭೂತಗಳಲ್ಲಿ ಒಂದು; ಆಕಾಶ; ಗಗನ (136)

ವೈತರಣಿ (ನಾ). ಓಡ್ರ ದೇಶದಲ್ಲಿ ಹರಿಯುವ ಒಂದು ನದಿಯ ಹೆಸರು (1195)

ವೈದ್ಯುತ (ಗು). 1. ಮಿಂಚಿಗೆ ಸಂಬಂಧಿಸಿದ. 2. ವಿದ್ಯುತ್ತಿಗೆ ಸಂಬಂಧಿಸಿದ; ವಿದ್ಯುಚ್ಛಕ್ತಿಯ (9)

ಶಾಲಿವನ, ಶಾಳಿವನ (ನಾ). ಬತ್ತದ ಗದ್ದೆ (1433)

ಶ್ಯಾಮಾಂಗಿ (ನಾ). ಶ್ಯಾಮಲ ವರ್ಣದವಳು (1455)

ಶಾರ್ವರಿ (ನಾ). ಇರುಳು; ರಾತ್ರಿ (921)

ಶಂಕರ (ಗು). ಸಂತೋಷವನ್ನುಂಟು ಮಾಡುವ; ಮಂಗಳಪ್ರದವಾದ

(ನಾ). ಮನೋಹರವಾದುದು; ಸುಂದರವಾದುದು (1775)

ಶುಕ್ತಿ (ನಾ). ಮುತ್ತಿನ ಅಥವಾ ಕಪ್ಪೆಯ ಚಿಪ್ಪು (1013)

ಶರದ (ನಾ). ಶರತ್ಕಾಲ (148)

ಶಹಣೆ, ಶಾಣೆ (ನಾ). ಜಾಣ, ಬುದ್ಧಿವಂತ (883)

ಶಕುನಿ (ನಾ). ಹದ್ದು ಅಥವಾ ಗಿಡುಗ (2216)

ಶಕುಂತ (ನಾ). ಹಕ್ಕಿ; ಪಕ್ಷಿ (1448)

ಶಕ್ರ (ನಾ). ದೇವತೆಗಳ ಅಧಿಪತಿ; ಇಂದ್ರ (1131)

ಶಕಿಲ, ಶಕಲ (ನಾ). ತುಂಡು; ಚೂರು (150)

ಶತಪತ್ರ, ಶತದಲ, ಶತದಳ (ನಾ). ಅನೇಕ ಎಸಳುಗಳನ್ನು ಹೊಂದಿರುವುದು; ತಾವರೆ; ಕಮಲ (508)

ಶಾದ್ವಲ (ನಾ). ಹಸಿರಾದ ಹುಲ್ಲು (838)

ಶೈವಲ, ಶೈವಳ (ನಾ). ನೀರಿನ ಮೇಲೆ ಬೆಳೆಯುವ ಪಾಚಿ; ಹಾವಸೆ (1819)

ಶೈವಲ, ಶೈವಳ, ಶೈವಾಲ, ಶೈವಾಳ (ನಾ). ನೀರಿನ ಮೇಲೆ ಬೆಳೆಯುವ ಪಾಚಿ; ಹಾವಸೆ (500)

ಶಿಬಿಕೆ (ನಾ). ಚಟ್ಟ; ಸಿದಿಗೆ (2445)

ಶೀರ್ಷಕ (ನಾ). ಶಿರಸ್ತ್ರಾಣ; ಸೀಸಕ (2241)

ಶೀತಕಿರಣ (ನಾ). ತಂಪಾದ ಕಿರಣಗಳನ್ನುಳ್ಳವನು; ಚಂದ್ರ (1277)

ಷೋಡಶಕಲೆ, ಷೋಡಶಕಳೆ (ನಾ). ಚಂದ್ರನಲ್ಲಿರುವ ಅಮೃತಾ, ಮಾನದಾ, ಪೂಷಾ, ಪುಷ್ಟಿ, ತುಷ್ಟಿ, ರತಿ, ಧೃತಿ, ಶಶಿನೀ, ಚಂದ್ರಿಕಾ, ಕಾಂತಿ, ಜ್ಯೋತ್ಸ್ನಾ, ಶ್ರೀ, ಪ್ರೀತಿ, ಅಂಗದಾ, ಪೂರ್ಣಾ, ಪೂರ್ಣಾಮೃತ ಎಂಬ ಹದಿನಾರು ಬಗೆಯ ಕಲೆಗಳು (241)

ಸನ್ನೆ (ನಾ). ಗುರುತು; ಸಂಕೇತ (2113)

ಸನ್ನಿಭ (ಗು). ಸಮನಾದ, ಸದೃಶವಾದ (50)

ಸಪ್ತಾರ್ಚಿ, ಸಪ್ತರಸನ (ನಾ). ಕಾಳಿ, ಕರಾಳಿ, ಮನೋಜವೆ, ಸುಧೂಮ್ರ ವರ್ಣೆ, ಸುಲೋಹಿತೆ, ಉಗ್ರೆ, ಪ್ರದೀಪ್ತೆ ಎಂಬ ಬೆಂಕಿಯ ಏಳು ನಾಲಗೆಗಳಿಂದ ಕೂಡಿದವನು; ಅಗ್ನಿ. (2470)

ಸಮೀರಣ (ನಾ). ಸಮೀರ; ಗಾಳಿ; ವಾಯು

ಸಲಿಲ, ಸಲಿಳ (ನಾ). ನೀರು; ಉದಕ; ಜಲ (1772)

ಸಂಭಾವಿಸು (ಕ್ರಿ). ಯೋಚನೆ ಮಾಡು; ಆಲೋಚಿಸು (963)

ಸಂಸ್ತುತಿ (ನಾ). ಸ್ತುತಿ; ಹೊಗಳಿಕೆ (1012)

ಸ್ಪರ್ಶಮಣಿ (ನಾ). ಸೋಂಕಿದ ಲೋಹವನ್ನು ಚಿನ್ನವಾಗಿ ಪರಿವರ್ತಿಸುವುದೆಂದು ನಂಬಲಾದ ಒಂದು ಬಗೆಯ ಹರಳು (1091)

ಸಾಮ್ಯ (ನಾ). ಸಾದೃಶ್ಯ; ಹೋಲಿಕೆ (2036)

ಸಮತೆ (ನಾ). ಯುಕ್ತವಾದುದು; ಸರಿಯಾದುದು (2192)

ಸುಯ್ಲು (ನಾ). (ಆಯಾಸ, ದುಃಖಗಳಿಂದ ಬಿಡುವ) ನಿಡಿದಾದ ಉಸಿರು; ನಿಟ್ಟುಸಿರು (112)

ಸ್ಫುರಿಸು (ಕ್ರಿ). ಮೂಡು; ಹುಟ್ಟು; ಉದ್ಭವಿಸು (172)

ಸೂಸಲ್, ಸೂಸಲು (ನಾ). ಸಿಂಚನ, ಸೇಚನ (836)

ಸೂಡು (ನಾ). ಚಿತೆ (2169)

ಸೂಡು (ಕ್ರಿ). (ಮಾಲೆ, ಹಾರ ಮೊದಲಾದುವನ್ನು) ತೊಡಿಸು, ಹಾಕು. (1137)

ಸುರಧನು, ಸುರಚಾಪ (ನಾ). ಕಾಮನ ಬಿಲ್ಲು; ಇಂದ್ರ ಧನುಸ್ಸು (2476)

ಸಯ (ನಾ). ಶ್ರೇಯಸ್ಸು (2188)

ಸುಟ್ಟುರೆ, ಸುಂಟುರುಗಾಳಿ (ನಾ). ವರ್ತುಲಾಕಾರವಾಗಿ ಸುತ್ತಿ ಸುತ್ತಿ ರಭಸವಾಗಿ ಬೀಸುವ ಗಾಳಿ; ಚಕ್ರಗಾಳಿ; ಆವರ್ತ ಮಾರುತ (1422)

ಸಂಕುಗೊರಲ್ (ನಾ). ಶಂಕದ ಆಕಾರದ ಕೊರಳು; ಶಂಖದಂತಿರುವ ಕೊರಳು (948)

ಸುಗಿ (ಕ್ರಿ). ಹೆದರು; ಭಯಪಡು (2161)

ಸಂಚಲ (ಗು). ಅಸ್ಥಿರವಾದ; ಚಂಚಲವಾದ; ಚಪಲತೆಯ (1051)

ಸುಧಾಸೂತಿ, ಸುಧಾಜಾತ (ನಾ). ಕ್ಷೀರ ಸಾಗರದಲ್ಲಿ ಹುಟ್ಟಿದವನು; ಚಂದ್ರ (1003)

ಸಜ್ಜರಸ (ನಾ). ಒಂದು ಬಗೆಯ ಅರಗಿನಂತಹ ಅಂಟು; ರಾಳ (2453)

ಸ್ವನ (ನಾ). ಶಬ್ದ; ಸದ್ದು; ಧ್ವನಿ (853)

ಸ್ವಾಪ (ನಾ). ಕನಸು; ಸ್ವಪ್ನ (824)

ಸಾರಸ (ನಾ). ತಾವರೆ; ಕಮಲ (1206)

ಸಾರಸನ (ನಾ). 1. ಡಾಬು; ಒಡ್ಯಾಣ 2. (ಪುರುಷರ) ನಡುಕಟ್ಟು; ನಡುಪಟ್ಟಿ (1205)

ಸರಸಿ (ನಾ). ಕೊಳ; ಸರೋವರ (191)

ಸರಿತುಪತಿ, ಸರಿತ್ಪತಿ (ನಾ). ನದಿಗಳ ಒಡೆಯ; ಕಡಲು, ಸಮುದ್ರ (1798)

ಸಹ್ಯ (ಗು). 1. ತಕ್ಕುದಾದ; ಅನುರೂಪವಾದ (ನಾ). 2. ಮಹೇಂದ್ರ, ಮಲಯ, ಸಹ್ಯ, ಶುಕ್ತಿಮಾನ್, ಋಕ್ಷ, ವಿಂಧ್ಯ ಮತ್ತು ಪಾರಿಯಾತ್ರ ಎಂಬ ಏಳು ಕುಲಗಿರಿಗಳಲ್ಲಿ

ಒಂದು. 3. (ಗೋದಾವರಿಯು ಹುಟ್ಟುವ) ದಕ್ಷಿಣ ವಾಯುವ್ಯ ಪ್ರದೇಶದ ಘಟ್ಟದ ಸಾಲು ಮತ್ತು ಘಟ್ಟದ ಜಿಲ್ಲೆ (1663, 1659, 1677)

ಸ್ತಬಕ (ನಾ). ಸಮುದಾಯ; ಸಮೂಹ (1296)

ಸೇಸೆ, ಶಾಸೆ (ನಾ). ಮಂಗಳಾಕ್ಷತೆ; ಮಂತ್ರಾಕ್ಷತೆ (836)

ಸೋರ್ಮುಡಿ (ನಾ). ಸಡಿಲವಾದ ಮುಡಿ; ಅಳ್ಳಕವಾದ ತುರುಬು (1127)

ಸ್ರೋತ (ನಾ). ನೀರಿನ ಪ್ರವಾಹ; ಹರಿಯುವಿಕೆ (853)

ಸೋಗೆ (ನಾ). (ಸಾಮಾನ್ಯವಾಗಿ ಗಂಡು) ನವಿಲು; ಮಯೂರ (1488)

ಸೋಗೆ ನವಿಲ್, ಸೋಗೆ ನವಿಲು (ನಾ). ನೀಳವಾದ ಪುಚ್ಛವನ್ನು ಹೊಂದಿರುವ ನವಿಲು; ಗಂಡುನವಿಲು (717)

ಸೇದೆ (ನಾ). ದಣಿವು; ಆಯಾಸ; ಬಳಲಿಕೆ (1591)

ಸೈಕತ (ನಾ). ಮರಳು; ಉಸುಕು (1434)

ಸಿನುಗು (ನಾ). ದುರ್ವಾಸನೆ; ಸಿಂಡು (397)

ಸಿಂಜಿನಿ (ನಾ). ಬಿಲ್ಲಿನ ಹೆದೆ; ಜ್ಯಾ (420)

ಸಿಂಹಾವಲೋಕನಂಗೈ (ಕ್ರಿ). (ಸಿಂಹದಂತೆ ದೂರದಲ್ಲಿ ನಿಂತು) ಹಿಂದಕ್ಕೆ ತಿರುಗಿನೋಡು (378)

ಸಿತವಾಹನ, ಸಿತ ತುರಗ (ನಾ). 1. ಬಿಳಿಯ ಕುದುರೆ 2. ಬಿಳಿಯ ಕುದುರೆಗಳುಳ್ಳವನು; ಅರ್ಜುನ (1338)

ಸಿದ್ದಾಯ, ಸಿದಾಯ (ನಾ). ಗೊತ್ತು ಪಡಿಸಿದ ತೆರಿಗೆ; ನಿಗಧಿಯಾದ ಕಂದಾಯ (1977)

ಹೀನತೆ, ಹೀನತನ (ನಾ). ಕೀಳುತನ, ಕೆಟ್ಟತನ (521)

ಹಿಮರೋಚಿ, ಹಿಮರುಚಿ (ನಾ). ತಂಪಾದ ಕಿರಣಗಳಿಂದ ಕೂಡಿದವನು; ಚಂದ್ರ (560)

ಹಾಲುಗಲ್ಲು (ನಾ). ಬಿಳುಪಾದ ನುಣ್ಣಗಿರುವ ಕಲ್ಲು; ಅಮೃತ ಶಿಲೆ (2488)

ಹಮ್ಮಯಿಸು, ಹಮ್ಮೈಸು (ಕ್ರಿ). ಎಚ್ಚರ ತಪ್ಪು; ಮೂರ್ಛೆಹೋಗು; ಮೈಮರೆ (2055)

ಹರ್ಮ್ಯ (ನಾ). (ಶ್ರೀಮಂತರ) ಉಪ್ಪರಿಗೆ ಮನೆ; ಸೌಧ (488)

ಹವಣು (ನಾ). ಹಂಚಿಕೆ; ಯೋಜನೆ; ಉಪಾಯ (1075)

ಹೂಣಿಕೆ, ಪೂಣ್ಕೆ, ಪೂಣಿಕೆ (ನಾ). ಆಣೆ; ಶಪಥ; ಪ್ರತಿಜ್ಞೆ (1055)

ಹ್ರದ (ನಾ). ಬೆಳಕಿನ ಕಿರಣ (701)

ಹುತಾಶನ (ನಾ). ಹೋಮ ಮಾಡಿದುದನ್ನು ಆಹಾರವಾಗಿ ಸ್ವೀಕರಿಸುವವನು; ಹವಿಸ್ಸನ್ನು ಸೇವಿಸುವವನು; ಅಗ್ನಿ (1278)

ಹುದುಗು (ಕ್ರಿ). 1. ಸೇರು; ಕೂಡು. 2. ಅಡಗು; ಮರೆಯಾಗು. (65)

ಹರಿ (ನಾ). ಕುದುರೆ (1965)

ಹರಿಗೋಲು (ನಾ). ನೀರನ್ನು ಭೇದಿಸಿಕೊಂಡು ಹೋಗುವ ಸಾಧನ; ನಾವೆ; ದೋಣಿ (1126)

ಹರಿದ್ರಾಭ (ನಾ). ಹೊಂಬಣ್ಣ; ಹಳದಿ ಬಣ್ಣ (2435)

ಹರಿದಂತ (ನಾ). ದಿಕ್ಕಿನ ತುದಿ; ದಿಗಂತ (1320)

ಹೇಷಾರವ (ನಾ). ಹೇಷಧ್ವನಿ; ಕುದುರೆಯು ಕೆನೆಯುವ ಶಬ್ದ (457)

ಹೇಮಂತ (ನಾ). ಆರು ಋತುಗಳಲ್ಲಿ ಒಂದು; ಮಾರ್ಗಶಿರ ಪುಷ್ಯ ಮಾಸಗಳು; ಚಳಿಗಾಲ (1588)

ಹೊಮ್ಮಿಗಮರಿ (ನಾ). ಹೊಂಬಣ್ಣದ ಜಿಂಕೆಮರಿ; ಕಾಂಚನ ಮೃಗದ ಮರಿ (98)

ಹೊಯಿಕೈ (ನಾ). ಎಣೆ; ಸರಿಸಮಾನ; ಸಾಟಿ (772)

ಹೊಲಬುಗೆಡು (ಕ್ರಿ). ದಾರಿ ತಪ್ಪಿಸಿಕೊಳ್ಳು; ಮಾರ್ಗ ಕಾಣದಾಗು (1409)

ಹೋರಟೆ (ನಾ). ಹೋರಾಟ; ಕಾಳಗ; ಯುದ್ಧ (2367)

ಹೊಗರು (ಕ್ರಿ). ಪ್ರಕಾಶಿಸು; ಕಾಂತಿಯನ್ನು ಬೀರು; ಹೊಳೆ (200)

ಹೊದರು, ಪೊದರು (ನಾ). ದಟ್ಟವಾಗಿರುವ ಗಿಡಮರಗಳ ಸಮೂಹ; ಪೊದೆ; ಹಿಂಡಲು (72)

ಹೆದೆ (ನಾ). ಬಿಲ್ಲಿಗೆ ಹೂಡುವ ಬಾಣಕ್ಕೆ ಆಧಾರವಾದ ದಾರ

❑

ಕುವೆಂಪು ವಿರಚಿತ ಚಿತ್ರಾಂಗದಾ



ಕುವೆಂಪು ಅವರು ಕನ್ನಡದ ಹೆಮ್ಮೆಯ ಮಹಾಕವಿ, ದಾರ್ಶನಿಕ. ಚಿಕ್ಕ ವಯಸ್ಸಿನಲ್ಲಿಯೇ ವಿಶ್ವ ಸಾಹಿತ್ಯದ ಗಂಭೀರ ಓದುಗರಾಗಿದ್ದ ಅವರು ಇಂಗ್ಲಿಷ್, ರಷ್ಯನ್, ಪರ್ಶಿಯನ್, ಸಂಸ್ಕೃತ, ಕನ್ನಡ ಸಾಹಿತ್ಯ ಹಾಗೂ ತತ್ವಶಾಸ್ತ್ರದ ಹಲವು ಧಾರೆಗಳನ್ನು ಮನನ ಮಾಡಿಕೊಂಡಿದ್ದವರು. ಕಾವ್ಯ, ನಾಟಕ, ಕಾದಂಬರಿ, ಮೀಮಾಂಸೆ, ವಿಮರ್ಶೆ, ಖಂಡಕಾವ್ಯ, ಮಹಾಕಾವ್ಯ ಮುಂತಾದ ಹಲವು ಸಾಹಿತ್ಯ ಪ್ರಕಾರಗಳಲ್ಲಿ ಅವರು ಮಹತ್ವದ, ಅರ್ಥಪೂರ್ಣ ಕೃತಿಗಳನ್ನು ರಚಿಸಿದ್ದಾರೆ. ನಾಟಕ, ಕಥನಕಾವ್ಯಗಳನ್ನು ಸರಳ ರಗಳೆಯಲ್ಲಿ ಬರೆದು ಯಶಸ್ವಿಯಾಗಿದ್ದ ಅವರು ನಂತರ ಮಹಾಭಾರತದ ಒಂದು ಕಿರು ಪ್ರಸಂಗವನ್ನು- ಚಿತ್ರಾಂಗದಾ ಮತ್ತು ಅರ್ಜುನರ ಕತೆಯನ್ನು ಪ್ರೇಮ, ವಿರಹ, ಕೌಟುಂಬಿಕ ವಿಘಟನೆ, ಹೆಣ್ಣಿನ ಘನತೆ, ಗೌರವ, ಗಂಡಿನ ರಾಜ್ಯ ವಿಸ್ತರಣೆಯ ಹಪಾಹಪಿ ಮುಂತಾದ ಬಹುಸ್ತರೀಯ ನೆಲೆಯಲ್ಲಿ ಚಿತ್ರಾಂಗದಾ ಖಂಡಕಾವ್ಯವನ್ನು ಯಶಸ್ವಿಯಾಗಿ ರಚಿಸಿದ್ದಾರೆ. 'ಚಿತ್ರಾಂಗದಾ' ಖಂಡಕಾವ್ಯವು ಆಧುನಿಕ ಕನ್ನಡದ ಮೊದಲ ಮಹಾಕಾವ್ಯ 'ರಾಮಾಯಣ ದರ್ಶನಂ' ರಚನೆಗೆ ಮೊದಲು ನಡೆಸಿದ- ಬೆಟ್ಟ ಏರುವ ಮೊದಲು ಅಟ್ಟ ಏರುವ- ತಾಲೀಮು ಅಲ್ಲ.

'ಚಿತ್ರಾಂಗದಾ' ಖಂಡಕಾವ್ಯವನ್ನು ಸಾಮಾನ್ಯ ಓದುಗರು ಕಾವ್ಯರೂಪದಲ್ಲಿ ಓದಲು ಕಷ್ಟವಾಗಬಹುದು ಎಂದು ಭಾವಿಸಿ 'ಬೇಂದ್ರೆ ಕೃಷ್ಣಪ್ಪ' ಎಂದೇ ಕನ್ನಡ ಸಾಹಿತ್ಯ ವಲಯದಲ್ಲಿ ಪ್ರಸಿದ್ಧರಾಗಿರುವ ನಾಡೋಜ ಜಿ.ಕೃಷ್ಣಪ್ಪನವರು ಅದನ್ನು ಗದ್ಯ ರೂಪಕ್ಕೆ ತಂದಿದ್ದಾರೆ. ಇದು 'ಸುಧಾ' ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಓದುಗರ ಮನಸ್ಸನ್ನು ಸೂರೆಗೊಂಡಿದೆ. 'ರಾಮಾಯಣ ದರ್ಶನಂ' ಮಹಾಕಾವ್ಯವನ್ನು ಗದ್ಯ ರೂಪದಲ್ಲಿ ಪ್ರಕಟಿಸಿ ಕೀರ್ತಿವಂತರಾಗಿರುವ ಡಾ.ಜಿ.ಕೃಷ್ಣಪ್ಪನವರು ಕುವೆಂಪು ಅವರ ಮತ್ತೊಂದು ಕೃತಿ 'ಚಿತ್ರಾಂಗದಾ'ವನ್ನು ಓದುಗರು ಪ್ರೀತಿಯಿಂದ ಓದಲು ಅನುಕೂಲವಾಗುವಂತೆ ಸೊಗಸಾಗಿ ಗದ್ಯರೂಪದಲ್ಲಿ ನಿರೂಪಿಸಿದ್ದಾರೆ. ಸದಾ ಕಾವ್ಯವನ್ನೇ ಉಸಿರಾಡುವ ಡಾ.ಜಿ.ಕೃಷ್ಣಪ್ಪನವರು ತಮ್ಮ ಇಳಿವಯಸ್ಸಿನಲ್ಲೂ ದಣಿವರಿಯದೆ ಕನ್ನಡಕ್ಕೆ ಏನಾದರೂ ಉಪಯುಕ್ತವಾದುದನ್ನು ಮಾಡಬೇಕು ಎಂದು ದೀಕ್ಷಾಬದ್ಧರಾಗಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಅವರ ಬದ್ಧತೆ ಮತ್ತು ಕಾವ್ಯಪ್ರೀತಿ ಇಲ್ಲೂ ದಟ್ಟವಾಗಿ ಕಾಣುತ್ತದೆ.

– ಎಂ.ಜಿ.ಚಂದ್ರಶೇಖರಯ್ಯ

ಪ್ರಕಾಶಕರು
ಅನ್ನಪೂರ್ಣ ಪಬ್ಲಿಷಿಂಗ್ ಹೌಸ್
#176, 12ನೇ ಮುಖ್ಯರಸ್ತೆ, ಅಗ್ರಹಾರದಾಸರಹಳ್ಳಿ,
ಮಾಗಡಿ ಮುಖ್ಯರಸ್ತೆ, ಬೆಂಗಳೂರು - 560079